ಸಂವಾದ

ಅಕ್ಟೋಬರ್ ೨೦೦೮ ರೂ. ೨೦

ಅಭಿವೃದ್ಧಿಗೆ ಬಂದ ವಿಪತ್ತು!

ನಾಝಿಗಳ ರಾಜ್ಯದಲ್ಲಿ...

ಜಾತಿ, ಧರ್ಮ, ತಾರತಮ್ಯ
ಮುಂದುವರೆದ ಚರ್ಚೆ

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೧೨

ಅಕ್ಟೋಬರ್ ೨೦೦೮

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ರಸ್ತೆ.

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

✆ ೨೩೪೮೦೨೭೮/೯೪೪೮೦ ೪೮೩೦೬

ಇ-ಮೇಲ್ : samvaada@hotmail.com

honnapura@yahoo.co.in

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

✆ 080-23480278, 94480 48306

e- mail : samvaada@hotmail.com

honnapura@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಅಂತರಂಗ ೦೫
- ❑ ಜಾತಿ, ಧರ್ಮ, ತಾರತಮ್ಯ ಚರ್ಚೆ: ಹಿಂದುತ್ವದ ಜಾತಿ ಮತ್ತು ...
  - ○ ಡಾ. ರಮೇಶ ಬೈರಿ ೦೬
  - ಸಂಶೋಧನೆ ಎಂಬ ಚಿನ್ನದ ಮೊಟ್ಟೆ
  - ○ ಡಾ. ಡೊಮಿನಿಕ್ ಡಿ ೦೭
  - ಪಾಶ್ಚಾತ್ಯ ಥಿಯಾಲಾಜಿಕಲ್ ಭಾಷೆ
  - ○ ಡಾ. ಎ. ಷಣ್ಮುಖ ೦೯
- ❑ ಕಾಶ್ಮೀರದ ಆರದ ಹೊಗೆ
  - ○ ನಾ ದಿವಾಕರ ೧೪

- ❑ ಕುಡಿಯುವ ನೀರು ಯಾರ ಪಾಲು?
  - ○ ಅನು: ಡಿ. ರವಿವರ್ಮ ೧೮
- ❑ ಭಯೋತ್ಪಾದನೆ: ಇಸ್ಲಾಂ ವಿರೋಧಿ
  - ○ ಮುಹಮ್ಮದ್ ಮುಸ್ತಫಾ ಆತೂರು ೨೨
- ❑ ಮೂರ್ಖ ಸರ್ಕಾರಗಳು ಹಾಗೂ ದುಷ್ಟ ನೀತಿಗಳು
  - ○ ಶ್ರೀಶ ಉಡುಪ ೨೬
- ❑ ಗಾಂಧಿಯವರ 'ಹಿಂದ್ ಸ್ವರಾಜ್ಯ'ಕ್ಕೆ ನೂರು
  - ○ ಡಾ. ಬಿ ಎಂ ಪುಟ್ಟಯ್ಯ ೩೦
- ❑ ಬಸವಣ್ಣ: ಛತ್ರಪತಿ ಶಾಹು ಮಹಾರಾಜ
  - ○ ಎಚ್.ಟಿ. ಪೋತೆ ೩೨

- ❑ ಬೌದ್ಧ ಸೌಂದರ್ಯ ಮೀಮಾಂಸೆ
  - ○ ಡಾ. ಎಸ್. ನಟರಾಜ್ ಬೂದಾಳು ೩೬
- ❑ ಧರೆ ಹತ್ತಿ ಉರಿದರೆ...
  - ○ ಡಾ. ಟಿ. ಆರ್ ಚಂದ್ರಶೇಖರ್ ೪೦
- ❑ ದಲಿತ್ ಡೈರಿ ೪೬
  - ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್
- ❑ ಬುದ್ಧಾಯಣ ೫೦
  - ○ ಸಿ.ಎಚ್ ರಾಜಶೇಖರ್



ಕವನಗಳು : ❑ ಕಪ್ಪು ಸಂಹಿತೆ ೧೩ ❑ ಕುರುಹು ೩೯

❑ ಅಣ್ಣ ತಮ್ಮಂದಿರು ೪೪

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಬಸವಣ್ಣ ಸನ್ಯಾಸಿಯೆ? ಸಂಸಾರಸ್ಥನೇ?

ಮಾನ್ಯ ಸಂಪಾದಕರೇ,

ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆ ಬಸವ ಸಮಿತಿಯು, ದೂರಚಿತ್ರವಾಣಿಯ ಚಂದನ ವಾಹಿನಿಯಲ್ಲಿ ಪ್ರತಿನಿತ್ಯ ವಚನಾಮೃತ ಕಾರ್ಯಕ್ರಮವನ್ನು ಬಿತ್ತರಿಸುತ್ತಿದೆ. ವಚನದ ಪಾಠ, ವಚನಗಾಯನ ಹಾಗೂ ವಚನದ ವಿಶ್ಲೇಷಣೆಗಳನ್ನೊಳಗೊಂಡ ಈ ಕಾರ್ಯಕ್ರಮದ ಪ್ರಾರಂಭದಲ್ಲಿ ಬಸವಣ್ಣನವರ ಚಿತ್ರದ ದೃಶ್ಯ ಕಾಣುಬರುತ್ತದೆ. ಆದರೆ ಈ ಚಿತ್ರದಲ್ಲಿ ಬಸವಣ್ಣ ಕಾವಿ ಬಟ್ಟೆ ಧರಿಸಿದುದನ್ನು ಕಂಡು ಅನೇಕರಿಗೆ ವಿಸ್ಮಯವೂ ಸಂತಾಪವೂ ಉಂಟಾಯಿತು. ಈ ಕುರಿತು ತಮಗೆ ಬಂದ ಪ್ರತಿಕ್ರಿಯೆಗಳಿಗೆ ತಕ್ಷಣ ಸ್ಪಂದಿಸಿ ಅಧ್ಯಕ್ಷ ಅರವಿಂದ ಜತ್ತಿಯವರು ವಚನಾಮೃತ ಕಾರ್ಯಕ್ರಮದ ದೃಶ್ಯಗಳಲ್ಲಿ ಮಾರ್ಪಾಡು ಮಾಡಿಸಿ ಬಸವಣ್ಣನವರಿಗೆ ಬಿಳಿ ಉಡುಪನ್ನು ತೊಡಿಸಿದರು, ಬಸವಣ್ಣನ ವಿದ್ರೂಪಿಕರಣವನ್ನು ತೊಡೆದು ಹಾಕಿದರು.

ಇತ್ತೀಚಿನ ದಿನಗಳಲ್ಲಿ ಬಸವಣ್ಣನವರು ಚಿತ್ರ ಹಾಗೂ ಪ್ರತಿಮೆಗಳಲ್ಲಿ ಕಾವಿ ಹಾಗೂ ತತ್ಸಮ ಬಣ್ಣದ ಉಡುಪಿನಲ್ಲಿ ಕಾಣಿಸುತ್ತಿರುವುದು ಅತೀವ ಖೇದಜನಕವೂ ಖಂಡನೀಯವೂ ಆಗಿದೆ. ಬಸವಣ್ಣ ಇಬ್ಬರು ಹೆಂಡಿರನ್ನು ಸಂಭಾಳಿಸುತ್ತ ಸಂಸಾರ ಮಾಡಿದ ಗೃಹಸ್ಥ. ರಾಜ್ಯಕಾರಣದ, ಸಮಾಜಕಾರಣದ, ನವ ಸಮಾಜ ನಿರ್ಮಿತಿಯ ದಂದುಗಳಲ್ಲಿಯೂ ಬಸವಣ್ಣ ಗೃಹಸ್ಥ ಧರ್ಮದಿಂದ ದೂರವಾಗಲಿಲ್ಲ, ತ್ಯಜಿಸುವದಂತೂ ದೂರೆಉಳಿಯಿತು. ಬಸವಣ್ಣ ವಿರತನಲ್ಲ, ವಿರಕ್ತನಲ್ಲ, ಪರಿವ್ರಾಜಕನಲ್ಲ, ಸನ್ಯಾಸಿಯಂತೂ ಅಲ್ಲವೇ ಅಲ್ಲ. ಆದಾಗ್ಯೂ ಬಸವಣ್ಣನನ್ನು ಕಾವಿ ಬಟ್ಟೆಯಲ್ಲಿ ಮೆರೆಯಿಸುವವರ, ಅದನ್ನು ಯಾವ ಯೋಚನೆಯೂ ಇಲ್ಲದೆ ಸ್ವೀಕರಿಸುವ ಜನರ ಮಾನಸಿಕತೆ ಅಚ್ಚರಿಗೊಳಿಸುತ್ತದೆ. ಇದಕ್ಕೆ ಕಾರಣವೇನಿರಬಹುದು? ಅಜ್ಞಾನವೇ ಅಥವಾ ಈ ಭಾವುಕ ಹೆಡ್ಡ ಸಮಾಜದಲ್ಲಿ ಏನು ಮಾಡಿದರೂ ನಡೆಯುತ್ತದೆ ದಕ್ಕಿ ಹೋಗುತ್ತದೆ ಎಂಬ ಭಂಡ ವಿಶ್ವಾಸವೇ? ತಿಳಿಯದಂತಾಗಿದೆ.

ನಮ್ಮ ಭಾರತೀಯ ಸಮಾಜ ಮಾನಸದಲ್ಲಿ ಸಾಧು ಸಂತರ, ಬುವಾಭಗವಾನರ ಕಾವಿ ವರ್ಣದ ವೇಷಕ್ಕೆ ಒಂದು ವಿಲಕ್ಷಣ ಆಕರ್ಷಣೆ ಇದೆ. ಈ ವೇಷ ಧರಿಸುವವರು ಎಂಥವರೆ ಇರಲಿ, ಹೇಗೆ ಇರಲಿ ಅವರು ಒಮ್ಮೆಲೆ ಪವಿತ್ರಾತ್ಮರಾಗಿ ಬಿಡುತ್ತಾರೆ, ಪೂಜ್ಯರಾಗಿ ಬಿಡುತ್ತಾರೆ. ಜನಸಾಮಾನ್ಯರ ಈ ಭಾವನೆಯನ್ನೇ ಅನುನಯನಗೊಳಿಸಿ ದುರುಪಯೋಗ ಗೊಳಿಸುವ ಸಹಜ ಇಲ್ಲವೆ ಉದ್ದೇಶಪೂರಿತ ಪ್ರಯತ್ನಗಳ ಫಲವಾಗಿಯೆ ಬಸವಣ್ಣನವರು ಚಿತ್ರಗಳಲ್ಲಿ ಮೂರ್ತಿಗಳಲ್ಲಿ ಭಗವೀಕರಣಗೊಂಡುಕಾಣಿಸಿಕೊಳ್ಳುತ್ತಿದ್ದಾರೆ.ವಿಸ್ಮಯಕಾರಕ ಸಂಗತಿ ಎಂದರೆ ಈ ಕಾವಿಬಟ್ಟೆ ತೊಟ್ಟ ಬಸವಣ್ಣನ ಉಗಮ ಕೂಡಲಸಂಗಮವೇ ಆಗಿದೆ. ಅಲ್ಲಿರುವ ಬಸವಣ್ಣನ ಹೆಸರಿನಲ್ಲೆ ಮೆರೆಯುತ್ತಿರುವ ಬಸವ ಧರ್ಮಪೀಠ ವೆಂಬ ಹೆಸರಿನ ಆಧುನಿಕ ಜಗದ್ಗುರುಪೀಠದಿಂದಲೆ ನಿರ್ಮಿತವಾಗಿ ಮಾರಾಟವಾಗುತ್ತಿವೆ. ಕಾವಿಧಾರಿ ಬಸವಣ್ಣನ ಮೂರ್ತಿಗಳು. ಕೂಡಲಸಂಗಮಕ್ಕೆ ಭಕ್ತಿಭಾವದಿಂದ ಬಂದ ಬಸವ ಭಕ್ತರ, ಬಸವ ಪ್ರೇಮಿಗಳ ಮುಖಾಂತರ ಈ ಮೂರ್ತಿಗಳು ಎಲ್ಲೆಡೆಯಲ್ಲಿ ಪ್ರಚಾರಗೊಂಡಿವೆ. ಬಸವ ಪೀಠದ ಈ ಜಗದ್ಗುರುಗಳಿಗೆ ಬಸವಣ್ಣನ ಬಗ್ಗೆ ಅಜ್ಞಾನ ಇದೆ ಎನ್ನುವುದು ಅನಂತ ಅಪರಾಧವಾದೀತು. ಆದರೂ ಬಸವಣ್ಣನನ್ನು ಸನ್ಯಾಸಿಯನ್ನಾಗಿಸಿದ ಅವರ ಮನೋಭೂಮಿಕೆ ಏನಿರಬಹುದು? ಬಹುಶಃ ಬಸವಣ್ಣ ಮಠಕಟ್ಟಿ ಸ್ವಾಮಿಯಾಗಿ ಜಗದ್ಗುರುವೆಂದು ಘೋಷಿಸಿಕೊಂಡಿದ್ದರೆ ಲಿಂಗಾಯತ ಧರ್ಮ ಇನ್ನಷ್ಟು ಪ್ರಭಾವಿಯಾಗಿ ಮಜಬೂತಾಗಿ ಬೆಳೆಯಬಹುದಿತ್ತು; ಬಸವಣ್ಣ ಹಾಗೆ ಮಾಡದೆ ತಪ್ಪು ಮಾಡಿಬಿಟ್ಟ ಎಂದು ಈ ಆಧುನಿಕ ಬಸವ ಧರ್ಮಪೀಠದ ಜಗದ್ಗುರುಗಳಿಗೆ ಅನ್ನಿಸುತ್ತಿರಬಹುದು. ಅಂತೆಯೇ ಬಸವಣ್ಣನನ್ನು ಕಾವಿಧಾರಿ ಸ್ವಾಮಿಯನ್ನಾಗಿ ಜಗತ್ತಿನೆದುರು ಪ್ರಸ್ತುತಪಡಿಸುತ್ತ ಬಸವಣ್ಣನ ತಪ್ಪನ್ನು ತಿದ್ದುತ್ತಿರಬಹುದೆ ಎನ್ನಿಸುತ್ತಿದೆ, ಈ ಹಿಂದೆ ತನ್ನ ಅಂಕಿತ 'ಕೂಡಲ ಸಂಗಮದೇವ' ಸಂದರ್ಭದಲ್ಲಿ ಬಸವಣ್ಣ ಮಾಡಿದ ತಪ್ಪನ್ನು 'ಲಿಂಗದೇವ' ಸಾಕ್ಷಿಯಾಗಿ ತಿದ್ದುಪಡಿ ಮಾಡಿದಂತೆ!.

ಬಸವಣ್ಣನ ಈ ವಿದ್ರೂಪೀಕರಣದ ಬಗ್ಗೆ ಅನಾಸ್ಥೆಯನ್ನು ತೊರೆದು, ಬಸವಭಕ್ತರು ಬಸವಪ್ರಜ್ಞೆಯ ವಿಚಾರವಂತರು ಎಚ್ಚರಗೊಂಡು, ಇಂಥ ಕಾವಿಧಾರಿ ಬಸವಣ್ಣನ ಚಿತ್ರಗಳನ್ನೂ ಮೂರ್ತಿಗಳನ್ನೂ ಖಂಡಿಸಿ ಅಂಥವುಗಳ ರಚನೆ, ಪ್ರಚಾರ ಆಗದಂತೆ ನೋಡಿಕೊಳ್ಳಲು ಕ್ರಿಯಾತ್ಮಕವಾಗಿ ಯೋಚಿಸಬೇಕು, ಯೋಜಿಸಬೇಕು. ಮಾನ್ಯ ಅರವಿಂದ ಜತ್ತಿಯವರು ತೋರಿದ ಬಸವ ಪ್ರಜ್ಞೆಯು ಎಲ್ಲ ಬಸವ ಭಕ್ತರ ಮನದಲ್ಲೂ ಬೆಳಗಲಿ ಎಂದು ಹಾರೈಕೆ.

ಶಂಕರ ಮ. ಪಾಟೀಲ,
ಕೊಲ್ಲಾಪುರ

ಪತ್ರಾಗಾರ



ಅಪಾಯಕಾರಿ ಅಲ್ಲವೇ?

ಸರ್,

ಸಂವಾದ ಪತ್ರಿಕೆಯು ದಿನದಿಂದ ದಿನಕ್ಕೆ ಹೊಸತನದ ರೂಪದಲ್ಲಿ ಬೆಳೆಯುತ್ತಿದೆ. ನಿಮ್ಮ ಸಂಪಾದಕೀಯ ಓದದೆಯೇ ಬೇರೆ ಲೇಖನಗಳನ್ನು ಓದಲು ಮನಸ್ಸಾಗುವುದಿಲ್ಲ. ತಾವು ಹೆಚ್ಚು ಕಠಿಣ ಪದಗಳನ್ನು ಬಳಸದೆ ಅತ್ಯಂತ ಸರಳ ಪದಗಳನ್ನು ಬಳಸುವುದರಿಂದ ಸರಳವಾಗಿ ಅರ್ಥವಾಗುತ್ತದೆ. ಆದರೆ, ಒಳ ಪುಟಗಳಲ್ಲಿ ಕೆಲವು ಲೇಖನಗಳು ಎಲ್ಲಿಯೂ ಕೇಳದ ಪದಗಳನ್ನು ಬಳಸುತ್ತಿರುವುದರಿಂದ ಅರ್ಥ ಮಾಡಿಕೊಳ್ಳುವಲ್ಲಿ ವಿಫಲವಾಗುತ್ತಿದ್ದೇನೆ. ಸಂವಾದದಲ್ಲಿ ಒಂದೋ ಎರಡೋ ಲೇಖನಗಳು ಸರಳ ಪದದಲ್ಲಿರುತ್ತವೆ. ಅವು ಬೇಗನೆ ಅರ್ಥವಾಗಿ ಮನಸ್ಸಿಗೆ ಖುಷಿಯಾಗುತ್ತದೆ. ಮತ್ತು ಹೊಸಪುಸ್ತಕ ಪುಟಗಳಲ್ಲಿ ಶರತ್‌ಚಂದ್ರ ಚಟರ್ಜಿ, ಎ.ಎನ್. ಮೂರ್ತಿ ರಾವ್ ಹಾಗೂ ಟಿ.ಪಿ. ಕೈಲಾಸಂರವರ ಪುಸ್ತಕಗಳನ್ನು ಹೆಚ್ಚು ಹೆಚ್ಚು ಪರಿಚಯಿಸಬೇಕೆಂದು ಕೇಳುತ್ತೇನೆ. ಇದರಲ್ಲಿನ ಕೆಲವು ಲೇಖಕರು ದಲಿತರಿಗೆ ಬಂಡವಾಳಶಾಹಿ ವ್ಯವಸ್ಥೆ ಬೇಕು ಅದು ಅವಶ್ಯಕ ಎಂದು ಹೇಳುವಂತಿದೆ. ಆದರೆ, ಬಂಡವಾಳಿಗರು ಯಾವುದೇ ಜಾತಿ, ಧರ್ಮವನ್ನು ಲೆಕ್ಕಿಸದೇ ಎಲ್ಲರನ್ನೂ ಶೋಷಣೆ ಮಾಡುತ್ತಾರೆ. ದುಡಿಯುವ ವರ್ಗದ ರಕ್ತಹೀರುವುದೇ ಇವರ ಪರಮಗುರಿ. ಹಾಗಿದ್ದಲ್ಲಿ ದಲಿತರಿಗೆ ಇದರಿಂದ ಎಷ್ಟು ಸಹಕಾರಿಯೋ ಅಷ್ಟೇ ಅಪಾಯಕಾರಿ ಅಲ್ಲವೇ?

ಮಡಿವಾಳಪ್ಪ ಎಸ್.
ಹೇರೂರ್‌ವಾಡಿ (ಜಂಕ್ಷನ್)
ಜಿಲ್ಲೆ: ಗುಲಬರ್ಗಾ

ವೈಚಾರಿಕತೆಯ ಪ್ರತಿಬಿಂಬ....

ಮಾನ್ಯ ಸಂಪಾದಕರೇ,

ನಮ್ಮಲ್ಲಿ ಅನೇಕ ತಿಂಗಳ ಪತ್ರಿಕೆಗಳು ಬರುತ್ತಿವೆ. ಆದರೆ ತಮ್ಮ 'ಸಂವಾದ' ಪತ್ರಿಕೆ ತನ್ನದೇ ಆದ ವಿಭಿನ್ನ ದೃಷ್ಟಿಕೋನದೊಂದಿಗೆ ಹೊರಬರುತ್ತಿದೆ.

ಜಾತಿ, ಧರ್ಮ, ತಾರತಮ್ಯ ಕುರಿತು ಬರುವ ಚರ್ಚೆ ತನ್ನ ಗಂಭೀರ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ.

ಧರೆಹತ್ತಿ ಉರಿದರೆ ಅಂಕಣ ತುಂಬಾ ಚೆನ್ನಾಗಿ ಬರುತ್ತಿದೆ. ಒಬ್ಬ ಪ್ರಾಧ್ಯಾಪಕರಾಗಿರುವ ಟಿ.ಆರ್.ಚಂದ್ರಶೇಖರ್ ರವರು ಇಷ್ಟೊಂದು ನಿರ್ಭೀತಿಯಿಂದ ಸರ್ಕಾರದ ಅವಾಂತರ, ತೆಗೆದುಕೊಳ್ಳುತ್ತಿರುವ ಜೀವ ವಿರೋಧಿ ನಿಲುವುಗಳ ಕುರಿತು ಬರೆಯುತ್ತಿರುವಾಗ ಇತರೆ ಪ್ರಾಧ್ಯಾಪಕರಿಗೆ ಅದ್ಯಾವ ಜಡತ್ವ ಆವರಿಸಿದೆಯೋ ನಾ ಕಾಣೆ.

ಶಿವರಾಜ್,
ಅಂಜನಾನಗರ, ಬೆಂಗಳೂರು

ಚಂದಾ ವಿವರ
ಬಿಡಿ ಪ್ರತಿ ರೂ.೨೦/-
೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-
ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-
ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಮೀನ್‌ಪಳ್ಳಿ
ಲೇ: ಡಾ.ಆರ್.ವಿ.ಭಂಡಾರಿ
ಬೆಲೆ: ರೂ. ೧೦೦/-

ಬರೆದ ಎಲ್ಲಾ ಕಥೆಗಳಲ್ಲಿ ನೈಜತೆ ಮೂಡಿಸುವುದು ಒಬ್ಬ ನೈಜ ಕಥೆಗಾರನಿಗೆ ಮಾತ್ರ ಸಾಧ್ಯ. ಪ್ರಸ್ತುತ ಮೀನ್‌ಪಳ್ಳಿ ಕರಾವಳಿ ಜನರ ಬದುಕಿನ ಒಂದು ಬಹು ಮುಖ್ಯ ಆಹಾರ. ಇದು ಅಲ್ಲಿನ ಜನರ ಹಸಿವಿನ ಕತೆಯ ಸಂಕೇತ. ಮೀನು ಪೇಟೆಯನ್ನು ಅದರ ಗಲೀಜು, ವಾಸನೆ ಯೊಂದಿಗೆ ಅದ್ಭುತ ಮತ್ಸ್ಯಲೋಕವೆಂದು ಲೇಖಕರು ವರ್ಣಿಸುತ್ತಾರೆ! ಈ ಸಂಕಲನದ ಹದಿನೇಳು ಕತೆಗಳು ವಿಭಿನ್ನ ಆಯಾಮದೊಂದಿಗೆ ತಮ್ಮ ಗಟ್ಟಿತನವನ್ನು ಉಳಿಸಿಕೊಂಡಿವೆ.

ಪ್ರಕಾಶಕರು: ಅಕ್ಷಯ ಪ್ರಕಾಶನ
ಹನುಮಂತನಗರ, ಬೆಂಗಳೂರು-೧೯

ಬಯಲ ಬೆಳಕು
(ಮೂಡ್ನಾಕೂಡು ಚಿನ್ನಸ್ವಾಮಿ ಅವರ ಸಾಹಿತ್ಯಾನುಸಂಧಾನ)
ಸಂ: ಡಾ. ಅಪ್ಪಗೆರೆ ಸೋಮಶೇಖರ
ಬೆಲೆ: ರೂ. ೧೫೦/-

ಮೂಡ್ನಾಕೂಡು ಚಿನ್ನಸ್ವಾಮಿ ತಮ್ಮ ಬರಹ, ಅನುವಾದ, ಪ್ರವಾಸ, ಇದೆಲ್ಲದ ರಿಂದ ನಾಡಿನ ಸಾಂಸ್ಕೃತಿಕ, ಸಾಹಿತ್ಯ ಲೋಕದಲ್ಲಿ ಚಿರಪರಿಚಿತ ಹೆಸರು. ಪ್ರಸ್ತುತ ಕೃತಿಯಲ್ಲಿ ಚಿನ್ನಸ್ವಾಮಿಯವರ ವಿವಿಧ ಸಾಂಸ್ಕೃತಿಕ ಮಜಲುಗಳನ್ನು ಕಾಣಬಹುದು. ಅಂಬೇಡ್ಕರ್ ಬರಹಗಳ ಮರು ರೂಪಾಂತರ ಇವರ ಬರವಣಿಗೆ ಗಳಲ್ಲಿ ಅಡಗಿದೆ ಎನ್ನುವ ವಿದ್ವಾಂಸರ ಪ್ರೀತಿಯ ಮಾತುಗಳು ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ.

ಪ್ರಕಾಶಕರು: ನಂದಿ ಬುಕ್‌ಹೌಸ್
ಮೈಸೂರು-೦೪

ಒಂದು ಕೊಡ ಹಾಲಿನ ಸಮರ
ಲೇ: ಮೂಡ್ನಾಕೂಡು ಚಿನ್ನಸ್ವಾಮಿ
ಬೆಲೆ: ರೂ. ೪೦/-

ಬುದ್ಧ, ಬಸವ, ಅಂಬೇಡ್ಕರ್ ನಮ್ಮ ನಡುವಿನ ಮಹಾನ್ ದಾರ್ಶನಿಕರು. ಈ ಮೂವರ ಕಾಲಘಟ್ಟ, ಪರಿಸರ ಬೇರೆಬೇರೆ ಯಾದರೂ, ಒಂದೇ ಮತಕ್ಕಾಗಿ ಮಿಡಿದ ವರು. ಅದುವೇ ಮನುಜಮತ. ಯಾವು ದನ್ನು ಪರೀಕ್ಷಿಸದೇ ಒಪ್ಪಿಕೊಳ್ಳಬೇಡ ಎಂದ ಬುದ್ಧ, ಕಳಬೇಡ, ಕೊಲ್ಲಬೇಡ ಹುಸಿಯ ನುಡಿಯಬೇಡ ಎಂದ ಬಸವ, ತಮ್ಮ ಜನಾಂಗದ ನೋವು, ಹಿಂಸೆ, ಅರಿತು, ಅದನ್ನು ಹೋಗಲಾಡಿಸಲು ಅವಿರತ ಹೋರಾಡಿದ ಅಂಬೇಡ್ಕರ್ ಹೇಗೆ ಬೇರೆ ಬೇರೆಯಾಗಲು ಸಾಧ್ಯ? ಸೂಕ್ಷ್ಮ ಸಂವೇದ ನೆಯ ಬರಹಗಾರ ಮೂಡ್ನಾಕೂಡು ಚಿನ್ನ ಸ್ವಾಮಿ ಇದನ್ನು ಇಲ್ಲಿ ಯಥಾವತ್ತಾಗಿ ಕಟ್ಟಿಕೊಟ್ಟಿದ್ದಾರೆ.

ಪ್ರಕಾಶಕರು: ನವಕರ್ನಾಟಕ
ಪ್ರಕಾಶನ, ಬೆಂಗಳೂರು





ಹೊಸ ಪುಸ್ತಕ

ತೆನೆಹಕ್ಕಿಯ ತಳಮಳ
ಸಂ: ಪ್ರೊ. ನೀಲಗಿರಿ ಎಂ. ತಳವಾರ್
ರೇಣುಕಾ ಅಯ್ಯಪ್ಪ ಕೋಡಗುಂಟಿ
ಹಾ.ಮ. ನಟರಾಜು

ವಿಶ್ವವಿದ್ಯಾಲಯಗಳ ಕನ್ನಡ ವಿಭಾ ಗಗಳು ಒಂದು ಕಾಲಕ್ಕೆ ನಾಡಿನ ಸಾಂಸ್ಕೃ ತಿಕ ರಾಯಭಾರಿಯಂತೆ ಕೆಲಸ ಮಾಡಿ ದ್ದನ್ನು ಮರೆಯುವಂತಿಲ್ಲ. ನಾಡಿನ ವೈಚಾರಿಕ ಪ್ರಜ್ಞೆಗೆ ತನ್ನದೇ ಆದ ಮಹತ್ವದ ಕೊಡುಗೆ ನೀಡಿದ ಸಂಸ್ಥೆ, ಮೈಸೂರು ವಿ.ವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಆ ಸಂಸ್ಥೆಯ ಒಂದು ಪ್ರಯತ್ನವೇ ಈ ಕವನ ಸಂಕಲನಗಳ ಸಂಪಾದಿತ ಕೃತಿ. ಅಂದಿನ ಹಿರಿಯ ಕವಿಗಳ ತಳಮಳ, ಇಂದಿನ ಯುವ ಕವಿಗಳ ತಾಕಲಾಟ ಎಲ್ಲವೂ ಇಲ್ಲಿನ ಕವಿತೆಗಳಲ್ಲಿ ಮೇಳೈಸಿವೆ.

ಪ್ರಕಾಶಕರು: ಜ್ಯೋತಿ ಪ್ರಕಾಶನ,
ಮೈಸೂರು

ಬ್ರಾಹ್ಮಣ್ಯದ ತಂತ್ರಗಳು
ಲೇ: ಜ.ಹೊ.ನಾರಾಯಣಸ್ವಾಮಿ
ಬೆಲೆ: ರೂ. ೮೦/-

ಬ್ರಾಹ್ಮಣ್ಯದ ತಂತ್ರಗಳು ಜನಪರ, ಜೀವಪರ ಕಾಳಜಿಯನ್ನು ಮರೆಮಾಚಿಸುವಲ್ಲಿ ತಮ್ಮ ಪ್ರಯತ್ನವನ್ನು ಈಗಲೂ ಮುಂದುವರೆಸಿ ಕೊಂಡು ಬಂದಿವೆ. ಇದರ ವಿರುದ್ಧ ವೈಚಾ ರಿಕ ಪಂಥವೂ ತನ್ನ ಪ್ರತಿ ಸವಾಲನ್ನು ಒಡ್ಡು ತ್ತಲೇ ಬಂದಿದೆ. ಪ್ರಸ್ತುತ ಕಾಲಮಾನದಲ್ಲಿ ಬ್ರಾಹ್ಮಣಿಕೆ ಎಲ್ಲವರ್ಗ, ಧರ್ಮ, ವರ್ಣವನ್ನು ಮೀರಿ ತನ್ನ ಕಬಂಧಬಾಹುವನ್ನು ಚಾಚಿದೆ. ಇದರ ಹುನ್ನಾರವನ್ನು ಲೇಖಕರು ಈ ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ. ಈ ಕೃತಿಯನ್ನು ಓದುವ ಮೂಲಕ, ವೈಚಾರಿಕತೆಯನ್ನು ಗಟ್ಟಿಗೊ ಳಿಸಬೇಕಿದೆ.

ಪ್ರಕಾಶಕರು: ಮಾನವ ಪ್ರಕಾಶನ
ಉತ್ತರ ಬಡಾವಣೆ
ಹಾಸನ.



ಕ್ಲಿಂಟನ್‌ನಗು
ಲೇ: ಡಾ. ಹಿ.ಶಿ.ರಾಮಚಂದ್ರೇಗೌಡ.
ಬೆಲೆ: ರೂ. ೧೧೦/-

ಕನ್ನಡ ಜಾನಪದ ಲೋಕದಲ್ಲಿ ತಮ್ಮದೇ ಆದ ವಿಶಿಷ್ಟ ಬರವಣಿಗೆಯ ಗತ್ತನ್ನು ರೂಢಿಸಿಕೊಂಡವರು ಡಾ. ಹಿ.ಶಿ.ರಾ. ಪ್ರಸ್ತುತ ಕೃತಿಯಲ್ಲಿ ಇಪ್ಪತ್ತೇಳು ವಿವಿಧ ಲೇಖನಗಳಲ್ಲಿ ಕಾರ್ಮಿಕ ಚಳವಳಿ, ರಾಮಮಂದಿರ ವಿವಾದ, ಅನುದೇವಾ ಪ್ರತಿಭಟನೆ, ರೈತ ಚಳವಳಿಯ ಪ್ರಸ್ತುತ ಸವಾಲುಗಳನ್ನು ಚರ್ಚಿಸಿದ್ದಾರೆ. ಓದುಗ ಸಕ್ರಿಯವಾಗದ ಹೊರತು, ಗೌಡರ ಬರಹ ಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ನೆನಪಿಸಿಕೊಂಡು ಇದನ್ನ ಓದಬೇಕಿದೆ.

ಪ್ರಕಾಶಕರು: ವಿಜಯಲಕ್ಷ್ಮೀ ಪ್ರಕಾಶನ
ಕುವೆಂಪುನಗರ, ಮೈಸೂರು-೨೩

ಸಂಪಾದಕೀಯ



ಅಂತರಂಗ



ನಾಝಿಗಳ ರಾಜ್ಯದಲ್ಲಿ...

ಮುಖ್ಯಮಂತ್ರಿ ಯಡಿಯೂರಪ್ಪ ವಿರೋಧ ಪಕ್ಷಗಳ ಮುಖಂಡರ ಮೇಲೆ ಕಣ್ಣಿಡುವಂತೆ ಪೊಲೀಸರಿಗೆ ಸೂಚಿಸಿದ್ದಾರೆ.

ನೀವೇನೂ ಆಶ್ಚರ್ಯ ಪಡಬೇಕಾಗಿಲ್ಲ. ಇನ್ನು ಮುಂದೆ ಅವರು ನಮ್ಮ ನಿಮ್ಮ ಮೇಲೆಲ್ಲಾ ಕಣ್ಣಿಡುವಂತೆ ಸೂಚಿಸುತ್ತಾರೆ!

ಒಬ್ಬ ನಿರ್ಲಜ್ಜ ನಾಲಾಯಕ್ ಮುಖ್ಯಮಂತ್ರಿ ಏನೆಲ್ಲ ಮಾಡಬಹುದೋ ಅದೆನ್ನೆಲ್ಲ ಯಡಿಯೂರಪ್ಪ ಮಾಡುತ್ತಿದ್ದಾರೆ.

'ಚರ್ಚ್‌ಗಳ ಮೇಲೆ ನಾವೇ ಧಾಳಿ ನಡೆಸಿದ್ದು, ಮತಾಂತರ ಮಾಡುವವರಿಗೆ ಬುದ್ಧಿ ಕಲಿಸಲು ಧಾಳಿಯನ್ನು ಮತ್ತಷ್ಟು ಹೆಚ್ಚಿಸುತ್ತೇವೆ' ಎಂದು ಭಜರಂಗದಳದ ಮಹೇಂದ್ರ ಕುಮಾರ್ ಎಂಬ ಧೂರ್ತ ಟಿ.ವಿ ಕ್ಯಾಮರಾ ಮುಂದೆ ಅಬ್ಬರಿಸಿದರೂ, ಮುಖ್ಯಮಂತ್ರಿಗೆ ಆತ ಅಪರಾಧಿಯಂತೆ ಕಾಣುತ್ತಿಲ್ಲ. ಧಾಳಿಕೋರರನ್ನು ಬಂಧಿಸಿ ಶಾಂತಿ ಕಾಪಾಡುವಂತೆ ಆಗ್ರಹಿಸುತ್ತಿರುವ ವಿರೋಧ ಪಕ್ಷಗಳು ಸಮಾಜ ದ್ರೋಹಿಗಳಂತೆ ಕಾಣಿಸುತ್ತಿವೆ!

ಈ ಗೃಹಮಂತ್ರಿಯನ್ನೇ ನೋಡಿ. ಹಿಟ್ಲರ್‌ನ ಪ್ರತಿರೂಪದಂತಿರುವ ಈ ಮನುಷ್ಯ ಧಾಳಿಕೋರರನ್ನು ಬಂಧಿಸದಂತೆ ಪೊಲೀಸರ ಮೇಲೆ ಒತ್ತಡ ಹೇರುತ್ತಿದ್ದಾರೆ. ನನ್ನ ಪರಿಚಯದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಪ್ರಕಾರ 'ಚರ್ಚ್‌ಗಳ ಮೇಲಿನ ಧಾಳಿಕೋರರನ್ನು ಸದೆ ಬಡಿಯುವುದು ಚಿಟಿಕೆ ಹೊಡೆಯುವಷ್ಟು ಸುಲಭದ ಕೆಲಸ. ಆದರೆ ಸರ್ಕಾರ ಪೊಲೀಸರ ಕೈ ಕಟ್ಟಿಹಾಕಿದೆ!'

ಯಡಿಯೂರಪ್ಪ ಎಷ್ಟೇ ಜಾಗಟೆ ಬಾರಿಸಿದರೂ ಸಂಘ ಪರಿವಾರದ ಗರ್ಭಗುಡಿಯಲ್ಲಿರುವ ಜನ ಅವರನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಲೇ ಇದ್ದಾರೆ. ಹೆಸರಿಗೆ ಲಿಂಗಾಯತರಾದರೂ ಹಣೆತುಂಬ ಕುಂಕುಮ ಇಟ್ಟುಕೊಂಡು ಬ್ರಾಹ್ಮಣ ವಟುವಿನಂತೆ ಓಡಾಡುವ ಯಡಿಯೂರಪ್ಪ ಎಷ್ಟೇ ತಿಪ್ಪರಲಾಗ ಹಾಕಿದರೂ 'ಗರ್ಭಗುಡಿ'ಯ ಸದಸ್ಯರಾಗುವುದಂತೂ ಸಾಧ್ಯವೇ ಇಲ್ಲ. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕ್ಷಣದಿಂದಲೇ ಅವರನ್ನು ಕೆಳಗಿಳಿಸಲು ಈ ಗರ್ಭಗುಡಿ ಸಂಸ್ಕೃತಿಯ ವಟು ಶ್ರೇಷ್ಠರು ಕಾರ್ಯಾರಂಭ ಮಾಡಿದ್ದಾರೆ. ಆದರೆ ಯಡಿಯೂರಪ್ಪ ಮಾತ್ರ ಅನ್ನಲೂ ಆಗದೇ ಅನುಭವಿಸಲೂ ಆಗದೆ ಕಂಡಕಂಡವರ ಮೇಲೆ ಕೆಂಡಕಾರುತ್ತಾ ಕಾಲ ತಳ್ಳುತ್ತಿದ್ದಾರೆ.

ಯಡಿಯೂರಪ್ಪ ತುಂಬಾ ಕಷ್ಟಪಟ್ಟು ಮುಖ್ಯಮಂತ್ರಿಯಾಗಿದ್ದಾರೆ. ಹಾಗಾಗಿ ಅವರಿಗೆ ಕುರ್ಚಿ ಬಿಡುವುದೂ ತುಂಬಾ ಕಷ್ಟದ ಕೆಲಸವೇ. ಆದರೆ ಕುರ್ಚಿ ಉಳಿಸಿಕೊಳ್ಳಲು ಅವರು ಅನುಸರಿಸುತ್ತಿರುವ ಮಾರ್ಗಗಳು ಮಾತ್ರ ಅವರನ್ನು ಅಧೋಗತಿಯತ್ತಲೇ ತಳ್ಳುತ್ತಿವೆ. ಅವರು ಕರ್ನಾಟಕದ ಮುಖ್ಯಮಂತ್ರಿಯೇ ಹೊರತು ಕೇವಲ ಸಂಘ ಪರಿವಾರದ ಮುಖ್ಯಮಂತ್ರಿಯಲ್ಲ. ಇದನ್ನು ಅವರು ನೆನಪಿನಲ್ಲಿ ಇಟ್ಟುಕೊಂಡರೆ ಮತ್ತಷ್ಟು ಕಾಲ ಮುಖ್ಯಮಂತ್ರಿಯಾಗಿ ಮುಂದುವರೆಯಬಹುದು. ಅವರು ಕೇವಲ ಸಂಘ ಪರಿವಾರದ ಮುಖ್ಯಮಂತ್ರಿಯಾಗಿ ನಡೆದುಕೊಂಡರೆ ಬಹಳ ದಿನ ಮುಖ್ಯಮಂತ್ರಿಯಾಗಿ ಉಳಿಯುವುದಿಲ್ಲ.

ಈಗ ಸಂಘ ಪರಿವಾರದ ಬಡಬಡಿಕೆಯತ್ತ ಸ್ವಲ್ಪ ಗಮನಿಸೋಣ. ಸಂಘ ಪರಿವಾರದ ಖಾಯಂ ಪೋಷಕರಾದ ವಿಶ್ವೇಶ್ವರ ತೀರ್ಥ ಸ್ವಾಮೀಜಿಯಿಂದ ಹಿಡಿದು, ಈಚೆಗೆ ಅದರ ಪೂರ್ಣ ಪ್ರಮಾಣದ ವಕ್ತಾರರಂತೆ ಬಿಂಬಿಸಿಕೊಳ್ಳುತ್ತಿರುವ ಚಿದಾನಂದ ಮೂರ್ತಿವರೆಗೆ ಎಲ್ಲರೂ 'ಬಲವಂತದ ಮತಾಂತರ' ಕುರಿತು ಮಾತನಾಡುತ್ತಿದ್ದಾರೆ. ವಿಶ್ವೇಶ್ವರ ತೀರ್ಥರ ಸಂಕಟವನ್ನೇನೋ ಅರ್ಥ ಮಾಡಿಕೊಳ್ಳಬಹುದು. ಆದರೆ ಈಗಾಗಲೇ ಮತಾಂತರಿಯಾಗಿರುವ (೮೦೦ ವರ್ಷಗಳ ಹಿಂದೆ!) ಚಿದಾನಂದ ಮೂರ್ತಿಯವರ ಮರು ಮತಾಂತರ ಮಾತ್ರ ನಮಗೆ ಅರ್ಥವಾಗುತ್ತಿಲ್ಲ. ಯಾವ ಆಮಿಷ ಅಥವಾ ಬಲವಂತಕ್ಕೊಳಗಾಗಿ ಅವರು ಮರು ಮತಾಂತರಕ್ಕೆ ಮುಂದಾಗಿದ್ದಾರೆಂಬ ಬಗ್ಗೆ 'ಅರ್ಥ'ಪೂರ್ಣ ತನಿಖೆಯೇ ನಡೆಯಬೇಕಾಗಿದೆ. ಈ ತನಿಖೆ ಪೂರ್ಣಗೊಂಡ ನಂತರ ಇತರರ ಮತಾಂತರದ ಬಗ್ಗೆ ತನಿಖೆ ಮುಂದುವರೆಸಬಹುದು!

ಮತಾಂತರ ಭಾರತೀಯರೆಲ್ಲರಿಗೆ ಸಂವಿಧಾನ ನೀಡಿರುವ ಹಕ್ಕು. ಯಾರು ಯಾವ ಮತವನ್ನಾದರೂ ಅವಲಂಬಿಸಬಹುದು ಬದಲಾಯಿಸಿಕೊಳ್ಳಬಹುದು. ಹಾಗೂ ತಮ್ಮ ಮತ ಧರ್ಮಗಳ ಬಗ್ಗೆ ಪ್ರಚಾರವನ್ನೂ ಮಾಡಬಹುದು. ಇದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ.

ಆದರೆ ಸಂಘ ಪರಿವಾರದ ಕೆಲವು ಪುಂಡರು ತಾವಷ್ಟೇ 'ಹಿಂದೂಧರ್ಮ'ದ ಹಿತಚಿಂತಕರು ಮತ್ತು ಗುತ್ತಿಗೆದಾರರೆಂದು ಭಾವಿಸಿ ಗೂಂಡಾಗಿರಿಗೆ ಇಳಿಯಲು ಯಾರು ಇವರಿಗೆ ಅಧಿಕಾರ ನೀಡಿದ್ದಾರೆ? ಅಷ್ಟಕ್ಕೂ ಭಾರತದಲ್ಲಿರುವುದು ವಿವಿಧ ಜಾತಿಗಳೇ ಹೊರತು ಎಲ್ಲರನ್ನು ಸಮಾನರೆಂದು ಪರಿಗಣಿಸುವ ಒಂದು ಧರ್ಮವಲ್ಲ. ಸಾವಿರಾರು ವರ್ಷಗಳ ಬ್ರಾಹ್ಮಣ ವೈದಿಕಶಾಹಿಯ ನಂಬಿಕೆ ಆಚರಣೆಗಳನ್ನೇ ಭಾರತೀಯರೆಲ್ಲರ ಮೇಲೆ ಹೇರಿ ಅವರನ್ನು ಬಲವಂತವಾಗಿ 'ಹಿಂದೂ ಧರ್ಮ' ಎಂದು ಕರೆಯಲಾಗುವ 'ಬ್ರಾಹ್ಮಣ ಧರ್ಮ'ದಲ್ಲಿ ಕಟ್ಟಿ ಹಾಕಲಾಗಿದೆಯೇ ಹೊರತು ಜನರೇ ಪ್ರಜ್ಞಾಪೂರ್ವಕವಾಗಿ ಅದರ ಧರ್ಮ ಶ್ರೇಷ್ಠತೆಯನ್ನು ಒಪ್ಪಿ ಸ್ವೀಕರಿಸಿದ್ದಲ್ಲ.

ಅಲ್ಲದೇ ಹಿಂದೂ ಎಂಬ ಪದ ಬಳಕೆ ಆರಂಭವಾಗಿದ್ದೇ ೧೮ನೇ ಶತಮಾನದಿಂದ. ಅದೂ ಭಾರತ ಭೂ ಭಾಗವನ್ನು ಸಿಂಧೂನದಿಯ (ಸಿಂಧೂ ಎಂದು ಉಚ್ಚರಿಸಲಾಗದೆ ಹಿಂದೂ ಎಂದು ಕರೆಯಲಾಯಿತು) ಆಚೆಯದೆಂದು ಪರ್ಶಿಯನ್ನರು ಗುರುತಿಸತೊಡಗಿದಾಗ. ನಂತರವಷ್ಟೇ 'ಭರತ ಖಂಡ' 'ಹಿಂದೂಸ್ಥಾನ'ವೆಂದು ಪರಿಗಣಿಸಲ್ಪಟಿತ್ತು. ಹೀಗೆ ಹಿಂದೂಸ್ಥಾನವೆಂದು ಕರೆಯಲ್ಪಟ್ಟ ಭೂ ಭಾಗದಲ್ಲಿ ವಾಸಿಸುವವರೆಲ್ಲ ನಂತರ 'ಹಿಂದೂ'ಗಳಾದರು. ಆದರೆ ಒಂದು ಧರ್ಮ ಮಾತ್ರ ಇಲ್ಲಿ ಒಡಮೂಡಲಿಲ್ಲ. ಜಾತಿ ಅಸಮಾನತೆಯಲ್ಲಿ, ವರ್ಣಾಶ್ರಮ ಧರ್ಮದ ಹೆಸರಿನಲ್ಲಿ ಇಡೀ ಜನ ಸಮುದಾಯವೆಲ್ಲ ವಿವಿಧ ಅಸಮಾನ ಗುಂಪುಗಳಾಗಿ ಹಂಚಿ ಹೋದವು. ಬ್ರಾಹ್ಮಣ್ಯದ ಪ್ರಾಬಲ್ಯ ಮತ್ತು ದಬ್ಬಾಳಿಕೆಯಲ್ಲಿ ಭಾರತೀಯ ಸಮಾಜ ವಿವಿಧ ಭಾಗಗಳಾಗಿ ಅಸಮಾನತೆಯ ಮೆಟ್ಟಿಲುಗಳಾಗಿ ಆಘಾತಕ್ಕೊಳಗಾಯಿತು.

ಈಗಲೂ ಭಾರತದಲ್ಲಿರುವುದು ವಿವಿಧ ಜಾತಿ ಗುಂಪುಗಳ ಮೇಲು ಕೀಳಾಟವೇ ಹೊರತು, ಧಾರ್ಮಿಕ ಅಖಂಡತೆಯಲ್ಲ. ನಿಜ ಹೇಳಬೇಕೆಂದರೆ ಭಾರತೀಯರಿಗೆ ಧರ್ಮವೇ ಇಲ್ಲ. ಅವರೆಲ್ಲ ಕೇವಲ ಜಾತಿ ಗುಂಪುಗಳು ಮಾತ್ರ. ಧರ್ಮವೇ ಇಲ್ಲದ ಜನ, ಅದರಲ್ಲೂ ಅಸಮಾನತೆಯ ತಳ ಹಂತದಲ್ಲಿರುವವರು, ತಾವು ಒಪ್ಪುವ ಯಾವುದೇ ಧರ್ಮ ಸ್ವೀಕರಿಸುವುದು ಅತ್ಯಂತ ಸಹಜ ಹಾಗೂ ನ್ಯಾಯಯುತವಾದುದಾಗಿದೆ. ಇದು ಪ್ರಕೃತಿ ಸಹಜ ಕ್ರಿಯೆಯೇ ಹೊರತು ಯಾವುದೇ ಪ್ರಲೋಭನೆ, ಆಮಿಷ ಮತ್ತು ಬಲತ್ಕಾರದ ಪರಿಣಾಮವಾಗಿ ಉಂಟಾದುದಲ್ಲ.

ಇಷ್ಟು ಕನಿಷ್ಟ ತಿಳವಳಿಕೆ ಈ ಬ್ರಾಹ್ಮಣ್ಯದ ಕಾಲಾಳುಗಳಿಗೆ ತಿಳಿಯದಿದ್ದರೆ ಅವರಿಗೆ ಏನು ಮಾಡಬೇಕು?

○ ಇಂದೂಧರ ಹೊನ್ನಾಪುರ

ಹಿಂದುತ್ವದ ಜಾತಿ ಮತ್ತು...

ಡಾ. ರಮೇಶ ಬೈರಿ

ಕಳೆದೆರಡು ಶತಮಾನಗಳಲ್ಲಿ ತಡೆಯಿಲ್ಲದೆ ನಡೆದ ಜಾತಿಯ ಕುರಿತಾದ ಅಧ್ಯಯನ-ಚಿಂತನೆ-ವಾದವಿವಾದಗಳ ಬಗೆಗೆ ಈ ಗುಂಪಿಗಿರುವ ತಿರಸ್ಕಾರ ಇವರ ಟ್ರೇಡ್ಮಾರ್ಕು. ಇನ್ನಾರಿಗೂ ದೊರಕದ ಒಳ ನೋಟವೊಂದು ತಮಗೆ ದೊರಕಿದೆ ಅನ್ನೋದು ಆ ತಿರಸ್ಕಾರದ ಹಿಂದಿರುವ ಧಾರ್ಷ್ಟ್ಯದ ಬೆನ್ನೆಲುಬು. ಸಾಮಾನ್ಯವಾಗಿ ಇಂತಹ ಜ್ಞಾನೋದಯ ಆದವರು ಹುಲುಮಾನವರ ಬಗ್ಗೆ ಪ್ರೀತಿ, ಕರುಣೆ ಬೆಳೆಸಿಕೊಳ್ಳುತ್ತಾರೆ. ಆದರೆ ಇಲ್ಲಿ ನಮ್ಮಂತಹ ಬಾಲಗಂಗಾಧರರನ್ನ, ಜಾತಿ ಬಗ್ಗೆ ಇವರು ಹೀಗೆ ಹೇಳ್ತಾರೆ, ಅವರು ಹಾಗೆ ಹೇಳ್ತಾರೆ, ಆದ್ರೆ ನೀವು ಹಿಂಗಂತೀರಲ್ಲಾ, ಅದ್ ಹೆಂಗ್ರಿ, ಅಂತೇನಾದ್ರೂ ಅಂದ್ರೋ ಅಷ್ಟೇ. ಏ, ಇವ್ರನ್ನು ಹೊರಗ್ ಹಾಕ್ರೋ, ಅಂತ ತಮ್ಮ ಶಿಷ್ಯ ವೃಂದಕ್ಕೆ ಆದೇಶಿಸ್ತಾರೆ.

ಡೊಮಿನಿಕ್ ಹಾಗೂ ಷಣ್ಮುಖರ ಲೇಖನಗಳ ಬಗ್ಗೆ. ಡೊಮಿನಿಕ್‌ರವರು ವರದಿಸಿದ ವಿಚಾರಸಂಕಿರಣದಲ್ಲಿ ಭಾಗಿಯಾಗಿ ಪ್ರಬಂಧ ಮಂಡಿಸಿದ್ದರಿಂದಲೂ, ಷಣ್ಮುಖರು ವಿಚಾರಸಂಕಿರಣದಲ್ಲಿ ಭಾಗವಹಿಸಿದ್ದ ಯಾರೊಬ್ಬರೂ ಬಾಲಗಂಗಾಧರರ ಬಗ್ಗೆಯಾಗಲೀ ಕುವೆಂಪು ವಿಶ್ವವಿದ್ಯಾಲಯದಲ್ಲಿನ ಅವರ ಸಂಗಡಿಗರು ಮಾಡುತ್ತಿರುವ ಸಂಶೋಧನೆಯ ಬಗ್ಗೆಯಾಗಲೀ ಚಕಾರವೆತ್ತದಿರುವ ಬಗ್ಗೆ ಆಶ್ಚರ್ಯಗೊಂಡಿರುವುದರಿಂದಲೂ ಈ ಪತ್ರ.

ಮೊದಲನೆಯದಾಗಿ, ಕುವೆಂಪು ವಿಶ್ವವಿದ್ಯಾಲಯದ ಅಂಬೇಡ್ಕರ್ ಅಧ್ಯಯನ ಸಂಸ್ಥೆ ಏರ್ಪಡಿಸಿದ್ದ ಈ ವಿಚಾರ ಸಂಕಿರಣ ಬಾಲಗಂಗಾಧರರ ಸಂಶೋಧನೆ-ಯಾ-ನಿಲುವುಗಳಿಗೆ ಉತ್ತರಿಸಲಾಗಲೀ ಅಥವಾ ಅವುಗಳ ಹಿನ್ನೆಲೆಯಲ್ಲಾಗಲೀ ನಡೆದದ್ದಲ್ಲ. ಸಂಕಿರಣದ ಉದ್ದೇಶವನ್ನು ವಿವರಿಸುವ, ಪ್ರಬಂಧಗಳನ್ನು ಆಹ್ವಾನಿಸುವ concept noteನಲ್ಲಿ ಬಾಲಗಂಗಾಧರರ ಬಗ್ಗೆಯಾಗಲೀ ಕುವೆಂಪು ವಿಶ್ವವಿದ್ಯಾಲಯದಲ್ಲಿನ ಅವರ ಸಂಗಡಿಗರು ಮಾಡುತ್ತಿರುವ ಸಂಶೋಧನೆಯ ಬಗ್ಗೆಯಾಗಲೀ ಚಕಾರವೂ ಇರಲಿಲ್ಲ. ನಾನು ಪ್ರಬಂಧ ತಯಾರಿಸಿದ್ದು ಆ concept noteಗೆ ಸಂವಾದಿಯಾಗಿ. ಇಷ್ಟಾಗಿಯೂ ಕೆಲ ಪ್ರಬಂಧ ಮಂಡಕರು ಬಾಲಗಂಗಾಧರರ ಕೆಲಸವನ್ನು, ಅವರ ಚೌಕಟ್ಟನ್ನು ಉದ್ದೇಶಿಸಿ ತಮ್ಮ ನಿಲುವುಗಳನ್ನು ಸ್ಪಷ್ಟಪಡಿಸಿದ್ದೂ ಇತ್ತು. ಆದರೆ ಅದು ಕೂಡಾ concept noteನ ಚೌಕಟ್ಟಿಗೆ ಅನುಗುಣವಾಗಿಯೇ ಇತ್ತು.

ಇನ್ನು ಬಾಲಗಂಗಾಧರ ಮತ್ತವರ ಅನುಯಾಯಿಗಳ ಕೆಲಸದ ಬಗ್ಗೆ ಹೆಚ್ಚೇನೂ ಹೇಳಲಿಕ್ಕಿಲ್ಲ. ಬಾಲಗಂಗಾಧರರು ಕಳೆದೆರಡು ಮೂರು ವರ್ಷಗಳಿಂದ ಕರ್ನಾಟಕದ ಅಕಾಡೆಮಿಕ್ ಮತ್ತು ಪ್ರಗತಿಪರ ವಲಯಗಳಲ್ಲಿ ಸುದ್ದಿಗೆ, ಚರ್ಚೆಗೆ ಗ್ರಾಸವಾಗಿದ್ದರೂ, ಅದೆಲ್ಲಾ ಅವರ ರಾಜಕೀಯ ಒಲವುಗಳ ಬಗ್ಗೆ, ಅವರ ಹಣವಹಿವಾಟುಗಳ ಬಗ್ಗೆ ಅನುಮಾನಗಳನ್ನು ಎತ್ತುವುದರ ಕಡೆಗೇ ಬಹುಪಾಲು ವ್ಯಯವಾಗಿದೆ. ಈ ವಿಷಯಗಳ ಕುರಿತಾಗಿ ಮಾತಾಡುವುದು ಅನಗತ್ಯ ಅಂತಲ್ಲ. ಅದರಲ್ಲೂ ಹಿಂದುತ್ವವು ಜಾತಿಯ ಕುರಿತಾಗಿ ಮಾತನಾಡುವುದಕ್ಕೂ ಈ ಗುಂಪು ಮಾತನಾಡುತ್ತಿರುವುದಕ್ಕೂ ಅಂತಹ ವ್ಯತ್ಯಾಸವೇನಿಲ್ಲ. ಈ ತರಹದ ಒಗ್ಗೂಡುವಿಕೆಯ ಬಗ್ಗೆ ಚರ್ಚೆಯಾಗುವುದು ಅಗತ್ಯ. ಆದರೆ ಎಲ್ಲೋ ಬಾಲಗಂಗಾಧರರೇ ಸರಿಯಾಗಿ ಹೇಳಿದಂತೆ, ಯಾರೋ ನಾ ಹೇಳಿದ್ದನ್ನ ತಮ್ಮ ಅನುಕೂಲಕ್ಕೆ ಬಳಸಿಕೊಳ್ತಾರೆ ಅಂದ್ಬಿಟ್ಟು ನನ್ನ ಕೆಲಸವನ್ನ ಮಾಡ್ದೆ, ನನ್ನ ಪ್ರಶ್ನೆಗಳನ್ನ ಕೇಳ್ಕೊಳ್ದೆ ಇರೋಲ್ಲ.

ಇಷ್ಟು ಹೇಳಿದ ಮೇಲೆ, ಬಾಲಗಂಗಾಧರರ ಸಂಶೋಧನೆ ಏನು ಅನ್ನೋದು. ಈ ಮೂರ್ನಾಲ್ಕು ವರ್ಷಗಳಲ್ಲಿ ಅವರು ಮತ್ತವರ ತಂಡದವರು ಜಾತಿಯ ಬಗ್ಗೆ ಮಾತಾಡಿದ್ದನ್ನು ಗಮನದಲ್ಲಿರಿಸಿಕೊಂಡು ಹೇಳೋದಾದ್ರೆ: ಕಳೆದೆರಡು ಶತಮಾನಗಳಲ್ಲಿ ತಡೆಯಿಲ್ಲದೆ ನಡೆದ ಜಾತಿಯ ಕುರಿತಾದ ಅಧ್ಯಯನ-ಚಿಂತನೆ-ವಾದವಿವಾದಗಳ ಬಗೆಗೆ ಈ ಗುಂಪಿಗಿರುವ ತಿರಸ್ಕಾರ ಇವರ ಟ್ರೇಡ್ಮಾರ್ಕು. ಇನ್ನಾರಿಗೂ ದೊರಕದ ಒಳನೋಟವೊಂದು ತಮಗೆ ದೊರಕಿದೆ ಅನ್ನೋದು ಆ ತಿರಸ್ಕಾರದ ಹಿಂದಿರುವ ಧಾರ್ಷ್ಟ್ಯದ ಬೆನ್ನೆಲುಬು. ಆ ತಿರಸ್ಕಾರ ಅವರ ಎಲ್ಲಾ ಸಾರ್ವಜನಿಕ ಮುಖಾಮುಖಿಗಳಲ್ಲಿ ಮುಖಕ್ಕೆ ರಾಚುತ್ತದೆ.

ಸಾಮಾನ್ಯವಾಗಿ ಇಂತಹ ಜ್ಞಾನೋದಯ ಆದವರು ಹುಲುಮಾನವರ ಬಗ್ಗೆ ಪ್ರೀತಿ, ಕರುಣೆ ಬೆಳೆಸಿಕೊಳ್ಳುತ್ತಾರೆ. ಆದರೆ ಇಲ್ಲಿ ನಮ್ಮಂತಹ ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವವರ ಬಗ್ಗೆ ಇವರಿಗೆ ಕೋಪ ಮತ್ತು ಅಸಹನೆ. ಬಾಲಗಂಗಾಧರರನ್ನ, ಅಲ್ಲ ಸ್ವಾಮಿ, ಜಾತಿ ಬಗ್ಗೆ ಇವರು ಹೀಗೆ ಹೇಳ್ತಾರೆ, ಅವರು ಹಾಗೆ ಹೇಳ್ತಾರೆ, ಆದ್ರೆ ನೀವು ಹಿಂಗಂತೀರಲ್ಲಾ, ಅದ್ ಹೆಂಗ್ರಿ, ಅಂತೇನಾದ್ರೂ ಅಂದ್ರೋ ಅಷ್ಟೇ. ಏ, ಇವ್ರನ್ನು ಹೊರಗ್ ಹಾಕ್ರೋ, ಅಂತ ತಮ್ಮ ಶಿಷ್ಯವೃಂದಕ್ಕೆ ಆದೇಶಿಸ್ತಾರೆ. ಸರಿ, ಗುರುಗಳ ಹತ್ರ ಬೇಡ, ಶಿಷ್ಯರ ಹತ್ರ ಕೇಳೋಣ, ಉದ್ಧಾರ ಆಗೋಣ, ಅಂತಂದು ಹೋದ್ರೆ, ಶಿಷ್ಯರ ಪ್ರಿಯ ಅಸ್ತ್ರಗಳು ವ್ಯಂಗ್ಯ; ವ್ಯಂಗ್ಯ ಕೆಲಸ ಮಾಡದಿದ್ದಾಗ ಗುರು ಮಹಿಮೆಯ ಪ್ರವಚನ.

ಹೋಗಲಿ, ಇವರು ಬರೆದಿದ್ದನ್ನಾದರೂ ಓದಿ ನಾವೂ ಆ ಅಭೂತಪೂರ್ವವಾದ ದರ್ಶನವನ್ನು ಪಡೆದುಕೊಳ್ಳೋಣ, ಬೆಳಕಿನೆಡೆಗೆ ಸಾಗೋಣ ಅಂತಂದ್ರೆ, ಎಲ್ಲಾ ಪಿಸ್ಸೆ. ಸಾಮಾಜಿಕ ಶಾಸ್ತ್ರಗಳ ಮೂಲಭೂತ ಸಾಮಗ್ರಿಗಳು, ಪರಿಕಲ್ಪನೆಗಳು, ಚೌಕಟ್ಟುಗಳೆಲ್ಲವೂ ಪಾಶ್ಚಾತ್ಯರ ಮೂಗಿನ ನೇರಕ್ಕೆ ತಯಾರಾದದ್ದು; ಅವರ ಅನುಭವ ವ್ಯಾಪ್ತಿಯ ಮಿತಿಯಲ್ಲಿ ಎಲ್ಲರ ಜಗತ್ತನ್ನು ಪರಿಭಾವಿಸುವಂತಹದ್ದು ಎನ್ನುವ ವಾದ ಬಹು ಹಳೆಯದು; ಕಳೆದ ೩೦ ವರ್ಷಗಳಲ್ಲಂತೂ ಅಸಂಖ್ಯಾತ ಎಡ್ವರ್ಡ್ ಸಯೀದ್ ಗಳ

(೮ನೇ ಪುಟಕ್ಕೆ)



ಸಂಶೋಧನೆ ಎಂಬ ಚಿನ್ನದ ಮೊಟ್ಟೆ

ಜಾತಿ ಮತ್ತು ತಾರತಮ್ಯಕ್ಕೆ ಬಂದ ಪ್ರತಿಕ್ರಿಯೆ ನೀಡಿರುವ ಕಿರಣ್, ರಾಜಾರಾಮ್ ಹೆಗಡೆ ಮತ್ತು ಸದಾನಂದ್‌ರವರಿಗೆ ನಮನಗಳು. ಓದುಗರು ಈ ಎಲ್ಲಾ ಪ್ರತಿಕ್ರಿಯಾತ್ಮಕ ಲೇಖನಗಳನ್ನು ಓದಿದ್ದಾರೆ ಮತ್ತು ಅವರದ್ದೇ ಆದ ತೀರ್ಮಾನಗಳಿಗೂ ಬಂದಿದ್ದಾರೆ ಎನ್ನುವುದಕ್ಕೆ ಅವರು ನೀಡುತ್ತಿರುವ ಪ್ರತಿಕ್ರಿಯೆಗಳೇ ಸಾಕ್ಷಿ. ಆದ್ದರಿಂದ, ಹೆಚ್ಚಿನ ಸಾಹಸಕ್ಕೆ ಹೋಗದೆ ಈ ಕೆಳಗಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಇಚ್ಛಿಸುತ್ತೇನೆ:

೧. ಸೆಪ್ಟೆಂಬರ್ ತಿಂಗಳ ಸಂವಾದದಲ್ಲಿ ಬಂದ ಮೂರೂ ಪ್ರತಿಕ್ರಿಯೆಗಳೂ ಸಹ ನಾಜೂಕಾಗಿ ಭವಿಷ್ಯದ(?) ಭಾರತದ ಸಾಮಾಜಿಕ ವಿಜ್ಞಾನಗಳ ಕುರಿತಂತೆ ಬಾ.ಗಂ ರವರ ಸೈದ್ಧಾಂತಿಕ ನಿಲುವುಗಳನ್ನೇ ಎತ್ತಿಹಿಡಿದು, ನನ್ನ ಲೇಖನ 'ಜಾತಿ ಮತ್ತು ತಾರತಮ್ಯ'ದಲ್ಲಿನ ಸಂಗತಿಗಳನ್ನು ಎಳ್ಳಷ್ಟೂ ಚರ್ಚಿಸುವುದಿಲ್ಲ. ಬದಲಾಗಿ ಸಂವಾದದ ಜಾಗವನ್ನು ಬಳಸಿಕೊಂಡು ಬಾ.ಗಂರವರ ಸೈದ್ಧಾಂತಿಕ ನಿಲುವುಗಳು ಮತ್ತು ಅದಕ್ಕಾಗಿಯೇ ಹುಟ್ಟಿಕೊಂಡಿರುವಂಥ 'ಕ್ಯಾಶ್'ನ್ನು ಓದುಗರ ಮುಂದಿಡುವುದೇ ಆಗಿದೆ. ಆದರೆ ಒಂದು ವಿಷಯವನ್ನು ಗಮನಿಸಲೇಬೇಕಾಗಿದೆ 'ಜಾತಿ ಮತ್ತು ತಾರತಮ್ಯ' ಲೇಖನ ಸಂವಾದದಲ್ಲಿ ಪ್ರಕಟವಾಗುವ ತನಕ ಈ ಮಹಾನ್ ಸಂಶೋಧನೆಯ ಬಗ್ಗೆ ಎಲ್ಲೂ ಯಾವುದೇ ಮಾಹಿತಿಯನ್ನು ನೀಡಿರಲಿಲ್ಲ. ಅದರಲ್ಲಿ ಡಾ.ಶ್ರೀಧರ್ ಮತ್ತು ಡಾ. ಲಕ್ಷ್ಮಿಪತಿಯವರು 'ಕ್ಯಾಶ್' ಮತ್ತು ಬಾ.ಗಂರವರ ಸಿದ್ಧಾಂತಗಳನ್ನು ಹಿಗ್ಗಾಮುಗ್ಗಾ ತೆರೆದು ತೋರಿದಾಕ್ಷಣ ಎಚ್ಚೆತ್ತುಕೊಂಡಂತೆ ಕಿರಣ್, ರಾಜಾರಾಮ್ ಹೆಗಡೆ ಮತ್ತು ಸದಾನಂದ್‌ರವರು ತಮ್ಮ ಪ್ರತಿಕ್ರಿಯೆಗಳನ್ನು ನೀಡುವ ಮೂಲಕ ಕುವೆಂಪು ವಿಶ್ವವಿದ್ಯಾಲಯದಲ್ಲಿ ಎಂಥ ಮಹಾನ್ ಸಂಶೋಧನಾ ಕಾರ್ಯ ನಡೆಯುತ್ತಿದೆ ಎಂಬುದನ್ನು ಕನ್ನಡ ಜನತೆಯ ಮುಂದೆ ಇಟ್ಟಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

೨. ಬಾ.ಗಂ ಮತ್ತು ಅವರ ಬಳಗವೆಲ್ಲಾ 'ಪಶ್ಚಿಮ'ವನ್ನು ಶತ್ರುಪಾಳಯದಲ್ಲಿ ಇಟ್ಟು, 'ಪಶ್ಚಿಮ' ಎನ್ನುವುದು ಏಕಾಕೃತಿಯ ಶಿಲ್ಪ ಎಂಬಂತೆ 'ಪೌರ್ವಾತ್ಯ' (ಇದೂ ಸಹ ಮತ್ತೊಂದರ ಏಕಾಕೃತಿಯ ಪಡಿಯಚ್ಚು) ಓದುಗರ ಮುಂದಿಡುತ್ತಿದ್ದಾರೆ. ಇಲ್ಲಿ ಒಂದು ಸೂಕ್ಷ್ಮ ಸಂಗತಿ ಇದೆ ಯಾವುದೇ ರೀತಿಯ ಗ್ರಾಂಡ್‌ನರೇಟಿವ್ (ಬೃಹತ್ ಕಥನ) ಸರ್ವಾಧಿಕಾರಿ ಧೋರಣೆ ಮತ್ತು ಹಿಂಸೆಯನ್ನು ಪ್ರತಿಪಾದಿಸುವಂಥದ್ದು. ಕಾರಣ ಇಂಥ ಶೈಲಿ ಯಾವುದೇ ರೀತಿಯ ಸಣ್ಣ ಸಣ್ಣ ಧ್ವನಿಗಳನ್ನು ಅದುಮಿಬಿಡುತ್ತದೆ. ಈಗಾಗಲೇ 'ಆಧುನಿಕತೆ'ಯಿಂದ ಬಿಡುಗಡೆಗೊಂಡಂತೆ ವರ್ತಿಸುವ ಬಾ.ಗಂ ಮತ್ತು ಬಳಗದವರು ಅದೇ ಆಧುನಿಕತೆಯಿಂದ ವಂಚಿತರಾದ ಅನೇಕ ತಳ ಸಮುದಾಯಗಳಿಗೆ ಯಾವುದೇ ರೀತಿಯ 'ನ್ಯಾಯ'ವನ್ನು ಒದಗಿಸುವಲ್ಲಿ ಸೋಲುತ್ತಾರೆ. ಸ್ಥಳೀಯರನ್ನು ನಾಗರಿಕರನ್ನಾಗಿಸುವ ಭರದಲ್ಲಿ ಅವರೆಲ್ಲರ ಬಹುತ್ವದ ನೆಲೆಗಳನ್ನು ನಿರ್ನಾಮ ಮಾಡಿದ್ದು ಈಗ ಚರಿತ್ರೆ. ಅಂದರೆ ಇಂಥ ಚಾರಿತ್ರಿಕ ತಪ್ಪುಗಳಿಗೆ ಜವಾಬ್ದಾರಿಯನ್ನು ಯಾರೂ ಹೊರಬೇಕಾಗಿಲ್ಲ ಎನ್ನುವ ಧೋರಣೆ. ಇಂಥ ಸಂಶೋಧನೆ ಹೇಗಿದೆ ಎನ್ನುವುದಕ್ಕೆ ಒಂದು ಜಾನಪದ ಕತೆ ನೆನಪಾಗುತ್ತದೆ: ಯಾರೋ ವೇದಾಂತಿಯೊಬ್ಬ ಒಂದು ಕೋಳಿಮರಿಯನ್ನು ತನ್ನ ಅನುಯಾಯಿಗೆ ಕೊಟ್ಟು, ಅದನ್ನು ಜೋಪಾನವಾಗಿ ಸಾಕಲು ಹೇಳಿದನಂತೆ. ಕಾರಣ ಅದು ದೊಡ್ಡದಾದಾಗ ಚಿನ್ನದ ಮೊಟ್ಟೆ ಇಡುತ್ತದೆಯಂತೆ. ಆ ಚಿನ್ನದ ಮೊಟ್ಟೆಯ ಮೂಲಕ ಸಮಾಜದಲ್ಲಿರುವ ಎಲ್ಲಾ ರೀತಿಯ ಬೌದ್ಧಿಕ ಸಮಸ್ಯೆಗಳನ್ನು ಪರಹರಿಸಿಕೊಳ್ಳಬಹುದಂತೆ. ಹೀಗೆ ಹೇಳಿ ಆ ವೇದಾಂತಿ ದೇಶಾಂತರ ಹೋಗುತ್ತಾನೆ. ಇತ್ತ ಆತನ ಅನುಯಾಯಿ ತನಗೆ ನೀಡಿದ ಕೋಳಿಮರಿಯನ್ನು ಮುದ್ದಿನಿಂದ ಸಾಕುತ್ತಿರುವಲ್ಲಿ, ಒಂದು ದಿನ ಅಚಾನಕ್ ಹದ್ದೊಂದು ಎರಗಿ ಅದನ್ನು ಕೊಂಡೊಯ್ಯುತ್ತದೆ. ದುಃಖಿತನಾದ ಅನುಯಾಯಿ, ತನ್ನ ಗುರುವಿಗೆ ಏನು ಹೇಳಬೇಕೆಂದು ತೋಚದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಈ ಕತೆಯ ಮೂಲಕ ನಾನು ಯಾರನ್ನು ದೂಷಿಸುತ್ತಿಲ್ಲ. ಬದಲಾಗಿ ಶ್ರಮಿಕ ಸಮುದಾಯಗಳ ಹಣವನ್ನು ಕ್ರೋಢೀಕರಿಸಿ ಅದನ್ನು ಸಾರ್ವಜನಿಕ ಬಂಡವಾಳವನ್ನಾಗಿ ಬದಲಾಯಿಸಿಕೊಂಡು, ಅದನ್ನು ಸಂಶೋಧನೆಯ ಹೆಸರಿನಲ್ಲಿ ವ್ಯಯಿಸುವುದು ಎಂಥ ಪರಿಣಾಮಗಳಿಗೆ ಎಡೆಮಾಡಬಹುದು ಎನ್ನುವುದಕ್ಕಷ್ಟೆ ಈ ಉದಾಹರಣೆ. ಅಲ್ಲದೆ, ಸಂಶೋಧನೆ ಎನ್ನುವುದು ನಿರ್ವಾತದಲ್ಲಿ ಆಗಲು ಸಾಧ್ಯವಿಲ್ಲ. ಅದಕ್ಕೂ ತನ್ನದೇ ಆದ ಐಡಿಯಾಲಾಜಿಕಲ್ ನೆಲೆಗಳಿರುತ್ತವೆ. ಈ ಐಡಿಯಾಲಾಜಿಕಲ್ ನೆಲೆಗಳನ್ನು ನಾನು ನಾಜೂಕಾಗಿ ವಸ್ತು ನಿಷ್ಠತೆ ಎಂದು ಕರೆಯಬಹುದು. ಆದರೆ, ಅಂಥ ಐಡಿಯಾಲಾಜಿಕಲ್ ನೆಲೆಗಳನ್ನು ನಮ್ಮ 'ಕ್ಯಾಶ್'ನವರು ಎಲ್ಲೂ ಸ್ಪಷ್ಟ ಪಡಿಸುವುದಿಲ್ಲ. ಇಂಥ ಸಂಶೋಧನೆ ಮತ್ತು ಜ್ಞಾನ ಮೀಮಾಂಸೆಯ ಬಗ್ಗೆ ನಾನು ಕಳೆದ ಲೇಖನದಲ್ಲೇ ಸಾಕಷ್ಟು ಚರ್ಚಿಸಿದ್ದೇನೆ.

೩. ಕಿರಣ್, ರಾಜಾರಾಮ್ ಹೆಗಡೆ ಮತ್ತು ಸದಾನಂದ್ ರವರು ಹೇಳುವಂತೆ ಅವರ ಸಂಶೋಧನೆ ಮುಂದಿನ ಪೀಳಿಗೆಗೆ ಮಹತ್ತರ ಕೊಡುಗೆ ನೀಡುತ್ತದೆಯಾದರೆ ಅದರ ಬಗ್ಗೆ ಯಾರೂ ಸಂಶಯ ಪಡಬಾರದು. ಆದರೆ ನಮ್ಮಂಥ ಅಲ್ಪಮತಿಗಳೂ ಸಹ ನಮ್ಮದೇ ಆದ ಬೌದ್ಧಿಕ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ ಎನ್ನುವುದನ್ನು ಅವರು ಮರೆಯಬಾರದು. ಅವುಗಳ ಬಗ್ಗೆ ಬರೆಯಲು ಇದು ಸೂಕ್ತ ಜಾಗವೂ ಅಲ್ಲ. ಇಂಥ ಕ್ರಿಯೆಗಳು ಸಾರ್ವಜನಿಕವಾಗಿ ಚರ್ಚೆಗೆ ಬರದಿದ್ದರೂ ಸಹ, ಅವುಗಳಿಗೆ ಸೂಕ್ತ ಬೆಂಬಲ ದೊರೆಯದಿದ್ದರೂ ಸಹ ಅವುಗಳ ಮೌಲ್ಯ ಕಮ್ಮಿಯಾಗುವುದಿಲ್ಲ. ಹೀಗಿರುವಾಗ ಯಾವುದೇ ರೀತಿಯ ಚಟುವಟಿಕೆ ಸ್ಥಳೀಯ ಮತ್ತು ಸಮಕಾಲೀನ ಅಗತ್ಯಗಳಿಗೆ ಪೂರಕವಾಗಿ ಬರುತ್ತವೆಯಲ್ಲದೆ ಮುಂದಿನ ದಿನಗಳ ಕನಸುಗಳನ್ನು ಮಾತ್ರ ಸಂಘಟಿಸಿದರೆ ಅಂಥ ಕ್ರಿಯೆಗಳು ಏನಾಗುತ್ತವೆ ಎಂಬುದನ್ನು ಮತ್ತೆ ವಿವರಿಸಬೇಕಾಗಿಲ್ಲ.

೪. ಈ ಸಂದರ್ಭದಲ್ಲಿ ಕುವೆಂಪುರವರು ಹೇಳಿರುವ ಒಂದು ಮಾತನ್ನು ಇಲ್ಲಿ ಉಲ್ಲೇಖಿಸಲೇಬೇಕು: 'ಕತ್ತಿ ಪರದೇಶಿಯದಾದರೇನು, ದೇಶಿಯದಾದರೇನು, ಅದು ಕೊಯ್ಯುವುದು ಮಾತ್ರ ನನ್ನನ್ನೇ'. ಕರ್ನಾಟಕದಲ್ಲಿ ಆಗಿರುವ ಮತ್ತು ಆಗುತ್ತಿರುವ ಬದಲಾವಣೆಗಳು ಹಾಗೂ ಅದಕ್ಕೆ ಜನ ಸಮುದಾಯಗಳು ನೀಡುತ್ತಿರುವ ಪ್ರತಿಕ್ರಿಯೆಗಳು ಯಾವ ಸ್ವರೂಪದಲ್ಲಿವೆ ಎನ್ನುವುದನ್ನು ಸಂಶೋಧನೆಯ ಹೆಸರಿನಲ್ಲಿ ಮರೆಯಲಾಗದು. ಇಂಥ ಪ್ರತಿಕ್ರಿಯೆಗಳ ಜ್ಞಾನಮೀಮಾಂಸೆಯನ್ನು ನಮ್ಮ ದಂತ ಗೋಪುರದ ವಿದ್ವಾಂಸರಿಗೆ ಹೊಳೆಯುತ್ತಿಲ್ಲ ಎಂದು ನಾನು ದೂರುವುದಿಲ್ಲ. ಅಲ್ಲದೆ, "ರಾಜರಾಮ್ ಹೆಗಡೆ ಮತ್ತು ಸದಾನಂದ್ ರವರು" ಈ ಹಿಂದೆ ಬರೆದಿರುವ ಲೇಖನಗಳನ್ನು ನಾನು ಗಮನಿಸಿದ್ದೇನೆ ಮತ್ತು ಅವುಗಳಿಂದ ಪ್ರಭಾವಿತನಾಗಿದ್ದೇನೆ ಹೌದು. ಆದ್ದರಿಂದ "ನಮ್ಮ ಸಾಮಾಜಿಕ ಸಮಸ್ಯೆಗಳ ಕುರಿತು ನಮಗೆ ಕಳಕಳಿ ಮತ್ತು ಪ್ರಶ್ನೆಗಳಿದ್ದುದ್ದರಿಂದಲೇ ನಾವು ಅದರೊಳಗೆ ಹೋದೆವು. ಹಾಗೂ ಆ ಕಳಕಳಿ ಇನ್ನೂ ಜಾಗ್ರತವಾಗಿರುವುದರಿಂದಲೇ ಉತ್ತರದ ಹುಡುಕಾಟದಲ್ಲಿ ಅಲ್ಲಿಂದ ಮುಂದೆ ಸಾಗುವ ಅನಿವಾರ್ಯತೆ ಇದೆಯೆಂಬುದನ್ನು ಮನಗಂಡು ಆ ಕುರಿತು ಸಂಶೋಧನೆ ಕೈಗೊಂಡಿದ್ದೇವೆ" ಎನ್ನುವ ರಾಜಾರಾಮ್ ಹೆಗಡೆಯವರ ಮಾತುಗಳು ಬೇಗನೆ ಸಾಕಾರವಾಗಲಿ ಎಂದು ಆಶಿಸುತ್ತೇನೆ. ಆದರೆ ಒಂದು ರಾಜಕೀಯ ನಿಲುವನ್ನು ಸಂಶೋಧನೆ ಒಳಗೊಳ್ಳುವುದನ್ನು ಬಿಟ್ಟು ಮಾತನಾಡಲು ನನ್ನಿಂದ ಸಾಧ್ಯವಿಲ್ಲ.

ಈ ಎಲ್ಲಾ ವಾದ-ವಿವಾದಗಳಿಗೆ ಸಾಕಷ್ಟು ಜಾಗವನ್ನು ನೀಡಿದ 'ಸಂವಾದ'ಕ್ಕೆ ಮತ್ತು ಅವರ ಓದುಗರಿಗೆ ನಾನು ಅಭಿನಂದಿಸುತ್ತೇನೆ. □

ಬಾ.ಗಂ ಮತ್ತು ಅವರ ಬಳಗವೆಲ್ಲಾ 'ಪಶ್ಚಿಮ'ವನ್ನು ಶತ್ರು ಪಾಳಯದಲ್ಲಿ ಇಟ್ಟು, 'ಪಶ್ಚಿಮ' ಎನ್ನುವುದು ಏಕಾಕೃತಿಯ ಶಿಲ್ಪ ಎಂಬಂತೆ 'ಪೌರ್ವಾತ್ಯ' ಓದುಗರ ಮುಂದಿಡುತ್ತಿದ್ದಾರೆ. ಯಾವುದೇ ರೀತಿಯ ಗ್ರಾಂಡ್‌ನರೇಟಿವ್ (ಬೃಹತ್ ಕಥನ) ಸರ್ವಾಧಿಕಾರಿ ಧೋರಣೆ ಮತ್ತು ಹಿಂಸೆಯನ್ನು ಪ್ರತಿಪಾದಿಸುವಂಥದ್ದು. ಈಗಾಗಲೇ 'ಆಧುನಿಕತೆ'ಯಿಂದ ಬಿಡುಗಡೆ ಗೊಂಡಂತೆ ವರ್ತಿಸುವ ಬಾ.ಗಂ ಮತ್ತು ಬಳಗದವರು ಅದೇ ಆಧುನಿಕತೆಯಿಂದ ವಂಚಿತರಾದ ಅನೇಕ ತಳ ಸಮುದಾಯಗಳಿಗೆ ಯಾವುದೇ ರೀತಿಯ 'ನ್ಯಾಯ'ವನ್ನು ಒದಗಿಸುವಲ್ಲಿ ಸೋಲುತ್ತಾರೆ. ಸ್ಥಳೀಯರನ್ನು ನಾಗರಿಕರನ್ನಾಗಿಸುವ ಭರದಲ್ಲಿ ಅವರೆಲ್ಲರ ಬಹುತ್ವದ ನೆಲೆಗಳನ್ನು ನಿರ್ನಾಮ ಮಾಡಿದ್ದು ಈಗ ಚರಿತ್ರೆ.

ಡಾ. ಡೊಮಿನಿಕ್ ಡಿ

(೬ನೇ ಪುಟದಿಂದ)

ಹುಟ್ಟಿನಿಂದಾಗಿ ಇದೊಂದು ಅಕಾಡೆಮಿಕ್ ಕಾಮನ್ ಸೆನ್ಸಾಗಿ ಬಿಟ್ಟಿದೆ. ಆದರೆ ಸಾಮಾಜಿಕ ಶಾಸ್ತ್ರಗಳು ಈ ಒಳನೋಟದ ಸಾಧ್ಯತೆಗಳ ಮತ್ತು ಮಿತಿಗಳ ಜೊತೆಗೆ ಈಗ ಸಾಕಷ್ಟು ಸಮಯದಿಂದ ಗುದ್ದಾಡಿಕೊಂಡು ಬಂದಿವೆ, ಆ ಗುದ್ದಾಟಗಳು ಈ ವಿಜ್ಞಾನಗಳ ಸ್ವರೂಪವನ್ನೇ ಬದಲಾಯಿಸಿಬಿಟ್ಟಿವೆ ಅನ್ನೋದನ್ನ ಈ ಗುಂಪು ಕಡೆಗಣಿಸ್ತಿದೆ ಅಂತನ್ನಿಸ್ತದೆ. ಷಣ್ಮುಖರ ಲೇಖನವನ್ನೇ ಗಮನಿಸಬಹುದು.

ಅವರು ಈವರೆವಿಗಿನ ಜಾತಿಸಿದ್ಧಾಂತಗಳ ಬಗ್ಗೆ ಬರೀತಾರೆ: "ಜಾತಿವ್ಯವಸ್ಥೆಯು ಹಿಂದೂ ಧರ್ಮದ ವೇದ, ಪುರುಷಸೂಕ್ತ, ಮನುಧರ್ಮಶಾಸ್ತ್ರಗಳನ್ನು ಆಧರಿಸಿದ ವರ್ಣಧರ್ಮದಿಂದ ಹುಟ್ಟಿದೆ. ಈ ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೆಲವು ಜಾತಿಗಳು ಯಾವಾಗಲೂ ತುಳಿಯುವವರೇ ಆಗಿದ್ದು ಕೆಲವು ಜಾತಿಗಳು ಯಾವಾಗಲೂ ತುಳಿತಕ್ಕೆ ಒಳಪಟ್ಟವರೇ ಆಗಿರುತ್ತಾರೆ. ಇಂತಹ ಜಾತಿವ್ಯವಸ್ಥೆಯನ್ನು ಅಂದರೆ, ಮೇಲ್ಜಾತಿಗಳಿಗೆ ವಿಧೇಯವಾಗಿಯೇ ಇರುವುದನ್ನು ಭಾರತೀಯ ಸಮಾಜದಲ್ಲಿನ ವಿಭಿನ್ನ ಜಾತಿಯ ಸಮುದಾಯಗಳು ಹೇಗೆ ಒಪ್ಪಿಕೊಂಡವು ಎಂದರೆ, ಭಾರತೀಯ ಸಮುದಾಯದ ರಿಲಿಜಿಯನ್ ಆಗಿರುವ ಹಿಂದೂಯಿಸಂನಲ್ಲಿ ಜಾತಿಯ ಈ ನಿಯಮಗಳು ಬೇರೂರಿಕೊಂಡಿವೆ. ಹಾಗಾಗಿ, ಭಾರತದ ಜಾತಿವ್ಯವಸ್ಥೆಯು ಹಿಂದೂ ರಿಲಿಜಿಯನ್‌ನ ಅಖಂಡ ಭಾಗಗಳಾಗಿರುವ ವೇದ, ಪುರುಷಸೂಕ್ತ, ಮನುಧರ್ಮಶಾಸ್ತ್ರ ಮುಂತಾದ ಪವಿತ್ರ ಗ್ರಂಥಗಳಿಂದ ಹುಟ್ಟಿದ ವರ್ಣಧರ್ಮವನ್ನು ಆಧರಿಸಿರುವುದರಿಂದ ಭಾರತೀಯರು ಅದನ್ನು ಅನುಸರಿಸಿಯೇ ತೀರಬೇಕು..."

ನಾನು ಕಳೆದ ಹತ್ತು ವರ್ಷಗಳಿಂದ ಜಾತಿಯ ಸ್ವರೂಪದ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿದ್ದೇನೆ. ಷಣ್ಮುಖರು ಮೇಲ್ಕಾಣಿಸಿದ ರೀತಿಯಲ್ಲಿ ಜಾತಿಯನ್ನು ಕಂಡವರು ಬಹುಕಡಿಮೆ ಮಂದಿ. ಹಾಗೂ ಆ ರೀತಿಯಲ್ಲಿ ಜಾತಿಯನ್ನು ಅಭ್ಯಸಿಸುವವರನ್ನು ಇಂದು ಗಂಭೀರವಾಗಿ ಪರಿಗಣಿಸುವವರು ಯಾರೂ ಇಲ್ಲ. ಇದನ್ನ ತಿಳೀಲೀಕ್ಕೆ ಇನ್ನೇನೂ ಮಾಡೋದು ಬೇಡ; ಕಳೆದ ನಲ್ವತ್ತು ವರ್ಷಗಳ *Contributions to Indian Sociology* ಎಂಬ ಒಂದೇ ಒಂದು ಅಕಾಡೆಮಿಕ್ ಜರ್ನಲ್ಲನ್ನು ಉಡಾಫೆಯಿಲ್ಲದೆ, ಶ್ರದ್ಧೆಯಿಂದ ಅಭ್ಯಾಸ ಮಾಡಿದಲ್ಲಿ ಜಾತಿಯ ಬಗೆಗೆ ಒಬ್ಬರೊಬ್ಬರ ಕತ್ತಿನ ಪಟ್ಟಿ ಹಿಡಿದು ವಿದ್ವಾಂಸರು ನಡೆಸಿದ ವೈವಿಧ್ಯಮಯ ಜಗಳಗಳ ಪರಿಚಯ ಆಗ್ತದೆ. ಈ ಗುದ್ದಾಟಗಳು, ಜಗಳಗಳು ಬಾಲಗಂಗಾಧರ ಯಾ ಷಣ್ಮುಖರು ಕಟ್ಟಿಕೊಡುವ ಯಾವುದೇ stereotypeಗಳಲ್ಲಿ ಸಲೀಸಾಗಿ ನೀಟಾಗಿ ಕೂತ್ಕೊಳ್ಳೋದಿಲ್ಲ ಅನ್ನೋದು ಕೂಡಾ ಗೊತ್ತಾಗ್ತದೆ. (ಬಾಲಗಂಗಾಧರರು stereotypeಗಳ ಬಗ್ಗೆ ಕೂಡಾ ಒಬ್ಬ ಅಥಾರಿಟಿ; ಅವರಿಗೆ ಇದು ಅರ್ಥವಾಗದ್ದು ಸೋಜಿಗ.) ಇಂದಿನ ಬಿ.ಎ. ತರಗತಿಗಳಲ್ಲೂ ಜಾತಿಯನ್ನು ಅದರ ಚಾರಿತ್ರಿಕ-ಸಾಮಾಜಿಕ ಸಂದರ್ಭ ದೊಡನೆಯೇ ಅರ್ಥ ಮಾಡ್ಕೋಬೇಕು ಅಂತಲೂ, ಬ್ರಾಹ್ಮಣತ್ವವೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾದದ್ದು ಅಂತಲೂ, ಇಡೀ ಭಾರತಕ್ಕೆ ಅನ್ವಯಿಸಬಹುದಾದ ಹಾಗೆ ಜಾತಿ ಅಂದರೆ ಇದು ಅಂತ ಹೇಳೋದು ಬಹಳ ಸಿಲ್ಲಿ ಅಂತಲೂ ಹೇಳ್ಕೊಡ್ತಾರೆ. ಜಾತಿಗೂ ಹಿಂದೂ 'ರಿಲಿಜನ್ನಿ'ಗೂ ಇರುವಂತಹ ಸಂಬಂಧ ಬಹಳ ಸಂಕೀರ್ಣವಾದದ್ದು ಅನ್ನೋದು ಕೂಡಾ ಸಾಕಷ್ಟು ಬಾರಿ ಗುರುತಿಸಲಾಗಿದೆ. ಇದೇ ಇವರ ಒಳನೋಟವಾದರೆ ದೇವರೇ ಕಾಪಾಡಬೇಕು. ಅದಲ್ಲ ಅಂದ್ರೆ ಅದು ಷಣ್ಮುಖರಿಗೂ ಅರ್ಥಆಗಿಲ್ಲ ಅಂತಾಯ್ತು. ಗುರುಗಳೇ ಈ ನಮ್ಮ ಕೋಳಿಜಗಳದಲ್ಲಿ ಪ್ರವೇಶಿಸಿ ಹೇಳಿಕೊಡ್ತಾರೋ ಏನೋ ಆಗ.

ನಾನು ಕಳೆದ ಹತ್ತು ವರ್ಷಗಳಿಂದ ಜಾತಿಯ ಸ್ವರೂಪದ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿದ್ದೇನೆ. ಷಣ್ಮುಖರು ಮೇಲ್ಕಾಣಿಸಿದ ರೀತಿಯಲ್ಲಿ ಜಾತಿಯನ್ನು ಕಂಡವರು ಬಹುಕಡಿಮೆ ಮಂದಿ. ಹಾಗೂ ಆ ರೀತಿಯಲ್ಲಿ ಜಾತಿಯನ್ನು ಅಭ್ಯಸಿಸುವವರನ್ನು ಇಂದು ಗಂಭೀರವಾಗಿ ಪರಿಗಣಿಸುವವರು ಯಾರೂ ಇಲ್ಲ. ಇದನ್ನ ತಿಳೀಲೀಕ್ಕೆ ಇನ್ನೇನೂ ಮಾಡೋದು ಬೇಡ; ಕಳೆದ ನಲ್ವತ್ತು ವರ್ಷಗಳ *Contributions to Indian Sociology* ಎಂಬ ಒಂದೇ ಒಂದು ಅಕಾಡೆಮಿಕ್ ಜರ್ನಲ್ಲನ್ನು ಉಡಾಫೆಯಿಲ್ಲದೆ, ಶ್ರದ್ಧೆಯಿಂದ ಅಭ್ಯಾಸ ಮಾಡಿದಲ್ಲಿ ಜಾತಿಯ ಬಗೆಗೆ ಒಬ್ಬರೊಬ್ಬರ ಕತ್ತಿನ ಪಟ್ಟಿ ಹಿಡಿದು ವಿದ್ವಾಂಸರು ನಡೆಸಿದ ವೈವಿಧ್ಯಮಯ ಜಗಳಗಳ ಪರಿಚಯ ಆಗ್ತದೆ. ಈ ಗುದ್ದಾಟಗಳು, ಜಗಳಗಳು ಬಾಲ ಗಂಗಾಧರ ಯಾ ಷಣ್ಮುಖರು ಕಟ್ಟಿಕೊಡುವ ಯಾವುದೇ stereo typeಗಳಲ್ಲಿ ಸಲೀಸಾಗಿ ನೀಟಾಗಿ ಕೂತ್ಕೊಳ್ಳೋದಿಲ್ಲ ಅನ್ನೋದು ಕೂಡಾ ಗೊತ್ತಾಗ್ತದೆ. ಇಂದಿನ ಬಿ.ಎ. ತರಗತಿಗಳಲ್ಲೂ ಜಾತಿಯನ್ನು ಅದರ ಚಾರಿತ್ರಿಕ-ಸಾಮಾಜಿಕ ಸಂದರ್ಭದೊಡನೆಯೇ ಅರ್ಥ ಮಾಡ್ಕೋಬೇಕು ಅಂತಲೂ, ಬ್ರಾಹ್ಮಣತ್ವವೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾದದ್ದು ಅಂತಲೂ, ಇಡೀ ಭಾರತಕ್ಕೆ ಅನ್ವಯಿಸಬಹುದಾದ ಹಾಗೆ ಜಾತಿ ಅಂದರೆ ಇದು ಅಂತ ಹೇಳೋದು ಬಹಳ ಸಿಲ್ಲಿ ಅಂತಲೂ ಹೇಳ್ಕೊಡ್ತಾರೆ. ಜಾತಿಗೂ ಹಿಂದೂ 'ರಿಲಿಜನ್ನಿ'ಗೂ ಇರುವಂತಹ ಸಂಬಂಧ ಬಹಳ ಸಂಕೀರ್ಣವಾದದ್ದು ಅನ್ನೋದು ಕೂಡಾ ಸಾಕಷ್ಟು ಬಾರಿ ಗುರುತಿಸಲಾಗಿದೆ.

ಈ ವಾದವನ್ನು ಒಂದು hypothesis ಅಂತಲೇ ಹೇಳ್ತಾ ಹೋಗುವ ಷಣ್ಮುಖರಿಗೆ, hypothesis ಒಂದು ವಾದವಾಗಿಬಿಡುವ ಮ್ಯಾಜಿಕ್ ಬಗ್ಗೆ ಯೋಚಿಸಲು ವ್ಯವಧಾನವಿಲ್ಲ ಅಂತ ಕಾಣ್ತದೆ. Hypothesis ಅಂತ ಹೊರಡುವವರಿಗೆ ತಮಗಿಂತ ಮುಂಚೆ ಕೆಲಸ ಮಾಡಿರುವವರ ಬಗ್ಗೆ ಗೌರವ ಇರ್ತದೆ. ಇಷ್ಟೆಲ್ಲಾ ಕೆಲಸ ಆಗ್ಬಿಟ್ಟಿದೆ ಮತ್ತು ಆ ಕೆಲಸ ಮಾಡಿರೋವ್ರೆಲ್ಲಾ ಶತಮೂರ್ಖರಲ್ಲ ಅನ್ನೋ ಅರಿವು ತಮ್ಮ hypothesis ಬಗ್ಗೆ ಒಂದು ಸಣ್ಣ ಅಳುಕನ್ನಾದರೂ ಹುಟ್ಟಿಸ್ತದೆ. ಆದರೆ ಇವರದ್ದು ಜಗತ್ತಿಗೇನೂ ಗೊತ್ತಿಲ್ಲ; ನನಗೆ ಗೊತ್ತಾಗಿದೆ, ಸುಮ್ನೆ ಕೇಳಿ ಅನ್ನೋ ತರದ್ದು. Hypothesis ಯಾವತ್ತೂ ಇದಮಿತ್ಥಂ ಅನ್ನೋ ಭಾಷೆಯಲ್ಲಿ ಮಾತಾಡೋಲ್ಲ.

ಇದನ್ನೆಲ್ಲಾ ಪಕ್ಕಕ್ಕಿಟ್ಟು, ಸರಿ ಇವರು ಹೇಳುತ್ತಿರುವುದನ್ನು ಒಂದು hypothesis ಅಂತಲೇ ನೋಡೋಣ ಅಂತಂದ್ರೂ ಸರಿ ಹೋಗೋಲ್ಲ. ಇವರು ಫೀಲ್ಡ್ ವರ್ಕ್ ಮಾಡಿ ಕಂಡುಹಿಡಿದಿದ್ದೇನಂದ್ರೆ, ಜನಸಾಮಾನ್ಯರು ಜಾತಿ ಬಗ್ಗೆ ಮಾತಾಡೋವಾಗ ಯಾವ ಧರ್ಮಶಾಸ್ತ್ರಗಳನ್ನೂ ಪಕ್ಕದಲ್ಲಿಟ್ಟುಕೊಂಡು ಮಾತಾಡೋಲ್ಲ ಅಂತ! ಇವರು ಯಾವ ಜಗತ್ತಿನಲ್ಲಿದ್ದಾರೆ? ಇವರು ಕಂಡುಹಿಡಿದದ್ದು ನಾನು ತಿಳಿದಿರೋ ಮಟ್ಟಿಗೆ ಸಾಮಾನ್ಯಜ್ಞಾನದ್ದು; ಅದಲ್ಲಾ ಅಂದ್ರೆ ಇವರು ಹೇಳ್ತಿರೋದ್ರಲ್ಲಿ ನಮ್ಮಂತಹವರಿಗೆ ಅರ್ಥವಾಗದ್ದು ಏನೋ ನಿಗೂಢಾರ್ಥ ಅಡಗಿದೆ. ಇದನ್ನು ಒಬ್ಬ ಸಮಾಜ ಶಾಸ್ತ್ರದ ಎಮ್.ಫಿಲ್. ವಿದ್ಯಾರ್ಥಿ ಹತ್ತು ಹಳ್ಳಿಗಳಿಗೆ ಹೋಗಿ ಜನರು ಜಾತಿಯನ್ನು ಹೇಗೆ ಕಾಣ್ತಾರೆ ಅಂತ ಕೇಳಿ ಬರೆದದ್ದಾದರೆ ಅದು ಷಣ್ಮುಖರ ಜಗತ್ತು ಅಲ್ಲಾಡಿಸುವ ಒಳನೋಟಕ್ಕಿಂತ ಹೆಚ್ಚು ಮಹತ್ವದ್ದಾಗುತ್ತದೆ.

ಕೊನೆಯದಾಗಿ, ನಾನು ಉದ್ದಕ್ಕೂ ಗುರು-ಶಿಷ್ಯರು ಅಂತ ಬರ್ಕೋತಾ ಹೋದದ್ದು ಉಡಾಫೆಯಿಂದಲ್ಲ. ಈ ಗುಂಪು ನಡೆದುಕೊಳ್ಳುವ ರೀತಿ ಒಂದು ಮಠದ ವಾಡಿಕೆಯದ್ದು. □

ಹಿಂದುತ್ವದ ಜಾತಿ ಮತ್ತು...

ಪಾಶ್ಚಾತ್ಯ ಥಿಯಾಲಜಿಕಲ್ ಭಾಷೆಯ ಚೌಕಟ್ಟು

ಡಾ. ಡೊಮಿನಿಕ್‌ರವರು ಅವರ ವರದಿಗೆ ಪ್ರತಿಕ್ರಿಯೆಯಾಗಿ ಬರೆದ ನನ್ನ ಲೇಖನದ ಕುರಿತು ಚರ್ಚೆಗೆ ಮುಂದಾದ ವಿದ್ವಾಂಸರುಗಳಾದ ಡಾ. ಶ್ರೀಧರ್, ಡಾ. ...ಪತಿ, ಹಾಗೂ ಡಾ. ಡೊಮಿನಿಕ್‌ರವರಿಗೆ ಕೃತಜ್ಞತೆಗಳು. ಆದರೆ, ಇಲ್ಲಿ ಕೆಲವು ವ್ಯಕ್ತಿಗತವಾದ ವಿಚಾರಗಳನ್ನು ಹೊರತುಪಡಿಸಿ ಉಳಿದಂತೆ ಜಾತಿವ್ಯವಸ್ಥೆಯ ಅಸ್ತಿತ್ವದ ಕುರಿತು ನಮ್ಮ ಸಂಶೋಧನಾ ತಂಡ ಎತ್ತಿರುವ ಮೂಲಭೂತ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕೊಡುವ ಪ್ರಯತ್ನವನ್ನು ಮಾಡುವ ಬದಲು ಇಡೀ ಚರ್ಚೆಯೇ ವಿಷಯಾಂತರವಾಗುತ್ತಿರುವುದು ಗೋಚರಿಸುತ್ತಿದೆ. ನಾನು ಸಮಸ್ಯೆಗಳನ್ನು ಎತ್ತಿದ್ದು 'ಜಾತಿವ್ಯವಸ್ಥೆ' ಮತ್ತು ತಾರತಮ್ಯದ ಕುರಿತೇ ವಿನಃ ಜಾತಿ ಮತ್ತು ತಾರತಮ್ಯದ ಕುರಿತು ಅಲ್ಲ. ಜಾತಿವ್ಯವಸ್ಥೆ ಇಲ್ಲ ಎಂದಾಕ್ಷಣ ಜಾತಿಗಳಿಲ್ಲ ಎಂದಾಗುವುದಿಲ್ಲ. ಆದರೆ ಈ ಲೇಖಕರು ನಮ್ಮ ತಂಡ "ಜಾತಿಗಳೇ ಇಲ್ಲ ಎಂದು ಪ್ರತಿಪಾದಿಸುತ್ತಿದೆ" ಎಂದು ಪ್ರತಿಪಾದಿಸಿದ ಡಾ.ಡೊಮಿನಿಕ್‌ರ ಹಿಂದಿನ ಬರಹದ 'ಕಲ್ಪಿತ' ಆರೋಪವನ್ನು ಇಲ್ಲಿಯೂ ಪರೋಕ್ಷವಾಗಿ ಮುಂದುವರಿಸುತ್ತಿರುವಂತೆ ತೋರುತ್ತದೆ.

ಡಾ. ಡೊಮಿನಿಕ್‌ರವರು ನನ್ನದು ಜ್ಞಾನಮಿಮಾಂಸೆಯ ಸಿದ್ಧಾಂತವಾಗಿರದೆ ಕೇವಲ ಪ್ರಮೇಯ ಮತ್ತು ಗ್ರಹೀತಗಳು ಮಾತ್ರವೇ ಆಗಿರುವುದರಿಂದ ಪ್ರತಿಕ್ರಿಯೆಗೆ ಯೋಗ್ಯವಲ್ಲವೆಂದು ಆಪಾದಿಸಿದ್ದಾರೆ. ನಮ್ಮದು ಕೇವಲ ಪ್ರಮೇಯ ಮತ್ತು ಗ್ರಹೀತಗಳೇ ಆಗಿದ್ದರೂ ದಯವಿಟ್ಟು ಲೇಖಕರು ಈ ಗ್ರಹೀತಗಳಲ್ಲಿರುವ ಸಂಶೋಧನಾತ್ಮಕ ತೊಂದರೆ ಮತ್ತು ಸಮಸ್ಯೆಗಳೇನು ಎಂದು ತೋರಿಸುವ ಪ್ರಯತ್ನ ಮಾಡಬೇಕು. ಏಕೆಂದರೆ, ಲೇಖಕರು ಭಾವಿಸಿರುವಂತೆ ಈ ಗ್ರಹೀತ ಮತ್ತು ಪ್ರಮೇಯಗಳು ಹಣ ಮತ್ತು ವಿದೇಶೀ ಪ್ರವಾಸದ ಅಮಲಿನಲ್ಲಿ ಕಲ್ಪಿಸಿಕೊಂಡ ಊಹೆಗಳಾಗಿರದೆ, ವರ್ಷಾನುಗಟ್ಟಲೆ ನಮ್ಮ ತಂಡ ಕರ್ನಾಟಕದ ಬೇರೆ ಬೇರೆ ಜಾತಿಗಳಿಂದ, ಜನರಿಂದ ಮಾಹಿತಿಯನ್ನು ಕಲೆಹಾಕಿ ಆ ಮಾಹಿತಿಗಳ ವಿಶ್ಲೇಷಣೆಯನ್ನು ಆಧರಿಸಿ ನಮ್ಮ ವಾದವನ್ನು 'ಧೃಡಪಡಿಸಿ'ಕೊಂಡೇ ಈ 'ಹೈಪೋಥಿಸಿಸ್'ಅನ್ನು ಚರ್ಚೆಗೆ ಮುಂದಿಟ್ಟಿರುವೆವು. ಈಗ ಈ ಹೈಪೋಥಿಸಿಸ್‌ನಲ್ಲಿ ಇರುವ ತೊಂದರೆಗಳೇನು ಎಂಬುದನ್ನು ತಮ್ಮ ಸಂಶೋಧನೆಯ ಆಧಾರದಲ್ಲಿ ತೋರ್ಪಡಿಸಿದರೆ ಆಗ ನಾವು ನಮ್ಮ 'ಹೈಪೊಥಿಸಿಸ್' ಸರಿಯಲ್ಲವೆಂದು ಒಪ್ಪಿಕೊಳ್ಳಲೇಬೇಕಾಗುತ್ತದೆ.

ಸಮಾಜಶಾಸ್ತ್ರೀಯ ವಿವರಣೆಗಳು ಅಸ್ತಿತ್ವದಲ್ಲಿಯೇ ಇಲ್ಲದಿರುವ 'ಜಾತಿವ್ಯವಸ್ಥೆ'ಯನ್ನು ಭಾರತದಲ್ಲಿನ ಸಕಲ ಸಾಮಾಜಿಕ ಅನ್ಯಾಯ ಮತ್ತು ತಾರತಮ್ಯಗಳಿಗೆ ಆರೋಪಿಸಿಕೊಂಡು ಪರಿಹಾರ ಹುಡುಕುವ ಪ್ರಯತ್ನ ಮಾಡುತ್ತಿವೆ. ಈ ಸಂಗತಿಯ ಕುರಿತು ನಾನು ಹಿಂದಿನ ಲೇಖನದಲ್ಲಿ ಚರ್ಚಿಸಿದ್ದೆ. ಇಂಥ ವಿವರಣೆಗಳು ಭಾರತದಲ್ಲಿ ಹಿಂದೂ 'ರಿಲಿಜಿಯನ್' ಎನ್ನುವುದು ಇದೆ ಎಂಬ ಪೂರ್ವಕಲ್ಪನೆಯೊಂದಿಗೇ ತಮ್ಮ ವಾದವನ್ನು ಸಮರ್ಥಿಸುತ್ತವೆ ಎಂದು ವಾದಿಸುವುದರ ಜೊತೆಗೆ 'ಹಿಂದೂ ರಿಲಿಜಿಯನ್ ಆಧರಿಸಿದ್ಧ ಜಾತಿವ್ಯವಸ್ಥೆ' ಹೇಗೆ ನಮ್ಮ ಸಾಮಾಜಿಕ ವಾಸವ ಅಲ್ಲ ಎಂಬುದನ್ನು ಕ್ಷೇತ್ರಾಧ್ಯಯನದ ಆಧಾರದೊಂದಿಗೆ ವಿವರಿಸಲು ಪ್ರಯತ್ನಿಸಿದ್ದೇನೆ. ಒಂದು ವೇಳೆ ಇದೇ ಸತ್ಯವಾದಲ್ಲಿ ಇನ್ನು ಮುಂದೆ ಭಾರತೀಯ ಸಮಾಜದ ಈ ಎಲ್ಲಾ ಸಮಸ್ಯೆಗಳನ್ನು ನೋಡುವ ದೃಷ್ಟಿಯೇ ಬದಲಾಗಬೇಕಾಗುತ್ತದೆ ಎಂಬುದು ನಮ್ಮ ನಿಲುವು. ನಿರ್ದಿಷ್ಟವಾಗಿ ಈ ವಾದಕ್ಕೆ ನಿಮ್ಮ ಪ್ರತಿಕ್ರಿಯೆ ಏನು? ಹಿಂದೂ ರಿಲಿಜಿಯನ್ ಮತ್ತು ಜಾತಿ ವ್ಯವಸ್ಥೆ ಇದೆ ಎಂದೇ? ಹಿಂದೂ ರಿಲಿಜಿಯನ್ ಇಲ್ಲ ಆದರೆ ಜಾತಿವ್ಯವಸ್ಥೆ ಇದೆ ಎಂದೇ? ಸದ್ಯಕ್ಕೆ ನಮ್ಮ ಪ್ರಶ್ನೆ ಇಷ್ಟಕ್ಕೇ ಸೀಮಿತ. ಒಂದು ವೇಳೇ ನೀವು ಇದರ ಬಗ್ಗೆ ಪ್ರತಿಕ್ರಿಯಿಸುವುದನ್ನು ಬಿಟ್ಟು ಭಾರತದಲ್ಲಿ ಜಾತಿಗಳಿವೆ, ಅವುಗಳ ಅಸ್ತಿತ್ವದಿಂದಾಗಿ ಜಾತಿ ತಾರತಮ್ಯಗಳಿವೆ ಎನ್ನುವುದಾದರೆ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಏಕೆಂದರೆ ಜಾತಿಗಳೂ ಇವೆ; ಜಾತಿ ತಾರತಮ್ಯಗಳೂ ಇವೆ. ಆದರೆ ಸಮಸ್ಯೆ ಬರುವುದು ಜಾತಿತಾರತಮ್ಯ, ಸಾಮಾಜಿಕ ಅನ್ಯಾಯಗಳ ಕಾರಣ ಮತ್ತು ಪರಿಹಾರಗಳ ಹುಡುಕಾಟದಲ್ಲಿ ಪದೇ ಪದೇ ಅಸ್ತಿತ್ವದಲ್ಲಿಲ್ಲದ ಜಾತಿವ್ಯವಸ್ಥೆ ಮತ್ತು ಹಿಂದೂ ರಿಲಿಜಿಯನ್‌ಅನ್ನು ಎಳೆತರುವುದರಿಂದ. ಆಗ ಸಮಸ್ಯೆಯ ಮೂಲಕ್ಕೆ ಹೋಗುವ ದಿಕ್ಕೇ ತಪ್ಪಿಬಿಡುತ್ತದೆ. ಇನ್ನು ಆ ಸಮಸ್ಯೆಯನ್ನು ಪರಿಹರಿಸುವುದೆಂತು? ಜೂನ್ ತಿಂಗಳಲ್ಲಿ ಪ್ರಕಟವಾದ ನಿಮ್ಮ ವರದಿಯ ಎಲ್ಲಾ ಪ್ರಬಂಧಗಳೂ ಇದನ್ನೇ ಮಾಡುತ್ತವೆ. ಅಲ್ಲದೇ, ಚರ್ಚೆಗಳಲ್ಲಿ ಅನಾವಶ್ಯಕ ವ್ಯಂಗ್ಯವು ಚರ್ಚೆಗಳನ್ನು ದಿಕ್ಕು ತಪ್ಪಿಸುವುದು ಮಾತ್ರವಲ್ಲ ನೀವೇ ಹೇಳುವ 'ಗಂಭೀರ' ಚರ್ಚೆಗಳನ್ನು ಅಸಾಧ್ಯವಾಗಿಸುವ ಅಪಾಯವೂ ಇದೆ.

ವಸಾಹತುಪೂರ್ವ ಜಾತಿ ಹೋರಾಟಗಳ ಕುರಿತ ಚರ್ಚೆಯ ಬಗೆಗಿನ ತಮ್ಮ ವಿವರಣೆಯನ್ನು ಗಮನಿಸಿದರೆ ಅಲ್ಲೂ ಸಹ ಬಹಳಷ್ಟು ತೊಡಕುಗಳಿವೆ. ಅದನ್ನು ಸರಳವಾಗಿ ಹೇಳುವುದಾದರೆ, ತಾವು ಉಲ್ಲೇಖಿಸಿದ ಸಾವಿರ ವರ್ಷಕ್ಕೂ ಮೇಲ್ಪಟ್ಟು ಉಳಿದುಕೊಂಡು ಬಂದಿರುವ ಕೃತಿಗಳು ಜಾತಿ, ಧರ್ಮ ಮತ್ತು ಪ್ರಭುತ್ವವನ್ನು ಕುರಿತು ಚರ್ಚೆ ಮಾಡಿರುವುದು ನಿಜವೇ. ಆದರೆ ಅವು ಯಾವ ನೆಲೆಯಲ್ಲಿ ಈ ಚರ್ಚೆಗಳನ್ನು ಮಾಡಿವೆ ಎಂಬ ಬಗ್ಗೆ ಇಂದಿನ ಬಹಳಷ್ಟು ಚಿಂತಕರ ವಿವರಣೆಗಳು ಆ ಚರ್ಚೆಗಳೆಲ್ಲವನ್ನೂ ತಮ್ಮದೇ ಕಾಲಗಟ್ಟದ ವಸಾಹತು (ಪ್ರಜ್ಞೆಯ) ಪರಿಕಲ್ಪನೆಗಳ ಚೌಕಟ್ಟಿನೊಳಗೇ ಎಳೆತಂದು ವಿವರಿಸುತ್ತಿವೆ ಎಂಬುದು ನಮ್ಮ ಅಭಿಪ್ರಾಯ. ಇದರ ಪರಿಣಾಮ ಎಷ್ಟು ದಟ್ಟವಾಗಿದೆ ಎಂದರೆ, ಇಂದಿನ ಸಮಾಜ ವಿಜ್ಞಾನದ ವಿದ್ಯಾರ್ಥಿಗಳಿಗೆ ಆ ಕಾಲಗಟ್ಟದಲ್ಲಿ ಇವು ಯಾವುದರ ಕುರಿತ ಚರ್ಚೆಗಳಾಗಿದ್ದವು ಎಂಬುದೇ ಕಲ್ಪನೆಗೆ ನಿಲುಕುವುದಿಲ್ಲ. ಹಾಗಾಗಿ, ಇಂದಿನ ಎಲ್ಲಾ ವಿವರಣೆಗಳು ಅಂದಿನ ಎಲ್ಲಾ ಚರ್ಚೆಗಳನ್ನೂ ಒಂದೋ ಹಿಂದೂ ವರ್ಣಾಶ್ರಮ ಧರ್ಮ, ಮತ್ತು ಜಾತಿವ್ಯವಸ್ಥೆಯ ಸಮರ್ಥನೆಯಾಗಿ, ಇಲ್ಲವೇ ಅವುಗಳನ್ನು ವಿರೋಧಿಸುವ ಚರ್ಚೆಗಳಾಗಿಯೇ ಗುರುತಿಸುವ ಅನಿವಾರ್ಯತೆಗೆ ಸಿಲುಕಿವೆ. (ಡಾ.ಶ್ರೀಧರರಿಗೆ ನಮ್ಮ ಪ್ರತಿಪಾದನೆಯ ಕುರಿತು ಇರುವ ಆಕ್ರೋಶವನ್ನು ವ್ಯಕ್ತಪಡಿಸಲು ಬಳಸಿದ ಪರಿಕಲ್ಪನೆ ಗಮನಿಸಿ, "ಜಾತ್ಯಾತೀತ ಹಿಂದುತ್ವ"! ಇಲ್ಲಿ ಈ ಪ್ರಜ್ಞೆ ಎದ್ದು ಕಾಣುತ್ತದೆ. ಇವರ ವಾದಗಳನ್ನು ಬೆಂಬಲಿಸಿದವರಿಗೆ ಸೆಕ್ಯುಲರ್‌ವಾದಿಗಳೆಂದು ಬೆನ್ನು ತಟ್ಟುತ್ತಾರೆ; ಇವರನ್ನು ವಿರೋಧಿಸಿ ಹಿಂದೂ ರಾಷ್ಟ್ರೀಯವಾದದ ಪ್ರತಿಪಾದಿಸುವವರನ್ನು 'ಹಿಂದುತ್ವವಾದಿ'ಗಳೆಂದು ತೆಗಳುತ್ತಾರೆ; ಸೆಕ್ಯುಲರ್‌ವಾದವನ್ನು ವಿರೋದಿಸುತ್ತಿದ್ದು ಯಾವುದನ್ನು ಪ್ರತಿಪಾದಿಸುತ್ತಿದ್ದಾರೆ ಎಂಬುದು ಅರ್ಥವೇ ಆಗದಿದ್ದರೆ ಮತ್ತು ಅವರನ್ನು ಹೀಯಾಳಿಸಬೇಕೆನಿಸಿದರೆ 'ಸೆಕ್ಯುಲರ್ ಹಿಂದುತ್ವವಾದಿ'ಗಳೆಂಬ ಹಣೆಪಟ್ಟಿಯನ್ನು ದಯಪಾಲಿಸುತ್ತಾರೆ.) ಹಿಂದುತ್ವವಾದಿಗಳು ಹಿಂದೂ ಧರ್ಮದ ಭವ್ಯತೆಯ ಬಗ್ಗೆ ಮತ್ತು ಹಿಂದೂ ರಾಷ್ಟ್ರವನ್ನು ಅಸ್ತಿತ್ವಕ್ಕೆ ತರುವ ಬಗ್ಗೆ ಮಾತನಾಡುವಾಗಲೂ, ಸೆಕ್ಯುಲರ್‌ವಾದಿಗಳು ಈ ಹಿಂದೂ ರಾಷ್ಟ್ರೀಯವಾದಿಗಳನ್ನು ವಿರೋಧಿಸುವಾಗಲೂ ಅವರಿಗೆ ಈ ವಸಾಹತು ಪರಿಪಕಲ್ಪನೆಗಳೇ ಆವರಿಸಿಕೊಂಡಿವೆ. ಅಷ್ಟಕ್ಕೂ, ಭಾರತದ ರಾಷ್ಟ್ರೀಯವಾದ ಹೋರಾಟವೂ ಈ ಪರಿಕಲ್ಪನೆಗಳ ಮೂಸೆಯಿಂದಲೇ ಹೊರಹೊಮ್ಮಿದ್ದಾಗಿದೆ ಅಲ್ಲವೇ? ಹಾಗಾಗಿ, ವಸಾಹತು ಪೂರ್ವ ಕೃತಿಗಳನ್ನು ಉಲ್ಲೇಖಿಸಿ ವಿವರಿಸಿದ ಮಾತ್ರಕ್ಕೆ ನೀವು ವಸಾಹತುಶಾಹಿ ಪರಿಕಲ್ಪನೆಯ ಚೌಕಟ್ಟಿನಿಂದ ಮುಕ್ತವಾಗಿ ವಿವರಿಸುತ್ತಿದ್ದೀರಿ ಎಂದೇನೂ ಆಗದು. ಹಾಗಾದರೆ, ವಸಾಹತು ಪೂರ್ವ ಕೃತಿಗಳು ಯಾವುದರ ಕುರಿತು ಚರ್ಚಿಸುತ್ತಿವೆ ಎಂಬುದನ್ನು ಹೇಗೆ ಗುರುತಿಸುವುದು? ಅದು ಸಾಧ್ಯವಾಗುವುದು ಇಂದಿನ ಸಮಾಜ ವಿಜ್ಞಾನವು ಈ ವಸಾಹತೀ ಪರಿಕಲ್ಪನೆಗಳಿಂದ ಮುಕ್ತಿಗೊಂಡಾಗಲೇ. ಇವುಗಳಿಂದ ಮುಕ್ತಿ ಪಡೆಯುವುದೆಂತು? ಅದಕ್ಕೆ ಮೊದಲು ಇಂದಿನ ಸಮಾಜವಿಜ್ಞಾನದ ಪರಿಕಲ್ಪನೆಗಳು ಯಾವ ನೆಲೆಯಲ್ಲಿ ವಸಾಹತೀ ಪರಿಕಲನೆಯಿಂದ

> ನನ್ನದು ಜ್ಞಾನಮಿಮಾಂಸೆಯ ಸಿದ್ಧಾಂತವಾಗಿರದೆ ಕೇವಲ ಪ್ರಮೇಯ ಮತ್ತು ಗ್ರಹೀತಗಳು ಮಾತ್ರವೇ ಆಗಿರುವುದರಿಂದ ಪ್ರತಿಕ್ರಿಯೆಗೆ ಯೋಗ್ಯವಲ್ಲವೆಂದು ಆಪಾದಿಸಿದ್ದಾರೆ. ನಮ್ಮದು ಕೇವಲ ಪ್ರಮೇಯ ಮತ್ತು ಗ್ರಹೀತಗಳೇ ಆಗಿದ್ದರೂ ದಯವಿಟ್ಟು ಲೇಖಕರು ಈ ಗ್ರಹೀತಗಳಲ್ಲಿರುವ ಸಂಶೋಧನಾತ್ಮಕ ತೊಂದರೆ ಮತ್ತು ಸಮಸ್ಯೆಗಳೇನು ಎಂದು ತೋರಿಸುವ ಪ್ರಯತ್ನ ಮಾಡಬೇಕು. ಏಕೆಂದರೆ, ಈ ಗ್ರಹೀತ ಮತ್ತು ಪ್ರಮೇಯಗಳು ವರ್ಷಾನುಗಟ್ಟಲೆ ನಮ್ಮ ತಂಡ ಮಾಹಿತಿಯನ್ನು ಕಲೆಹಾಕಿ ಆ ಮಾಹಿತಿಗಳ ವಿಶ್ಲೇಷಣೆಯನ್ನು ಆಧರಿಸಿದ್ದುದಾಗಿದೆ.
>
> ○ ಡಾ. ಎ. ಷಣ್ಮುಖ

ತುಂಬಿದೆ? ಅವುಗಳ ತೊಂದರೆಗಳೇನು? ಎಂಬುದನ್ನು ಗುರುತಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಇಲ್ಲವಾದರೆ ದಾಸ ಸಾಹಿತ್ಯ ಅಥವಾ ಮಂಟೆಸ್ವಾಮಿ ಮತ್ತು ಮಲೆ ಮಾದೇಶ್ವರದಂತಹ ಜನಪದ ಕಾವ್ಯಗಳು ಯಾವ ಮೌಲ್ಯಗಳನ್ನು ಪ್ರತಿಪಾದಿಸುತ್ತಿವೆ ಎಂಬುದನ್ನು ಗುರುತಿಸುವುದಿರಲಿ ಅವು ನಮ್ಮ ಅನುಭವಕ್ಕೇ ದಕ್ಕಲಾರದಂತೆ ಈ ಪರಿಕಲ್ಪನೆಗಳು ಮಾಡಿಬಿಡುತ್ತವೆ.

ಈ ಪರಿಕಲ್ಪನೆಗಳ ಚೌಕಟ್ಟನ್ನು ನಾವು ವಿರೋಧಿಸಬೇಕಿರುವುದು ಮತ್ತು ಮೀರಬೇಕಿರುವುದು ಇವು ವಸಾಹತುಶಾಹಿಯದು ಮತ್ತು ಪಾಶ್ಚಾತ್ಯವೆಂದೇ? ಖಂಡಿತಾ ಅಲ್ಲ. ಹಾಗೆ ಮಾಡುವುದಾದರೆ ನೀವು ಇಡೀ ಸಮಾಜ ವಿಜ್ಞಾನವನ್ನೇ ಬಹಿಷ್ಕರಿಸಬೇಕಾಗುತ್ತದೆ. ಮತ್ತು ನಾವು ಚರ್ಚೆ ಮಾಡಲು ಬಳಸುತ್ತಿರುವ ಈ "ಸಂವಾದ"ವನ್ನೂ (ಅಂದರೆ ಜರ್ನಲ್‌ಗಳನ್ನೂ) ಬಹಿಷ್ಕರಿಸಬೇಕಾಗುತ್ತದೆ. ಆದರೆ ಇಲ್ಲಿಯ ಸಮಸ್ಯೆ ಅವು ಪಶ್ಚಿಮದ್ದು ಎಂಬ ಕಾರಣವಲ್ಲ. ಬದಲಿಗೆ, ಈ ಚೌಕಟ್ಟುಗಳ ಮಿತಿಗಳದ್ದು. ಈ ವಸಾಹತೀ ವಿವರಣೆಯ ಚೌಕಟ್ಟುಗಳೊಳಗಿನ ಪರಿಕಲ್ಪನೆಗಳು ಪಶ್ಚಿಮದ ರಿಲಿಜಿಯಸ್ ಸಂಸ್ಕೃತಿಯ ಜಗತ್ತಿಗೆ ಮಾತ್ರವೇ ಸೀಮಿತವಾಗಿರುವ ಪರಿಕಲ್ಪನೆಗಳು. ಆದರೆ ಇವನ್ನು ಸಾರ್ವತ್ರಿಕವಾದ ಮತ್ತು ಎಲ್ಲಾ ಸಂಸ್ಕೃತಿಗಳನ್ನೂ ವಿವರಿಸಲು ಸಾಧ್ಯವಾಗುಬಹುದಾದ ಅರ್ಥಾತ್ ವೈಜ್ಞಾನಿಕ ಪರಿಕಲ್ಪನೆಯೆಂಬಂತೆಯೇ ಇಲ್ಲಿಯವರೆಗೂ ಬಳಸಲಾಗಿದೆ. ಅಂದರೆ ಪಶ್ಚಿಮದ ರಿಲಿಜಿಯಸ್ ಥಿಯಾಲಜಿಯ ಭಾಷೆಯೇ ಇಂದಿನ ನಮ್ಮ ಸಮಾಜವಿಜ್ಞಾನದ ಭಾಷೆಯೂ ಆಗಿ ಪರಿವರ್ತಿತವಾಗಿದೆ. ಈ ಥಿಯಾಲಾಜಿಕಲ್ ಭಾಷೆಯು ಮಾನವ ಕುಲದ ಚರಿತ್ರೆಯನ್ನು ಹೇಗೆ ನಿರೂಪಿಸುತ್ತದೆ ಎಂದರೆ "ಒಂದಾನೊಂದು ಕಾಲದಲ್ಲಿ ಒಂದು ರಿಲಿಜಿ ಯನ್ ಇತ್ತು. ಅದು ಸತ್ಯವೂ ಸಾರ್ವತಿಕವೂ ಆಗಿದ್ದು ಮಾನವಕುಲಕ್ಕೆ ದೈವೀ ಕೊಡುಗೆಯಾಗಿತ್ತು. ಎಲ್ಲಾ ಜನಾಂಗಗಳಲ್ಲೂ (ಮತ್ತು ವ್ಯಕ್ತಿಗಳಲ್ಲೂ) ದೈವತ್ವದ ಪ್ರಜ್ಞೆ ಯನ್ನು (Biblical) God ಸ್ಥಾಪಿಸಿದ್ದನು; ಈ ಪ್ರಜ್ಞೆಯು ಮಾನವ ಇತಿಹಾಸದ ಕಾಲಾನುಕ್ರಮದಲ್ಲಿ ಭ್ರಷ್ಟವಾಗುತ್ತದೆ. ಆಗ ಮೂರ್ತಿಪೂಜೆ (Idolatry), ಡೆವಿಲ್‌ನ (ಅಂದರೆ, ಸುಳ್ಳು ದೇವರು ಮತ್ತು ಆತನ ಅಧೀನ ಶಕ್ತಿಗಳ) ಆರಾಧನೆಗಳು ಮಾನವಕುಲವನ್ನು ಅತಿಯಾಗಿ ಆವರಿಸುತ್ತವೆ. ಈ ಸ್ಥಿತಿಯು ಅಬ್ರಾಹಂ, ಇಸಾಕ್ ಮತ್ತು ಜೇಕಬ್‌ರೊಂದಿಗೆ God ಮಾತನಾಡಿ ಅವರ ಬುಡಕಟ್ಟನ್ನು ಪುನಃ ಸರಿಯಾದ ಮಾರ್ಗಕ್ಕೆ ಬರುವಂತೆ ಮಾಡುವವರೆಗೆ ಮುಂದುವರಿಯುತ್ತದೆ. ಆದರೆ ಕ್ರಿಶ್ಚಿಯನ್ ಪಾದ್ರಿಗಳ ಕೈಯಲ್ಲಿ ಈ ರಿಲಿಜಿಯನ್ ಮತ್ತೊಮ್ಮೆ ಭ್ರಷ್ಟತೆಯ ಪಾತಾಳಕ್ಕೆ ಜಾರಿಬೀಳುತ್ತದೆ. ಆಗ ಉದಯಿಸುವ ಮಾರ್ಟಿನ್ ಲೂಥರ್ ಈ ಕ್ರಿಶ್ಚಿಯನ್ ಪಾದ್ರಿಗಳಿಂದ ರಿಲಿಜಿಯನ್ ಅನ್ನು ಪುನಃ ಸರಿದಾರಿಗೆ ತಂದು ನಿಜವಾದ ರಿಲಿಜಿಯನ್ ಅನ್ನು ಸರ್ವರಿಗೂ ಲಭ್ಯವಾಗುವಂತೆ ಮಾಡುತ್ತಾರೆ".

ಭಾರತದ ಸಂಧರ್ಭದಲ್ಲಿ ಈ ಮೇಲಿನ ಥಿಯಾಲಜಿಕಲ್ ಭಾಷೆಯೇ ಪದೆ-ಪದೇ ಒಂದಲ್ಲಾ ಒಂದು ರೂಪದಲ್ಲಿ ಮಾತನಾಡುತ್ತಿದೆ ಎಂಬುದಕ್ಕೆ ಸ್ಪಷ್ಟ ನಿದರ್ಶನವೆಂದರೆ ಕುವೆಂಪು ವಿ.ವಿ.ಯಲ್ಲಿ ನೀವು ಉಲ್ಲೇಖಿಸಿದ ವಿಚಾರ ಸಂಕಿರಣದಲ್ಲಿ ಉದ್ಘಾಟನಾ ಭಾಷಣ ಮಾಡಿದ 'ಕಾಂಚಾ ಐಲಯ್ಯ'ನವರು ಯಾರು ನಿಜವಾದ ಪ್ರವಾದಿ ಎಂಬ ಚರ್ಚೆಗೆ ಇಳಿದಿದ್ದು! ಮತ್ತು ಈ ಪ್ರಶ್ನೆ ಅಂದರೆ ಯಾರು

ಡಾ. ಡೊಮಿನಿಕ್‌ರವರು ನನ್ನದು ಜ್ಞಾನ ಮಿಮಾಂಸೆಯ ಸಿದ್ಧಾಂತವಾಗಿರದೆ ಕೇವಲ ಪ್ರಮೇಯ ಮತ್ತು ಗ್ರಹೀತಗಳು ಮಾತ್ರವೇ ಆಗಿರುವುದರಿಂದ ಪ್ರತಿಕ್ರಿಯೆಗೆ ಯೋಗ್ಯವಲ್ಲವೆಂದು ಆಪಾದಿಸಿದ್ದಾರೆ. ದಯವಿಟ್ಟು ಲೇಖಕರು ಈ ಗ್ರಹೀತಗಳಲ್ಲಿರುವ ಸಂಶೋಧನಾತ್ಮಕ ಸಮಸ್ಯೆಗಳೇನು ಎಂದು ತೋರಿಸುವ ಪ್ರಯತ್ನ ಮಾಡಬೇಕು. ವರ್ಷಾನುಗಟ್ಟಲೆ ನಮ್ಮ ತಂಡ ಕರ್ನಾಟಕದ ಬೇರೆ ಬೇರೆ ಜಾತಿಗಳಿಂದ, ಜನರಿಂದ ಮಾಹಿತಿಯನ್ನು ಕಲೆಹಾಕಿ ಆ ಮಾಹಿತಿಗಳ ವಿಶ್ಲೇಷಣೆಯನ್ನು ಆಧರಿಸಿ ನಮ್ಮ ವಾದವನ್ನು 'ಧೃಡಪಡಿಸಿ'ಕೊಂಡೇ ಈ 'ಹೈಪೋಥಿಸಿಸ್'ಅನ್ನು ಚರ್ಚೆಗೆ ಮುಂದಿಟ್ಟಿರುವೆವು.

ನಿಜವಾದ ಪ್ರವಾದಿ? ಎಂಬುದು (ತಮ್ಮ ರಿಲಿಜಿಯನ್ನಿನ ಪ್ರವಾದಿ ಯಾರೆಂದು ನಿರ್ಧರಿಸಬೇಕಿರುವುದು ಆಯಾ ರಿಲಿಜಿಯನ್ನಿನ ಅನುಯಾಯಿಗಳೋ? ಇಲ್ಲ ಸಮಾಜವಿಜ್ಞಾನಿಗಳೋ? ಅಥವಾ, ಇವರು ತಮ್ಮ ವಾದ ಮತ್ತು ಸಿದ್ಧಾಂತಗಳನ್ನು ತಮ್ಮ ರಿಲಿಜಿಯನ್ನುಗಳೆಂದೇ ಭಾವಿಸಿದ್ದಾರೆಯೇ?) ಸಮಾಜ ವಿಜ್ಞಾನದ ಗಂಭೀರ ಚರ್ಚೆಯೇನೋ ಎಂಬಂತೆ 'ಗಾಂಧಿ ಪ್ರವಾದಿ ಅಲ್ಲ' ಎಂಬ ಠರಾವು ಮಾಡಿದ್ದು.

ಹಾಗೆಯೇ ಬಹುತೇಕ ಚಿಂತಕರು ಭಾರತದ ಕ್ರಾಂತಿ ಮತ್ತು ಪ್ರತಿಭಟನೆಗಳನ್ನು ಯೂರೋಪಿನಲ್ಲಿ ನಡೆದ ಕ್ಯಾಥೊಲಿಕ್ ಚರ್ಚಿನ ವಿರುದ್ಧ ಪ್ರೊಟೆಸ್ಟಾಂಟ್‌ರ ಹೋರಾಟದ ಪಡಿಯಚ್ಚಿನಂತೆ ಚಿತ್ರೀಕರಿಸಿ ಬುದ್ಧ, ಬಸವಣ್ಣ, ಅಂಬೇಡ್ಕರ್ ಎಲ್ಲರೂ ಭಾರತದ ಮಾರ್ಟಿನ್‌ಲೂಥರ್ ಎಂಬಂತೆ ಬಿರುದನ್ನು ನೀಡಿಬಿಡುವುದು. ಹಾಗಾದರೆ, ಈ ರೀತಿಯ ಚಿತ್ರಣಗಳು ಏನನ್ನು ಧ್ವನಿಸುತ್ತವೆ? ಮೇಲೆ ಹೇಳಿದ ಥಿಯಾಲಜಿಕಲ್ ಭಾಷೆ ಕಟ್ಟಿಕೊಡುವಂತೆ "ಯೂರೋಪಿನ ರೀತಿಯ ಚರಿತ್ರೆಯೇ ಭಾರತದ ಚರಿತ್ರೆಯೂ ಕೂಡ, ಭಾರತೀಯ ಸಮಾಜ ಯೂರೋಪಿನ (ಯಾವುದೋ ಕಾಲದ) ಸಮಾಜದ ಪ್ರತಿರೂಪ. ಅಲ್ಲಿಯ ಸಾಮಾಜಿಕ ರಚನೆಯಲ್ಲಿ ಯಾವ ರೀತಿಯಲ್ಲಿ ಸಮಸ್ಯೆಗಳು ತಲೆದೋರಿದವೋ ಅದೇ ರೀತಿಯ ಸಮಸ್ಯೆಗಳೇ ಇಲ್ಲೂ ತಲೆದೋರಿದವು. ಆ ಸಮಸ್ಯೆಗಳಿಗೆ ಅಲ್ಲಿಯ ಜನ ಮತ್ತು ನಾಯಕರು ಹೇಗೆ ಪ್ರತಿಕ್ರಿಯಿಸಿ ಹೋರಾಡಿದರೂ ಇಲ್ಲಿಯೂ ಹಾಗೆಯೇ ಮಾಡಿದರು" ಎಂಬುದನ್ನಲ್ಲವೇ?

ನಮ್ಮ ಬುದ್ಧ, ಬಸವಣ್ಣನವರು "ನಿಜವಾದ ರಿಲಿಜಿಯನ್ ಅನ್ನು ಅವಿತಿಟ್ಟು ಸುಳ್ಳುರಿಲಿಜಿಯನ್ ಅನ್ನು ಪ್ರಚಾರ ಮಾಡಿ, ಜನರನ್ನು ಮೂಢನಂಬಿಕೆಯ ಅಂಧಕಾರದಲ್ಲಿ ಮುಳುಗಿಸಿದ ಬ್ರಾಹ್ಮಣ ಧರ್ಮ/ ವರ್ಣಾಶ್ರಮ ಧರ್ಮದ ವಿರುದ್ಧ ಹೋರಾಡಿದರು" ಎಂದು ವಿವರಿಸಿದರೆ ಅದು ಮೇಲಿನ ಥಿಯಾಲಜಿಕಲ್ ಭಾಷೆಯ ಪುನರುತ್ಪಾದನೆ ಅಲ್ಲವೇ? ಬುದ್ಧ, ಮತ್ತು ಬಸವಣ್ಣನವರಿಗೆ "ನಿಜವಾದ ರಿಲಿಜಿಯಸ್ ಒಂದಿತ್ತು, ಅದನ್ನು ಭ್ರಷ್ಟಗೊಳಿಸಲಾಗಿದೆ, ಈಗ ನಾನು ಅದನ್ನು ಪುನರ್ ಸ್ಥಾಪಿಸುತ್ತಿದ್ದೇನೆ, ನಾನು ಸ್ಥಾಪಿಸುತ್ತಿರುವ ಈ ರಿಲಿಜಿಯನ್ನೇ ನಿಜವಾದ ರಿಲಿಜಿಯನ್, ಉಳಿದೆಲ್ಲವೂ ಸುಳ್ಳು ಮತ್ತು ಭ್ರಷ್ಟಗೊಂಡವು" ಎಂಬ ಕಲ್ಪನೆಇತ್ತೇ? ಅಷ್ಟಕ್ಕೂ ಈ ಕಲ್ಪನೆ ಇಂದಿನ ಯಾವ ಭಾರತೀಯ ಸಂಪ್ರದಾಯದಲ್ಲಿದೆ? ಬುದ್ಧ ಮತ್ತು ಬಸವಣ್ಣನವರು ಮಾರ್ಟಿನ್ ಲೂಥರ್ ಮಾಡಿದ್ದನ್ನೇ ಇಲ್ಲಿ ಮಾಡಿದರೇ? ಅಥವಾ ಅವರ ಪ್ರತಿಭಟನೆ ಮತ್ತು ತತ್ವಗಳಿಗೆ ತನ್ನದೇ ಆದ ಬೇರೆ ಸಾಂಸ್ಕೃತಿಕ ಮೌಲ್ಯಗಳಿಲ್ಲವೇ?

ನನ್ನ ಹಿಂದಿನ ಲೇಖನದ '*ಅಸ್ಪೃಶ್ಯ ಜಾತಿಗಳವರು ತಾವೇ ತಮ್ಮ ಹಳ್ಳಿಯಲ್ಲಿ ಅತ್ಯಂತ ಕೆಳಜಾತಿಗಳೆಂದು ಒಪ್ಪುತ್ತಾರೆ. ಹಾಗೆಯೇ ಮೇಲ್ಜಾತಿಯವರು ಅವುಗಳನ್ನೇ ಕೆಳಜಾತಿಗಳೆಂದೂ ಗುರುತಿಸುತ್ತಾರೆ. ....ಅವುಗಳ ಅಸ್ತಿತ್ವದ ಬಗ್ಗೆಯೇ ಶೇ. ೯೦ ರಿಂದ ೯೫ ರಷ್ಟು ಜನರಿಗೆ ಅರಿವಿಲ್ಲ. ಅರಿವಿರುವವರೂ (ಮುಖ್ಯವಾಗಿ ಆಧುನಿಕ ಶಿಕ್ಷಣ ಪಡೆದವರು) ಅವುಗಳೇ ನಮ್ಮ ಸಾಮಾಜಿಕ ಜೀವನವನ್ನು ನಿರ್ದೇಶಿಸುವ ಪವಿತ್ರ ಗ್ರಂಥಗಳೆಂದು ಭಾವಿಸಿಯಿಲ್ಲ*' ಎಂಬ ಸಾಲುಗಳನ್ನು ಉಲ್ಲೇಖಿಸುತ್ತಾ **"ಇದನ್ನು ಗಮನಿಸಿದರೆ, ಮತ್ತದೇ ಜಾತಿ ತಾರತಮ್ಯವನ್ನು ಅವರ ಮೇಲೆ ಹೇರಿದಂತೆ ಆಗುತ್ತದೆಯಲ್ಲವೇ?"** ಎಂಬ ಪ್ರಶ್ನೆಯನ್ನು ಡೊಮಿನಿಕ್‌ರವರು ಕೇಳುತ್ತಾರೆ. ಆದರೆ ಇದು ಲೇಖನದ ಈ ಸಾಲಿಗೆ ಅವರು ನೀಡುವ ವಿಶಿಷ್ಟ ಅರ್ಥವಷ್ಟೇ. ಏಕೆಂದರೆ ಇಲ್ಲಿ ನನ್ನ ವಿಚಾರವಿದ್ದುದು ಹಿಂದೂ ಧರ್ಮವೊಂದಿದೆ; ಅವುಗಳಿಗೆ ಪವಿತ್ರ ಶಾಸ್ತ್ರಗ್ರಂಥಗಳಿವೆ; ಅವುಗಳೇ ಇಲ್ಲಿಯ ಜಾತಿ ಆಚರಣೆಗಳನ್ನು ನಿರ್ದೇಶಿಸುತ್ತಿವೆ ಎಂಬುದು ಯಾರೊಬ್ಬರ ಅನುಭವವೂ ಆಗಿರದಿದ್ದರೂ ಸಹ ಮೇಲ್ಜಾತಿ-ಕೆಳಜಾತಿಗಳೆಂಬ ವರ್ಗೀಕರಣಗಳಿವೆ. ಜೊತೆಗೆ ಅಸ್ಪೃಶ್ಯತೆಯಂತಹ ಅಮಾನವೀಯ ಆಚರಣೆಯೂ ಇಲ್ಲಿ ಇದೆ. ಈ ಅಸಮಾನತೆ ಮತ್ತು ಅಮಾನವೀಯತೆಗಳನ್ನು ಸರಿಪಡಿಸಬೇಕೆಂದಾದರೆ ಪರಿಹಾರವನ್ನು ಎಲ್ಲಿ ಹುಡುಕಬೇಕು? ಒಂದು ವೇಳೆ ಹಿಂದೂ ರಿಲೀಜಿಯನ್ ಮತ್ತು ಅದರ ಶಾಸ್ತ್ರಗ್ರಂಥಗಳೇ ಈ ಸಮಸ್ಯೆಗಳ ಮೂಲವಾಗಿದ್ದರೆ ಅವುಗಳನ್ನು ನಾಶಪಡಿಸಬೇಕೆಂಬ ಪರಿಹಾರ ಸೂಕ್ತವಾಗುತ್ತದೆ. ಆದರೆ ನಮ್ಮ ವಾದ ಹಿಂದೂ ರಿಲಿಜಿಯನ್ ಅಸ್ತಿತ್ವದಲ್ಲಿಯೇ ಇಲ್ಲ ಮತ್ತು ಈ ಯಾವ ಶಾಸ್ತ್ರಗ್ರಂಥಗಳು ಇಲ್ಲಿ ಯಾರಿಗೂ ರಿಲಿಜಿಯಸ್ ಪವಿತ್ರ ಗ್ರಂಥಗಳಲ್ಲ. ಹಾಗಾಗಿ ಅವನ್ನು ತೆಗಳಿದರೂ, ಸುಟ್ಟರೂ ಇಲ್ಲಿಯ ಯಾವ ಸಾಮಾಜಿಕ ಅನಿಷ್ಟಗಳೂ ತೊಲಗುವುದಿಲ್ಲ (ಸುಟ್ಟರೂ ಅವು ತೊಲಗಿಲ್ಲ ಎಂಬುದೇ ಅದಕ್ಕೆ ಸಾಕ್ಷಿ). ಹೀಗಾಗಿ ಇಲ್ಲಿ ಹಿಂದೂ ರಿಲಿಜಿಯನ್ ಇಲ್ಲದಿದ್ದರೂ; ಈ ಶಾಸ್ತ್ರಗಳ ಅರಿವಿರದಿದ್ದರೂ, ಈ ಸಾಮಾಜಿಕ ಅಸಮಾನತೆ ಅಸ್ಪೃಶ್ಯತೆಗಳಂತಹ ಸಮಸ್ಯೆಗಳು ಇವೆ. ಅವುಗಳನ್ನು ತೊಲಗಿಸಬೇಕೆಂದರೆ ಮೊದಲು ಅವುಗಳ ಮೂಲಕಾರಣವೇನೆಂದು ಗುರುತಿಸಬೇಕಾಗುತ್ತದೆ. ಇಲ್ಲಿಯವರೆಗೆ ಎಲ್ಲರೂ ಜಾತಿವ್ಯವಸ್ಥೆ, ಹಿಂದೂ ರಿಲಿಜಿಯನ್ ಮತ್ತದರ ಹಿಂದೂ ಶಾಸ್ತ್ರಗ್ರಂಥಗಳೇ ಕಾರಣ ಎಂಬ ಮಂತ್ರವನ್ನೇ ಪುನರುಚ್ಚರಿಸುತ್ತಿದ್ದಾರೆ ಅಷ್ಟೇ!. ಈ ಸಮಸ್ಯೆಗಳು ಇನ್ನೂ ಹಾಗೆಯೇ ಮುಂದುವರಿಯುತ್ತಿದ್ದರೂ ನಾವು ಕಂಡುಕೊಂಡಿರುವ ಪರಿಹಾರಗಳೇ ಸರಿಯಾಗಿದೆ ಹೊಸ ಪರಿಹಾರಗಳನ್ನು ಹುಡುಕಬೇಕಿಲ್ಲ ಎಂಬ ಅಸಹನೆ ತೋರುವುದು ಈ ಸಮಸ್ಯೆಗಳು ಹೀಗೆಯೇ ಮುಂದುವ

ರಿಯಲಿ ಎಂಬ ಅರ್ಥವನ್ನೂ ಹೊರಡಿಸುತ್ತದೆ ಎಂಬುದನ್ನು ಡೊಮಿನಿಕ್‌ರವರು ಗಮನಿಸಬೇಕು.

ನಮ್ಮನ್ನು ಹಿಂದುತ್ವವಾದಿಗಳ ವಕ್ತಾರರೆಂಬ ಆರೋಪಿಸುವ ಮೊದಲು ಹಿಂದುತ್ವವಾದದ ಬಗೆಗಿನ ನಮ್ಮ ನಿಲುವನ್ನು ಅರ್ಥಮಾಡಿಕೊಳ್ಳುವುದು ಒಳ್ಳೆಯದು. ಹಿಂದೂ ರಿಲಿಜಿಯನ್ ಅನ್ನುವುದೇ ಭಾರತದಲ್ಲಿ ಅಸ್ತಿತ್ವದಲ್ಲಿಲ್ಲ; ಹಿಂದೂ ಎನ್ನುವುದು ಭಾರತೀಯರ ಅನುಭವಿಕ ವಾಸ್ತವವೂ ಅಲ್ಲ; ಸಾಮಾಜಿಕ ವಾಸ್ತವವೂ ಅಲ್ಲ; ಅದು ಯೂರೋಪಿಯನ್ ರಿಲಿಜಿಯಸ್ ಸಂಸ್ಕೃತಿಯ ಥಿಯಾಲಜಿಕಲ್ ಭಾಷೆಯು ಭಾರತೀಯ ಶಿಕ್ಷಿತರಲ್ಲಿ ಹುಟ್ಟುಹಾಕಿರುವ ಭ್ರಾಂತಿ ಎಂದು ವಾದಿಸುತ್ತಿರುವ ನಾವು ಹಿಂದುತ್ವವಾದಿಗಳೇ? ಸೆಕ್ಯುಲರ್‌ವಾದಿಗಳಿಗಿಂತ ಹೆಚ್ಚಾಗಿ ಹಿಂದುತ್ವವಾದಿಗಳ ಬಗೆಗಿನ ನಮ್ಮ ಜಗಳ ಇನ್ನೂ ದೊಡ್ಡದು. ಅವರು ಇಡೀ ಭಾರತೀಯ ಬಹುತ್ವವೂ ಅನನ್ಯವೂ ಮತ್ತು ವಿಭಿನ್ನ ಜೀವನ ಮಾದರಿಗಳ ಸಂಸ್ಕೃತಿಗಳನ್ನೆಲ್ಲಾ ಏಕೀಭವಿಸಿ ಅಥವಾ ನಾಶಪಡಿಸಿ ಭಾರತೀಯವಲ್ಲದ ಯೂರೋಪಿಯನ್ ರಿಲಿಜಿಯಸ್ ಸಂಸ್ಕೃತಿಯ ಪಡಿಯಚ್ಚಿನ ಹಿಂದೂ ರಿಲಿಜಿಯಸ್ ಸಂಸ್ಕೃತಿಯನ್ನು ಸಾಕಾರಗೊಳಿಸುವ ಹಗಲುಗನಸು ಕಾಣುತ್ತಿದ್ದಾರೆ. ಅದು ಇನ್ನೂ ಅನಾಹುತಕಾರಿ. ರಿಲಿಜಿಯಸ್ ಥಿಯಾಲಜಿಕಲ್ ಭಾಷೆಯ ಚೌಕಟ್ಟಿನಿಂದಾಗಿ ಸೆಕ್ಯುಲರಿಸ್ಟರು ಭಾರತೀಯ ಸಮಾಜದ ಸಮಸ್ಯೆಗಳನ್ನು ಸರಿಯಾಗಿ ಗುರುತಿಸುವಲ್ಲಿ ವಿಫಲವಾಗುತ್ತಿದ್ದಾರೆ ಅಷ್ಟೇ. ಆದರೆ ಹಿಂದುತ್ವವಾದಿಗಳೋ ಇಡೀ ಆ ರಿಲಿಜಿಯಸ್ ಥಿಯಾಲಜಿಕಲ್ ಭಾಷೆಯನ್ನೇ ತಮ್ಮಲ್ಲಿ ಅವಾಹಿಸಿಕೊಂಡು ಭಾರತವನ್ನು ಯೂರೋಪಿನ ರಿಲಿಜಿಯಸ್ ಸಮಾಜದ ಪ್ರತಿರೂಪವಾಗಿಸುವ ಯೋಜನೆಯಲ್ಲಿದ್ದಾರೆ. ಹಿಂದೂ ರಿಲಿಜಿಯನ್ನೇ ಇಲ್ಲ ಎನ್ನುವ ಮತ್ತು ಭಾರತದ ಸಮಾಜ ವಿಜ್ಞಾನ ಮತ್ತು ಸಂಸ್ಕೃತಿ ಅಧ್ಯಯನಗಳು ಈ ಯೂರೋಪಿಯನ್ ಥಿಯಾಲಜಿಕಲ್ ಭಾಷೆಯ 'ಸೆಕ್ಯುಲರ್' ರೂಪಾಂತರವಾದ್ದರಿಂದ ಈ ಚೌಕಟ್ಟಿನಿಂದ ಮುಕ್ತವಾಗಬೇಕೆಂದು ವಾದಿಸುವ ನಮ್ಮ ತಂಡ ಇಂತಹ ಹಿಂದುತ್ವವಾದಿ ಅಥವಾ ಹಿಂದುತ್ವವಾದದ ಮತ್ತೊಂದು ರೂಪ ಎನ್ನುವ ಆರೋಪ ತರ್ಕಬದ್ಧವೇ?

ಡಾ. ಶ್ರೀಧರರವರು ಅಭಿಪ್ರಾಯಪಡುವ ಹಾಗೆ (ಕೀ.ರಂ.ರ ಭಾಷ್ಯವೂಅದೇ) ನಿರ್ವಸಾಹತೀಕರಣ ಎಂಬ ಹೆಸರಿನಲ್ಲಿ "ಇಂದಿನ ಸಮಾಜವನ್ನು ಆವರಿಸಿಕೊಂಡಿರುವ ವಸಾಹತುಶಾಹಿ ಎನ್ನುವುದನ್ನೆಲ್ಲಾ ಒಂದೊಂದೇ ಕಳಚಿ ಹಾಕುತ್ತಾ ಹೋಗಬೇಕು. ಆಗ ನಮಗೆ ನೈಜ ಭಾರತೀಯ ಎನ್ನುವುದು ದೊರೆಯುವುದು" ಎಂಬ ವಾದವೂ ನಮ್ಮದಲ್ಲ. ಹಾಗೆ ಹೇಳಿದರೆ ಖಂಡಿತ ಅದು ಡಾ.ಶ್ರೀಧರರವರು ಹೇಳುವ ಹಾಗೆ ಯೂರೋಸೆಂಟ್ರಿಕ್‌ವಾದದ ಮತ್ತೊಂದು ಮುಂದುವರಿಕೆಯೇ ಆಗುತ್ತದೆ. ಮತ್ತು ಇಂದಿನ 'ಡೀಕನ್‌ಸ್ಟ್ರಕ್ಷನಿಸ್ಟ್', 'ಪೋಸ್ಟ್‌ಸ್ಟ್ರಕ್ಚರಲಿಸ್ಟ್' ಮತ್ತು 'ಹೆಜಮನಿ'ಯನ್ನೂ ಒಳಗೊಂಡಂತೆ ಬಹಳಷ್ಟು ವಸಾಹತೋತ್ತರ ವಾದಗಳೆಲ್ಲವೂ ಇದನ್ನೇ ಪ್ರತಿಪಾದಿಸುತ್ತಿವೆ. ನಿಜವಾಗಿಯೂ ಈ ವಾದಗಳೇ ಓರಿಯಂಟಲಿಸಂನ ಮುಂದುವರಿಕೆಗಳಾಗಿವೆ. ನಾವು 'ವೇದಗಳಿಗೆ ಹಿಂತಿರುಗಿ ಎನ್ನುತ್ತಿಲ್ಲ;', 'ಭಾರತೀಯತೆಯನ್ನು ನಾಶಗೊಳಿಸುತ್ತಿರುವ ಆಧುನಿಕತೆಯನ್ನು ತಿರಸ್ಕರಿಸಿ ಎನ್ನುತ್ತಿಲ್ಲ'; 'ವಸಾಹತುಶಾಹಿ ಹುಟ್ಟುಹಾಕಿದ ಸಾಮಾಜಿಕ ರಚನೆಗಳನ್ನು ಹೊಡೆದುರುಳಿಸಿ ಭಾರತೀಯವೆನ್ನುವ ಹೊಸ ಸಾಮಾಜಿಕ ರಚನೆಗಳನ್ನು ಕಟ್ಟಿ ಎನ್ನುತ್ತಿಲ್ಲ'; ಹಾಗೆ ಹೇಳಿದರೆ ಹಿಂದೆ ಎಂದೋ

ಚರ್ಚೆ

ಜಾತಿ ಧರ್ಮ ತಾರತಮ್ಯ

ಭಾರತೀಯವೆನ್ನುವ ನೈಜ ಮತ್ತು ಪವಿತ್ರವೆನ್ನುವ (ನಿಜ ರಿಲಿಜಿಯನ್‌ಅನ್ನು ಆಧರಿಸಿದ) ಒಂದು ಸಾಮಾಜಿಕ ವ್ಯವಸ್ಥೆ ಇತ್ತು; ಅದನ್ನು ವಸಾಹತುಶಾಹಿಗಳು ಅಥವಾ ಇನ್ಯಾರೋ ತಮ್ಮ ವೈಯುಕ್ತಿಕ ಹಿತಾಸಕ್ತಿಗಾಗಿ ಶಿಥಿಲವಾಗಿಸಿ ಭ್ರಷ್ಟ ಸಾಮಾಜಿಕ ವ್ಯವಸ್ಥೆಗೆ ಕಾರಣವಾಗಿದ್ದಾರೆ; ಹಾಗಾಗಿ ಅವನ್ನು ಇಂದು (ಆಧುನಿಕ ಮಾರ್ಟಿನ್ ಲೂಥರ್‌ನಂತೆ) ಮುರಿದು ಪುನಃ ಹಿಂದಿನ ನೈಜ ಮತ್ತು ಪವಿತ್ರ ಸಾಮಾಜಿಕ ಸ್ಥಿತಿಯನ್ನು (ನಿಜ ರಿಲಿಜಿಯನ್‌ಅನ್ನು) ಪುನರ್‌ಸ್ಥಾಪಿಸಬೇಕು ಎಂದಂತಾಗುತ್ತದೆ. ಇಂಥಹ ವಾದವನ್ನೆ, ನಾವು ಯೂರೋಪಿನ ಥಿಯಾಲಜಿಕಲ್ ಭಾಷೆಯ ಚೌಕಟ್ಟಿನ ಯಥಾವತ್ತಾದ ಪುನರುತ್ಪಾದನೆ ಎನ್ನುತ್ತಿರುವುದು.

ಹಾಗಾದರೆ ನಾವು ಹೇಳುತ್ತಿರುವುದೇನು? ಯಾವುದನ್ನೇ ನಾಶಪಡಿಸಬೇಕು ಮತ್ತು ಹೊಸದನ್ನು ಕಟ್ಟಬೇಕು ಎನ್ನುವ ಮೊದಲು ಅದು ಸಮಾಜದಲ್ಲಿ ನಿಜವಾಗಿಯೂ ಅಸ್ತಿತ್ವದಲ್ಲಿದೆಯೇ? ಇದ್ದರೂ ಅದರ ಸ್ವರೂಪ ನಾವು (ನಮ್ಮ ಇಂದಿನ ಸಮಾಜ ವಿಜ್ಞಾನ) ಕಟ್ಟಿಕೊಡುತ್ತಿರುವಂತೆ ಇದೆಯೇ? ಎನ್ನುವುದನ್ನು ಪರಿಶೀಲಿಸಿ ಎಂದು. "ಜಾತಿ ವ್ಯವಸ್ಥೆ ಮತ್ತು ಹಿಂದೂ ರಿಲಿಜಿಯನ್‌ಗಳನ್ನು ವಸಾಹತುಶಾಹಿಗಳು ಅಥವಾ ಇನ್ಯಾರೋ ಹುಟ್ಟುಹಾಕಿದರು" ಎನ್ನುವ ಮೊದಲು ಅದು ಅಸ್ಥಿತ್ವದಲ್ಲಿ ಇದೆಯೇ? ಅದು ನಮ್ಮ ಸಾಮಾಜಿಕ ವಾಸ್ತವವೇ? ಎಂಬುದನ್ನು ಅರಿಯುವ ಕೆಲಸ ಆಗಬೇಕು ಎಂದು. ಸಮಾಜ ವಿಜ್ಞಾನ (ಮತ್ತು ಸಾಮಾಜಿಕ ಹೋರಾಟಗಳು) ಇಂದಿನ ಪೀಳಿಗೆಯಲ್ಲಿ

> **ನಮ್ಮ ಬುದ್ಧ, ಬಸವಣ್ಣನವರು "ನಿಜವಾದ ರಿಲಿಜಿಯನ್ ಅನ್ನು ಅವಿತಿಟ್ಟು ಸುಳ್ಳು ರಿಲಿಜಿಯನ್ ಅನ್ನು ಪ್ರಚಾರ ಮಾಡಿ, ಜನರನ್ನು ಮೂಢನಂಬಿಕೆಯ ಅಂಧಕಾರದಲ್ಲಿ ಮುಳುಗಿಸಿದ ಬ್ರಾಹ್ಮಣ ಧರ್ಮ/ವರ್ಣಾಶ್ರಮ ಧರ್ಮದ ವಿರುದ್ಧ ಹೋರಾಡಿದರು" ಎಂದು ವಿವರಿಸಿದರೆ ಅದು ಮೇಲಿನ ಥಿಯಾಲಜಿಕಲ್ ಭಾಷೆಯ ಪುನರುತ್ಪಾದನೆ ಅಲ್ಲವೇ? ಬುದ್ಧ, ಮತ್ತು ಬಸವಣ್ಣನವರಿಗೆ "ನಿಜವಾದ ರಿಲಿಜಿಯನ್ ಒಂದಿತ್ತು, ಅದನ್ನು ಭ್ರಷ್ಟಗೊಳಿಸಲಾಗಿದೆ, ಈಗ ನಾನು ಅದನ್ನು ಪುನರ್ ಸ್ಥಾಪಿಸುತ್ತಿದ್ದೇನೆ, ನಾನು ಸ್ಥಾಪಿಸುತ್ತಿರುವ ಈ ರಿಲಿಜಿಯನ್ನೇ ನಿಜವಾದ ರಿಲಿಜಿಯನ್, ಉಳಿದೆಲ್ಲವೂ ಸುಳ್ಳು ಮತ್ತು ಭ್ರಷ್ಟಗೊಂಡವು" ಎಂಬ ಕಲ್ಪನೆಇತ್ತೇ?**

ಆಸಕ್ತಿ ಕಳೆದುಕೊಳ್ಳಲು ಬಹುಮುಖ್ಯ ಕಾರಣವೇ ಅವು ಅವರ ವಾಸ್ತವ ಅನುಭವದ ಸಾಮಾಜಿಕ ಸ್ಥಿತಿಯ ಬಗ್ಗೆ ಏನನ್ನೂ ಹೇಳುತ್ತಿಲ್ಲ ಎನ್ನುವುದು. ಇಂದಿನ ಸಮಾಜ ವಿಜ್ಞಾನವನ್ನು ಸಂಪೂರ್ಣವಾಗಿ ಈ ಥಿಯಾಲಜಿಕಲ್ ಚೌಕಟ್ಟು ಆವರಿಸಿ ಕೊಂಡಿರುವುದರಿಂದ ಅದರ ಪರಿಕಲ್ಪನೆಗಳಾವುದೂ ನಮ್ಮ ಸಮಾಜದ ವಾಸ್ತವ ಚಿತ್ರಣಗಳನ್ನು ಕಟ್ಟಿಕೊಡುವಲ್ಲಿ ಸಫಲವಾಗುತ್ತಿಲ್ಲ. ಇದರ ಪರಿಣಾಮವಾಗಿ ಸಮಾಜ ವಿಜ್ಞಾನದ ಇಂದಿನ ಚರ್ಚೆ ತನ್ನ ಅರ್ಥ ಮತ್ತು ಪ್ರಸ್ತುತತೆಗಳನ್ನು ಕಳೆದುಕೊಂಡು ಪತನದ ಹಾದಿ ಹಿಡಿದಿದೆ. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. ಇಲ್ಲವಾದರೆ "ಇಂದಿನ ಯುವಜನಾಂಗದ ಪ್ರತಿಭಾವಂತರೆಲ್ಲರೂ ಆಧುನಿಕತೆಯ ಮೋಡಿಗೊಳಗಾಗಿ (ಭ್ರಷ್ಟವಾಗಿ) ಹಣದ ಹಿಂದೆ ಬಿದ್ದು ಐ.ಟಿ. ಬಿ.ಟಿ.ಯಂತಹ ಟೆಕ್ನಿಕಲ್ ಕೋರ್ಸುಗಳ ಕಡೆಗೆ ಸೆಳೆಯಲ್ಪಟ್ಟಿದ್ದಾರೆ. ಅವರಿಗೆ, ಸಾಮಾಜಿಕ ಮೌಲ್ಯಗಳ ಬಗ್ಗೆ ಆದರವಿಲ್ಲ ಎಂದು ಬೊಬ್ಬೆ ಹೊಡೆಯಬೇಕಾಗುತ್ತದೆ. ಸಮಾಜ ವಿಜ್ಞಾನವನ್ನು ಪ್ರಸ್ತುತವಾಗಿಸಿ ಮತ್ತು ಆಸಕ್ತಿದಾಯಕವಾಗಿಸಿ; ಹಾಗೆ ಮಾಡುವುದೆಂದರೆ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ವಾಸ್ತವದ ಸ್ಥಿತಿಗಳ ಬಗ್ಗೆ ನಾವು ಮಾತನಾಡಲು ಆರಂಭಿಸಬೇಕು. ಇಂದಿನ ಪೀಳಿಗೆಯವರಿಗೆ ನಮ್ಮ ಸಮಾಜದ ವಾಸ್ತವ ಸಮಸ್ಯೆಗಳ ಬಗ್ಗೆ ಇದು ಮಾತಾನಾಡುತ್ತಿದೆ ಎಂದೆನಿಸಬೇಕು.

ಡಾ. ಲಕ್ಷ್ಮಿಪತಿಯವರ 'Vulgur Empirisism' ನ ಆಪಾದನೆಯ ಕುರಿತು ಹೇಳುವುದಾದರೆ, ಸಾಮಾಜಿಕ ಸಂಶೋಧನೆಯಲ್ಲಿ ಕ್ಷೇತ್ರಕಾರ್ಯದ ಮೂಲಕವೇ ಯಾವುದನ್ನೂ ಯಾರೂ ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ ಮತ್ತು ಸಂಶೋಧನೆ ಎಂದರೆ ಕ್ಷೇತ್ರಕಾರ್ಯದ ವಿವರಣೆಯೂ ಅಲ್ಲ ಎಂಬುದು ಸಾಮಾಜಿಕ ಸಂಶೋಧನೆಯ ಪ್ರಾಥಮಿಕ ಜ್ಞಾನವಿರುವವರಿಗೂ ತಿಳಿಯುತ್ತದೆ. ನೀವು ಅಧ್ಯಯನದ ತಾರ್ಕಿಕ ವಾದಗಳ ಮೂಲಕ ರೂಪಿಸಿಕೊಳ್ಳುವ 'ಹೈಪೋಥಿಸಿಸ್'ಗಳಿಗೆ ಕ್ಷೇತ್ರಕಾರ್ಯದ ಮಾಹಿತಿಗಳು ಆಧಾರ ಒದಗಿಸಬಲ್ಲದು; ಇಲ್ಲವೇ, ನಿಮ್ಮ ತಾರ್ಕಿಕ ವಾದದ 'ಹೈಪೊಥಿಸಿಸ್' ನಿರಾಧಾರವೆಂದು ತೋರಿಸಬಲ್ಲದೇ ವಿನಃ ಅದೇ ಯಾವುದೇ ವಾದ ಅಥವಾ ಸಿದ್ಧಾಂತವನ್ನು ಹುಟ್ಟುಹಾಕಲಾರದು. ನಮ್ಮ ಕ್ಷೇತ್ರಕಾರ್ಯವು ನಮ್ಮ 'ಹೈಪೊಥಿಸಿಸ್' ಅನ್ನು 'ಧೃಡಪಡಿಸುತ್ತದೆ' ಎಂದಿರುವೆನೇ ವಿನಹ ಕ್ಷೇತ್ರ ಕಾರ್ಯದಿಂದಲೇ ಈ ವಿಚಾರಗಳನ್ನು ಕಂಡುಹಿಡಿದಿರುವೆನೆಂದು ನಾನು ಪ್ರತಿಪಾದಿಸಿಲ್ಲ. ಅದು ಕೇವಲ ತಮ್ಮ ತಪ್ಪು ತಿಳುವಳಿಕೆ ಅಷ್ಟೇ. ಹಾಗಾಗಿ ಲಕ್ಷ್ಮಿಪತಿಯವರ ಸಂವಿಧಾನದ ಉದಾಹರಣೆ ನಿಷ್ಪ್ರಯೋಜಕವಾದುದು. ಏಕೆಂದರೆ ಒಮ್ಮೆ ಭಾರತಕ್ಕೆ ಸಂವಿಧಾನವೇ ಇಲ್ಲದೇ ೨೫% ಜನರು ಇದೆ ಎಂದು ಹೇಳಿದರೆ ಅದು ಇದ್ದುಬಿಡುತ್ತದೆಯೆ? ಭಾರತ ಮತ್ತು ಅದರ ಸಂವಿಧಾನ ಇದೆಯೇ ಇಲ್ಲವೇ ಎಂದು ತಿಳಿಯಲು ಅಧ್ಯಯನ ಮಾಡಬೇಕಿರುವುದು ಇಲ್ಲಿಯ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ಒಳಗೊಂಡ ರಾಜಕೀಯ ವ್ಯವಸ್ಥೆಯನ್ನೇ (ಇವು ಇರುವುದು ನಿಮ್ಮ ಸಾಮಾನ್ಯ ತಿಳಿವಳಿಕೆಗೆ ಗೊತ್ತಿದ್ದರೆ) ಹೊರತು ಅದರ ಬಗೆಗಿನ ಜನರ ತಿಳುವಳಿಕೆಯನ್ನಲ್ಲ. ಈ ಹಿನ್ನೆಲೆಯಲ್ಲಿ ಬಹಳಷ್ಟು ಜನರಿಗೆ ಸಂವಿಧಾನದ ಬಗ್ಗೆ ತಿಳಿದಿಲ್ಲ ಎಂದಾದರೆ ಅದು ಅವರ ಅಜ್ಞಾನ ಎಂದು ತೀರ್ಮಾನಿಸಲು ಇರುವ ತೊಡಕಾದರೂ ಏನು? ಜಾತಿವ್ಯವಸ್ಥೆಯ ಬಗ್ಗೆ ಅಂತಹುದೇ ತೀರ್ಮಾನಕ್ಕೆ ಬರಲು ಇರುವ ಆಧಾರವಾದರೂ

[illegible] ಸಿದ್ಧಾಂತ [illegible] ಸಮುದಾಯ [illegible] ಸಂಪ್ರದಾಯ ಮತ್ತು ಆಚರಣೆಗಳಿಗೆ [illegible] ಒಂದು ಥಿಯೋಲಜಿಯ ಡಾಕ್ಟ್ರಿನ್ ಗಳಲ್ಲಿ ನಂಬಿಕೆ ಇರಬೇಕು ಮತ್ತು ಆ ನಂಬಿಕೆಯೇ ಆ ಸಮುದಾಯದ ಸಂಪ್ರದಾಯ ಮತ್ತು ಆಚರಣೆಗಳನ್ನು ನಿರ್ದೇಶಿಸುತ್ತಿರಬೇಕು' ಎಂಬ ಥಿಯಾಲಜಿಯ ಅಪ್ಪಟ ಪುನರುತ್ಪಾದನೆ (ನಮ್ಮ ಕ್ಷೇತ್ರಕಾರ್ಯವು ಬ್ರಾಹ್ಮಣ ಜಾತಿಗಳನ್ನೂ ಒಳಗೊಂಡಿದೆ ಎಂಬುದನ್ನು ಲಕ್ಷ್ಮಿಪತಿಯವರ ಗಮನಕ್ಕೆ ತರುತ್ತಿದ್ದೇನೆ). ಕ್ರಿಶ್ಚಿಯನ್ ಮಿಷನರಿಗಳು ಮತ್ತು ಆರಂಭಿಕ ಯೂರೋಪಿನ ಪ್ರವಾಸಿಗರು ಪುರಾಣ, ಮಹಾಕಾವ್ಯ ಮತ್ತು ಧರ್ಮಶಾಸ್ತ್ರಗಳನ್ನು ಹಿಂದೂಧರ್ಮದ ಡಾಕ್ಟ್ರಿನ್‌ಗಳು ಎಂದು ಗುರುತಿಸಿ 'ಹಿಂದೂಧರ್ಮ'ವನ್ನು ಕಂಡುಹಿಡಿದಿದ್ದು ಹೀಗೆಯೇ. ಅವರು ೧೮, ೧೯ನೇ ಶತಮಾನದಲ್ಲಿ ಮಾಡಿದ್ದನ್ನು ನೀವು ೨೧ನೇ ಶತಮಾನದಲ್ಲಿ ಮಾಡುತ್ತಿದ್ದೀರಿ ಅಷ್ಟೇ ವ್ಯತ್ಯಾಸ.

ಇನ್ನೂ, ಕರ್ನಾಟಕ ಅಕಾಡೆಮಿ ಆಫ್ ಸೋಸಿಯಲ್ ಸೈನ್ಸ್ ಮತ್ತು ಹ್ಯೂಮಾನಿಟಿಸ್‌ನ ಸ್ಥಾಪನೆಗೆ ನೀಡಲಾಗಿದೆ ಎನ್ನುವ ಅನುದಾನದ ಬಗ್ಗೆ ಹೇಳುವುದಾದರೆ, ಶಂಕರಮೂರ್ತಿಯವರ ಪತ್ರಿಕಾ ಹೇಳಿಕೆಯೇ ನಮ್ಮ ಕೇಂದ್ರಕ್ಕೆ ೪೮ ಕೋಟಿ ರೂಪಾಯಿಗಳನ್ನು ನಾವು ಪಡೆದಿದ್ದೇವೆ ಎಂಬ ಡೊಮಿನಿಕ್‌ರ ಆರೋಪಕ್ಕೆ ಸಾಕ್ಷಿಯೇ? ಬಿ.ಎ. ಶ್ರೀಧರ್‌ರವರೇ ಉಲ್ಲೇಖಿಸಿರುವ ಪತ್ರಿಕಾ ಹೇಳಿಕೆಯನ್ನು ಗಮನಿಸಿದರೇ ಗೊತ್ತಾಗುತ್ತದೆ ಅನುದಾನ ಕೊಡಲು ತಾತ್ವಿಕ ಸಮ್ಮತಿ ನೀಡಿದ್ದು ವರ್ಷಕ್ಕೆ ೪.೫ ಕೋಟಿ. ಅದೂ ಬೆಲ್ಜಿಯಂ ವಿ.ವಿ. ಅಷ್ಟು ಮೊತ್ತವನ್ನು ಕೊಟ್ಟರೆ! ಆದರೆ. ಇನ್ನೂ ಅದರ ಪ್ರಸ್ತಾವನೆಯೇ ಅಲ್ಲಿ ಸಲ್ಲಿಕೆಯಾಗಿಲ್ಲ (ಇದರ ವಿವರಗಳಿಗೆ ಪ್ರೊ. ಸದಾನಂದ ಅವರ ಲೇಖನವನ್ನು ನೋಡಿ). ಅದರ ಕರಡುಪ್ರತಿ ಇದೀಗ ತಾನೆ ಸಿದ್ಧವಾಗುತ್ತಿದೆ. ಆಗಲೇ ೪೮ ಕೋಟಿ ಅನುದಾನ ಪಡೆಯಲು ಯಶಸ್ವಿಯಾಗಿದ್ದಾರೆ ಎನ್ನುವುದು ಕಲ್ಪಿತ ಆರೋಪವಷ್ಟೇ.

ಇಷ್ಟಕ್ಕೂ ನಮ್ಮ ಸಿ.ಎಸ್.ಎಲ್.ಸಿ.ಯ ಜಾತಿಯ ಕುರಿತ ಸಂಶೋಧನೆಗೂ ಈ ಅಕಾಡೆಮಿಗೆ ಮುಂದೆ ಬರಬಹುದಾದ ಅನುದಾನಕ್ಕೂ ಏನು ಸಂಬಂಧ? ಅದು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳನ್ನೂ ಒಳಗೊಳ್ಳಬೇಕಾದ ಸಂಸ್ಥೆ. ಅದರ ಉದ್ದೇಶವೆಂದರೆ: ಇಂದು ತನ್ನ ಪ್ರಸ್ತುತತೆಯನ್ನೂ ಕಳೆದುಕೊಂಡು ವಿನಾಶದ ಅಂಚಿಗೆ ಬಂದು ನಿಂತಿರುವ ಸಮಾಜವಿಜ್ಞಾನ ಮತ್ತು ಮಾನವಿಕ ಶಿಸ್ತುಗಳಿಗೆ ಪುನರ್‌ಜೀವ ತುಂಬುವುದು; ಸಂಶೋಧನೆಯಲ್ಲಿ ಆಸಕ್ತಿ ಹೊಂದಿರುವ ಕಾಲೇಜು ಮತ್ತು ವಿ.ವಿ.ಗಳಲ್ಲಿನ ಅಧ್ಯಾಪಕರುಗಳಿಗೆ ಅಂತರರಾಷ್ಟ್ರೀಯ ಮಟ್ಟದ ತರಬೇತಿ ನೀಡಿ, ಅವರ ಸಂಶೋಧನೆಗಳಿಗೆ ವೇದಿಕೆ ಮತ್ತು ಅನುದಾನದ ನೆರವು ನೀಡುವುದು; ಇಲ್ಲಿಯ ಸ್ಥಳೀಯ ಸಮಸ್ಯೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೈಗೆತ್ತಿಕೊಂಡು ವಿಸ್ತೃತವಾದ ಸಂಶೋಧನೆಗಳನ್ನು ಕೈಗೊಳ್ಳುವುದು; ಎಲ್ಲಾ ಪ್ರತಿಭಾವಂತ ವಿದ್ಯಾರ್ಥಿಗಳು ಇಂಜನಿಯರಿಂಗ್ ಮತ್ತು ಇತರ ಟೆಕ್ನಿಕಲ್ ಕೋರ್ಸಿನೆಡೆಗೇ ಹೋಗುತ್ತಿರುವುದರಿಂದ ಅವರಿಗೆ ಸಮಾಜ ವಿಜ್ಞಾನದ ಸಂಶೋಧನೆಯ ಪ್ರಸ್ತುತತೆ ಮತ್ತು ಅಗತ್ಯತೆಗಳನ್ನು ಮನವರಿಕೆ ಮಾಡಿ ಅವರನ್ನೂ ಸಾಮಾಜಿಕ ಸಂಶೋಧನೆಯೆಡೆಗೆ ಸೆಳೆಯುವುದು. ಆದರೆ ಇವು ಯಾವುದೂ ಸಿ.ಎಸ್.ಎಲ್.ಸಿಯ ಸಂಶೋಧನಾ ವಿಷಯಕ್ಕೆ ಸೀಮಿತವಾಗಿಲ್ಲ ಮತ್ತು ಇದು ಕೇವಲ ನಮ್ಮ ವಾದವನ್ನು ಒಪ್ಪುವವರಿಗೆ ಮಾತ್ರವೇ ವೇದಿಕೆಯಲ್ಲ. ನಮ್ಮ ವಾದ ತಪ್ಪು ಎಂದು ತೋರಿಸಲು ಇಚ್ಛಿಸುವವರೂ ಸಹ ಇದೇ ವೇದಿಕೆಯನ್ನು ಬಳಸಬಹುದು. ಅದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ.

ಅಕಾಡೆಮಿಕ್ ಚರ್ಚೆಗಳಲ್ಲಿ ಸಂಶೋಧಕರು ತಮ್ಮ ತಮ್ಮ ವಾದಗಳನ್ನು ಮಂಡಿಸುವಾಗ ತಮಗೆ ಈ ಸಮಾಜದ ಒಳಿತಿನ ಬಗ್ಗೆ ಎಷ್ಟು ಕಾಳಜಿ ಇದೆಯೋ ತಮ್ಮನ್ನು ವಿರೋಧಿಸುವವರಿಗೂ ಅಷ್ಟೇ ಕಾಳಜಿ ಇರಬಹುದು ಎಂಬ ಗೌರವವಿರಬೇಕು. ಅದನ್ನು ಬಿಟ್ಟು, ಸಾಂಸ್ಕೃತಿಕ ಅಧಿಕಾರ ರಾಜಕಾರಣಕ್ಕಾಗಿಯೋ, ಇಲ್ಲವೇ ಹಣ ಕಾಸಿನ ನೆರವಿನ ಆಸೆ ಮತ್ತು ವಿದೇಶೀ ಪ್ರವಾಸದ ಆಮಿಷಗಳಿಗಾಗಿಯೋ ಸಂಶೋಧನೆಯಲ್ಲಿ ತೊಡಗಿರುವವರೆಂದು ಅಪಾದಿಸುವುದು ಅಕಾಡೆಮಿಕ್ ಚರ್ಚೆಯ ಘನತೆಗೆ ತಕ್ಕುದ್ದಲ್ಲ.

ಇಲ್ಲಿ ಮುಖ್ಯವಾಗಬೇಕಿರುವುದು ಇಂದು ಸಮಾಜ ವಿಜ್ಞಾನವು ಸಂಪೂರ್ಣವಾಗಿ ಕಡೆಗಣಿತವಾಗಿ ಈ ವಿಷಯಗಳಲ್ಲಿ ಸಂಶೋಧನೆಗೆ ಯಾವುದೇ ನೆರವು ಬೆಂಬಲ ದೊರೆಯದಿರುವ ಈ ಸಂಧರ್ಭದಲ್ಲಿ ಈ ರೀತಿಯ ಅಕಾಡೆಮಿಯ ಸ್ಥಾಪನೆಗೆ ಮುಂದಾಗಿರುವ ಕುವೆಂಪು ವಿ.ವಿ. ಮತ್ತು ಪ್ರೊ.ಜೆ.ಎಸ್.ಸದಾನಂದರ ಪ್ರಯತ್ನ ಶ್ಲಾಘನೀಯ ಎಂಬುದನ್ನು ಗುರುತಿಸಬೇಕು. ಹಾಗೆಯೇ ಇದರ ಸ್ಥಾಪನೆಯ ಕುರಿತ ಪ್ರಸ್ತಾವನೆಯನ್ನು ಗೌಪ್ಯಾವಾಗಿಯೇನೂ ಮಾಡುತ್ತಿಲ್ಲವಲ್ಲ. ನೀವೇ ಉಲ್ಲೇಖಿಸಿರುವಂತೆ ವಿ.ವಿ.ಯ ಎಲ್ಲಾ ವಿಭಾಗದ ಮುಖ್ಯಸ್ಥರಲ್ಲದೆ ಕರ್ನಾಟಕದ ಉಳಿದ ವಿ.ವಿ.ಯ ಪ್ರಾಧ್ಯಾಪಕರು ಮತ್ತು ಡೀನ್‌ರುಗಳ ಸಭೆಯನ್ನೂ ಕರೆದು ಅವರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. ಹಾಗೆಯೇ ಈ ಕುರಿತು ಅಂತರ್ ವಿಶ್ವವಿದ್ಯಾನಿಲಯ ಮಂಡಳಿಯಲ್ಲೂ ಚರ್ಚೆಯಾಗುತ್ತಿದೆ. ಈ ಚರ್ಚೆಗಳೆಲ್ಲಾ ಮುಗಿದು, ಪ್ರಸ್ತಾವನೆ ಸಲ್ಲಿಕೆಯಾಗಿ, ಎಲ್ಲಾ ವಿಶ್ವ ವಿದ್ಯಾಲಯಗಳ ಸಮಾಜ ವಿಜ್ಞಾನ ಮತ್ತು ಮಾನವಿಕಗಳ ಪ್ರಾಧ್ಯಾಪಕರುಗಳ ಉನ್ನತ ಮಟ್ಟದ ಸಮಿತಿ ರಚನೆಯಾಗಿ, ಅದರ ನೇತೃತ್ವದಲ್ಲಿ ಅಕಾಡೆಮಿ ಅಸ್ತಿತ್ವಕ್ಕೆ ಬರುತ್ತದೆ. ಅಲ್ಲದೆ ಸಿ.ಎಸ್.ಎಲ್.ಸಿ.ಯೇ ಅಕಾಡೆಮಿಯಾಗಿ ಏನೂ ಪರಿವರ್ತನೆಯಾಗುವುದಿಲ್ಲ. ಅದು ಪ್ರತ್ಯೇಕವಾದ ಸಂಶೋಧನಾ ಸಂಸ್ಥೆಯಾಗಿಯೇ ಮುಂದುವರಿಯುತ್ತದೆ.

ನಮ್ಮ ಕೇಂದ್ರದಲ್ಲಿ ಇದುವರೆಗೂ ಏನು ನಡೆಯುತ್ತಿದೆ ಎಂಬುದು ಹೊರಗಿನ ಪ್ರಪಂಚಕ್ಕೆ ಏನೂ ತಿಳಿದಿಲ್ಲ, ಗೌಪ್ಯವಾಗಿಯೇ ಎಲ್ಲಾ ನಡೆಯುತ್ತಿದೆ ಎಂಬ ಗುಮಾನಿಯೂ ಆಧಾರರಹಿತ. ಏಕೆಂದರೆ, ನಮ್ಮ ಕೇಂದ್ರದೊಳಗಿನ ಮತ್ತು ಹೊರಗಿನ ಸಂಶೋಧಕರ ನಡುವಿನ ಚರ್ಚೆಗಳು ಮುಕ್ತವಾಗಿ ಅಂತರ್ಜಾಲದಲ್ಲಿ ಲಭ್ಯವಿದೆ. ಅಲ್ಲದೆ ನಮ್ಮ ಕೇಂದ್ರದವರ ಎಲ್ಲಾ ಲೇಖನಗಳು ಮತ್ತು ಬಾಲಗಂಗಾಧರ ಮತ್ತು ಅವರ ಬೆಲ್ಜಿಯಂ ಕೇಂದ್ರದ ಎಲ್ಲಾ ಸಂಶೋಧಕರ ಅಷ್ಟೂ ಲೇಖನಗಳೂ ಅಂತರ್ಜಾಲದಲ್ಲಿ ಕಳೆದ ಎರಡು-ಮೂರು ವರ್ಷಗಳಿಂದಲೂ ಲಭ್ಯವಿವೆ. ಆಸಕ್ತರು ಚರ್ಚೆಯ ವಿವರಗಳಿಗೆ ಮತ್ತು ಲೇಖನಗಳಿಗೆ ಈ ವೆಬ್‌ಸೈಟ್‌ಗಳ ವಿಳಾಸಗಳಿಗೆ ಭೇಟಿನೀಡಬಹುದು. ಅವುಗಳ ವಿಳಾಸ:

http://www.devhas.org/forum/index.php

http://groups.yahoo.com/group/TheHeathenInHisBlindness/

http://www.cultuurwetenschap.be/

http://www.baylu.blogspot.com/

ಕೊನೆಯದಾಗಿ ಒಂದು ಮಾತು. ಅಕಾಡೆಮಿಕ್ ಚರ್ಚೆಗಳಲ್ಲಿ ಸಂಶೋಧಕರು ತಮ್ಮ ತಮ್ಮ ವಾದಗಳನ್ನು ಮಂಡಿಸುವಾಗ ತಮಗೆ ಈ ಸಮಾಜದ ಒಳಿತಿನ ಬಗ್ಗೆ ಎಷ್ಟು ಕಾಳಜಿ ಇದೆಯೋ ತಮ್ಮನ್ನು ವಿರೋಧಿಸುವವರಿಗೂ ಅಷ್ಟೇ ಕಾಳಜಿ ಇರಬಹುದು ಎಂಬ ಗೌರವವಿರಬೇಕು. ಅದನ್ನು ಬಿಟ್ಟು, ತಾವು ಮಾತ್ರ ಉದಾತ್ತ ಧ್ಯೇಯಗಳಿಗಾಗಿ ಹೋರಾಡುವವರೆಂದೂ; ಉಳಿದವರು ಸಾಂಸ್ಕೃತಿಕ ಅಧಿಕಾರ ರಾಜಕಾರಣಕ್ಕಾಗಿಯೋ, ಇಲ್ಲವೇ ಹಣಕಾಸಿನ ನೆರವಿನ ಆಸೆ ಮತ್ತು ವಿದೇಶೀ ಪ್ರವಾಸದ ಆಮಿಷಗಳಿಗಾಗಿಯೋ ಸಂಶೋಧನೆಯಲ್ಲಿ ತೊಡಗಿರುವವರೆಂದು ಅಪಾದಿಸುವುದು; ಮತ್ತು ಅವರು ತಮ್ಮ ಸಂಶೋಧನೆಯ ಹಿಂದೆ ಈ ಸಮಾಜವನ್ನು ನಾಶಮಾಡುವ ಯಾವುದೋ ಗುಪ್ತ ಅಜೆಂಡಾ ಹೊಂದಿದ್ದಾರೆ ಎಂಬ ಗುಮಾನಿಯ ಪ್ರತಿಕ್ರಿಯೆ ನೀಡುವುದು ಒಂದು ಅಕಾಡೆಮಿಕ್ ಚರ್ಚೆಯ ಘನತೆಗೆ ತಕ್ಕುದ್ದಲ್ಲ. ಆ ರೀತಿಯ ಆಪಾದನೆ ಮಾಡುವ ಮೂಲಕ ಅವರು ಪರೋಕ್ಷವಾಗಿ ತಮ್ಮ ಸಂಶೋಧನೆಯ ಬದ್ಧತೆಯ ಕುರಿತು ಕೂಡ ಅದೇ ರೀತಿಯ ಗುಮಾನಿಗೆ ಅವಕಾಶ ಮಾಡಿಕೊಳ್ಳುತ್ತಾರೆ. ಏಕೆಂದರೆ ಇವರ ವಿರೋಧಿಗಳು ಒಂದು ಕಡೆಯ ಅಧಿಕಾರ, ಹಣ ಆಮಿಷಗಳಿಗಾಗಿ ಸಂಶೋಧನೆ ಮಾಡುತ್ತಿದ್ದಾರೆ ಎಂದು ಇವರು ದೂರಬಹುದು. ಆಗ ಇವರು ಇನ್ಯಾರ ಕಡೆಯವರ ಅಧಿಕಾರ, ಹಣ, ಆಮಿಷಗಳಿಗಾಗಿ ಸಂಶೋಧನೆ ಮಾಡುತ್ತಿದ್ದಾರೆ ಎಂಬ ಗುಮಾನಿಯನ್ನೂ ಓದುಗರು ಮತ್ತು ಸಾರ್ವಜನಿಕರಲ್ಲಿ ಬಿತ್ತುತ್ತಾರೆ. ಆ ಮೂಲಕ ಸಾಮಾಜಿಕ ಸಂಶೋಧನೆಗಳೆಂದರೆ ಈ ರೀತಿಯ ಆಮಿಷಗಳಿಗಾಗಿ ಮಾಡುವುದು ಎಂಬ ತಿಳುವಳಿಕೆಯನ್ನು ಹರಡಿದಂತಾಗುತ್ತದೆ. ಅಲ್ಲದೆ ತಮ್ಮನ್ನು ಕೂಡ ಅದೇ ಗುಂಡಿಯಲ್ಲಿಯೇ ಬೀಳಿಸಿಕೊಳ್ಳುತ್ತಾರೆ. ಈ ರೀತಿಯ ವೈಯುಕ್ತಿಕ ಬದ್ಧತೆಯ ಬಗೆಗಿನ ಆಪಾದನೆಗಳು 'ಅಕಾಡೆಮಿಕ್ ಭಯೋತ್ಪಾದನೆ' ಎನಿಸಿಕೊಳ್ಳುತ್ತದೆಯೇ ವಿನಹ ಗಂಭೀರ ಚರ್ಚೆ ಎನಿಸಿಕೊಳ್ಳುವುದಿಲ್ಲ. ಡಾ.ಶ್ರೀಧರರಂತಹವರ ಸಾಮಾಜಿಕ ಕಳಕಳಿ ಮತ್ತು ಹೋರಾಟಗಳ ಬಗ್ಗೆ ನನಗೆ ವೈಯುಕ್ತಿಕವಾಗಿ ಅಪಾರ ಗೌರವವಿದೆ (ಏಕೆಂದರೆ ಕೆಲವೇ ವರ್ಷಗಳ ಹಿಂದೆ ನಾನೂ ಓರ್ವ ಕಟ್ಟಾ ಸೆಕ್ಯುಲರ್‌ವಾದಿಯಾಗಿದ್ದೆ ಮತ್ತು ಈ ವಾದ ಮತ್ತು ಅಂಬೇಡ್ಕರ್‌ವಾದ ಬಿತ್ತಿದ ಸಾಮಾಜಿಕ ಕಾಳಜಿಯೇ ನನ್ನನ್ನು ಸಾಮಾಜಿಕ ಸಂಶೋಧನೆಯೆಡೆಗೆ ಎಳೆ ತಂದಿದೆ ಎಂಬುದನ್ನು ನಾನು ಮರೆತಿಲ್ಲ). ಹಾಗಾಗಿ ಇಲ್ಲಿ ವಿಚಾರ ಗಳ ತಾತ್ವಿಕ ಚರ್ಚೆಗೆ ಮಹತ್ವ ನೀಡಿದರೆ ಅದೇ ನಮ್ಮ ನಮ್ಮ ಸಂಶೋಧನೆಗಳಿಗೆ ನಾವು ಕೊಟ್ಟುಕೊಳ್ಳುವ ಗೌರವ, ಮತ್ತು ಇದು ಇಡೀ ಸಾಮಾಜಿಕ ಸಂಶೋಧನೆಯ ಘನತೆಯನ್ನು ಎತ್ತಿಹಿಡಿಯುತ್ತದೆ ಎಂಬುದು ನನ್ನ ನಮ್ರ ಅನಿಸಿಕೆ. □

ಅಮೆರಿಕದ ಸಾಹಿತ್ಯ ಇತಿಹಾಸದಲ್ಲಿ ಕಪ್ಪು ಜನರ ಕಾವ್ಯ ಮತ್ತು ಸಂಗೀತ ಪರಸ್ಪರ ಹೆಗಲಿಗೆ ಕೈ ಹಾಕಿಯೇ ನಡೆದಿವೆ. ಆಫ್ರಿಕಾದ ನೀಗ್ರೋಗಳು ಬಿಳಿಯರಿಗಿಂತ ಕೀಳಾದವರು, ವೈಚಾರಿಕವಾಗಿ ಏನನ್ನೂ ಕಲಿಯಲು ಹಾಗೂ ಆಲೋಚಿಸಲೂ ಸಾಧ್ಯವಿಲ್ಲವೆಂಬುದು ಯೂರೋಪಿಯನ್ನರ ನಂಬಿಕೆಯಾಗಿತ್ತು. ಹಾಗಾಗಿಯೇ ಅವರನ್ನು ಹಡಗುಗಳಲ್ಲಿ ದನಗಳಂತೆ ತುಂಬಿತಂದು ಗುಲಾಮರನ್ನಾಗಿ ಮಾರಾಟಮಾಡುತ್ತಿದ್ದರು.

ಹದಿನೆಂಟನೇ ಶತಮಾನದಲ್ಲಿ ಗುಲಾಮರ ಬಿರುಸಿನ ಮಾರಾಟ ನಡೆಯುತ್ತಿರುವಂತೆಯೇ ಗುಲಾಮರಾಗಿ ಹುಟ್ಟಿದ ಲೂಸಿ ಟೆರ್ರಿ, ಜ್ಯೂಪಿಟರ್ ಹ್ಯಾಮನ್, ಫಿಲ್ಲಿಸ್ ವೀಟ್ಲೆ ಮುಂತಾದವರು ಕಾವ್ಯ ರಚನೆಯಲ್ಲಿ ತೊಡಗಿದ್ದರು. ಲೂಸಿ ಟೆರ್ರಿಯನ್ನು ಇಂಗ್ಲಿಷಿನಲ್ಲಿ ಬರೆದ ಮೊಟ್ಟಮೊದಲ ಆಫ್ರಿಕನ್ ಗುಲಾಮ ಕವಿಯೆಂದು ಗುರುತಿಸಲಾಗುತ್ತದೆ. ಆತ 'ಬಾರ್ಸ್ ಫೈಟ್' ಎನ್ನುವ ಪದ್ಯವನ್ನು ೧೭೪೬ಕ್ಕೇ ರಚಿಸಿದ್ದ. ಆದರೆ ಪದ್ಯವನ್ನು ಪ್ರಕಟಿಸಿದ ಆಫ್ರಿಕನ್ ಮೂಲದ ಮೊದಲ ಕವಿಯೆಂದರೆ ಜ್ಯೂಪಿಟರ್ ಹ್ಯಾಮನ್. ಆತನ 'ಅನ್ ಈವನಿಂಗ್ ಥಾಟ್: ಸಾಲ್ವೇಶನ್ ಬೈ ಕ್ರೈಸ್ಟ್....' ಎನ್ನುವ ಪದ್ಯ ೧೭೬೦ರಲ್ಲಿ ಪ್ರಕಟವಾಯಿತು. ಫಿಲ್ಲಿಸ್ ವೀಟ್ಲೆ ೧೭೭೩ರಲ್ಲಿ ಮೊದಲ ಸಂಕಲನವನ್ನು ತಂದ ಕವಿ. ಅಂದಿನಿಂದ ಇಂದಿನವರೆಗೂ ಕಪ್ಪು ಕಾವ್ಯ ನಿರಂತರವಾಗಿ ಹರಿದುಬಂದಿದೆ. ಅಮಾನುಷ ಗುಲಾಮಗಿರಿಯ ವಿರುದ್ಧ ದನಿಯಾದ ಕಾವ್ಯ ತನ್ನ ಪಯಣದ ಹಾದಿಯಲ್ಲಿ ಕ್ರೈಸ್ತಮತವನ್ನೊಳಗೊಂಡಂತೆ ಹತ್ತು ಹಲವು ಪ್ರಭಾವಗೊಳಗಾಗಿದೆ. ಅವೆಲ್ಲವುಗಳನ್ನು ಮೀರಿದಂತೆ ಕಪ್ಪು ಜನರ ಕಾವ್ಯದ ಆಳದಲ್ಲಿ ನೋವು, ಹತಾಶೆ, ಸಮಾನತೆಗಾಗಿ ತವಕ, ಬದುಕಿನ ಪ್ರೀತಿ, ರೋಷ, ಸ್ವಾಭಿಮಾನಗಳು ಮಡುಗಟ್ಟಿ ನಿಂತಿವೆ.

ಕಪ್ಪು ಸಂಹಿತೆ.

ಭರವಸೆಯೆಂಬುದು ನಲುಗಿದ ಕಾಂಡ
ಬಿಗಿ ಮುಷ್ಟಿಯಲಿ.
ಭರವಸೆಯೆಂಬುದು ಕಲ್ಲಿನ ಹೊಡೆತಕ್ಕೆ
ಕತ್ತರಿಸಿದ ಹಕ್ಕಿಯ ರೆಕ್ಕೆ.
ಭರವಸೆಯೆಂಬುದು
ವ್ಯಾಕರಣ ಛಿದ್ರತೆಯ ಪದರಾಶಿಯಲ್ಲೊಂದು ಪದವಷ್ಟೆ–
ಗಾಳಿಯೊಂದಿಗೆ ಪಿಸುಗುಟ್ಟಿದ ಪಿಸುಮಾತಷ್ಟೆ.
ನಲವತ್ತು ಎಕರೆಯ ಸ್ವಂತ ಭೂಮಿ
ಉಳಲೊಂದು ಜೊತೆ ಎತ್ತಿನ ಕನಸು
ನನ್ನದೇ ಪುಟ್ಟ ಮನೆಯೊಂದು
ದುಡಿದ ದೇಹವ ಸಂತೈಸುವ ರಜಾದಿನಗಳು ಬೇಡವೆ?
ನನ್ನ ಮಕ್ಕಳಿಗೊಂದು ಸೂರು, ಅವರಿಗೆ ಅವರದೇ ಹೆಸರು
ಮುಂದೊಂದು ದಿನ ಅಂಗಳದಲ್ಲಾಡುವ ಮೊಮಕ್ಕಳು...
ಭರವಸೆಯೆಂಬುದು ಗದ್ಗತ ಗಂಟಲ ದನಿಯಾಡದ ಹಾಡು.

ನನಗೂ ಭರವಸೆಯ ಹಾಡು ನೀಡು
ಅದನ್ನು ಹಾಡಲೊಂದು ಜಗವನ್ನೂ ಸಹ
ವಿಶ್ವಾಸದ ಹಾಡೊಂದು ನೀಡು ನನಗೆ
ಜೊತೆಗೆ ಅದನ್ನು ನಂಬುವ ಜನರನ್ನೂ ಸಹ ಕರುಣೆಯ
ಹಾಡೊಂದು ನೀಡು
ಅದರಂತೆ ಬದುಕಲು ದೇಶವೊಂದನ್ನೂ ಸಹ
ಭರವಸೆಯ ಹಾಗೂ ಪ್ರೀತಿಯ ಹಾಡೊಂದು ನೀಡು
ಅದನ್ನು ಕೇಳಲು ಕಂದು ಹುಡುಗಿಯೊಬ್ಬಳ ಹೃದಯವನ್ನೂ ಸಹ.

ಮೂಲ: ಪೌಲಿ ಮುರ್ರೆ
ಕನ್ನಡಕ್ಕೆ: ಡಾ॥ ಜೆ. ಬಾಲಕೃಷ್ಣ



> **ಜಮ್ಮು ಕಾಶ್ಮೀರದ ಕಾಂಗ್ರೆಸ್-ಪಿ.ಡಿ.ಪಿ ಸಮ್ಮಿಶ್ರ ಸರ್ಕಾರವು ೩೯.೮೮ ಹೆಕ್ಟೇರ್ ಅರಣ್ಯ ಭೂಮಿಯನ್ನು ಶ್ರೀ ಅಮರನಾಥ್ ದೇವಸ್ಥಾನ ಸಮಿತಿಗೆ ನೀಡಲು ನಿರ್ಧರಿಸಿದ್ದು ನಂತರ ತನ್ನ ಕಾಶ್ಮೀರದಲ್ಲಿನ ಪ್ರತಿಭಟನೆಗೆ ಮಣಿದು ತನ್ನ ಆದೇಶವನ್ನು ಹಿಂಪಡೆದದ್ದು ಪ್ರಸ್ತುತ ಗಲಭೆಗಳಿಗೆ ಪ್ರಮುಖ ಕಾರಣವಾಗಿದೆ. ಹಿಂದೂಗಳು ಹೆಚ್ಚಿರುವ ಜಮ್ಮು ಪ್ರಾಂತ್ಯ ಮತ್ತು ಹೆಚ್ಚು ಮುಸ್ಲಿಮರನ್ನು ಹೊಂದಿರುವ ಕಾಶ್ಮೀರ ಪ್ರಾಂತ್ಯಗಳ ನಡುವೆ ಪ್ರಾರಂಭವಾಗಿರುವ ಸಂಘರ್ಷ ಪರಾಕಾಷ್ಟೆ ತಲುಪಿದೆ. ಇಲ್ಲಿ ಮತೀಯ ಹಾಗೂ ಸಾಮುದಾಯಿಕ ಅಸ್ಮಿತೆಗಳು ಧಾರ್ಮಿಕ ನೆಲೆಗಟ್ಟಿನಲ್ಲೇ ವ್ಯಕ್ತವಾಗುತ್ತಿರುವುದು ಸ್ಪಷ್ಟವಾಗುತ್ತಿದೆ. ಕಾಶ್ಮೀರದ ರಾಷ್ಟ್ರೀಯವಾದಿಗಳು ಮತ್ತು ಹಿಂದುತ್ವವಾದಿಗಳು, ಕೋಮುವಾದಿಗಳೆಂಬ ಆರೋಪದಿಂದ ತಪ್ಪಿಸಿಕೊಳ್ಳಲು ಈ ಅಂಶವನ್ನು ಒಪ್ಪದೆ ಇರಬಹುದು ಕಾಶ್ಮೀರದ ಕಣಿವೆಗಳಲ್ಲಿ ಈ ಭಾವನೆ ದಟ್ಟವಾಗಿ ಹಬ್ಬಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.**

ನಾ ದಿವಾಕರ

ಕಾಶ್ಮೀರ: ಆರದ ಹೊಗೆ

ಪ್ರಾ[illegible] [illegible] ಉಲ್ಬಣಗೊಳ್ಳುತ್ತಿರುವ [illegible] [illegible] ಸಾಮಾಜಿಕ ಆರ್ಥಿಕ ಸ್ಥಿತ್ಯಂತರಗಳನ್ನು ಸಮಗ್ರವಾಗಿ ಪರಿಶೀಲಿಸಿ, ನಿಷ್ಪಕ್ಷಪಾತ ವಿಶ್ಲೇಷಣೆ ಮಾಡಿ, ಪ್ರಜಾತಾಂತ್ರಿಕ ಪರಿಹಾರಗಳನ್ನು ಸೂಚಿಸುವುದು ಯಾವುದೇ ಜವಾಬ್ದಾರಿಯುತ ಸರ್ಕಾರದ ನೈತಿಕ ಕರ್ತವ್ಯವಾಗಿರುತ್ತದೆ. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಸಮತೋಲನಗಳನ್ನು ನಿವಾರಿಸಲು ಜನಾಭಿಪ್ರಾಯಕ್ಕೆ ಮನ್ನಣೆ ನೀಡುವುದೂ ಅವಶ್ಯವಾಗಿರುತ್ತದೆ. ಸಾಮಾನ್ಯ ಜನತೆಯ ಸಂವೇದನೆಗಳನ್ನು ನಿರ್ಲಕ್ಷಿಸುವುದರಿಂದ ಸಮಾಜದಲ್ಲಿ ಕ್ಷೋಭೆ ಹೆಚ್ಚಾಗುವುದೇ ಅಲ್ಲದೆ ಸಮಾಜ ಘಾತುಕ ಶಕ್ತಿಗಳಿಗೆ ಕುಮ್ಮಕ್ಕು ನೀಡಿದಂತಾಗುತ್ತದೆ. ಜಮ್ಮು ಕಾಶ್ಮೀರದಲ್ಲಿ ದಿನೇ ದಿನೇ ಹೆಚ್ಚಾಗುತ್ತಿರುವ ಸಂಘರ್ಷ ಮತ್ತು ಹಿಂಸಾತ್ಮಕ ಹೋರಾಟಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೈಫಲ್ಯವನ್ನು ಮಾತ್ರವಲ್ಲದೆ ಭಾರತದ ಪ್ರಜಾತಾಂತ್ರಿಕ ವ್ಯವಸ್ಥೆಯ ಹಲವು ನ್ಯೂನತೆಗಳನ್ನೂ ಬಹಿರಂಗಪಡಿಸಿದೆ. ಸಾಮಾನ್ಯ ಜನತೆಗೆ ಸೂಕ್ಷ್ಮವಾಗಿ ಕಂಡುಬರುವ ಸಂಕೀರ್ಣ ಸಮಸ್ಯೆಗಳು ರಾಜಕೀಯ ಪಕ್ಷಗಳಿಗೆ ಚುನಾವಣಾ ರಾಜಕಾರಣದ ಮೂಲ ಬಂಡವಾಳವಾಗಿ ಪರಿಣಮಿಸಿದಲ್ಲಿ ಪರಿಸ್ಥಿತಿ ಏನಾಗಬಹುದು ಎಂಬುದಕ್ಕೆ ಪ್ರಸ್ತುತ ಅಮರನಾಥ ವಿವಾದ ಅತ್ಯುತ್ತಮ ನಿದರ್ಶನವಾಗಿದೆ.

ಜಮ್ಮು ಕಾಶ್ಮೀರದ ಕಾಂಗ್ರೆಸ್–ಪಿ.ಡಿ.ಪಿ ಸಮ್ಮಿಶ್ರ ಸರ್ಕಾರವು 39.88 ಹೆಕ್ಟೇರ್ ಅರಣ್ಯ ಭೂಮಿಯನ್ನು ಶ್ರೀ ಅಮರನಾಥ್ ದೇವಸ್ಥಾನ ಸಮಿತಿಗೆ ನೀಡಲು ನಿರ್ಧರಿಸಿದ್ದು ನಂತರ ತನ್ನ ಕಾಶ್ಮೀರದಲ್ಲಿನ ಪ್ರತಿಭಟನೆಗೆ ಮಣಿದು ತನ್ನ ಆದೇಶವನ್ನು ಹಿಂಪಡೆದದ್ದು ಪ್ರಸ್ತುತ ಗಲಭೆಗಳಿಗೆ ಪ್ರಮುಖ ಕಾರಣವಾಗಿದೆ. ಹಿಂದೂಗಳು ಬಹುಸಂಖ್ಯೆಯಲ್ಲಿರುವ ಜಮ್ಮು ಪ್ರಾಂತ್ಯ ಮತ್ತು ಹೆಚ್ಚು ಮುಸ್ಲಿಮರನ್ನು ಹೊಂದಿರುವ ಕಾಶ್ಮೀರ ಪ್ರಾಂತ್ಯಗಳ ನಡುವೆ ಪ್ರಾರಂಭವಾಗಿರುವ ಸಂಘರ್ಷ ಪರಾಕಾಷ್ಟೆ ತಲುಪಿದೆ. ಇಲ್ಲಿ ಮತೀಯ ಹಾಗೂ ಸಾಮುದಾಯಿಕ ಅಸ್ಮಿತೆಗಳು ಧಾರ್ಮಿಕ ನೆಲೆಗಟ್ಟಿನಲ್ಲೇ ವ್ಯಕ್ತವಾಗುತ್ತಿರುವುದು ಸ್ಪಷ್ಟವಾಗುತ್ತಿದೆ. ಕಾಶ್ಮೀರದ ರಾಷ್ಟ್ರೀಯವಾದಿಗಳು ಮತ್ತು ಹಿಂದುತ್ವವಾದಿಗಳು, ಕೋಮುವಾದಿಗಳೆಂಬ ಆರೋಪದಿಂದ ತಪ್ಪಿಸಿಕೊಳ್ಳಲು ಈ ಅಂಶವನ್ನು ಒಪ್ಪದೆ ಇರಬಹುದು ಆದರೆ ಕಾಶ್ಮೀರದ ಕಣಿವೆಗಳಲ್ಲಿ ಈ ಭಾವನೆ ದಟ್ಟವಾಗಿ ಹಬ್ಬಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಭೂವಿವಾದದ ಹಿನ್ನೆಲೆ

39.88 ಹೆಕ್ಟೇರ್ ಅರಣ್ಯ ಭೂಮಿಯನ್ನು ಅಮರನಾಥ ದೇವಾಲಯ ಸಮಿತಿಗೆ ನೀಡುವ ಸರ್ಕಾರದ ತೀರ್ಮಾನವೇ ವಿವಾದಾಸ್ಪದವಾಗಿದ್ದು, ಕಾಶ್ಮೀರ ಸಮಸ್ಯೆಯ ಇತ್ಯರ್ಥಕ್ಕೆ ಈ ಪ್ರದೇಶದ ಜನಸಾಂದ್ರತೆ ಹಾಗೂ ಸಂಸ್ಕೃತಿಯನ್ನು ಬದಲಾಯಿಸುವುದು ಉತ್ತಮ ಪರಿಹಾರವಾಗಬಹುದು ಎಂಬ ಸರ್ಕಾರದ ಅಧಿಕೃತ ನಿಲುವು ಇಡೀ ಪ್ರಕರಣಕ್ಕೆ ತಿರುವು ನೀಡಿದೆ. ನಂತರದಲ್ಲಿ ಸರ್ಕಾರವು ತನ್ನ ನಿರ್ಧಾರವನ್ನು ಹಿಂತೆಗೆದುಕೊಂಡರೂ, ಕಾಶ್ಮೀರ ಜನತೆಯಲ್ಲಿ ಸುಪ್ತವಾಗಿದ್ದ ಆಕ್ರೋಶ ಸ್ಫೋಟಗೊಳ್ಳಲು ಸರ್ಕಾರದ ಈ ನಿರ್ಧಾರ ಪೂರಕವಾಗಿತ್ತು. ಅರಣ್ಯ ಭೂಮಿಯನ್ನು ಅಮರನಾಥ ದೇವಾಲಯ ಸಮಿತಿಗೆ ನೀಡಿ ಪುನಃ ಹಿಂದಕ್ಕೆ ಪಡೆದ ಸರ್ಕಾರದ ತೀರ್ಮಾನ ಹಿಂದೂ ವಿರೋಧಿಕ್ರಮ ಎಂಬ ಭಾಜಪ ಮತ್ತು ಸಂಘ ಪರಿವಾರದ ವಾದ ಹುರುಳಿಲ್ಲದ್ದು. ಕಳೆದ ಹಲವು ದಶಕಗಳಿಂದಲೂ ಅಮರನಾಥ ಯಾತ್ರಿಗಳಿಗೆ ಈ ಅರಣ್ಯ ಪ್ರದೇಶದಲ್ಲೇ ಸೌಕರ್ಯಗಳನ್ನು ಏರ್ಪಡಿಸಲಾಗುತ್ತಿತ್ತು. ಪ್ರಸ್ತುತ ವಿವಾದಕ್ಕೊಳಗಾಗಿರುವ 39.88 ಹೆಕ್ಟೇರ್ ಭೂಮಿ ಅರಣ್ಯ ಇಲಾಖೆಗೆ ಸೇರಿದ್ದು, ಪ್ರತಿ ವರ್ಷ ಅಮರನಾಥ ಯಾತ್ರೆಯ

ಸಂದರ್ಭದಲ್ಲಿ ಸ್ಥಳೀಯ ಮುಸ್ಲಿಮರು ಯಾತ್ರಿಗಳಿಗೆ ಎಲ್ಲಾ ರೀತಿಯ ಸಹಕಾರವನ್ನೂ ನೀಡುತ್ತಲೇ ಬಂದಿದ್ದಾರೆ. 2005ರಲ್ಲಿ ಉಚ್ಚ ನ್ಯಾಯಾಲಯವು ಅಮರನಾಥ ಯಾತ್ರೆಯ ಸಂದರ್ಭದಲ್ಲಿ ಈ ವಿವಾದಿತ ಪ್ರದೇಶದಲ್ಲಿ ಯಾತ್ರಿಗಳ ಸೌಕರ್ಯಕ್ಕಾಗಿ ತಾತ್ಕಾಲಿಕ ನಿರ್ಮಾಣ ಕಾರ್ಯ ಕೈಗೊಳ್ಳಲು ಆದೇಶಿಸಿದಾಗಲೂ, ಸ್ಥಳೀಯ ಮುಸ್ಲಿಮರಿಂದ ಯಾವುದೇ ಪ್ರತಿಭಟನೆ ವ್ಯಕ್ತವಾಗಿರಲಿಲ್ಲ.

ಕಳೆದ ಹಲವು ದಶಕಗಳಿಂದ ಅಮರನಾಥ ಯಾತ್ರಿಗಳಿಗೆ ಆಶ್ರಯ ಒದಗಿಸುತ್ತಿದ್ದ ಈ ಭೂ ಪ್ರದೇಶದಲ್ಲಿ ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿದ್ದರೂ ಇದು ಯಾವುದೇ ವಿವಾದಗಳನ್ನು ಸೃಷ್ಟಿಸಿರಲಿಲ್ಲ. ಸರ್ಕಾರದ ಈ ಕ್ರಮಕ್ಕೂ ತನ್ನದೇ ಆದ ಇತಿಹಾಸವಿದೆ. ಭಾರತದಲ್ಲಿ ಅತ್ಯಂತ ಹೆಚ್ಚು ಯಾತ್ರಾರ್ಥಿಗಳನ್ನು ಆಕರ್ಷಿಸುವ ದೇವಾಲಯಗಳಲ್ಲಿ ಅಮರನಾಥ ದೇವಾಲಯವೂ ಒಂದು. ಈ ದೇವಾಲಯದಲ್ಲಿ ವರ್ಷಕ್ಕೊಮ್ಮೆ ಗುಹೆಯೊಂದರಲ್ಲಿ ಉದ್ಭವಿಸುವ ಹಿಮಾಚ್ಛಾದಿತ ಲಿಂಗಕ್ಕೆ ಪೂಜೆ ಸಲ್ಲಿಸಲು ಲಕ್ಷಾಂತರ ಜನ ಬರುತ್ತಾರೆ. ಈ ಲಿಂಗವನ್ನು ಪ್ರಥಮ ಬಾರಿಗೆ ಕಂಡು ಹಿಡಿದದ್ದೂ ಮುಸ್ಲಿಮರೇ ಎಂಬುದು ವಿಶೇಷ ಅಂಶ. 1989ರಲ್ಲಿ 12 ಸಾವಿರದಷ್ಟಿದ್ದ ಯಾತ್ರಾರ್ಥಿಗಳ ಸಂಖ್ಯೆ 2007ರಲ್ಲಿ 4 ಲಕ್ಷ ಮುಟ್ಟಿದೆ. ಇಲ್ಲಿಗೆ ಬರುವ ಯಾತ್ರಾರ್ಥಿಗಳಿಗೆ ಸಕಲ ಸೌಕರ್ಯಗಳನ್ನೂ ಒದಗಿಸಲು ದಾರಿಯುದ್ದಕ್ಕೂ ಅನೇಕ ನೆರವು ತಾಣಗಳನ್ನು ನಿರ್ಮಿಸಲಾಗುತ್ತದೆ. ಈ ಪ್ರದೇಶದಲ್ಲಿ ಮುಸ್ಲಿಮರೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಈ ನೆರವಿನ ತಾಣಗಳನ್ನು ಮುಸ್ಲಿಮರೇ ನಿರ್ವಹಿಸುವುದೂ ಉಂಟು.

ಆದರೆ ಭಾರತದ ಯಾವುದೇ ಯಾತ್ರಾ ಸ್ಥಳಗಳಲ್ಲಿ ಯಾತ್ರಾರ್ಥಿಗಳು ಕ್ರಮಿಸುವ ಮಾರ್ಗದಲ್ಲಿನ ಭೂ ಪ್ರದೇಶವನ್ನು ಯಾವುದೇ ಸಮಿತಿಗಾಗಲೀ, ಸಂಘಟನೆಗಾಗಲೀ ಗುತ್ತಿಗೆಗೆ, ಕ್ರಯಕ್ಕೆ ನೀಡಿರುವ ನಿದರ್ಶನಗಳಿಲ್ಲ. ಇನ್ನೂ ಹೆಚ್ಚಿನ ಜನ ಸೇರುವ ಕುಂಭ ಮೇಳದಲ್ಲೂ ಸಹ ಇದೇ ನೀತಿಯನ್ನು ಅನುಸರಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಸರ್ಕಾರವು ಪರಿಸರ ರಕ್ಷಣೆಯ ದೃಷ್ಟಿಯಿಂದ ಯಾತ್ರಾರ್ಥಿಗಳ ಸಂಖ್ಯೆಯ ಮೇಲೂ ನಿಬಂಧ ಹೇರುತ್ತದೆ. ಉತ್ತರಖಂಡದ ಗೋಮುಖ್‌ನಲ್ಲಿ ಮೇ 1ರಂದು ನಡೆದ ಯಾತ್ರೆಗೆ ಉತ್ತರ ಪ್ರದೇಶ ಸರ್ಕಾರ ದಿನಕ್ಕೆ 150 ಯಾತ್ರಾರ್ಥಿಗಳಿಗೆ ಮಾತ್ರ ಅನುಮತಿ ನೀಡಿತ್ತು. ಆದರೆ ಅಮರನಾಥ ಯಾತ್ರೆಗೆ ಯಾವುದೇ ಮಿತಿ ಇರುವುದಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಮರನಾಥ ಯಾತ್ರೆಯನ್ನು ದೇಶ ಭಕ್ತಿಯ ಸಂಕೇತವಾಗಿ ಪರಿಗಣಿಸುವುದೂ ಈ ಯಾತ್ರೆಗೆ ವಿಶಿಷ್ಟ ಸ್ಥಾನ ಲಭಿಸಲು ಕಾರಣವಾಗಿದೆ. ಹಾಗಾಗಿಯೇ ಪ್ರಸ್ತುತ ಭೂ ವಿವಾದವು ಕೋಮುವಾದಿ ಸ್ವರೂಪ ಪಡೆಯುತ್ತದೆ. ಈ ನಿಟ್ಟಿನಲ್ಲಿ ಅಮರನಾಥ ಯಾತ್ರೆಯ ಸಂದರ್ಭದಲ್ಲೂ ಪರಿಸರ ರಕ್ಷಣೆಗೆ ಸೂಕ್ತ ಕ್ರಮಕೈಗೊಳ್ಳಲು ಪರಿಸರ ತಜ್ಞರು ಸರ್ಕಾರವನ್ನು ಹಲವು ಬಾರಿ ಎಚ್ಚರಿಸಿದ್ದಾರೆ. ಒಂದು ವೇಳೆ ಈ ಭೂಮಿಯನ್ನು ದೇವಾಲಯ ಸಮಿತಿಗೆ ನೀಡಿದ್ದಲ್ಲಿ ಅಲ್ಲಿ ಕಟ್ಟಡಗಳು ನಿರ್ಮಾಣವಾಗುತ್ತಿದ್ದವು. ಯಾತ್ರೆ ಇಲ್ಲದ ಸಂದರ್ಭದಲ್ಲಿ ಸ್ಥಳೀಯರಿಗೆ ಅಲ್ಲಿ ಪ್ರವೇಶವಿರುತ್ತಿರಲಿಲ್ಲ. ಲಕ್ಷಾಂತರ ಯಾತ್ರಿಗಳು ಬರುವುದರಿಂದ ಇಲ್ಲಿನ ಪರಿಸರವೂ ನಾಶವಾಗುವ ಸಾಧ್ಯತೆಗಳಿರುತ್ತದೆ.

ಅಮರನಾಥ ದೇವಾಲಯಕ್ಕೆ ಹೋಗಲು ಎರಡು ಮಾರ್ಗಗಳಿವೆ. ಶ್ರೀನಗರ-ಜಮ್ಮು-ಪಹಲ್‌ಗಮ್ ಮಾರ್ಗವು 32 ಕಿಲೋಮೀಟರ್ ಇದ್ದು ಇಲ್ಲಿ ಹೆಚ್ಚು ಜನ ನಡೆದಾಡುವುದು ಅಪಾಯಕಾರಿಯಾಗುತ್ತದೆ. ಹತ್ತು ಸಾವಿರಕ್ಕೆ ಮೀರಿದ ಜನರನ್ನು ಈ ರಸ್ತೆಯ ಕೊನೆಯ ಭಾಗ ತಡೆದುಕೊಳ್ಳುವುದಿಲ್ಲ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಇನ್ನೊಂದು ಮಾರ್ಗ ಸೋನಾಮಾರ್ಗ್-ಬಲತಾಲ್-ಚಂದವಾರಿ ಪ್ರದೇಶಗಳನ್ನು ಕ್ರಮಿಸಿ ಸಾಗುತ್ತದೆ. ಈ ಮಾರ್ಗದಲ್ಲಿ ಶೇ. 10ರಷ್ಟು ಯಾತ್ರಾರ್ಥಿಗಳೂ ಹೋಗುವುದಿಲ್ಲ ಎಂದು ಸರ್ಕಾರದ ಅಂಕಿ ಅಂಶಗಳು ನಿರೂಪಿಸುತ್ತವೆ. 250ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡ 1996ರಲ್ಲಿ ಸಂಭವಿಸಿದ ಹಿಮಪಾತದ ನಂತರ ನೇಮಿಸಲಾದ ಸೇನ್ ಗುಪ್ತ ಸಮಿತಿಯು ಅಮರನಾಥ ಯಾತ್ರಿಗಳ ನಿರ್ವಹಣೆಯನ್ನು ಪ್ರವಾಸೋದ್ಯಮ ಇಲಾಖೆ ವಹಿಸಿಕೊಳ್ಳಬೇಕೆಂದು ಶಿಫಾರಸ್ಸು ಮಾಡಿತ್ತು. ಇದಕ್ಕೆ ಪೂರಕವಾಗಿ ಮುಖ್ಯಮಂತ್ರಿಯ ನೇತೃತ್ವದ ಮಂಡಲಿಯು ಯಾತ್ರೆಯ ಇತರ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿ ಸೂಚಿಸಿತ್ತು. ಜುಲೈ 1 ರಿಂದ ಆಗಸ್ಟ್ 15ರವರೆಗೆ ನಡೆಯುವ ಈ

39.88 ಹೆಕ್ಟೇರ್ ಅರಣ್ಯ ಭೂಮಿಯನ್ನು ಅಮರನಾಥ ದೇವಾಲಯ ಸಮಿತಿಗೆ ನೀಡುವ ಸರ್ಕಾರದ ತೀರ್ಮಾನವೇ ವಿವಾದಾಸ್ಪದವಾಗಿದ್ದು, ಕಾಶ್ಮೀರ ಸಮಸ್ಯೆಯ ಇತ್ಯರ್ಥಕ್ಕೆ ಈ ಪ್ರದೇಶದ ಜನಸಾಂದ್ರತೆ ಹಾಗೂ ಸಂಸ್ಕೃತಿಯನ್ನು ಬದಲಾಯಿಸುವುದು ಉತ್ತಮ ಪರಿಹಾರವಾಗಬಹುದು ಎಂಬ ಸರ್ಕಾರದ ಅಧಿಕೃತ ನಿಲುವು ಇಡೀ ಪ್ರಕರಣಕ್ಕೆ ತಿರುವು ನೀಡಿದೆ. ಕಾಶ್ಮೀರ ಜನತೆಯಲ್ಲಿ ಸುಪ್ತವಾಗಿದ್ದ ಆಕ್ರೋಶ ಸ್ಫೋಟಗೊಳ್ಳಲು ಸರ್ಕಾರದ ಈ ನಿರ್ಧಾರ ಪೂರಕವಾಗಿತ್ತು. ಭೂಮಿಯನ್ನು ಅಮರನಾಥ ದೇವಾಲಯ ಸಮಿತಿಗೆ ನೀಡಿ ಪುನಃ ಹಿಂದಕ್ಕೆ ಪಡೆದ ಸರ್ಕಾರದ ತೀರ್ಮಾನ ಹಿಂದೂ ವಿರೋಧಿ ಕ್ರಮ ಎಂಬ ಭಾಜಪ ಮತ್ತು ಸಂಘ ಪರಿವಾರದ ವಾದ ಹುರುಳಿಲ್ಲದ್ದು. ವಿವಾದಕ್ಕೊಳಗಾಗಿರುವ 39.88 ಹೆಕ್ಟೇರ್ ಭೂಮಿ ಅರಣ್ಯ ಇಲಾಖೆಗೆ ಸೇರಿದ್ದು, ಪ್ರತಿ ವರ್ಷ ಅಮರನಾಥ ಯಾತ್ರೆಯ ಸಂದರ್ಭದಲ್ಲಿ ಸ್ಥಳೀಯ ಮುಸ್ಲಿಮರು ಯಾತ್ರಿಗಳಿಗೆ ಎಲ್ಲಾ ರೀತಿಯ ಸಹಕಾರವನ್ನೂ ನೀಡುತ್ತಲೇ ಬಂದಿದ್ದಾರೆ.

ಯಾತ್ರೆಯಲ್ಲಿ ಒಂದು ಲಕ್ಷ ಜನ ಪಾಲ್ಗೊಳ್ಳಬಹುದು ಮತ್ತು ಚಂದನವಾರಿ ಹಾಗೂ ಗುಹೆಯ ನಡುವಿನ ಮಾರ್ಗದಲ್ಲಿ ದಿನಕ್ಕೆ 10 ಸಾವಿರಕ್ಕಿಂತಲೂ ಅಧಿಕ ಜನರನ್ನು ಬಿಡಕೂಡದೆಂದೂ ಸಮಿತಿ ಸೂಚಿಸಿತ್ತು.

ಆದರೆ ಜಮ್ಮು ಕಾಶ್ಮೀರದ ರಾಜ್ಯಪಾಲ ಮತ್ತು ಅಮರನಾಥ ದೇವಾಲಯ ಸಮಿತಿಯ ಅಧ್ಯಕ್ಷರಾದ ಎಸ್.ಕೆ.ಸಿನ್ಹಾರವರು ಈ ಸೂಚನೆಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿದ್ದೇ ಪ್ರಸ್ತುತ ಘಟನೆಗಳಿಗೆ ಕಾರಣವಾಗಿತ್ತು. 2000ದಲ್ಲಿ ಜಾರಿಗೆ ಬಂದ ಶ್ರೀ ಅಮರನಾಥ ದೇವಾಲಯ ಮಂಡಲಿ ಕಾಯ್ದೆಯ ಅನ್ವಯ ಅಮರನಾಥ ದೇವಾಲಯ ಸಮಿತಿಯು ದೇವಾಲಯದ ಪ್ರಾಂಗಣ ಹಾಗೂ ಸುತ್ತಮುತ್ತ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿತ್ತು. 2004ರಲ್ಲಿ ಸಮಿತಿಯು ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದಾಗಲೂ ಇತರ ಸವಲತ್ತುಗಳಿಗಾಗಿ ಆಗ್ರಹಿಸಿದ್ದವೇ ಹೊರತು ಭೂ ಪ್ರದೇಶವನ್ನು ವರ್ಗಾಂತರ ಮಾಡಲು ಕೇಳಿರಲಿಲ್ಲ. ಯಾತ್ರಿಗಳಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಲು ಆಗ್ರಹಿಸಲಾಗಿತ್ತು. 2005ರ ತನ್ನ ತೀರ್ಪಿನಲ್ಲಿ ನ್ಯಾಯಾಲಯವು " ಮಂಡಲಿಯು ಸಮಿತಿಗೆ ಈ ಭೂಪ್ರದೇಶವನ್ನು ಬಳಸಿಕೊಳ್ಳಲು ಅನುಮತಿ ನೀಡಬಹುದು, ಮಾರ್ಗದಲ್ಲಿ ಅಧೋರಚನೆಗಳನ್ನು ಒದಗಿಸಲು ಸಮಿತಿಗೆ ಅವಕಾಶವಿರುತ್ತದೆ " ಎಂದು ಆದೇಶಿಸಿತು. ಅಮರನಾಥ ದೇವಾಲಯ ಸಮಿತಿಯು ಅಮರನಾಥ ಯಾತ್ರೆಯ ಮಾರ್ಗದಲ್ಲಿನ ಬಲತಾಲ್ ಮತ್ತು ಚಂದವಾರಿ ಪ್ರದೇಶಗಳನ್ನೊಳಗೊಂಡಂತೆ ಏಳು ತಂಗುದಾಣಗಳನ್ನು ಸಮಿತಿಯ ವಶಕ್ಕೆ ನೀಡುವಂತೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. 2005ರಲ್ಲಿ ಅರಣ್ಯ ಇಲಾಖೆಯು ಸಮಿತಿಯ ಈ ಅಹವಾಲನ್ನು ಮನ್ನಿಸಿ ಈ ಭೂಪ್ರದೇಶವನ್ನು ಸಮಿತಿಯ ವಶಕ್ಕೆ ನೀಡಲು ಆದೇಶಿಸಿತ್ತು. ಆದರೆ ಈ ವರ್ಗಾವಣೆಯು ಅರಣ್ಯ ಕಾಯ್ದೆಗಳ ಉಲ್ಲಂಘನೆಯಾಗುವುದರಿಂದ ಈ ಆದೇಶವನ್ನು ಅರಣ್ಯ ಸಂರಕ್ಷಣಾ ಇಲಾಖೆಯು ತಿರಸ್ಕರಿಸಿತ್ತು.

ಈ ಎಲ್ಲಾ ಆದೇಶಗಳನ್ನು ಉಲ್ಲಂಘಿಸಿ ಎಸ್.ಕೆ. ಸಿನ್ಹಾರವರು 39.88 ಹೆಕ್ಟೇರ್ ಭೂ ಪ್ರದೇಶವನ್ನು ಶಾಶ್ವತವಾದ ಕಟ್ಟಡಗಳನ್ನು ನಿರ್ಮಿಸಲು ದೇವಾಲಯ ಸಮಿತಿಯ ವಶಕ್ಕೆ ನೀಡಲು ತೀರ್ಮಾನಿಸಿದ್ದರು. ನಂತರದ ಬೆಳವಣಿಗೆಗಳ ಕಾರಣ ಸಿನ್ಹಾರವರು ತಮ್ಮ ಆದೇಶವನ್ನು ಹಿಂತೆಗೆದುಕೊಳ್ಳಬೇಕಾಯಿತು. ಈ ಅಂಶವನ್ನೇ ಪ್ರಧಾನ ಅಸ್ತ್ರವನ್ನಾಗಿಸಿಕೊಂಡ ಭಾಜಪ ಮತ್ತು ಸಂಘಪರಿವಾರವು ಅಮರನಾಥ ಭೂವಿವಾದವನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ದೃಷ್ಟಿಯಿಂದ ರಾಷ್ಟ್ರ ಮಟ್ಟದಲ್ಲಿ ಹಿಂದೂಗಳನ್ನು ಕ್ರೋಢೀಕರಿಸಲು ಪ್ರಯತ್ನಿಸುತ್ತಿರುವುದು ಇಡೀ ಪ್ರಕರಣಕ್ಕೆ ಕೋಮುವಾದಿ ಸ್ವರೂಪ ಕಲ್ಪಿಸಿದೆ. ಜಮ್ಮು ಪ್ರದೇಶದ ಜನತೆಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸರ್ಕಾರಗಳ ವೈಫಲ್ಯದ ಬಗ್ಗೆ ಅಲ್ಲಿನ ಜನತೆಯಲ್ಲಿದ್ದ ಆಕ್ರೋಶ, ಜಿಗುಪ್ಸೆಗಳಿಗೆ ಮತೀಯ ಲೇಪನ ನೀಡುವಲ್ಲೂ ಸಂಘಪರಿವಾರ ಸಫಲವಾಗಿದೆ. ಭೂಮಿಯ ಹಸ್ತಾಂತರವನ್ನು ವಿರೋಧಿಸುವವರಿಗೆ ಇಸ್ಲಾಮಿಕ್ ದೇಶಗಳ ಬೆಂಬಲವಿದೆ ಎಂದು ಕಾಂಗ್ರೆಸ್ ಪಕ್ಷ ಹೇಳಿಕೆ ನೀಡಿದ್ದು ಈ ಪ್ರಕ್ರಿಯೆಗೆ ಕುಮ್ಮಕ್ಕು ನೀಡಿದೆ.

ನಂತರ ನಡೆದ ಸಂಧಾನ ಮಾತುಕತೆಗಳಲ್ಲಿ ರಾಜ್ಯ ಸರ್ಕಾರವು ಈ ಭೂಪ್ರದೇಶವನ್ನು ಮೂರು ತಿಂಗಳ

[illegible] ತಕ್ಕೆ [illegible] ಬಿಟ್ಟಿತ್ತು [illegible] ಇಲ್ಲಿ [illegible] ಹಕ್ಕುಗಳಿಲ್ಲವೆಂದು ಈ [illegible] ಸಮಿತಿಯು [illegible] ಮಾಡಿದ ರಾಜ್ಯ ಸರ್ಕಾರ "[illegible] ಸಮಿತಿಯ ಉಪಯೋಗಕ್ಕೆ [illegible]" ಎಂದು ಹೇಳಲಾಗಿತ್ತು. ಯಾತ್ರೆಯ ನಂತರವೂ ಆಗಾಗ್ಗ ಈ ಭೂಪ್ರದೇಶವನ್ನು ಸಮಿತಿಯು ಉಪಯೋಗಿಸಿಕೊಳ್ಳಬಹುದು ಎಂಬ ಸರ್ಕಾರದ ತೀರ್ಮಾನ ಬಹುತೇಕ ಅರಣ್ಯ ಇಲಾಖೆ ಆದೇಶದ ಉಲ್ಲಂಘನೆಯಾಗಿದ್ದು ಸಮಿತಿಯು ವರ್ಷಪೂರ್ತಿ ಇಲ್ಲಿ ನೆಲೆ ಹೂಡಲು ಅವಕಾಶ ಮಾಡಿಕೊಟ್ಟಿದೆ. ಸೇನ್‌ಗುಪ್ತಾ ವರದಿಯ ಶಿಫಾರಸ್ಸುಗಳನ್ನು ಮೂಲೆಗುಂಪು ಮಾಡಿರುವ ಈ ಆದೇಶವು ಅಮರನಾಥ ಯಾತ್ರೆಯನ್ನು ರಾಜಕೀಯ ಶಕ್ತಿ ಪ್ರದರ್ಶನದ ಅಂಗಣವನ್ನಾಗಿ ಮಾಡುವಲ್ಲಿ ಪೂರಕವಾಗಿದೆ ಎಂದು ಹೇಳಬಹುದು. ಸಮಿತಿಯ ವಕ್ತಾರ ರಾಜೇಂದ್ರ ಮಿಶ್ರಾರವರು, ಮುಂಬರುವ ದಿನಗಳಲ್ಲಿ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಾ ಗಲಿದೆ ಎಂದು ಹೇಳಿರುವುದು ಸೂಚನೆಯಷ್ಟೆ.

ಕಾಶ್ಮೀರದ ರಾಜಕೀಯ ಇತಿಹಾಸ

ಕಾಶ್ಮೀರ–ಮುಸ್ಲಿಮರು, ಜಮ್ಮು–ಹಿಂದುಗಳು, ಲಡಖ್–ಬೌದ್ಧರು ಮತ್ತು ಗುಜ್ಜರ್ ಮುಸ್ಲಿಮರು, ಕಾರ್ಗಿಲ್ ಶಿಯಾ ಮುಸ್ಲಿಮರು, ಹೀಗೆ ಜಮ್ಮು ಕಾಶ್ಮೀರದ ಪ್ರತಿಯೊಂದು ಪ್ರಾಂತ್ಯವನ್ನೂ ಧಾರ್ಮಿಕ ಸಮುದಾಯಗಳ ದೃಷ್ಟಿಕೋನದಿಂದಲೇ ನೋಡಲಾಗುತ್ತದೆ. ಇಲ್ಲಿ ಪ್ರತಿಯೊಂದು ಸಮುದಾಯವೂ ಮತ್ತೊಂದನ್ನು ಶೋಷಕರೆಂದೇ ಅನುಮಾನದಿಂದ ಕಾಣುವುದೂ ಐತಿಹಾಸಿಕ ಸತ್ಯ. ಜಮ್ಮು ಪ್ರಾಂತ್ಯದ ನಿರ್ಲಕ್ಷ್ಯ ಮತ್ತು ಕಾಶ್ಮೀರ ಕಣಿವೆಯಲ್ಲಿ ಗಾಢವಾಗಿ ಬೇರೂರಿರುವ ಪರಾಧೀನತೆಯ ಭಾವನೆಗಳನ್ನು ನಿವಾರಿಸುವತ್ತ ಯಾವುದೇ ಸರ್ಕಾರವೂ ಗಂಭೀರವಾಗಿ ಪರಿಗಣಿಸದಿರುವುದು ಪ್ರಸ್ತುತ ಸನ್ನಿವೇಶಕ್ಕೆ ಕಾರಣವಾಗಿದೆ. ಇಲ್ಲಿನ ಜನ ಸಮುದಾಯಗಳ ಆಶೋತ್ತರಗಳಿಗಿಂತಲೂ ಮತೀಯ ಅಸ್ಮಿತೆಗಳಿಗೇ ಹೆಚ್ಚು ಒತ್ತು ನೀಡುವ ಮೂಲಕ ರಾಜಕೀಯ ಪಕ್ಷಗಳು ಮತ್ತು ಧಾರ್ಮಿಕ–ಮತೀಯ ಸಂಘಟನೆಗಳು ಸಾಮಾನ್ಯ ಜನತೆಯಲ್ಲಿ ದ್ವೇಷದ ವಿಷ ಬೀಜವನ್ನು ಬಿತ್ತುವುದರಲ್ಲಿ ಯಶಸ್ವಿಯಾಗಿವೆ. ಜಮ್ಮು ಪ್ರಜೆಗಳ ಪರಾಧೀನತೆಯನ್ನು ಹಿಂದೂಗಳ ರಾಷ್ಟ್ರೀಯವಾದಿ ಸಮಸ್ಯೆಯೆಂದೂ, ಕಾಶ್ಮೀರ ಜನತೆಯ ಪರಾಧೀನತೆಯನ್ನು ಮುಸ್ಲಿಂ ಸಮಸ್ಯೆಯೆಂದೂ ಪರಿಗಣಿಸುವ ಮೂಲಕ ಮತೀಯ ಸಂಘಟನೆಗಳು ಇಡೀ ಸಮಾಜವನ್ನು ಪ್ರಕ್ಷುಬ್ಧತೆಯ ಪರಾಕಾಷ್ಠೆಗೆ ಕೊಂಡೊಯ್ದಿವೆ.

" ಕಾಶ್ಮೀರದಲ್ಲಿ ಹಿಂದೂ ಮತ್ತು ಮುಸ್ಲಿಂ ಎಂದು ಪ್ರತ್ಯೇಕವಾಗಿ ನೋಡುವ ಪ್ರಶ್ನೆಯೇ ಬರುವುದಿಲ್ಲ. ನಾವು ಆ ನಿಟ್ಟಿನಲ್ಲಿ ಯೋಚಿಸುವುದೂ ಇಲ್ಲ " ಎಂದು ಶೇಖ್ ಅಬ್ದುಲ್ಲಾರವರು 1948ರಲ್ಲಿ ಹೇಳಿದ್ದರೂ ಜಮ್ಮು ಕಾಶ್ಮೀರದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೂ ಸೌಹಾರ್ದಯುತ ಸನ್ನಿವೇಶ ಇರಲಿಲ್ಲವೆಂದು ಇತಿಹಾಸ ನಿರೂಪಿಸಿದೆ. ಭಾರತ ಸ್ವಾತಂತ್ರ್ಯದೆಡೆಗೆ ಮುನ್ನಡೆಯುತ್ತಿರುವ ಸಂದರ್ಭದಲ್ಲೇ ಈ ಪ್ರಾಂತ್ಯದಲ್ಲಿ ಹಿಂದೂ ಮತ್ತು ಮುಸ್ಲಿಂ ಮೂಲಭೂತವಾದಿಗಳು ನೆಲೆ ಕಂಡುಕೊಂಡಿದ್ದುದೂ ಐತಿಹಾಸಿಕ ಸತ್ಯ. 1931ರಲ್ಲಿ ನಡೆದ ಕೋಮು ಗಲಭೆಗಳಲ್ಲಿ ಜಮ್ಮು ಪ್ರಾಂತ್ಯದಲ್ಲಿ ಅನೇಕ ಹಿಂದೂಗಳ ಮನೆ, ಮಳಿಗೆಗಳು ಆಕ್ರಮಣಕ್ಕೊಳಗಾಗಿದ್ದರೆ ಶ್ರೀನಗರದಲ್ಲಿ ಡೋಗ್ರಾಸೇನೆಯ 28 ಜನರ ಹತ್ಯೆಗೈದಿತ್ತು. ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಮತೀಯ ಗಲಭೆಗಳು ಮತ್ತು ಕೋಮು ಹತ್ಯಾಕಾಂಡವು ಜನರ ಭಾವನೆಗಳನ್ನು ಮತ್ತಷ್ಟು ಘಾಸಿಗೊಳಿಸಿತ್ತು.

ಕಾಶ್ಮೀರವು ಭಾರತದಲ್ಲಿ ವಿಲೀನಗೊಂಡ ನಂತರ ಕಣಿವೆಯ ಅನೇಕ ಮುಸ್ಲಿಮರು ವಿಷಾದ ವ್ಯಕ್ತಪಡಿಸಿದ್ದರೆ; ಜಮ್ಮುವಿನಲ್ಲಿ ಹಿಂದೂಗಳು ಪ್ರತಿಭಟಿಸಿದ್ದರು. ಹಿಂದೂ ಮಹಾರಾಜನಿಂದ ಅಧಿಕಾರವನ್ನು ಮುಸ್ಲಿಮರಿಗೆ ವಹಿಸಿ ಕೊಡಲಾಗಿದೆ ಎಂದು ಟೀಕಿಸಲಾಗಿತ್ತು. ಕರಣ್‌ಸಿಂಗ್ ರವರ ಪುತ್ರರೂ ಸಹ " ಡೋಗ್ರ ಆಳ್ವಿಕೆಗೆ ಬದಲಾಗಿ ಕಾಶ್ಮೀರಿಗಳ ಆಳ್ವಿಕೆ ಬಂದಿದೆ " ಎಂದು ಹೇಳಿದ್ದುದನ್ನು ಇಲ್ಲಿ ಸ್ಮರಿಸಬಹುದು. ಕಾಶ್ಮೀರದ ವಿಲೀನಿಕರಣದ ಮುನ್ನವೇ ಮಹಾರಾಜ ಹರಿಸಿಂಗ್‌ರವರ ನೇತೃತ್ವದಲ್ಲಿ ಜಮ್ಮುವಿನ ಮುಸ್ಲಿಂ ಸಮುದಾಯದ ವಿರುದ್ಧ ಆಕ್ರಮಣಗಳು ಜರುಗಿದ್ದವು. 1941ರಲ್ಲಿ ಶೇ. 61ರಷ್ಟಿದ್ದ ಜಮ್ಮುವಿನ ಮುಸ್ಲಿಂ ಜನಸಂಖ್ಯೆ 1961ರಲ್ಲಿ ಶೇ. 38ರಷ್ಟಾಗಿತ್ತು. 1948ರಲ್ಲಿ 2 ಲಕ್ಷಕ್ಕೂ ಹೆಚ್ಚು ಮುಸ್ಲಿಮರನ್ನು ಹತ್ಯೆಮಾಡಲಾಗಿತ್ತು ಎಂದು ಹೊರೇಸ್ ಅಲೆಕ್ಸಾಂಡರ್ ಎಂಬುವರು ಒಂದು ಲೇಖನದಲ್ಲಿ ಉಲ್ಲೇಖಿಸುತ್ತಾರೆ.

ಕಳೆದ ಹಲವು ದಶಕಗಳಿಂದ ಅಮರನಾಥ ಯಾತ್ರಿಗಳಿಗೆ ಆಶ್ರಯ ಒದಗಿಸುತ್ತಿದ್ದ ಈ ಭೂ ಪ್ರದೇಶದಲ್ಲಿ ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿದ್ದರೂ ಇದು ಯಾವುದೇ ವಿವಾದಗಳನ್ನು ಸೃಷ್ಟಿಸಿರಲಿಲ್ಲ. ಸರ್ಕಾರದ ಈ ಕ್ರಮಕ್ಕೂ ತನ್ನದೇ ಆದ ಇತಿಹಾಸವಿದೆ. ಭಾರತದಲ್ಲಿ ಅತ್ಯಂತ ಹೆಚ್ಚು ಯಾತ್ರಾರ್ಥಿಗಳನ್ನು ಆಕರ್ಷಿಸುವ ದೇವಾಲಯಗಳಲ್ಲಿ ಅಮರನಾಥ ದೇವಾಲಯವೂ ಒಂದು. ಈ ದೇವಾಲಯದಲ್ಲಿ ವರ್ಷಕ್ಕೊಮ್ಮೆ ಗುಹೆಯೊಂದರಲ್ಲಿ ಉದ್ಭವಿಸುವ ಹಿಮಾಚ್ಛಾದಿತ ಲಿಂಗಕ್ಕೆ ಪೂಜೆ ಸಲ್ಲಿಸಲು ಲಕ್ಷಾಂತರ ಜನ ಬರುತ್ತಾರೆ. ಈ ಲಿಂಗವನ್ನು ಪ್ರಥಮ ಬಾರಿಗೆ ಕಂಡು ಹಿಡಿದದ್ದೂ ಮುಸ್ಲಿಮರೇ ಎಂಬುದು ವಿಶೇಷ ಅಂಶ. 1989ರಲ್ಲಿ 12 ಸಾವಿರದಷ್ಟಿದ್ದ ಯಾತ್ರಾರ್ಥಿಗಳ ಸಂಖ್ಯೆ 2007ರಲ್ಲಿ 4 ಲಕ್ಷ ಮುಟ್ಟಿದೆ. ಇಲ್ಲಿಗೆ ಬರುವ ಯಾತ್ರಾರ್ಥಿಗಳಿಗೆ ಸಕಲ ಸೌಕರ್ಯಗಳನ್ನೂ ಒದಗಿಸಲು ದಾರಿಯುದ್ದಕ್ಕೂ ಅನೇಕ ನೆರವು ತಾಣಗಳನ್ನು ನಿರ್ಮಿಸಲಾಗುತ್ತದೆ. ಈ ನೆರವಿನ ತಾಣಗಳನ್ನು ಮುಸ್ಲಿಮರೇ ನಿರ್ವಹಿಸುವುದೂ ಉಂಟು.

ಸ್ವಾತಂತ್ರ್ಯಾನಂತರದಲ್ಲಿ ಪ್ರಜಾತಾಂತ್ರಿಕ ಸಂಸ್ಥೆಗಳ ಸ್ಥಾಪನೆಯಿಂದ ಇಲ್ಲಿನ ಜನಗಳಲ್ಲಿ ವಿಶ್ವಾಸ ಮೂಡುವಂತಹ ಸನ್ನಿವೇಶ ಏರ್ಪಡುವ ಹಂಬಲ ರಾಷ್ಟ್ರೀಯ ನಾಯಕರುಗಳಿಗಿದ್ದರೂ, ಸ್ಥಳೀಯ ರಾಜಕಾರಣ ಮತ್ತು ಮತೀಯ ಶಕ್ತಿಗಳ ಪ್ರಾಬಲ್ಯದಿಂದ ಈ ನಿಟ್ಟಿನಲ್ಲಿ ಯಾವುದೇ ಯಶಸ್ಸು ಸಾಧಿಸಲಾಗಲಿಲ್ಲ. ಜಮ್ಮು ಮತ್ತು ಕಾಶ್ಮೀರದಲ್ಲಿನ ಗಣ್ಯ ವ್ಯಕ್ತಿಗಳು ತಮ್ಮ ಪ್ರಾಬಲ್ಯವನ್ನು ಕೋಮುವಾದವನ್ನು ಪುಷ್ಟೀಕರಿಸಲು ಉಪಯೋಗಿಸಿದ್ದೇ ಹೆಚ್ಚೆಂದು ಹೇಳಬಹುದು. ಸಂವಿಧಾನ ರಚನಾ ಮಂಡಳಿಯಲ್ಲೂ ಪ್ರಾದೇಶಿಕ ಪ್ರತಿನಿಧಿತ್ವವನ್ನು ಸೂಕ್ತವಾಗಿ ನೀಡದಿದ್ದುದೂ ಇಲ್ಲಿನ ದ್ವೇಷ ರಾಜಕಾರಣಕ್ಕೆ ಪೂರಕವಾಗಿತ್ತು. ಹಿಂದು ಡೋಗ್ರಾಗಳು, ಮುಸ್ಲಿಂ ಗುಜ್ಜರ್‌ಗಳು, ಲಡಖ್‌ನ ಬೌದ್ಧ ಸಮುದಾಯಗಳು ಸೂಕ್ತ ಪ್ರಾತಿನಿಧಿತ್ವ ಗಳಿಸದೆ ಇದ್ದುದೂ ಈ ಸನ್ನಿವೇಶಕ್ಕೆ ಪೂರಕವಾಗಿತ್ತು.

1953ರಲ್ಲಿ ಜನಸಂಘದಿಂದ ಪ್ರೇರೇಪಿತವಾದ ಪ್ರಜಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರದಲ್ಲಿ ಜಮ್ಮು ಕಾಶ್ಮೀರದಲ್ಲಿ ಮತ್ತಷ್ಟು ಕುತೂಹಲಕರ ಬದಲಾವಣೆಗಳು ಕಂಡುಬಂದವು. ಜಮ್ಮು ಪ್ರಾಂತ್ಯದಲ್ಲಿ ಆಸ್ತಿ ಹಂಚಿಕೆಯಿಂದ ಅತೃಪ್ತರಾಗಿದ್ದ ಶ್ರೀಮಂತ ಜಮೀನ್ದಾರರು ಮತ್ತು ಭಾರಿ ಉದ್ಯಮಿಗಳ ಆಕ್ರೋಶವನ್ನೇ ತನ್ನ ಬಂಡವಾಳವನ್ನಾಗಿ ಮಾಡಿಕೊಂಡ ಪ್ರಜಾ ಪರಿಷತ್ತು " ಒಂದು ದೇಶದಲ್ಲಿ ಎರಡು ಸಂವಿಧಾನ, ಎರಡು ಧ್ವಜ, ಎರಡು ಪ್ರಧಾನಿ ಇರಕೂಡದು " ಎಂಬ ಘೋಷಣೆಯೊಂದಿಗೆ ವಿಧಿ 370ರ ರದ್ದತಿಗಾಗಿ, ಶ್ರೀನಗರದಲ್ಲಿ ಮುಕ್ತ ಆಸ್ತಿ ಖರೀದಿಗೆ ಆಗ್ರಹಿಸಿ ಹೋರಾಟ ಪ್ರಾರಂಭಿಸಿತ್ತು. ಪ್ರಜಾ ಪರಿಷತ್ತಿನ ಈ ಬೇಡಿಕೆಗಳು ಕಾಶ್ಮೀರಿಗಳ ಅಸ್ತಿತ್ವ ಮತ್ತು ಅಸ್ಮಿತೆಗೇ ಸಂಚಕಾರ ತರುವುದೆಂಬ ಆತಂಕ ಕಾಶ್ಮೀರದಲ್ಲಿ ಸೃಷ್ಟಿಯಾಗತೊಡಗಿತ್ತು. ಅದೇ ವೇಳೆಯಲ್ಲಿ ಷೇಖ್ ಅಬ್ದುಲ್ಲಾರವರು ಪ್ರಜಾಪರಿಷತ್ತಿನ ಉಗಮವನ್ನು ಹಿಂದೂ ಧಾರ್ಮಿಕ ರಾಷ್ಟ್ರದ ಉಗಮವೆಂದೇ ಅರ್ಥೈಸಿ ಮಾತನಾಡಲಾರಂಭಿಸಿದ್ದರು. " ಜಮ್ಮು ಜನತೆಗೆ ಪ್ರತ್ಯೇಕ ಡೋಗ್ರಾ ರಾಜ್ಯ ಬೇಕಾದಲ್ಲಿ ಕಾಶ್ಮೀರಿಗಳ ಪರವಾಗಿ ಸಮ್ಮತಿ ನೀಡಲು ನಾನು ಸಿದ್ಧನಿದ್ದೇನೆ " ಎಂಬ ಅವರ ಹೇಳಿಕೆ ತೀವ್ರ ಚರ್ಚೆಗೆ ಗುರಿಯಾಗಿತ್ತು.

1977ರ ನಂತರದಲ್ಲಿ ಜಮ್ಮು ಕಾಶ್ಮೀರದ ಯಾವುದೇ ರಾಜಕೀಯ ಪಕ್ಷಗಳೂ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸದಿರುವುದನ್ನು ಗಮನಿಸಬಹುದು. ಪ್ರತಿಯೊಂದು ಚುನಾವಣೆಯಲ್ಲೂ ಎರಡೂ ಪ್ರಾಂತ್ಯಗಳ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಮೂಲಕವೇ ಮತ ಗಳಿಸುವ ತಂತ್ರಗಳು ಇಲ್ಲಿನ ಜನರಲ್ಲಿನ ಪ್ರತ್ಯೇಕತಾ ಭಾವನೆಗಳನ್ನು ತೀವ್ರಗೊಳಿಸಿರುವುದೇ ಹೆಚ್ಚು. 1983ರ ಚುನಾವಣೆಗಳಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು 'ಜಮ್ಮುವಿನಲ್ಲಿ ಹಿಂದೂಗಳು ಬಹುಸಂಖ್ಯಾತರಾಗಿರುವುದರಿಂದಲೇಈ ಪ್ರದೇಶ ಹಿಂದುಳಿದಿದೆ' ಎಂದು ಹೇಳಿದ್ದುದನ್ನು ಇಲ್ಲಿ ಸ್ಮರಿಸಬಹುದು. ಇದೇ ವೇಳೆಯಲ್ಲಿ ಫರೂಖ್ ಅಬ್ದುಲ್ಲ ಮತ್ತು ಸಂಗಡಿಗರು ಕಾಶ್ಮೀರ ಮುಸ್ಲಿಂ ಅಸ್ಮಿತೆಗಾಗಿ ಹೋರಾಡುವ ಹೇಳಿಕೆಗಳನ್ನು ನೀಡಿದ್ದೂ ಉಂಟು. ಈ ಮತೀಯ ರಾಜಕಾರಣದ ಪ್ರಭಾವದಿಂದಲೇ ಜಮ್ಮು ಕಾಶ್ಮೀರದಲ್ಲಿ

ಎರಡೂ ಧರ್ಮಗಳ ಕೋಮುವಾದಿಗಳ ಪ್ರಾಬಲ್ಯ ಹೆಚ್ಚಾಗುತ್ತಲೇ ಹೋಯಿತು.

ಏತನ್ಮಧ್ಯೆ ಆರ್.ಎಸ್.ಎಸ್ ಮತ್ತು ಸಂಘ ಪರಿವಾರದ ಘಟಕಗಳು ಜಮ್ಮು ಪ್ರಾಂತ್ಯದಲ್ಲಿ ಭದ್ರ ನೆಲೆಯೂರಿದ್ದವು. ಜಮ್ಮು-ಕಾಶ್ಮೀರ-ಲಡಖ್ ಪ್ರಾಂತ್ಯಗಳನ್ನು ವಿಭಜಿಸಬೇಕೆಂಬ ಬೇಡಿಕೆಯನ್ನು 1953ರಲ್ಲೇ ಸಂಘ ಪರಿವಾರ ಸಲ್ಲಿಸಿತ್ತು. ಮಹಾರಾಜ ಹರಿಸಿಂಗ್ ಈ ನಿರ್ಣಯಕ್ಕೆ ಬದ್ಧರಾಗಿದ್ದರೆಂದು ಹೇಳಲಾಗುತ್ತದೆ. ಜನಸಂಘದ ಸ್ಥಾಪನೆಯ ನಂತರದಲ್ಲಿ ಶ್ಯಾಂ ಪ್ರಸಾದ್ ಮುಖರ್ಜಿಯವರು ಜಮ್ಮು ಪ್ರಾಂತ್ಯವನ್ನು ಜನಾಭಿಪ್ರಾಯ ಸಂಗ್ರಹಣೆಯ ಮೂಲಕ ಪ್ರತ್ಯೇಕ ರಾಜ್ಯವನ್ನಾಗಿ ಘೋಷಿಸಲು ಆಗ್ರಹಿಸಿದ್ದರು. ಕರಣ್‌ಸಿಂಗ್‌ರವರೂ ಸಹ 1965ರಲ್ಲಿ ಕಾಶ್ಮೀರಿ ಮಾತನಾಡುವ ಪ್ರದೇಶವನ್ನು ಪ್ರತ್ಯೇಕವಾಗಿಸಿ, ಜಮ್ಮು ಪ್ರಾಂತ್ಯವನ್ನು ಹಿಮಾಚಲ ಪ್ರದೇಶದೊಡನೆ ವಿಲೀನಗೊಳಿಸಿ, ಲಡಖ್ ಪ್ರಾಂತ್ಯವನ್ನು ಮತ್ತೊಂದು ರಾಜ್ಯವನ್ನಾಗಿ ಮಾಡಲು ಸರ್ಕಾರಕ್ಕೆ ಸೂಚಿಸಿದ್ದರು. ಇಂದಿಗೂ ಸಂಘ ಪರಿವಾರ ಇದೇ ಪರಿಹಾರವನ್ನು ಸೂಚಿಸುತ್ತಿರುವುದು ಪ್ರಸ್ತುತ ಸಂಘರ್ಷಕ್ಕೆ ಕುಮ್ಮಕ್ಕು ನೀಡುತ್ತಿದೆ.

ಜಮ್ಮು ಪ್ರಾಂತ್ಯದಲ್ಲಿ ಭಾಜಪ ಹಮ್ಮಿಕೊಂಡಿರುವ ಆಂದೋಲನಕ್ಕೆ ಅಲ್ಲಿನ ಹಿಂದೂ ಸಮುದಾಯಗಳ ಸಂಪೂರ್ಣ ಬೆಂಬಲ ದೊರೆತಿರುವುದು ಇಡೀ ಪ್ರಕರಣಕ್ಕೆ ಹೊಸ ಸ್ವರೂಪ ನೀಡಿದೆ. ಸ್ವತಂತ್ರ ಜಮ್ಮು-ಕಾಶ್ಮೀರಕ್ಕಾಗಿ ಹೋರಾಡುತ್ತಿರುವ ರಾಷ್ಟ್ರೀಯವಾದಿಗಳು ಅವರ ಕನಸಿನ ಸ್ವತಂತ್ರ ಜಮ್ಮು-ಕಾಶ್ಮೀರದಲ್ಲಿ ಎಲ್ಲಾ ಮತೀಯ ಅಲ್ಪಸಂಖ್ಯಾತರಿಗೂ ಸಮಾನ ಸಾಮಾಜಿಕ ಮತ್ತು ಧಾರ್ಮಿಕ ಅವಕಾಶಗಳಿರುತ್ತವೆ ಎಂದು ಪ್ರತಿಪಾದಿಸಿದರೂ, ಜಮ್ಮುವಿನಲ್ಲಿರುವ ಹಿಂದೂಗಳಾಗಲೀ, ಮುಸ್ಲಿಮೇತರರಾಗಲೀ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲವೆಂಬ ಅಂಶ ಪ್ರಸ್ತುತ ಸನ್ನಿವೇಶದಲ್ಲಿ ಸ್ಪಷ್ಟವಾಗುತ್ತಿದೆ. ಕಾಶ್ಮೀರಿಯತ್ ವಾದವನ್ನು ಪ್ರತಿಪಾದಿಸುವ ಕೆಲವು ಬುದ್ಧಿ ಜೀವಿಗಳು ಸೂಫಿ ಪಂಥದಿಂದ ಪ್ರಭಾವಿತರಾಗಿರುವ ಕಾಶ್ಮೀರಿ ಮುಸ್ಲಿಮರು ತಮ್ಮ ಅನ್ಯ ಮತೀಯ ಬಾಂಧವರನ್ನು ಸ್ನೇಹ ಭಾವನೆಯಿಂದ ನೋಡುತ್ತಾರೆಂದೂ, ಯಾವುದೇ ತಾರತಮ್ಯ ಮಾಡುವುದಿಲ್ಲವೆಂದೂ ಹೇಳುತ್ತಾರೆ. ಆದರೆ ಪ್ರಸ್ತುತ ಕಾಶ್ಮೀರದಲ್ಲಿನ ಸನ್ನಿವೇಶದಲ್ಲಿ ಸೂಫಿ ಸಂತರ ದಿವ್ಯವಾಣಿ ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿರುತ್ತದೆ ಎಂಬುದು ಇತ್ತೀಚಿನ ಗಲಭೆಗಳಲ್ಲಿ ವ್ಯಕ್ತವಾಗುತ್ತಿದೆ. ಜಮ್ಮು ಪ್ರಾಂತ್ಯದ ಹಿಂದೂ ಸಮುದಾಯಗಳು ಸಂಘಪರಿವಾರದ ಪ್ರಚೋದನಕಾರಿ ಸಿದ್ಧಾಂತಕ್ಕೆ ಬಲಿಯಾದಂತೆಯೇ, ಕಾಶ್ಮೀರದ ಮುಸ್ಲಿಂ ಯುವಕರು ಜಿಹಾದಿಗಳ, ಮೂಲಭೂತವಾದಿಗಳ ದುರಾಗ್ರಹಕ್ಕೆ ಬಲಿಯಾಗುತ್ತಿದ್ದಾರೆ. ಈ ಪ್ರಕ್ರಿಯೆಯಲ್ಲಿ ಅಲ್ಲಲ್ಲಿ ಕಂಡು ಬರುವ ಪ್ರಜಾತಾಂತ್ರಿಕ-ಎಡ ಪಂಥೀಯ ಶಕ್ತಿಗಳ ಸ್ಥೈರ್ಯ ದಿನೇ ದಿನೇ ಕುಸಿಯುತ್ತಿರುವುದನ್ನೂ ಕಾಣಬಹುದಾಗಿದೆ.

ಪ್ರತ್ಯೇಕತೆಯ ಕೂಗು

ಇತ್ತೀಚೆಗೆ ನಡೆದ ಗಲಭೆಗಳಲ್ಲಿ ಅರೆ ಸೇನಾ ಪಡೆಗಳು ಮತ್ತು ಪೊಲೀಸರು ಪ್ರತಿಭಟನಕಾರರ ಮೇಲೆ ನಡೆಸಿರುವ ಆಕ್ರಮಣ ಕಾಶ್ಮೀರ ಜನತೆಯ ಆಕ್ರೋಶವನ್ನು ಹೆಚ್ಚಿಸಿದೆ. ಸಮಸ್ಯೆಯ ಪರಿಹಾರಕ್ಕೆ ಶಾಂತಿಯುತ ಮಾರ್ಗವನ್ನು ಅನುಸರಿಸುವ ಪ್ರಯತ್ನದಲ್ಲಿ ಗಲಭೆನಿರತ ಜನರನ್ನು ನಿಗ್ರಹಿಸಲು ಸಾಧ್ಯವಿತ್ತು. ಜಮ್ಮು ಕಾಶ್ಮೀರದ ಸಮಸ್ಯೆಯನ್ನು ಸಮಗ್ರವಾಗಿ ಪರಿಶೀಲಿಸಿ, ಅಲ್ಲಿನ

ಕಾಶ್ಮೀರ-ಮುಸ್ಲಿಮರು, ಜಮ್ಮು-ಹಿಂದುಗಳು, ಲಡಖ್-ಬೌದ್ಧರು ಮತ್ತು ಗುಜ್ಜರ್ ಮುಸ್ಲಿಮರು, ಕಾರ್ಗಿಲ್ ಶಿಯಾ ಮುಸ್ಲಿಮರು, ಹೀಗೆ ಇಲ್ಲಿ ಪ್ರತಿಯೊಂದು ಸಮುದಾಯವೂ ಮತ್ತೊಂದನ್ನು ಶೋಷಕರೆಂದೇ ಅನುಮಾನದಿಂದ ಕಾಣುವುದೂ ಐತಿಹಾಸಿಕ ಸತ್ಯ. ಜಮ್ಮು ಮತ್ತು ಕಾಶ್ಮೀರ ಕಣಿವೆಯಲ್ಲಿ ಗಾಢವಾಗಿ ಬೇರೂರಿರುವ ಪರಾಧೀನತೆಯ ಭಾವನೆಗಳನ್ನು ನಿವಾರಿಸುವತ್ತ ಯಾವುದೇ ಸರ್ಕಾರವೂ ಗಂಭೀರವಾಗಿ ಪರಿಗಣಿಸದಿರುವುದು ಪ್ರಸ್ತುತ ಸನ್ನಿವೇಶಕ್ಕೆ ಕಾರಣವಾಗಿದೆ. ಮತೀಯ ಅಸ್ಮಿತೆಗಳಿಗೇ ಹೆಚ್ಚು ಒತ್ತು ನೀಡುವ ಮೂಲಕ ರಾಜಕೀಯ ಪಕ್ಷಗಳು ಮತ್ತು ಧಾರ್ಮಿಕ-ಮತೀಯ ಸಂಘಟನೆಗಳು ಸಾಮಾನ್ಯ ಜನತೆಯಲ್ಲಿ ದ್ವೇಷದ ವಿಷ ಬೀಜವನ್ನು ಬಿತ್ತುವುದರಲ್ಲಿ ಯಶಸ್ವಿಯಾಗಿವೆ. ಜಮ್ಮು ಪ್ರಜೆಗಳ ಪರಾಧೀನತೆಯನ್ನು ಹಿಂದೂಗಳ ರಾಷ್ಟ್ರೀಯವಾದಿ ಸಮಸ್ಯೆಯೆಂದೂ, ಕಾಶ್ಮೀರ ಜನತೆಯ ಪರಾಧೀನತೆಯನ್ನು ಮುಸ್ಲಿಂ ಸಮಸ್ಯೆಯೆಂದೂ ಪರಿಗಣಿಸಿ ಇಡೀ ಸಮಾಜವನ್ನು ಪ್ರಕ್ಷುಬ್ಧತೆಯ ಪರಾಕಾಷ್ಠೆಗೆ ಕೊಂಡೊಯ್ದಿವೆ.

ಸ್ಥಳೀಯ ಜನತೆಯ ಆಶೋತ್ತರಗಳಿಗೆ ಸೂಕ್ತವಾಗಿ ಸ್ಪಂದಿಸದಿದ್ದಲ್ಲಿ ಕಾಶ್ಮೀರ ಸಮಸ್ಯೆ ಇತ್ಯರ್ಥವಾಗುವುದಿಲ್ಲ ಎಂಬ ಅಂಶವನ್ನು ಆಳುವ ವರ್ಗಗಳು ಗ್ರಹಿಸಬೇಕಾಗಿದೆ. ಜಮ್ಮು ಕಾಶ್ಮೀರ ಸಮಸ್ಯೆಯನ್ನು ಮತೀಯ ಅಸ್ಮಿತೆಗಳ ದೃಷ್ಟಿಯಿಂದಲೇ ನೋಡುವುದು, ಪ್ರತ್ಯೇಕತಾವಾದಿಗಳಿಗೆ, ಮೂಲಭೂತವಾದಿಗಳಿಗೆ ಮಾನ್ಯತೆ ನೀಡಿದಂತಾಗುತ್ತದೆ. ಈಗಾಗಲೇ ಎರಡೂ ಪ್ರಾಂತ್ಯಗಳಲ್ಲಿ ಧಾರ್ಮಿಕ ಮೂಲಭೂತವಾದ ತನ್ನ ಕಬಂಧ ಬಾಹುಗಳನ್ನು ಚಾಚಿದೆ. ಪ್ರಸ್ತುತ ಗಲಭೆಗಳಲ್ಲಿ ಗುಜ್ಜರ್ ಸಮುದಾಯದ ಮೇಲೆ ನಡೆದ ಆಕ್ರಮಣ ಇದಕ್ಕೊಂದು ನಿದರ್ಶನ. ಈ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳೂ ಪ್ರಶ್ನಾರ್ಹವಾಗಿವೆ.

ಒಂದು ದಶಕದ ಹಿಂದೆ ಪ್ರಾರಂಭಗೊಂಡ ಶಾಂತಿ ಪ್ರಕ್ರಿಯೆಯಲ್ಲಿ ಒಂದು ಪ್ರತ್ಯೇಕತಾವಾದಿ ಗುಂಪಿನೊಡನೆ ಮಾತುಕತೆ ನಡೆಸುವ ತೀರ್ಮಾನದಿಂದ ಸರ್ಕಾರವು ಕಾಶ್ಮೀರದಲ್ಲಿನ ಇತರ ಮೂಲಭೂತವಾದಿ, ಜಿಹಾದಿ ಗುಂಪುಗಳಿಗೂ, ಜಮ್ಮು ಮತ್ತು ಲಡಖ್ ಪ್ರಾಂತ್ಯದ ಹಿಂದೂ ಮತೀಯ ಶಕ್ತಿಗಳಿಗೂ ತಮ್ಮ ಕಬಂಧ ಬಾಹುಗಳನ್ನು ಚಾಚಲು ಮುಕ್ತ ಅವಕಾಶ ನೀಡಿದೆ. ಪ್ರತ್ಯೇಕತಾವಾದವನ್ನು ತೀವ್ರವಾಗಿ ಪ್ರತಿಪಾದಿಸುತ್ತಿರುವ ಎ.ಪಿ.ಹೆಚ್.ಸಿ ಸಂಘಟನೆಯು 2004ರಲ್ಲಿ ಶಾಂತಿ ಪ್ರಕ್ರಿಯೆಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಂದರ್ಭದಲ್ಲಿ ಅದರ ನಾಯಕ ಮಿರ ವಾಯಿಝ್ ಫರೂಕ್‌ರವರು ಈ ಮಾತುಕತೆಗಳು ಕಾಶ್ಮೀರದ ಇತಿಹಾಸದಲ್ಲೇ ಮಹತ್ವದ ಘಟನೆ ಎಂದು ಹೇಳಿದ್ದುದನ್ನು ಇಲ್ಲಿ ಸ್ಮರಿಸಬೇಕು. ಅವರ ಮಾತಿನಲ್ಲಿ ಜಮ್ಮು ಮತ್ತು ಲಡಖ್ ಉಲ್ಲೇಖವಾಗದಿದ್ದುದು ಪ್ರಜ್ಞಾಪೂರ್ವಕವಾಗಿತ್ತೆಂದು ಹೇಳಬೇಕಿಲ್ಲ. ಇಡೀ ಶಾಂತಿ ಪ್ರಕ್ರಿಯೆಯಲ್ಲಿ ಭಾರತ ಸರ್ಕಾರವು ಪ್ರಜಾತಾಂತ್ರಿಕ ಸಂಘಟನೆಗಳ ಮತ್ತು ಪ್ರತ್ಯೇಕತೆಯನ್ನು ಬಯಸದ ಗುಂಪುಗಳನ್ನು ಪರಿಗಣಿಸಲೇಇಲ್ಲ. ಬಹುಪಕ್ಷೀಯ ಮಾತುಕತೆಗಳನ್ನು ಪ್ರಾರಂಭಿಸಿದಲ್ಲಿ ತಮಗೆ ಬಗೆಹರಿಸಲಾರದ ಸಮಸ್ಯೆಗಳು ಎದುರಾಗುತ್ತವೆ ಎಂಬ ಸತ್ಯಾಂಶವನ್ನು ಅರಿತ ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳು ಇಂತಹ ಪ್ರಕ್ರಿಯೆಗೆ ಚಾಲನೆ ನೀಡಲೇ ಇಲ್ಲ.

ಜಮ್ಮು-ಕಾಶ್ಮೀರದಲ್ಲಿ ರಾಜಕೀಯ ನೆಲೆಗಟ್ಟಿನಲ್ಲಿ ಬೇರೂರಿರುವ ಧಾರ್ಮಿಕ-ಮತೀಯ-ಕೋಮುವಾದಿ ಭಾವನೆಗಳು ತಮ್ಮ ಪರಾಕಾಷ್ಠೆ ತಲುಪಿರುವುದು ಇತ್ತೀಚಿನ ಗಲಭೆಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. 2006ರಲ್ಲಿ ಲಷ್ಕರ್ ಉಗ್ರವಾದಿಗಳು ಉಧಂಪುರ ಗ್ರಾಮದ ನಿಹೋಚ್ ದುಂಗಾದಲ್ಲಿ 65 ಜನ ಮುಸ್ಲಿಮರನ್ನು ಹತ್ಯೆಮಾಡಿದಾಗ, 65 ವರ್ಷ ವಯಸ್ಸಿನ ಅಬ್ದುಲ್ ಅಹಾದ್ ಎಂಬಾತನನ್ನು ಕೊಚ್ಚಿಹಾಕಿದಾಗ, ಇತರ ಆರು ಗ್ರಾಮಸ್ಥರ ಕಗ್ಗೊಲೆ ಮಾಡಿದಾಗ ಯಾವುದೇ ಹಿಂದೂ ರಾಜಕಾರಣಿಯೂ ತಿರುಗಿ ನೋಡಿರಲಿಲ್ಲ. ನಂತರದಲ್ಲಿ 13 ಜನ ಹಿಂದೂ ಗ್ರಾಮಸ್ಥರ ಕೊಲೆಯಾದಾಗ, ನೇಪಾಲದ ವಲಸೆ ಕಾರ್ಮಿಕರ ಹತ್ಯೆ ನಡೆದಾಗಲೂ ಯಾವುದೇ ಮುಸ್ಲಿಂ ರಾಜಕಾರಣಿ ಸ್ಥಳಕ್ಕೆ ಭೇಟಿ ನೀಡಿರಲಿಲ್ಲ. ಇಸ್ಲಾಮಿಕ್ ಸಂಘಟನೆಗಳು ಕಾಶ್ಮೀರದ ಎಲ್ಲ ಸಮಸ್ಯೆಗಳಿಗೆ ವಲಸೆ ಕಾರ್ಮಿಕರೇ ಕಾರಣ ಎಂದು ದೂಷಿಸುವುದು, 2006 ರಲ್ಲಿ ಸ್ಫೋಟಗೊಂಡ ವೇಶ್ಯಾವಟಿಕೆ ಹಗರಣದ ನಂತರ ಸೆಕ್ಯುಲರಿಸಂ ಮತ್ತು ಆಧುನಿಕತೆ ಇಸ್ಲಾಮಿ ಸಂಸ್ಕೃತಿಯನ್ನು ನಾಶ ಮಾಡುತ್ತಿದೆ ಎಂದು ದೂಷಿಸುವುದು, ಹೊರಗಿನಿಂದ ವಲಸೆ ಬರುವ ಕಾರ್ಮಿಕರಿಂದ ಕಾಶ್ಮೀರಿಗಳಿಗೆ ಉಳಿಗಾಲವಿಲ್ಲ ಎಂದು ದೂಷಿಸುವುದು, ಸಾಮಾನ್ಯವಾಗಿದೆ.

ಮತ್ತೊಂದೆಡೆ ಜಮ್ಮು ಪ್ರಾಂತ್ಯದಲ್ಲೂ ಹಿಂದೂ ಸಂಘಟನೆಗಳು ಮತೀಯವಾದವನ್ನು ಬೆಳೆಸುವುದರ ಮೂಲಕ ಕಾಶ್ಮೀರಿ ಪಂಡಿತರ ಉಚ್ಚಾಟನೆಯನ್ನೇ ಪ್ರಧಾನ ಅಸ್ತ್ರವನ್ನಾಗಿ ಬಳಸುತ್ತಿದೆ. ಇತ್ತೀಚೆಗೆ ಮುಫ್ತಿ ಮಹಮ್ಮದ್ ಸಯಿದ್‌ರವರು ಮಿಲಿಟರಿಯನ್ನು ಹಿಂದೆಗೆದುಕೊಳ್ಳಲು ಆಗ್ರಹಿಸಿದಾಗ, ಅದರಿಂದ ಹಿಂದೂಗಳಿಗೆ ಉಳಿಗಾಲವಿಲ್ಲದಂತಾಗುತ್ತದೆ ಎಂದು ಸಂಘ ಪರಿವಾರ ಹುಯಿಲೆಬ್ಬಿಸಿತ್ತು. 2003ರಿಂದಲೂ ಸಂಘ ಪರಿವಾರವು ಗೋಹತ್ಯೆಯ ವಿವಾದವನ್ನೇ ತನ್ನ ಬತ್ತಳಿಕೆಯ ಮುಖ್ಯ ಅಸ್ತ್ರವನ್ನಾಗಿ ಮಾಡಿಕೊಂಡಿದೆ. ದಶಕಗಳಿಂದಲೂ ಜಮ್ಮುವಿನಲ್ಲಿರುವ ಹಿಂದೂಗಳು ಉಪಯುಕ್ತವಲ್ಲದ ಗೋವುಗಳನ್ನು ಪಂಜಾಬ್ ಮತ್ತು ರಾಜಸ್ಥಾನದ ವರ್ತಕರಿಗೆ ಮಾರಾಟ ಮಾಡುತ್ತಿದ್ದಾರೆ. ಈ ವರ್ತಕರು ಗೋವುಗ

(21ನೇ ಪುಟಕ್ಕೆ)

ಕುಡಿಯುವ ನೀರು ಯಾರ ಪಾಲು?

'ಹೌದು! ನಾನು ಶಾಲೆಯಲ್ಲಿರಬೇಕೆಂದು ಬಯಸಿದ್ದೆ ನಾನು ಓದಲು ಮತ್ತು ಬರೆಯುವದನ್ನು ಕಲಿಯಬೇಕೆಂದಿದ್ದೆ ಆದರೆ, ಅದು ನನಗೆ ಹೇಗೆ ಸಾಧ್ಯ?' ನನ್ನ ತಾಯಿಗೆ ನೀರು ತಂದುಕೊಡಲು ನಾನು ಬೇಕು!

–ಎನಿಬಿಜನ್. ೧೦ವರ್ಷ, ಬೊಲಿವಿಯಾ....

'ನಾವು ಬೇಸಿಗೆ ಕಾಲದಲ್ಲಿ ತುಂಬಾ ಕೊಳಕಾಗಿರುತ್ತೇವೆ. ನಾವು ಎಷ್ಟೋ ವಾರಗಳವರೆಗೆ ನಮ್ಮ ಬಟ್ಟೆಗಳನ್ನು ತೊಳೆಯುವುದಿಲ್ಲ. ನೀರಿಲ್ಲದೆ ನಾವು ಸ್ವಚ್ಛವಾಗಿರಲು ಹೇಗೆ ಸಾಧ್ಯ?'

–ದಲಿತ ಮಹಿಳೆ ಇಂಡಿಯಾ..

'ಈ ಕೆರೆಯಲ್ಲಿ ನೀರು ಸರಿಯಾಗಿಲ್ಲ. ನಾವು ಈ ನೀರನ್ನೇ ಬಳಸುತ್ತೇವೆ. ಏಕೆಂದರೆ ಬೇರೆ ದಾರಿಯಿಲ್ಲ. ಎಲ್ಲಾ ಪ್ರಾಣಿಗಳು ಹಾಗೂ ಜನರು ಕೂಡ ಇದೇ ಕೆರೆಯ ನೀರನ್ನು ಕುಡಿಯುತ್ತೇವೆ'

–ಜನಿಬೆಚ್ ಜಮೆಲ್– ಇಥಿಯೋಪಿಯಾ..

ಈ ವರ್ಷದ ತೀವ್ರ ಬೇಸಿಗೆ ಕಾಲದ ಬಿಸಿಲು ಹಾಗೂ ಬುಧ ಗ್ರಹ ಇಡೀ ಭಾರತವನ್ನು ಅತೀ ಹತ್ತಿರದಿಂದ ಆವರಿಸಿರುವ ಬಿಸಿಲಿನ ತಾಪದಿಂದ ಉಂಟಾದ 'ನೀರಿನ ಅಭಾವ'ವು ಮಾಧ್ಯಮಗಳ ಗಮನಕ್ಕೆ ಕಾರಣವಾಗಿದೆ. ವಿವಿಧ ರಾಜ್ಯಗಳ ಸರಕಾರಗಳು ನೀರಿನ ಅಭಾವ ಎದುರಿಸಲು, ಜನತೆಗೆ ಪರಿಹಾರ ನೀಡುವಲ್ಲಿ ಕ್ರಮ ಕೈಗೊಳ್ಳುವತ್ತ ಹೆಜ್ಜೆ ಹಾಕಿವೆ ಎಂದು ತೋರ್ಪಡಿಸಲು ಹಾತೊರೆಯುತ್ತಿವೆ.

ಹಾಗೆ ನೋಡಿದ್ರೆ ನೀರಿನ ಅಭಾವ ಬರೀ ಬೇಸಿಗೆ ಕಾಲಕ್ಕೆ ಸಿಮೀತವಾಗಿಯೂ ಇಲ್ಲ, ಹಾಗೂ ಅದು ಭಾರತ ದೇಶದ ಸಮಸ್ಯೆಯೊಂದೇ ಅಲ್ಲ. ಜಗತ್ತಿನ ಮೂರು ವಿಭಿನ್ನ ದೇಶಗಳ, ಈ ಮೇಲೆ ಹೇಳಿದ ಮಾತುಗಳು ನಮ್ಮ ಗಮನವನ್ನು ಒಂದೇ ದಿಕ್ಕಿನತ್ತ ಕರೆದೊಯ್ಯುತ್ತವೆ. ಮಾನವ ಜನಾಂಗ ಬದುಕುಳಿಯಲು ನೀರು ಅತ್ಯಂತ ಅಗತ್ಯ, ಮತ್ತು ಜನತೆ ನೀರು ಪಡೆಯದೆ ವಂಚಿತರಾಗುತ್ತಿರುವುದು. ಜಗತ್ತಿನ ನೀರಿನ ಅಭಾವ ಸಮೂಹ ಮಾಧ್ಯಮಗಳಲ್ಲಿ ಪ್ರಮುಖ ಸ್ಥಾನ ಪಡೆಯುತ್ತಿಲ್ಲ, ಹಾಗೂ ಈ ಜ್ವಲಂತ ಸಮಸ್ಯೆ ಅಂತರಾಷ್ಟ್ರೀಯ ರಾಜಕಾರಣದ ಚರ್ಚೆಯ ವಸ್ತುವಾಗುತ್ತಿಲ್ಲ. ಸ್ವಚ್ಛ ನೀರಿನ ಅಭಾವದಿಂದಾಗಿ ಬಡಜೀವಿಗಳು ನಿಶ್ಯಬ್ದವಾಗಿಯೇ ತಮ್ಮ ಜೀವ ಕಳೆದುಕೊಳ್ಳುತ್ತಿವೆ.

ಈ ನೀರಿನ ಅಭಾವವು ಯಾವುದೇ ಜಗತ್ತಿನ ಯದ್ಧಗಳಲ್ಲಿ ಸತ್ತ ನಾಗರಿಕನಿಗಿಂತ, ಹೆಚ್ಚಿನ ಜನಸಂಖ್ಯೆಯನ್ನು ಸಾವಿಗೀಡುಮಾಡಿದೆ ಎಂದು ವಿಶ್ವಸಂಸ್ಥೆ ಉಚ್ಚರಿಸಿದೆ. 'ಸ್ವಚ್ಛ ನೀರಿನ ಅಭಾವ' ವಿಶೇಷವಾಗಿ ಬಡ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಗಂಭೀರ ಸವಾಲುಗಳನ್ನು ತಂದೊಡಿದ್ದು, ಸರಕಾರ ಪ್ರಕಟಿಸಿದ ಅಂಕಿ ಸಂಖ್ಯೆಗಳನ್ನು ಅಭ್ಯಸಿಸಿದರೆ, ನೀರಿನ ಅಭಾವದ ಭೀಕರ ಸಮಸ್ಯೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗದೆ, ಅದು ಕೇವಲ ಸಮಸ್ಯೆಯ ಒಂದು ಭಾಗವನ್ನು ಮಾತ್ರ ಪ್ರತಿಬಿಂಬಿಸುತ್ತಿದ್ದು, ಇದು ಜಗತ್ತಿನಾದ್ಯಂತ, ಕೆಳಸ್ತರದಲ್ಲಿ ಬದುಕುತ್ತಿರುವ ಜನತೆ, ಸರಕಾರದ 'ಪ್ರಕಾಶಿಸುತ್ತಿರುವ ಪ್ರಪಂಚ' 'SHINING WORLD' ಉದ್ಘೋಷಣೆಯ ಹೊರಗುಳಿದಿದ್ದಾರೆ. ಸ್ವಚ್ಛನೀರು ಮೂಲಭೂತ ಅಗತ್ಯ ಹಾಗೂ ಅದು ಜಗತ್ತಿನ ಮಾನವ ಜನಾಂಗದ ಮೂಲಭೂತ ಹಕ್ಕು ಕೂಡ ಎಂದು ವಿಶ್ವಸಂಸ್ಥೆ ಹೇಳಿಕೆ ನೀಡಿದೆ.

ಸ್ವಚ್ಛ ನೀರಿನ ಹಂಚಿಕೆಯಲ್ಲಿ ಅಸಮತೋಲನ:

ನಮ್ಮ ಬಾಲ್ಯದಿಂದ ನಾವು ತಿಳಿದಿದ್ದೆಂದರೆ, ನೀರಿನ ಮತ್ತೊಂದು ಹೆಸರು ಜೀವ. ಮಾನವಸಮಾಜ ಅಭಿವೃದ್ಧಿಯಲ್ಲಿ ನೀರು ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಮಾನವ ಜನಾಂಗದ ಅತೀ ದೊಡ್ಡ ನಾಗರಿಕತೆಯ ಇತಿಹಾಸಗಳು ನದೀ ಪಕ್ಕದಲ್ಲೇ ಅಭಿವೃದ್ಧಿ ಹೊಂದಿವೆ. ನೀರು ನಾಗರಿಕತೆಯನ್ನು ಹುಟ್ಟುಹಾಕಿ, ಬೆಳೆಸಿ ಅಭಿವೃದ್ಧಿ ಪಡಿಸಿದೆ ಹಾಗೂ ಹಲವೊಮ್ಮೆ ನಾಶಮಾಡಿದೆ ಕೂಡ. 'ಸಿಂಧೂ ಬಯಲಿನ ನಾಗರಿಕತೆ' ಪ್ರವಾಹದಿಂದಲೇ ನಾಶವಾದದ್ದು. ಇಡೀ ಜಗತ್ತಿನ ಭೂಭಾಗವನ್ನು ಶೇ ೭೦.೮% ರಷ್ಟು ನೀರು ತುಂಬಿದೆ. ಇದರ ಶೇ ೯೭% ರಷ್ಟು ಉಪ್ಪಿನಿಂದ ಕೂಡಿದ್ದು, ಬಳಸಲು ಅನುಪಯುಕ್ತವಾಗಿದೆ. ಶೇ ೩% ಮಾತ್ರ ಸಿಹಿನೀರಿದೆ. ಇದರ ಶೇ ೨%ರಷ್ಟು ಉತ್ತರ ಮತ್ತು ದಕ್ಷಿಣ ತುದಿಯಲ್ಲಿದ್ದು ೧% ಮಾತ್ರ ಜಗತ್ತಿನ ಜನರ ನೀರಿನ ಬೇಡಿಕೆ ಪೂರೈಸಲು ಲಭ್ಯವಾಗಿದೆ.

೨೧ನೇ ಶತಮಾನದ ಪ್ರಾರಂಭದಲ್ಲಿ ಒಂದು ಬಿಲಿಯನ್ ಲಕ್ಷದಷ್ಟು ಜನರಿಗೆ ಸ್ವಚ್ಛ ನೀರು ಪಡೆಯುವ ಹಕ್ಕು ಇಲ್ಲ. ಈ ಮೂಲಕ ಜನತೆಯ ಮೂಲಭೂತ ಅವಶ್ಯಕತೆಯಾದ ನೀರನ್ನು ಪಡೆಯುವಲ್ಲಿ ನಿರಾಕರಿಸಲಾಗಿದೆ, ಹಾಗೂ ನೀರು ಪಡೆಯುವ ಹಕ್ಕು ಕೇವಲ ಕಾಗದದ ಹೇಳಿಕೆಯಾಗಿ

ಈ ನೀರಿನ ಅಭಾವವು ಯಾವುದೇ ಜಗತ್ತಿನ ಯದ್ಧಗಳಲ್ಲಿ ಸತ್ತ ನಾಗರಿಕನಿಗಿಂತ, ಹೆಚ್ಚಿನ ಜನಸಂಖ್ಯೆಯನ್ನು ಸಾವಿಗೀಡು ಮಾಡಿದೆ ಎಂದು ವಿಶ್ವಸಂಸ್ಥೆ ಉಚ್ಚರಿಸಿದೆ. 'ಸ್ವಚ್ಛ ನೀರಿನ ಅಭಾವ' ವಿಶೇಷವಾಗಿ ಬಡ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಗಂಭೀರ ಸವಾಲುಗಳನ್ನು ತಂದೊಡಿದ್ದು, ಸರಕಾರ ಪ್ರಕಟಿಸಿದ ಅಂಕಿ ಸಂಖ್ಯೆಗಳನ್ನು ಅಭ್ಯಸಿಸಿದರೆ, ನೀರಿನ ಅಭಾವದ ಭೀಕರ ಸಮಸ್ಯೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗದೆ, ಅದು ಕೇವಲ ಸಮಸ್ಯೆಯ ಒಂದು ಭಾಗವನ್ನು ಮಾತ್ರ ಪ್ರತಿಬಿಂಬಿಸುತ್ತಿದ್ದು, ಇದು ಜಗತ್ತಿನಾದ್ಯಂತ, ಕೆಳಸ್ತರದಲ್ಲಿ ಬದುಕುತ್ತಿರುವ ಜನತೆ, ಸರಕಾರದ 'ಪ್ರಕಾಶಿಸುತ್ತಿರುವ ಪ್ರಪಂಚ' 'SHINING WORLD' ಉದ್ಘೋಷಣೆಯ ಹೊರಗುಳಿದಿದ್ದಾರೆ. ಸ್ವಚ್ಛನೀರು ಮೂಲಭೂತ ಅಗತ್ಯ ಹಾಗೂ ಅದು ಜಗತ್ತಿನ ಮಾನವ ಜನಾಂಗದ ಮೂಲಭೂತ ಹಕ್ಕು ಕೂಡ ಎಂದು ವಿಶ್ವಸಂಸ್ಥೆ ಹೇಳಿಕೆ ನೀಡಿದೆ.

ಮೂಲ: ತಿಮಿಭರನ್ ಬಟ್ಟಾಚಾರ್ಯ
ಅನು: ಡಿ. ರವಿವರ್ಮ

ಉಳಿದಿದೆ. ಅಶುದ್ಧ ನೀರಿನ ಸೇವನೆಯಿಂದಾಗಿ ಪ್ರತಿವರ್ಷ ೧.೮ ಬಿಲಿಯನ್‌ನಷ್ಟು ಮಕ್ಕಳು ಅಸುನೀಗುತ್ತಿದ್ದಾರೆ ಎನ್ನುವ ಕ್ರೂರ ಸತ್ಯ ನಿಜಕ್ಕೂ ಆಶ್ಚರ್ಯ. ಅಶುದ್ಧ ನೀರು ಇಡೀ ಜಗತ್ತಿನ ಈ ಶತಮಾನದ ಮಕ್ಕಳನ್ನು ಸಾಯಿಸುವಲ್ಲಿ ಎರಡನೇ ಸ್ಥಾನ ಪಡೆದಿದೆ. ವಿಶ್ವಸಂಸ್ಥೆ ಹೇಳಿಕೆಯಂತೆ ಪ್ರತಿಯೊಬ್ಬ ವ್ಯಕ್ತಿ ತನ್ನ ಮೂಲಭೂತ ಅವಶ್ಯಕತೆಗಳ ನೀಗಿಸಲು ಕನಿಷ್ಠ ೨೦ ಲೀಟರನಷ್ಟು ನೀರು ಬೇಕಾಗುತ್ತದೆ. ಜಗತ್ತಿನ ಒಂದು ಬಿಲಿಯನ್‌ನಷ್ಟು ಜನತೆಗೆ ದಿನಕ್ಕೆ ಕೇವಲ ೫ಲೀಟರ್ ನೀರು ಲಭ್ಯವಿದ್ದರೆ, ಶ್ರೀಮಂತ ರಾಷ್ಟ್ರಗಳಲ್ಲಿ ಇದರ ಹತ್ತುಪಟ್ಟು ನೀರನ್ನು ಪಾಯಿಖಾನೆಗಾಗಿ ಬಳಸಲಾಗುತ್ತಿದೆ.

ಅಮೇರಿಕಾ ಮತ್ತು ಯುರೋಪ್ ರಾಷ್ಟ್ರಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ದಿನಕ್ಕೆ ೨೦೦ರಿಂದ ೪೦೦ ಲೀಟರ್‌ನಷ್ಟು ಸ್ವಚ್ಛ ನೀರನ್ನು ಪೂರೈಸಲಾಗುತ್ತಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅಶುದ್ಧ ನೀರಿನ ಬಳಕೆಯಿಂದಾಗಿ ಬಾಲಕರು ಸಾವಿಗೀಡಾಗುತ್ತಿಲ್ಲ. ಹೀಗಾಗಿ ಸ್ವಚ್ಛ ನೀರಿನ ಸಮಸ್ಯೆ ಹಿಂದುಳಿದಿರುವ, ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಬಡಜನತೆಯ ಸಮಸ್ಯೆಯಾಗಿದೆ. ಜಾಗತೀಕರಣ ವ್ಯವಸ್ಥೆಯಲ್ಲಿ ಇನ್ನುಳಿದ ವಸ್ತುಗಳ ಸಮಸ್ಯೆಯಂತೆ, ಸ್ವಚ್ಛ ನೀರು ಕೂಡ ಬಡಜನತೆಯ ಸಮಸ್ಯೆಯಾಗಿದೆ. ಬಡಜನತೆಗೆ ದಕ್ಕಬೇಕಾದ ನೀರು ಕೂಡ ಶ್ರೀಮಂತರಿಗೆ ಬಿಟ್ಟುಕೊಡುವ ಅನಿವಾರ್ಯತೆ ಬಂದೊದಗಿದೆ. ಇಂಡೋನೇಷಿಯಾದ ಜಕಾರ್ತ, ಫಿಲಿಪೈನ್ಸ್‌ನ ಮನೀಲಾ, ನೈರೋಬಿಯಾದ ಕೀನ್ಯಾ ಇನ್ನುಳಿದ ಕಡೆ ಕೊಳಗೇರಿ ನಿವಾಸಿಗಳು ೫ರಿಂದ ೧೦ ಪಟ್ಟು ಹೆಚ್ಚು ಹಣವನ್ನು ಇನ್ನುಳಿದ ಜನರಿಗಿಂತ ಸ್ವಚ್ಛ ನೀರಿಗಾಗಿ ಬೆಲೆ ತೆರುತ್ತಿದ್ದಾರೆ.

ಇ.ಡಿ. ಸಲ್ವಡಾರ್, ಜಾಮೀಕಾ, ನಿಕರಾಗುವಾದ ಶೇ. ೨೦%ರಷ್ಟು ಬಡಜನತೆ, ತಮ್ಮ ದಿನ ಆದಾಯದ ಶೇ. ೧೦% ರಷ್ಟು ಸ್ವಚ್ಛ ನೀರಿಗಾಗಿ ವ್ಯಯಿಸುತ್ತಿದ್ದರೆ, ಯುನೈಟೆಡ್ ಕಿಂಗ್‌ಡಂನಲ್ಲಿ ೩% ವ್ಯಯಿಸುತ್ತಿರುವುದು ಕಷ್ಟಕರ ಎಂದು ಪರಿಗಣಿಸಲಾಗಿದೆ. ೨೦೦೭-೦೮ ಮಾನವ ಅಭಿವೃದ್ಧಿ ಮಾಪಕದಂತೆ, ಕೆಳಹಂತದ ೧೦ ರಾಷ್ಟ್ರಗಳಲ್ಲಿ ಒಂದಾದ ಇಥಿಯೋಪಿಯಾ ತನ್ನ ದೇಶದ ಜನರ ನೀರಿಗಾಗಿ ವೆಚ್ಚ ಮಾಡಿದ ಹಣಕ್ಕಿಂತ, ಹತ್ತುಪಟ್ಟು ಹೆಚ್ಚು ಹಣವನ್ನು ಮಿಲಿಟರಿಗಾಗಿ ವೆಚ್ಚಮಾಡಿದರೆ, ಪಾಕಿಸ್ತಾನವು ನೀರಿಗಾಗಿ ವೆಚ್ಚಮಾಡಿದ ಹಣಕ್ಕಿಂತ ಸುಮಾರು ೪೭ಪಟ್ಟು ಹೆಚ್ಚು ಹಣವನ್ನು ಮಿಲಿಟರಿಗಾಗಿ ವಿನಿಯೋಗಿಸಿದೆ. ಬಡರಾಷ್ಟ್ರಗಳಲ್ಲಿ ರಾಜಕೀಯ ವರಮಾನದ ಹೆಚ್ಚು ಹಣವನ್ನು ಯುದ್ಧ ಸಾಮಗ್ರಿಗೆ ವೆಚ್ಚ ಮಾಡುವದನ್ನು ನೋಡಿದಾಗ ಇವರಿಗೆ ಬದುಕಿಗೆ ಮೂಲಭೂತ ಅಗತ್ಯವಾದ ನೀರಿಗಿಂತ ಯುದ್ಧ ಸಾಮಗ್ರಿಯೇ (ಮಿಲಿಟರಿ ಸಾಮಗ್ರಿಯೇ) ಮುಖ್ಯವೆಂದು ಭಾವಿಸಿದಂತಿದೆ.

<u>ಭಾರತದ ಪರಿಸ್ಥಿತಿ:</u>

ಇಡೀ ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ. ೧% ರಷ್ಟು ಜನತೆ ಭಾರತದಲ್ಲಿ ವಾಸಿಸುತ್ತಿದೆ. ಈ ನದಿಗಳ ನಾಡಿನಲ್ಲಿ ಜಗತ್ತಿನ ಕೇವಲ ಶೇ. ೪% ನೀರಿನ ಪ್ರಮಾಣ ವಿದೆ. ನಮ್ಮ ನೀರಿನ ಮೂಲವೆಂದರೆ ಮಳೆನೀರು. ಮಳೆಯಿಂದಲೇ ೪೦೦೦ ಬಿಲಿಯನ್ ಕ್ಯೂಬಿಕ್ ಮೀಟರಿನಷ್ಟು ನೀರು ದೊರೆಯುತ್ತದೆ. ಅದರ ಶೇ. ೭೫% ರಷ್ಟು ಮಳೆ ಗಾಲದಲ್ಲಿ ದೊರೆಯುತ್ತದೆ. ಮಳೆಗಾಲದ ವ್ಯತ್ಯಾಸದಿಂದಾಗಿ ದೇಶದ ಹಲವೆಡೆ ಪ್ರವಾಹ ಇನ್ನೂ ಕೆಲವೆಡೆ ಬರಗಾಲ ಉಂಟಾಗುತ್ತಿದೆ. ರಾಜಸ್ತಾನದ ಪಶ್ಚಿಮ

ನೀರು ಜನತೆಯ ಜೀವ ಆದರೆ ಬಹುರಾಷ್ಟ್ರೀಯ ಕಂಪನಿಗಳಿಗೆ ಇದು ಮಾರಾಟದ ವಸ್ತುವಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಇಡೀ ಜಗತ್ತಿನ ನೀರಿನ ವ್ಯವಸ್ಥೆಯ ಮೇಲೆ ತಮ್ಮ ಹಿಡಿತ ಸಾಧಿಸಿಕೊಳ್ಳಲು ವೇದಿಕೆ ನಿರ್ಮಿಸುತ್ತವೆ. ಜಗತ್ತಿನಲ್ಲಿ ಇಂದು ಬಾಟಲಿ ನೀರಿನ ಉದ್ಯಮ ಅತಿ ತ್ರೀವ ಗತಿಯಲ್ಲಿ ಬೆಳೆಯುತ್ತಿದ್ದು, ಇದು ಅತೀ ಕಡಿಮೆ ಹಿಡಿತಕ್ಕೊಳ್ಳಪಟ್ಟ ಉದ್ಯಮವೂ ಹೌದು.ಪ್ರತಿವರ್ಷ ೧೦,೦೦೦ ಕೋಟಿ ಲೀಟರಿನಷ್ಟು ನೀರು ಇಡೀ ಜಗತ್ತಿನಲ್ಲಿ ಮಾರಾಟವಾಗುತ್ತಿದೆ. ಪ್ರತಿವರ್ಷ ೧ಲಕ್ಷ ಕೋಟಿ ಡಾಲರ್‌ನಷ್ಟು ಲಾಭವನ್ನು ಈ ಉದ್ಯಮ ಗಳಿಸುತ್ತಿದೆ. ಇದು ಪೆಟ್ರೋಲಿಯಂ ಕಂಪನಿಗಳ ಉದ್ಯಮ ಗಳಿಸುವ ಲಾಭಕ್ಕಿಂತ ಸುಮಾರು ೪೦% ಹೆಚ್ಚಿದೆ. ಅಷ್ಟೇ ಅಲ್ಲದೆ ಔಷಧಿ ರಂಗ ಗಳಿಸುತ್ತಿರುವ ಲಾಭಕ್ಕಿಂತಲೂ ಹೆಚ್ಚಿದೆ. ಕೇವಲ ಹತ್ತು ದೊಡ್ಡ ಕಂಪನಿಗಳು ಇಡೀ ಜಗತ್ತಿನ ಶುದ್ಧ ನೀರಿನ ಸರಬರಾಜಿನ ವ್ಯವಸ್ಥೆಯನ್ನು ತಮ್ಮ ಕಪಿಮುಷ್ಠಿಯ ಹಿಡಿತದಲ್ಲಿಟ್ಟುಕೊಂಡಿವೆ.

ಭಾಗದ ಜನ ಒಂದು ಬಕೆಟ್ ಸ್ವಚ್ಛ ನೀರಿಗಾಗಿ ಮೈಲುಗಟ್ಟಲೆ ದೂರ ನಡೆಯಬೇಕಾಗುತ್ತದೆ. ದೇಶದ ಒಟ್ಟು ಜನಸಂಖ್ಯೆಯ ಸುಮಾರು ಕಾಲು ಭಾಗದಷ್ಟು ಜನರು ಬರಗಾಲ ಪೀಡಿತ ಜಾಗದಲ್ಲಿ ವಾಸಿಸುತ್ತಿದ್ದು ಸ್ವಚ್ಛ ನೀರಿಲ್ಲದೆ ನರಳುತ್ತಾ ಬದು ಕುತ್ತಿದ್ದಾರೆ.

ಗುಜರಾತಿನ 'ಸ್ವಯಂ ಉದ್ಯೋಗಸ್ಥ ಮಹಿಳೆಯರ ಸಂಸ್ಥೆ' ಮಾಡಿದ ಸಮೀಕ್ಷೆಯ ವರದಿಯಂತೆ, ನೀರಿಗಾಗಿ ಮಹಿಳೆಯರು ವ್ಯಯಿಸುವ ಅಧಿಕ ಸಮಯ ಪಡುವ ಶ್ರಮದಿಂದಾಗಿ, ಅವರ ದಿನನಿತ್ಯದ ದುಡಿಮೆ ಕಡಿಮೆಯಾಗುತ್ತಿದ್ದು, ಬಡ ಭಾರತ ದೇಶದಲ್ಲಿ ದೂರದಿಂದ ನೀರು ತರುವ ಕೆಲಸ ಮಹಿಳೆಯರದಾಗಿದ್ದು, ಇವರ ಅಧಿಕವೇಳೆ ಕಳೆದು ಹೋಗುತ್ತಿರುವುದರಿಂದ, ಉಹಿಸಿದ್ದಕ್ಕಿಂತಲೂ, ಮಹಿಳಾ ಅಕ್ಷರಸ್ಥರ ಸಂಖ್ಯೆ ಕಡಿಮೆಯಾಗುತ್ತಿದೆ. ನಮ್ಮ ದೇಶದ ಕೇವಲ ಎರಡು ರಾಜ್ಯಗಳಲ್ಲಿ ಮಾತ್ರ ಅತ್ಯಧಿಕ ನೀರಿದೆ. ಪಶ್ಚಿಮ ಬಂಗಾಲದ ಕೆಲವು ಜಿಲ್ಲೆಗಳಲ್ಲಿ ಕೂಡ ನೈಸರ್ಗಿಕ ಕಾರಣಗಳಿಂದ, ಬೇಸಿಗೆ ಕಾಲದಲ್ಲಿ ಸ್ವಚ್ಛ ನೀರಿನ ಜನತೆ ಅಭಾವವನ್ನು ಎದುರಿಸುತ್ತಿದೆ. ಸುಮಾರು ಶೇ. ೮೫% ಗ್ರಾಮೀಣ ಜನ ಕೃಷಿ ಮತ್ತು ಗೃಹಬಳಕೆಗೆ ಭೂಮಿ ನೀರಿನ ಮೇಲೆ ಅವಲಂಬಿತರಾಗಿದ್ದಾರೆ. ಇದು ಭೂಮಿ ಒಳಗಿನ ನೀರಿನ ಪ್ರಮಾಣ ಕಡಿಮೆ ಮಾಡುತ್ತಿದ್ದು, ನೀರಿನೊಟ್ಟಿಗೆ ಬರುವ ನೈಸರ್ಗಿಕ ಲವಣಗಳಿಂದಾಗಿ ಜನರಿಗೆ ಚರ್ಮ ರೋಗಗಳು ಬರುತ್ತಿವೆ.

ಸ್ವಾತಂತ್ರ್ಯ ಪಡೆದು ೬೦ವರ್ಷವಾದರೂ ಸುಮಾರು ೧೭ಕೋಟಿಯಷ್ಟು ಜನರಿಗೆ ಸ್ವಚ್ಛ ನೀರು ಸಿಗುತ್ತಿಲ್ಲ. ಭಾರತ ದೇಶವು ಪರಮಾಣು ಬಾಂಬು ಹೊಂದಿದೆ. 'ಡೈಯೇರಿಯಾ' ಕಲುಷಿತ ನೀರಿನಿಂದ ಉಂಟಾಗುವ ರೋಗ. ಪ್ರತೀವರ್ಷ ೪,೫೦,೦೦೦ ಜೀವಿಗಳನ್ನು ಸಾಯಿಸುತ್ತಿದ್ದು, ಇದು ವಿಶ್ವದಲ್ಲೇ ಅತೀ ಹೆಚ್ಚಿನ ಸ್ಥಾನ ಪಡೆದಿದೆ. ಭಾರತ ದೇಶವು ತನ್ನ ರಾಷ್ಟ್ರೀಯ ಆದಾಯದಲ್ಲಿ ನೀರಿಗಾಗಿ ವೆಚ್ಚಮಾಡುವ ಹಣಕ್ಕಿಂತ ೮ಪಟ್ಟು ಹೆಚ್ಚು ಹಣವನ್ನು ಸೈನ್ಯಕ್ಕೆ ವೆಚ್ಚಮಾಡುತ್ತಿದೆ. ಭಾರತದೇಶದ ಕೊಳಗೇರಿ ನಿವಾಸಿಗಳು, ಬಳಸುವ ನೀರಿಗಿಂತ, ಶ್ರೀಮಂತರು ಸುಮಾರು ೧೫ಪಟ್ಟು ಹೆಚ್ಚು ನೀರನ್ನು ಬಳಸುತ್ತಿದ್ದಾರೆ. ಈ ಕೊಳಗೇರಿ ಜನರ ದುಡಿಮೆಯ ಹೆಚ್ಚು ಭಾಗ ಸ್ವಚ್ಛ ನೀರು ಪಡೆಯುವಲ್ಲಿ ವಿನಿಯೋಗಿಸುತ್ತಿದೆ.

ಜಗತ್ತಿನ ನೀರನ್ನು ಹಿಡಿದಿಡಲು ವೇದಿಕೆ:

ಇಂದು ಜಗತ್ತಿನಲ್ಲಿ ಪ್ರತಿ ನಾಲ್ವರಲ್ಲಿ ಒಬ್ಬರಿಗೆ ಸ್ವಚ್ಛ ನೀರು ಸಿಗುತ್ತಿಲ್ಲ. ಜಗತ್ತಿನ ಸುಮಾರು ಶೇ. ೧೨% ರಷ್ಟು ಜನರು ಸುಮಾರು ಶೇ. ೮೬% ರಷ್ಟು ಸ್ವಚ್ಛ ನೀರನ್ನು ಬಳಸುತ್ತಿದ್ದಾರೆ. ಜಗತ್ತಿನ ನೀರಿನ ಬೇಡಿಕೆ ಇನ್ನೂ ೨೦ ವರ್ಷಗಳಲ್ಲಿ ದ್ವಿಗುಣಗೊಳ್ಳಲಿದ್ದು, ನೀರಿಗಾಗಿ ಯುದ್ಧ ಮಾಡಬೇಕಾದ ಸನ್ನಿವೇಶ ನಿರ್ಮಾಣಗೊಳ್ಳಲಿದೆ. ಈಗಾಗಲೇ ಪ್ರತಿವರ್ಷವೂ ೫ ಮಿಲಿಯನ್‌ನಷ್ಟು ಜನರು ನೀರಿನಿಂದ ಉಂಟಾಗುವ ರೋಗಗಳಿಂದ ಸಾಯುತ್ತಿದ್ದಾರೆ. ಚೈನಾ ದೇಶದ ತೀವ್ರ ಕೈಗಾರಿಕಾ ಅಭಿವೃದ್ಧಿ ನೀರನ್ನು ಕಲುಷಿತಗೊಳಿಸುತ್ತಿದ್ದು, ಇದರ ಪರಿಣಾಮವನ್ನು ೩೦೦ ಮಿಲಿಯನ್‌ನಷ್ಟು ಜನರು ಎದುರಿಸುತ್ತಿದ್ದಾರೆ. ಇದು ಈ ದೇಶದ ಜನತೆಯ ಸುಮಾರು ೧/೩ರಷ್ಟಿದೆ. ಕೋಫಿ ಅನ್ನಾನ್ ಇವರ ಮಿಲೆನಿಯಂ ವರದಿ ನಮಗೆ ತಿಳಿಸುವುದೇನೆಂದರೆ, ಈಗಿನ ಪರಿಸ್ಥಿತಿ ಮುಂದುವರೆದರೆ, ಪ್ರತೀ ಮೂವರಲ್ಲಿ ಇಬ್ಬರು ನೀರಿನ ಕೊರತೆ ಎದುರಿಸುವ ದೇಶಗಳಲ್ಲಿ ವಾಸವಾಗಿರುತ್ತಾರೆ.

ವಿಶ್ವಬ್ಯಾಂಕ್ ಮುಂದಾಲೋಚನೆ ಪ್ರಕಾರ ೨೦೫೦ ರಲ್ಲಿ ಜಗತ್ತಿನ ಶೇ. ೪೫ರಷ್ಟು ಜನ ಸ್ವಚ್ಛ ನೀರಿನ ಅಭಾವವನ್ನು ಅನುಭವಿಸುತ್ತಾರೆ. ಪ್ಯಾಲೇಸ್ಟೈನ್, ಇಸ್ರೇಲ್‌ನಲ್ಲಿ ನೀರಿನ ಅಭಾವ ನೀಗಿಸುವುದೇ ದೊಡ್ಡ ಸಮಸ್ಯೆಯಾಗಿದ್ದು ಅದಲ್ಲದೆ, ಇನ್ನಿತರ ಗಡಿಗಳಲ್ಲೂ ನೀರಿನ ಸಂಘರ್ಷಗಳೇ ಬಹುದೊಡ್ಡ ಸವಾಲುಗಳಾಗಿವೆ. ಜಾಗತೀಕರಣವು ಎಲ್ಲವನ್ನು 'ಸರಕಾಗಿ' ಮಾರ್ಪಡಿಸುತ್ತಿದ್ದು 'ನೀರು' ಕೂಡ ಇದರಿಂದ ಹೊರತಾಗಿಲ್ಲ. ಸಮಾಜದಲ್ಲಿರುವ ಅಸಮಾನತೆ ಕೂಡ ಸ್ವಚ್ಛನೀರು ಪಡೆಯುವಲ್ಲಿ ತನ್ನ ಮಹತ್ವದ ಪಾತ್ರ ವಹಿಸುತ್ತಿದೆ. ಅಮೇರಿಕಾ ಸರಾಸರಿ ೬೦೦೦ ಕ್ಯೂಬಿಕ್ ಮೀಟರ್ ಅಣೆಕಟ್ಟುಗಳನ್ನು ನಿರ್ಮಿಸಿದ್ದರೆ, ಸಹರಾದ ಉಪ ದೇಶವಾದ ಇಥಿಯೋಪಿಯಾದಲ್ಲಿ ಕೇವಲ ೪೭ ಕ್ಯೂಬಿಕ್ ಮೀಟರ್ ಅಣೆಕಟ್ಟುಗಳಿವೆ.

ನೀರು ಜನತೆಯ ಜೀವ ಆದರೆ ಬಹುರಾಷ್ಟ್ರೀಯ ಕಂಪನಿಗಳಿಗೆ ಇದು ಮಾರಾಟದ ವಸ್ತುವಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಇಡೀ ಜಗತ್ತಿನ ನೀರಿನ ವ್ಯವಸ್ಥೆಯ ಮೇಲೆ ತಮ್ಮ ಹಿಡಿತ ಸಾಧಿಸಿಕೊಳ್ಳಲು ವೇದಿಕೆ ನಿರ್ಮಿಸುತ್ತವೆ. ಇಂಗ್ಲಂಡ್ ಮತ್ತು ಪ್ರಾನ್ಸ್ ದೇಶಗಳಲ್ಲಿ ನೀರನ್ನು ಖಾಸಗೀಕರಣಗೊಳಿಸುತ್ತಿದ್ದು, ಇದರಿಂದ ನೀರಿನ ಬೆಲೆ ಅತಿ ಹೆಚ್ಚಾಗಿದ್ದು, ನೀರಿನ ಅಭಾವ ಕೂಡ ಸೃಷ್ಟಿಯಾಗಿದೆ. ಬಹುದೊಡ್ಡ ಬಾಟಲ್ ನೀರನ್ನು ಉತ್ಪಾದಿಸುವ perrier, Evian, naya ಮತ್ತು Coco cola ಮತ್ತು Pepsi ಸ್ವಚ್ಛ ನೀರಿನ ಹಕ್ಕುಗಳನ್ನು ಕೊಂಡುಕೊಳ್ಳುತ್ತಿದ್ದು, ಇದರಿಂದಾಗಿ ಬಹುಮುಖ್ಯ ನೀರು ಸರಬರಾಜು ಸಂಗ್ರಹಗಳನ್ನು ಬರಿದಾಗಿಸುತ್ತಿವೆ. ಜಗತ್ತಿನಲ್ಲಿ ಇಂದು ಬಾಟಲಿ ನೀರಿನ ಉದ್ಯಮ ಅತಿ ತ್ರೀವ ಗತಿಯಲ್ಲಿ ಬೆಳೆಯುತ್ತಿದ್ದು, ಇದು ಅತೀ ಕಡಿಮೆ ಹಿಡಿತಕ್ಕೊಳ್ಳಪಟ್ಟ ಉದ್ಯಮವೂ ಹೌದು.

ಪ್ರತಿವರ್ಷ ೧೦,೦೦೦ ಕೋಟಿ ಲೀಟರಿನಷ್ಟು ನೀರು ಇಡೀ ಜಗತ್ತಿನಲ್ಲಿ ಮಾರಾಟವಾಗುತ್ತಿದೆ. ಪ್ರತಿವರ್ಷ ೧ಲಕ್ಷ ಕೋಟಿ ಡಾಲರ್‌ನಷ್ಟು ಲಾಭವನ್ನು ಈ ಉದ್ಯಮ ಗಳಿಸುತ್ತಿದೆ. ಇದು ಪೆಟ್ರೋಲಿಯಂ ಕಂಪನಿಗಳ ಉದ್ಯಮ ಗಳಿಸುವ ಲಾಭಕ್ಕಿಂತ ಸುಮಾರು ೪೦% ಹೆಚ್ಚಿದೆ. ಅಷ್ಟೇ ಅಲ್ಲದೆ ಔಷಧಿ ರಂಗ ಗಳಿಸುತ್ತಿರುವ ಲಾಭಕ್ಕಿಂತಲೂ ಹೆಚ್ಚಿದೆ. ಕೇವಲ ಹತ್ತು ದೊಡ್ಡ ಕಂಪನಿಗಳು ಇಡೀ ಜಗತ್ತಿನ ಶುದ್ಧ ನೀರಿನ ಸರಬರಾಜಿನ ವ್ಯವಸ್ಥೆಯನ್ನು ತಮ್ಮ ಕಪಿಮುಷ್ಟಿಯ ಹಿಡಿತದಲ್ಲಿಟ್ಟುಕೊಂಡಿವೆ. ಫ್ರೆಂಚ್ ಕಂಪನಿಗಳಾದ VEVENDI, UVIVERSAL ಮತ್ತು SOCT ಸುಮಾರು ೨೦ಕೋಟಿ ಗ್ರಾಹಕರನ್ನು ೧೫೦ ದೇಶಗಳಲ್ಲಿ ಹೊಂದಿದ್ದು, ಇವು ಜಗತ್ತಿನ ಮಾರುಕಟ್ಟೆಯ ಮುಂಚೂಣಿಯಲ್ಲಿವೆ.

ಬಹುರಾಷ್ಟ್ರೀಯ ಕಂಪನಿಗಳು ಲಕ್ಷಗಟ್ಟಲೆ ಲೀಟರ್ ನೀರನ್ನು ಭೂಮಿಯಿಂದ ಎತ್ತುತ್ತಿದ್ದು, ಇದು ನೈಸರ್ಗಿಕ ಏರು-ಪೇರನ್ನು ಉಂಟುಮಾಡುತ್ತಿದೆ. ಪ್ರತೀ ೨೦ ವರ್ಷಕ್ಕೆ ನೀರಿನ ಬಳಕೆ ದ್ವಿಗುಣಗೊಳ್ಳುತ್ತಿದ್ದು ಇದು ಜನಸಂಖ್ಯಾ ಹೆಚ್ಚಳಕ್ಕಿಂತ ಎರಡು ಪಟ್ಟು ಹೆಚ್ಚಾಗುತ್ತಿದೆ. ಇಂತಹ ಪ್ರಮುಖ ಸನ್ನಿವೇಶದಲ್ಲಿ ನೀರನ್ನು ಹಿಡಿದಿಡುವ, ನೀರು ಸಂಗ್ರಹಗಳನ್ನು ಗುತ್ತಿಗೆ ಪಡೆಯುವ, ಸರಕಾಗಿ ಪರಿವರ್ತಿಸುವ ಪ್ರಯತ್ನ ಅಮಾನವೀಯ ಮತ್ತು ಖಂಡನೀಯ. ಬೊಲಿವಿಯಾದ ಕೊಚಬೊಂಬಾ ಪಟ್ಟಣದಲ್ಲಿ ನೀರು ಸರಬರಾಜನ್ನು ಖಾಸಗೀಕರಣಗೊಳಿಸಿದ್ದರಿಂದ ಅಲ್ಲಿ ಗಂಭೀರ ಪರಿಸ್ಥಿತಿ ಉಂಟಾಗಿದ್ದು, ಅಶಾಂತಿಗೆ ಕಾರಣವಾಗಿದೆ. ಇಂದು ಅಮೇರಿಕಾದ ಅಕ್ರಮಣಕಾರಿ ನೀತಿ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹಿಡಿತ ಸಾಧಿಸಲು ಇರಾಕ್ ಮೇಲೆ ಯುದ್ಧ ಸಾರಿದ್ದನ್ನು ಕಾಣುತ್ತೇವೆ.

ನೀರಿನ ಪರಿಸ್ಥಿತಿ ಅವಲೋಕಿಸಿ, ಕೆಲಕಾಲದ ಹಿಂದೆ ವಿಶ್ವಬ್ಯಾಂಕ್‌ನ ಉಪಾಧ್ಯಕ್ಷರು ಉಚ್ಚರಿಸಿದ್ದು ಹೀಗೆ: 'ಮುಂದಿನ ಶತಮಾನದ ಯುದ್ಧಗಳು ನೀರಿನ ಬಗ್ಗೆ ರೂಪಿತಗೊಂಡಿರುತ್ತವೆ.' 'The world of next century will be about water' ಭಾರತದಲ್ಲಿ ಕೂಡ ಛತ್ತೀಸ್‌ಗಡದ 'ಶಿವನಾಥ' ನದಿಯ ಒಂದು ಭಾಗವನ್ನು ಕೋಕಾಕೋಲಾ ಕಂಪನಿಗೆ ಲೀಸ್ ನೀಡಲಾಗಿತ್ತು. ಕೇರಳ ರಾಜ್ಯದ ಪಾಲ್ಘಾಟ್ ಜಿಲ್ಲೆಯ ಪ್ಲಾಚಿಮಾದಲ್ಲಿ Coco cola ಕಂಪನಿ ಅಲ್ಲಿದ್ದ ಭೂಮಿಯಿಂದ ಅತಿ ಹೆಚ್ಚು ನೀರನ್ನು ಎತ್ತಿದ್ದರಿಂದ, ಅದು ತಂದುಕೊಟ್ಟ ನೈಸರ್ಗಿಕ ದುಷ್ಪರಿಣಾಮಗಳ ವಿರುದ್ಧ ಜನಾಂದೋಲನ ಮತ್ತು ತೀವ್ರ ಪ್ರತಿಭಟನೆಯಿಂದಾಗಿ ಮುಚ್ಚಲಾಯಿತು. ಮುಖ್ಯವಾಗಿ ಆದಿವಾಸಿ ಕೃಷಿ ಜನಾಂಗಕ್ಕೆ ಸೇರಿದ ಕೆಲಸಗಾರರೆ ಇದರಿಂದ ತೊಂದರೆ ಅನುಭವಿಸಿದ್ದರು. ಕೇರಳ ಹೈಕೋರ್ಟ್ ಕೋಕಾಕೋಲಾ ಕಂಪನಿ ದಾವೆಹೂಡಲು ಅನುಮತಿ ನೀಡಿದರೂ, ಕಂಪನಿ ಪ್ರಾರಂಭವಾಗಲಿಲ್ಲ. ಕೋಕಾಕೋಲಾ ಕಂಪನಿ ಪ್ರತಿದಿನ ೭೫,೦೦೦ ಲೀಟರ್‌ನಷ್ಟು ನೀರನ್ನು ಬಳಸುತ್ತಿತ್ತು.

ತಮಿಳುನಾಡಿನ 'ಶಿವಗಂಗಾ' ಜಿಲ್ಲೆಯ ಪದ್ಮಾತೂರುನಲ್ಲಿ ಯೋಜಿಸಿದ್ದ ಬಾಟ್ಲಿಂಗ್ ಪ್ಲಾಂಟ್ ಅಲ್ಲಿಯ ಜನತೆ ಮತ್ತು ಸಿಪಿಐ(ಎಂ) ಕಾರ್ಮಿಕ ಸಂಘಟನೆ ನಾಯಕತ್ವದ ಚಳವಳಿಯಿಂದಾಗಿ ಪ್ರಾರಂಭಗೊಳ್ಳಲಿಲ್ಲ. ಮತ್ತೊಂದು ಬಾಟ್ಲಿಂಗ್ ಕಂಪನಿ ಕೋಕಾಕೋಲಾ ಸಂಸ್ಥೆಯ ಒಡೆತನದಲ್ಲಿ ತಮಿಳುನಾಡಿನ ತಿರುನಲ್‌ವೇಲಿ ಜಿಲ್ಲೆಯ ಗಂಗೈಕೊಂಡನ್‌ನಲ್ಲಿ ತಮಿಳುನಾಡು ಸರ್ಕಾರದ ಪರವಾನಿಗೆ ಪಡೆದು ಪ್ರಾರಂಭವಾಯ್ತು. 'ತಮಿರಪರನಿ' ನದಿಯಿಂದ ಲಕ್ಷಗಟ್ಟಲೆ ನೀರನ್ನು ಬಳಸಲು ಕಂಪನಿಗೆ ಅನುಮತಿ ನೀಡಿತ್ತು. ಅಖಿಲ ಭಾರತ ವಿಮಾ ನೌಕರರ ಸಂಘಟನೆ ತಿರುನಲ್‌ವೇಲಿ ಘಟಕ ಮುಂಚೂಣಿಯಲ್ಲಿ ಪ್ರಾರಂಭಗೊಂಡ ಹೋರಾಟಕ್ಕೆ ಸ್ಥಳೀಯ ಜನತೆ ಜೊತೆಗೂಡಿ ನೈಸರ್ಗಿಕ ನದಿಯ ನೀರಿನ ದುರ್ಬಳಕೆಯನ್ನು ತಡೆಗಟ್ಟುವಲ್ಲಿ ಯಶಸ್ವಿಯಾದರು.

ಭಾರತದಲ್ಲಿ ಸಾಮಾನ್ಯವಾಗಿ ರಾಜ್ಯ ಸರ್ಕಾರಗಳು ಕೋಲಾ ಕಂಪನಿಗಳಿಗೆ ಅತೀ ಕಡಿಮೆ ದರದಲ್ಲಿ ನೀರನ್ನು ಸರಬರಾಜು ಮಾಡಲು ಸಮ್ಮತಿಸುತ್ತಿವೆ. ನೀರಿನ ಅಭಾವದ ಸಮಸ್ಯೆಗೆ ಮತ್ತೊಂದು ಮುಖವಿದೆ. Stockhom international water institute, Food and Agricultural organisation ಮತ್ತು international water Management Institute ಮೂರು ಸಂಸ್ಥೆಗಳು ಬಿಡುಗಡೆ ಮಾಡಿದ ವರದಿ ಪ್ರಕಾರ ಸುಮಾರು ಶೇ. ೩೦% ಆಹಾರ ಸಾಮಗ್ರಿಗಳು ಅಂದಲ್ಲಿ ೪೮೩ಕೋಟಿ ಡಾಲರ್ ಬೆಲೆ ಯಷ್ಟು ಆಹಾರವನ್ನು ಅಮೇರಿಕಾ ಪ್ರತೀವರ್ಷ ಹೊರಚೆಲ್ಲುತ್ತಿದ್ದು, ಇದರೊಟ್ಟಿಗೆ ಸುಮಾರು ೪೦ಲಕ್ಷ ಕೋಟಿ ನೀರನ್ನು ಕಸದ ಬುಟ್ಟಿಗೆ ಹಾಕುತ್ತಿದೆ. ಇಷ್ಟು ಪ್ರಮಾಣದ ನೀರು ೫೦ ಕೋಟಿ ಕುಟುಂಬಗಳಿಗೆ ಬಳಕೆಯಾಗಬಹುದಿತ್ತು. ಇದು ಜಾಗತೀಕರಣ ಸೃಷ್ಟಿಸಿರುವ ರಾಷ್ಟ್ರ-ರಾಷ್ಟ್ರಗಳ ಮಧ್ಯೆ ಸಂಪತ್ತಿನ ಅಸಮಾನತೆಯನ್ನು ಸ್ಪಷ್ಟೀಕರಿಸುತ್ತದೆ.

ನೀರಿನ ಖಾಸಗೀಕರಣದ ವಿರುದ್ಧ ಹೋರಾಟ:

ಲ್ಯಾಟೀನ್ ಅಮೇರಿಕಾದ ದೇಶ Uruguay ಸುಮಾರು ೩.೩ ಬಿಲಿಯನ್ ಜನಸಂಖ್ಯೆ ಹೊಂದಿದ್ದು, ನೀರಿನ ಖಾಸಗೀಕರಣ ಸಲ್ಲದು ಎಂದು ಆದೇಶಿಸಿದೆ. ಬೊಲಿವಿಯಾದಲ್ಲಿ ನೀರಿನ ಖಾಸಗೀಕರಣದ ವಿರುದ್ಧ ಚಳವಳಿಯಿಂದಾಗಿ cocha bamba ದಲ್ಲಿ ನೀರಿನ ಖಾಸಗೀಕರಣದ ಯೋಜನೆಯನ್ನು ಕೈಬಿಡಲಾಯ್ತು. ಈ ಖಾಸಗೀಕರಣದ ವಿರುದ್ಧ ಹೋರಾಟವು ಸ್ಥಳೀಯ ಜನಾಂಗಕ್ಕೆ ಸೇರಿದ Evo Morales ಆ ದೇಶದ ಅಧ್ಯಕ್ಷನಾಗಿ ಆಯ್ಕೆಯಾಗುವಲ್ಲಿ ಸಹಕಾರಿಯಾಯ್ತು. ಛತ್ತೀಸ್‌ಗಡದಲ್ಲಿ ಕೋರ್ಟ್ ಆದೇಶದ ಹೊರತಾಗಿಯೂ ಶಿವನಾಥ ನದಿಯ ಒಂದು ಭಾಗ ಖಾಸಗೀಕರಣಗೊಳಿಸಿದ್ದರಿಂದ ಆದ ಅನಾಹುತವನ್ನು ತಡೆಯಲಾಗಿಲ್ಲ.

ಅಂತಿಮ ನಿರ್ಣಯದಂತೆ, ಜಾಗತಿಕಮಟ್ಟದ ಸ್ವಚ್ಛ ನೀರಿನ ಅಭಾವವನ್ನು ಜಾಗತೀಕರಣ ತಂದೊಡ್ಡಿದ ಪರಿಣಾಮಗಳ ವಿರುದ್ಧ ಹೋರಾಡುವುದರಿಂದಲೇ ಸಾಧಿಸಬೇಕಾಗಿದೆ. ಏಕೆಂದರೆ ಜಾಗತೀಕರಣವು ಜಾಗತಿಕ ಮಟ್ಟದ ಎಲ್ಲ ಸಂಪನ್ಮೂಲಗಳನ್ನು ತನ್ನ ಕಪಿಮುಷ್ಠಿಯಲ್ಲಿಡಿದಿಡುವ, ಅಧಿಕಾರ ಸ್ಥಾಪಿಸುವ ಆಶಯ ಹೊಂದಿದೆ. ಜಾಗತೀಕರಣದ ಪ್ರಕ್ರಿಯೆ ಇನ್ನುಳಿದ ಸಂಪತ್ತಿನ ಅಭಾವ ಸೃಷ್ಟಿಸಿದಂತೆ, ನೀರಿನ ಅಭಾವವನ್ನು ಕೂಡ ಸೃಷ್ಟಿಸುತ್ತಿದೆ. ಆದ್ದರಿಂದ ಇದು ಸ್ವಚ್ಛ ನೀರಿಗಾಗಿ ಜಗತ್ತಿನಾದ್ಯಂತ ಹೋರಾಟ ಜಾಗತೀಕರಣದ ವಿರುದ್ಧದ ಹೋರಾಟದ ಜೊತೆ ತಳುಕು ಹಾಕಿಕೊಂಡಿದ್ದು, ಅದು ಅದೇ ದಿಕ್ಕಿನಲ್ಲಿ ಅನಿವಾರ್ಯವಾಗಿ ಸಾಗಬೇಕಾಗಿದೆ.

(ಸೌಜನ್ಯ: ಇನ್ಸೂರೆನ್ಸ್ ವರ್ಕರ್) □

> **ಹೌದು! ನೀವೆಲ್ಲಾ ಟೆಲಿವಿಜನ್, ಏರ್‌ಕ್ರಾಫ್ಟ್, ಮತ್ತು ಆಟದ ಸಾಮಗ್ರಿ ಮುಂತಾದ ಬಹಳಷ್ಟು ವಸ್ತುಗಳಿಲ್ಲದೆ ಬದುಕಬಲ್ಲಿರಿ. ಆದರೆ ಆಹಾರ ಮತ್ತು ನೀರಿಲ್ಲದೆ ಬದುಕಲಾರಿರಿ. ಬಹುರಾಷ್ಟ್ರೀಯ ಕಂಪನಿಗಳು ನೀರಿನ ಮೇಲೆ ಹಿಡಿತ ಸಾಧಿಸಲು, ಹಕ್ಕುಗಳನ್ನು ಕೊಂಡುಕೊಳ್ಳಲು ಯತ್ನಿಸುತ್ತಿವೆ. ನಾವು ಕೂಡ ಅವರಿಗಾಗಿ ನೀರನ್ನು ಖಾಸಗೀಕರಣಗೊಳಿಸುವ ಹಾದಿಯಲ್ಲಿದ್ದೇವೆ. ಈ ಸ್ಥಿತಿ ಮುಂಬರುವ ದಿನಗಳಲ್ಲಿ ದೊಂಬಿ, ಹಾಹಾಕಾರ, ದುಃಖ ಮತ್ತು ಒಳ ಜಗಳಗಳನ್ನು ಹುಟ್ಟುಹಾಕಲಿದ್ದು, ಪ್ರಸ್ತುತ ಸಂದರ್ಭದಲ್ಲಿ ಅದು ನಮಗೆ ಗೋಚರಿಸುತ್ತದೆ.**
>
> **–ಪಿ. ಸಾಯಿನಾಥ್**

ಕಾಶ್ಮೀರ: ಆರದ ಹೊಗೆ

(17ನೇ ಪುಟದಿಂದ)

ಳನ್ನು ಬಾಂಗ್ಲಾದೇಶಕ್ಕೆ ಮಾರಾಟ ಮಾಡುತ್ತಾರೆ. ಇದನ್ನೇ ವೈಭವೀಕರಿಸಿದ ಸಂಘ ಪರಿವಾರ 2007ರಲ್ಲಿ ಗೋಹತ್ಯಾ ವಿರೋಧಿ ಆಂದೋಲನ ಹಮ್ಮಿಕೊಳ್ಳುವುದರ ಮೂಲಕ ತನ್ನ ಮತೀಯ ರಾಜಕಾರಣಕ್ಕೆ ಹೊಸ ರೂಪ ನೀಡುವುದರಲ್ಲಿ ಯಶಸ್ವಿಯಾಗಿದೆ.

ಹಿಂದೂ ಮತ್ತು ಮುಸ್ಲಿಂ ಮೂಲಭೂತವಾದಿಗಳು ತೀವ್ರತೆರನಾದ ಆಂದೋಲನಗಳನ್ನು ಪ್ರತಿಭಟನೆಗಳನ್ನು ಹಮ್ಮಿಕೊಳ್ಳುತ್ತಿದ್ದರೂ, ಯಾವುದೇ ಪ್ರಮುಖ ರಾಜಕೀಯ ಪಕ್ಷವಾಗಲೀ, ಪ್ರಜಾತಾಂತ್ರಿಕ ಸಂಘಟನೆಯಾಗಲೀ ಶಾಂತಿಗಾಗಿ ಆಂದೋಲನವನ್ನು ಹಮ್ಮಿಕೊಳ್ಳದಿರುವುದು ದುರಂತವೆಂದೇ ಹೇಳಬಹುದು. ಜಮ್ಮು ಮತ್ತು ಕಾಶ್ಮೀರದಲ್ಲಿ ಬಾರ್ ಅಸೋಸಿಯೇಶನ್‌ಗಳು, ವಾಣಿಜ್ಯ ಮಂಡಲಿಗಳು, ವೈದ್ಯ ಮತ್ತು ಇಂಜಿನಿಯರ್‌ಗಳ ವೃತ್ತಿಪರ ಸಂಘಗಳು, ಪತ್ರಿಕಾ ಅಕಾಡೆಮಿಗಳು ಎಲ್ಲವೂ ಪ್ರತ್ಯೇಕವಾಗಿಯೇ ಇವೆ. ವಾಸ್ತವಿಕವಾಗಿ ಎರಡೂ ಪ್ರದೇಶಗಳ ಜನತೆ ಪರಸ್ಪರ ಅಪರಿಚಿತರಂತೆಯೇ ಇದ್ದಾರೆ. ಈ ನಿಟ್ಟಿನಲ್ಲಿ ಕ್ರಿಯಾತ್ಮಕವಾದ ಶಾಂತಿ ಪ್ರಕ್ರಿಯೆ, ಐಕಮತ್ಯ ಸಾಧಿಸುವ ಪ್ರಯತ್ನ ನಡೆದಿಲ್ಲವೆಂದೇ ಹೇಳಬಹುದು.

ಹಾಗಾಗಿಯೇ ಇಂದು ಇಲ್ಲಿ ಪ್ರತ್ಯೇಕತೆಯ ಕೂಗು ಹೆಚ್ಚಾಗಿ ಕೇಳಬರುತ್ತಿದೆ. ಆದರೆ ಜಮ್ಮು-ಕಾಶ್ಮೀರ ಪ್ರತ್ಯೇಕ-ಸ್ವತಂತ್ರ ರಾಷ್ಟ್ರವಾಗುವ ಬಯಕೆ ಹೊಂದಿರುವ ರಾಜಕೀಯ-ಧಾರ್ಮಿಕ ಶಕ್ತಿಗಳು ಯಾರ ನೇತೃತ್ವದಲ್ಲಿ ತಮ್ಮ ಹೋರಾಟಗಳನ್ನು ನಡೆಸುತ್ತಿವೆ ಎಂಬ ಪ್ರಶ್ನೆ ಇಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪಾಕಿಸ್ತಾನದೊಡನೆ ವಿಲೀನಗೊಳ್ಳುವ ಪ್ರತ್ಯೇಕತಾವಾದಿಗಳ ಆಗ್ರಹಕ್ಕೆ ಇತ್ತೀಚಿನ ದಿನಗಳಲ್ಲಿ ಬೆಂಬಲ ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ, ಪಾಕಿಸ್ತಾನ ಪರ ಇದ್ದ ಗುಂಪುಗಳೂ ಈಗ ಪ್ರತ್ಯೇಕ ರಾಷ್ಟ್ರಕ್ಕಾಗಿ ಆಗ್ರಹಿಸುತ್ತಿವೆ. ಆದರೆ ಪ್ರಸ್ತುತ ಅಮರನಾಥ ವಿವಾದದ ಹಿನ್ನೆಲೆಯಲ್ಲಿ ಕಂಡು ಬಂದ ಮತೀಯ ಶಕ್ತಿಗಳ ಹಿಡಿತವನ್ನು ಗಮನಿಸಿದಲ್ಲಿ, ಪ್ರತ್ಯೇಕ-ಸ್ವತಂತ್ರ ಕಾಶ್ಮೀರ ಒಂದು ಪ್ರಜಾಸತ್ತಾತ್ಮಕ ಸ್ವರೂಪ ಪಡೆಯುವುದು ದುಸ್ತರವೆನಿಸುತ್ತದೆ. ಇನ್ನೊಂದೆಡೆ ಸಂಘ ಪರಿವಾರದ ಆಗ್ರಹದಂತೆ ಜಮ್ಮು ಮತ್ತು ಕಾಶ್ಮೀರವನ್ನು ಪ್ರತ್ಯೇಕ ರಾಜ್ಯಗ ಳನ್ನಾಗಿ ವಿಂಗಡಿಸುವುದೂ ಕೋಮು ಸಂಘರ್ಷಕ್ಕೆ, ಮತೀಯವಾದಕ್ಕೆ ಇಂಬು ಕೊಟ್ಟಂತಾಗುತ್ತದೆ.

ಜಮ್ಮು ಕಾಶ್ಮೀರದ ಸೆಕ್ಯುಲರ್ ಪರಂಪರೆಗೆ ಗತಕಾಲದಿಂದಲೂ ಅಮರನಾಥ ಯಾತ್ರೆ ಒಂದು ಸ್ಪಷ್ಟ ನಿದರ್ಶನವಾಗಿಯೇ ರೂಪುಗೊಂಡಿದೆ. ಯಾತ್ರಾರ್ಥಿಗಳಿಗೆ ಸಕಲ ಸೌಲಭ್ಯಗಳನ್ನೂ ಒದಗಿಸುತ್ತಿದ್ದ ಮುಸ್ಲಿಂ ಜನತೆಯ ಸೆಕ್ಯುಲರ್ ಭಾವನೆಗಳಿಗೆ ಧಕ್ಕೆತರುವ ರೀತಿಯಲ್ಲಿ ಮತೀಯ ಶಕ್ತಿಗಳು ಈ ಸನ್ನಿವೇಶವನ್ನು ತಮ್ಮ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತಿರುವುದು ದುರದೃಷ್ಟಕರ. ಅಮರನಾಥ ಸಂರಕ್ಷಣಾ ಸಮಿತಿಯ ಆಂದೋಲನವು ಮತೀಯ ಧ್ರುವೀಕರಣಕ್ಕೆ ನಾಂದಿ ಹಾಡಿರುವುದು ಪ್ರಾದೇಶಿಕ ಸಮಸ್ಯೆಗಳ ನಿರ್ಲಕ್ಷ್ಯದ ನೇರ ಪ್ರಭಾವವಾಗಿದೆ. ಈ ಗಂಭೀರ ಅಂಶವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಗಣಿಸಬೇಕಾಗಿದೆ. ವಿವಿಧ ಸಮುದಾಯಗಳ ಸಾಮಾಜಿಕ-ಆರ್ಥಿಕ ಆಶೋತ್ತರಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಸರ್ಕಾರಿ ಸಂಸ್ಥೆಗಳನ್ನು ಕಾರ್ಯಪ್ರವೃತ್ತಗೊಳಿಸುವುದು ಕೇಂದ್ರ ಸರ್ಕಾರದ ಆದ್ಯತೆ ಯಾಗಬೇಕಾಗಿದೆ.

1977ರ ನಂತರದಲ್ಲಿ ಜಮ್ಮು ಕಾಶ್ಮೀರದ ಯಾವುದೇ ರಾಜಕೀಯ ಪಕ್ಷಗಳೂ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸದಿರುವುದನ್ನು ಗಮನಿಸಬಹುದು. ಪ್ರತಿ ಚುನಾವಣೆಯಲ್ಲೂ ಎರಡೂ ಪ್ರಾಂತ್ಯಗಳ ಧಾರ್ಮಿಕ ಭಾವನೆ ಕೆರಳಿಸಿ ಮತಗಳಿಸುವ ತಂತ್ರಗಳು ಇಲ್ಲಿನ ಜನರಲ್ಲಿನ ಪ್ರತ್ಯೇಕತಾ ಭಾವನೆಗಳನ್ನು ತೀವ್ರಗೊಳಿಸಿರುವುದೇ ಹೆಚ್ಚು. 1983ರಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು 'ಇಲ್ಲಿ ಹಿಂದೂಗಳು ಬಹುಸಂಖ್ಯಾತರಾಗಿರುವುದರಿಂದಲೇ ಈ ಪ್ರದೇಶ ಹಿಂದುಳಿದಿದೆ' ಎಂದು ಹೇಳಿದ್ದುದನ್ನು ಇಲ್ಲಿ ಸ್ಮರಿಸಬಹುದು. ಇದೇ ವೇಳೆ ಫರೂಖ್ ಅಬ್ದುಲ್ಲ ಮುಸ್ಲಿಂರ ಅಸ್ಮಿತೆಗಾಗಿ ಹೋರಾಡುವ ಹೇಳಿಕೆಗಳನ್ನು ನೀಡಿದ್ದೂ ಉಂಟು. ಈ ಮತೀಯ ರಾಜಕಾರಣದಿಂದಲೇ ಇಲ್ಲಿ ಎರಡೂ ಧರ್ಮಗಳ ಕೋಮುವಾದಿಗಳ ಪ್ರಾಬಲ್ಯ ಹೆಚ್ಚಾಗುತ್ತಲೇ ಹೋಯಿತು.

ಸ್ವತಂತ್ರ ಕಾಶ್ಮೀರಕ್ಕಾಗಿ ಕೇಳಿಬರುತ್ತಿರುವ ಆಗ್ರಹವು ಸಾಮಾನ್ಯ ದುಡಿಯುವ ಜನತೆಯ ಮಧ್ಯದಿಂದ ಉದ್ಭವಿಸುತ್ತಿದೆಯೋ, ಅವರನ್ನು ಪ್ರತಿನಿಧಿಸುವೆವೆಂದು ಹೇಳುವ ಧಾರ್ಮಿಕ ಮತೀಯ ಸಂಘಟನೆಗಳಿಂದ ಹೊರಹೊಮ್ಮುತ್ತಿರುವುದೋ ಎಂಬ ಮೂರ್ತ ಪ್ರಶ್ನೆ ಇಲ್ಲಿ ಮುಖ್ಯವಾಗುತ್ತದೆ. ಒಂದು ವೇಳೆ ಕಾಶ್ಮೀರ ಪ್ರತ್ಯೇಕ ರಾಜ್ಯವಾದಲ್ಲಿ ಅಲ್ಲಿ ಅಧಿಕಾರಕ್ಕೆ ಬರಬಹುದಾದ ಎ.ಪಿ.ಹೆಚ್.ಸಿ ಮತ್ತಿತರ ಸಂಘಟನೆಗಳು ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಸ್ಥಿರಗೊಳಿಸುವುದೇ? ಸ್ವತಂತ್ರ ಕಾಶ್ಮೀರದಲ್ಲಿ ಪ್ರಜಾತಾಂತ್ರಿಕ ಚುನಾವಣೆಗಳು ನಡೆದು, ಸ್ವತಂತ್ರ ನ್ಯಾಯಾಂಗ, ಮಾಧ್ಯಮ, ಸಾರ್ವಜನಿಕ ಚರ್ಚೆ ಸಾಧ್ಯವಾಗಬಹುದೇ? ಧಾರ್ಮಿಕ-ಜನಾಂಗೀಯ ಅಸ್ಮಿತೆಗಳಿಗೆ ಸೂಕ್ತ ಸ್ಥಾನ ದೊರೆಯುವುದೇ? ಭಾರತ-ಪಾಕಿಸ್ತಾನ-ಚೀನಾ ಈ ಮೂರು ಪ್ರಬಲ ರಾಷ್ಟ್ರಗಳಿಂದ ಸುತ್ತುವರಿದ ಕಾಶ್ಮೀರ ರಾಜಕೀಯ ನೀತಿಗಳನ್ನು ಹೇಗೆ ರೂಪಿಸುತ್ತದೆ? ಈ ಎಲ್ಲಾ ಪ್ರಶ್ನೆಗಳಿಗೂ ಪ್ರತ್ಯೇಕತಾವಾದಿಗಳು ಸೂಕ್ತ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ.

ಜಮ್ಮು ಮತ್ತು ಕಾಶ್ಮೀರದ ದುಡಿಯುವ ಜನತೆಗಳಿಗೆ ತಮ್ಮ ಧಾರ್ಮಿಕ-ಮತೀಯ ಅಸ್ಮಿತೆಗಳಿಗಿಂತಲೂ, ಶಾಂತಿಯುತ ವಾತಾವರಣದ ಅವಶ್ಯಕತೆ ಹೆಚ್ಚಾಗಿದೆ. ಕಳೆದ ಆರು ದಶಕಗಳಲ್ಲಿ ಯಾವುದೇ ಸರ್ಕಾರವೂ ಅಲ್ಲಿನ ಸಾಮಾನ್ಯ ಜನತೆಯ ಆಶೋತ್ತರಗಳಿಗೆ ಪ್ರಜಾತಾಂತ್ರಿಕ ರೀತಿಯಲ್ಲಿ ಸ್ಪಂದಿಸದಿರುವುದು ಸ್ಪಷ್ಟವಾಗಿದೆ. ಜಮ್ಮು ಕಾಶ್ಮೀರದ ನಡುವಿನ ಹೆದ್ದಾರಿ ಬಂದ್ ಆದಲ್ಲಿ ಅಲ್ಲಿನ ಜನತೆ ದೈನಂದಿನ ಜೀವನ ನಡೆಸಲು ಪರದಾಡಬೇಕಾಗುತ್ತದೆ. ಈಗಲೇ ವಲಸೆ ಕಾರ್ಮಿಕರ ವಿರುದ್ಧ ನಡೆಯುತ್ತಿರುವ ಆಕ್ರಮಣಗಳು ಪ್ರತ್ಯೇಕತೆಯ ನಂತರದಲ್ಲಿ ಹೆಚ್ಚಾಗುವ ಸಾಧ್ಯತೆಗಳನ್ನು ತಳ್ಳಿಹಾಕಲಾಗುವುದಿಲ್ಲ. ಪ್ರತ್ಯೇಕತೆಯನ್ನು ಬೆಂಬಲಿಸುವುದು ಒಂದು ರೀತಿಯಲ್ಲಿ ದುಡಿಯುವ ಜನತೆಯನ್ನು ಒಡೆದು ಆಳುವ ಪ್ರಭುತ್ವ ರಾಜಕೀಯಕ್ಕೆ ಮನ್ನಣೆ ನೀಡಿದಂತಾಗುತ್ತದೆ.

ಆದರೆ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಜನಾಭಿಪ್ರಾಯವೇ ಅಂತಿಮ ಸತ್ಯವಾಗಿರುತ್ತದೆ. ಈ ಜನತೆಯ ಅಭಿಪ್ರಾಯಗಳನ್ನು ಮಾನ್ಯ ಮಾಡದೆ, ಮೂಲಭೂತವಾದಿಗಳಿಗೆ, ಪ್ರತ್ಯೇಕತಾವಾದಿಗಳಿಗೆ ಮತ್ತು ಕೋಮುವಾದಿಗಳಿಗೆ ಹೆಚ್ಚಿನ ಮಾನ್ಯತೆ ನೀಡಿದಷ್ಟೂ ಸಂವೇದನಾಶೀಲ ಪರಿಹಾರಗಳು ಕೈತಪ್ಪಿ ಹೋಗುವ ಸಾಧ್ಯತೆಗಳೇ ಹೆಚ್ಚಾಗುತ್ತವೆ. ಈ ಅಂಶ ವನ್ನು ಸ್ವತಂತ್ರ ಭಾರತದ ಅನೇಕ ಸಂದರ್ಭದಲ್ಲಿ ಗುರುತಿಸಬಹುದು. ಆಳುವ ವರ್ಗಗಳು ತಾವೇ ನಿರ್ಮಿಸಿಕೊಂಡಿರುವ ಚಕ್ರವ್ಯೂಹದಿಂದ ಹೊರಬಂದು, ಜನಪರ ಕಾಳಜಿಯಿಂದ ಸಮಸ್ಯೆಯ ಪರಿಹಾರಗಳನ್ನು ಗ್ರಹಿಸದಿದ್ದಲ್ಲಿ, ಜಮ್ಮು ಕಾಶ್ಮೀರ ವಷ್ಟೆ ಅಲ್ಲ ಯಾವುದೇ ಪ್ರಾದೇಶಿಕ ಸಮಸ್ಯೆಗಳೂ ಬಗೆಹರಿಯುವುದಿಲ್ಲ. □

ಸ್ಪೇಯಿನ್ ಮತ್ತು ಫ್ರಾನ್ಸ್ ಬಾಸ್ಕ ಟೆರರಿಸ್ಟ್ ಸಂಘಟನೆ ಇ.ಟಿ.ಎನಿಂದ ಭಯೋತ್ಪಾದನಾ ಸವಾಲನ್ನು ಎದುರಿಸಿತ್ತು. ಉಗಾಂಡದಲ್ಲಿ ಲಾರ್ಡ್ಸ್ ಸ್ಯಾಲ್‌ವೇಶನ್ ಆರ್ಮಿ ಬಹಳ ಕುಖ್ಯಾತವಾಗಿದ್ದು ಮಕ್ಕಳನ್ನು ವಿಧ್ವಂಸಕ ಕೃತ್ಯಗಳಿಗೆ ಬಳಸಿಕೊಂಡಿತ್ತು. ಶ್ರೀಲಂಕಾದ ತಮಿಳು ಟೈಗರ್ಸ್ ಗುಂಪು ಮೊತ್ತ ಮೊದಲಿಗೆ ಜಗತ್ತಿನಲ್ಲಿ ಮಕ್ಕಳಿಗೆ ಭಯೋತ್ಪಾದನೆ ತರಬೇತಿ ನೀಡಿತು. ಮೊತ್ತಮೊದಲ ಬಾರಿಗೆ ಆತ್ಮಹತ್ಯಾ ದಳ ತಂತ್ರವನ್ನು ಬಳಸಿದವರಲ್ಲಿ ತಮಿಳು ಟೈಗರ್ಸ್ ಮೊದಲಿಗರು. ಪಂಜಾಬಿನಲ್ಲಿ ಬಿಂದ್ರನ್‌ವಾಲೆ ನೇತೃತ್ವದ ಉಗ್ರಗಾಮಿಗಳು ಸಿಖ್ಖರಾಗಿದ್ದರೆ, ಅಸ್ಸಾಮಿನ 'ಉಲ್ಫಾ' ಹಿಂದೂ ಭಯೋತ್ಪಾದಕ ಗುಂಪು, ಅಸ್ಸಾಮಿನಲ್ಲಿ ಕ್ರಿಶ್ಚಿಯನ್ ನಾಗಾಸ್ ಉಗ್ರವಾದಿ ಗುಂಪುಗಳಿಗೆ ನೇತೃತ್ವ ನೀಡುತ್ತಿದೆ.

'ಮುಸ್ಲಿಮರೆಲ್ಲಾ ಭಯೋತ್ಪಾದಕರಲ್ಲ, ಆದರೆ ಭಯೋತ್ಪಾದಕರೆಲ್ಲ ಮುಸ್ಲಿಮರು'-ಎಂಬ ಪ್ರಮೇಯದ ಸುತ್ತ ಸಾಮಾನ್ಯವಾಗಿ ಸ್ಫೋಟ, ಭಯೋತ್ಪಾದನೆಗೆ ಸಂಬಂಧಿಸಿದ ಘಟನೆಗಳು ಚರ್ಚಿಸಲ್ಪಡುತ್ತದೆ.

ಮುಂಬಯಿ ಬಾಂಬ್ ಸ್ಫೋಟದ ನಂತರ ಭಯೋತ್ಪಾದನೆಯೆಂಬುದು ಮುಸ್ಲಿಂ ವಿಶೇಷತೆಯೆಂಬಂತೆ ವ್ಯಾಪಕವಾಗಿ ಪ್ರಚಾರವಾಗುತ್ತಿದೆ. ಭಯೋತ್ಪಾದನೆ ಮುಸ್ಲಿಂ ಏಕಸ್ವಾಮ್ಯವೇನೋ ಎಂದು ಜಗತ್ತನ್ನು ನಂಬಿಸಲಾಗುತ್ತಿದೆ. ೧೮೮೧ರಲ್ಲಿ ಅರಾಜಕತಾವಾದಿಗಳು ರಶಿಯಾದ ಝಾರ್ ಎರಡನೇ ಅಲೆಕ್ಸಾಂಡರ್ ಮತ್ತು ಆತನ ೨೧ ಅಂಗಾವಲುಗಾರರನ್ನು ಹತ್ಯೆಗೈದರು. ೧೯೦೧ರಲ್ಲಿ ಅಮೆರಿಕಾದ ಅಧ್ಯಕ್ಷ ಮೆಕಿನ್‌ಲೇ ಮತ್ತು ಇಟಲಿಯ ೧ನೇ ಹಂಬರ್ಟ್‌ನ್ನು ಕೊಲ್ಲಲಾಯಿತು. ೧೯೧೪ರಲ್ಲಿ ಆಸ್ಟ್ರಿಯಾದ ಆರ್ಕ್‌ಡ್ಯೂಕ್ ಫಡಿಕ್ ನೆಂಡ್‌ನ್ನು ಬಲಿತೆಗೆದುಕೊಂಡಿರುವುದೂ ಭಯೋತ್ಪಾದಕರೆ.

ರಾಜಕೀಯ ಕಾರಣಗಳಿಗಾಗಿ ನಾಗರಿಕರನ್ನು ಕೊಲ್ಲುವುದು, ವಿಧ್ವಂಸಕ ಕೃತ್ಯ ನಡೆಸುವುದು, ಹಿಂಸೆ ಮತ್ತು ಬರ್ಬರತೆಗಳೆಲ್ಲವೂ ಭಯೋತ್ಪಾದನೆ ಆಗಿದೆ. ಈ ನಿರ್ವಚನದ ಪ್ರಕಾರ ಬ್ರಿಟಿಷರು, ಭಗತ್‌ಸಿಂಗ್, ಚಂದ್ರಶೇಖರ್ ಆಜಾದ್, ರಾಜಗುರು ಮುಂತಾದ ಅನೇಕ ಸ್ವಾತಂತ್ರ್ಯ ಯೋಧರನ್ನು ಭಯೋತ್ಪಾದಕರೆಂದು ಕರೆದರು. ಗೆರಿಲ್ಲಾ ಹೋರಾಟಗಾರರಾದ ಮಾವೋ ಝು-ಡೆಂಗ್‌ನಿಂದ ಆರಂಭವಾಗಿ ಹೊಚಿ-ಮಿನ್ ಮತ್ತು ಫಿಡೆಲ್‌ಕ್ಯಾಸ್ಟ್ರೋ ತಮ್ಮ ಕ್ರಾಂತಿಕಾರಕ ಅಭಿಯಾನದ ಸಂದರ್ಭದಲ್ಲಿ ನಾಗರಿಕರನ್ನು ಕೊಂದರು. ಇವರೆಲ್ಲಾ ಜಯಶೀಲರಾಗುವವರೆಗೂ ಭಯೋತ್ಪಾದಕರೆಂದು ಕರೆಯಲ್ಪಡುತ್ತಿದ್ದರು.

ಎರಡನೇ ಜಾಗತಿಕ ಯುದ್ಧದ ನಂತರ ಯಹೂದಿ ಗುಂಪುಗಳಾದ ಹಗನಾ, ಇರ್‌ಗನ್ ಮತ್ತು ಸ್ಟರ್ನ್‌ಗ್ಯಾಂಗ್ ಹೊಸ ಜುಯಿಶ್(Jewish) ರಾಜ್ಯವನ್ನು ಕಟ್ಟಲು ಹೋರಾಡುತ್ತಿದ್ದರು. ಹೋಟೆಲ್‌ಗಳು, ಕಟ್ಟಡಗಳ ಮೇಲೆ ಬಾಂಬ್ ದಾಳಿನಡೆಸಿ ನಾಗರಿಕರನ್ನು ಕೊಲ್ಲುತ್ತಿದ್ದರು. ಈ ಪೈಕಿ ಅನೇಕ ಭಯೋತ್ಪಾದಕರು ಸ್ವತಂತ್ರ ಇಸ್ರೇಲ್‌ನ ನಾಯಕರಾದರು. ಇನ್ನೊಂದು ವ್ಯಂಗ್ಯವೆಂದರೆ ಈ ಹಳೆಯ ಭಯೋತ್ಪಾದಕರು ತಮ್ಮ ರಾಷ್ಟ್ರೀಯ ಅಸ್ತಿತ್ವಗಾಗಿ

ಭಯೋತ್ಪಾದನೆ: ಇಸ್ಲಾಂ ವಿರೋಧಿ

ಮುಹಮ್ಮದ್ ಮುಸ್ತಫಾ ಆತೂರು

ಹೋರಾಡುತ್ತಿದ್ದ ಅರಬ್‌ಗಳಿಗೆ ಈ ಭಯೋತ್ಪಾದನೆಯ ಲೇಬಲನ್ನು ಅನ್ವಯಿಸಿ ಅವರನ್ನು ಕುಖ್ಯಾತರನ್ನಾಗಿ ಚಿತ್ರಿಸುತ್ತಿದ್ದರು. ಇಟಲಿಯಲ್ಲಿ ರೆಡ್‌ಬ್ರಿಗೇಡ್ ಮಾಜಿಪ್ರಧಾನಿ ಆಲ್ಡೋಮೋರೋನನ್ನು ಅಪಹರಿಸಿ ಕೊಲೆಮಾಡಿತ್ತು. ಜಪಾನಿನ ರೆಡ್ ಆರ್ಮಿ ಇದರ ಏಶಿಯನ್ ರೂಪವಾಗಿದ್ದು, ೧೯೯೫ರಲ್ಲಿ ಆಮ್ ಶ್ರೀಂಕಿಯೋ ಎಂಬ ಬೌದ್ಧ ಪಂಥ ಟೋಕಿಯೋ ಮೆಟ್ರೋದಲ್ಲಿ ನರಗ್ಯಾಸ್ ಬಳಸಿ ಸಾವಿರಾರು ಜನರನ್ನು ಕೊಲ್ಲಲು ಯತ್ನಿಸಿತು. ಯುರೋಪಿನಲ್ಲಿ ಐರಿಷ್ ರಿಪಬ್ಲಿಕನ್ ಸೇನೆ ಸುಮಾರು ಒಂದು ಶತಮಾನಗಳ ಕಾಲ ಒಂದು ಕ್ಯಾಥೋಲಿಕ್ ಭಯೋತ್ಪಾದನಾ ಸಂಘಟನೆಯಾಗಿತ್ತು.

ಸ್ಪೆಯಿನ್ ಮತ್ತು ಫ್ರಾನ್ಸ್ ಬಾಸ್ಕ ಟೆರರಿಸ್ಟ್ ಸಂಘಟನೆ ಇ.ಟಿ.ಎನಿಂದ ಭಯೋತ್ಪಾದನಾ ಸವಾಲನ್ನು ಎದುರಿಸಿತ್ತು. ಆಫ್ರಿಕಾ ಕೂಡಾ ಆಂತರಿಕ ಕಲಹ ಮತ್ತು ನಾಗರಿಕ ಯುದ್ಧಗಳಿಂದ ತತ್ತರಿಸಿ ಹೋಗಿತ್ತು. ಊಗಾಂಡದಲ್ಲಿ ಲಾರ್ಡ್ಸ್ ಸ್ಯಾಲ್‌ವೇಶನ್ ಆರ್ಮಿ (Lords salvation Army) ಬಹಳ ಕುಖ್ಯಾತವಾಗಿದ್ದು; ಮಕ್ಕಳನ್ನು ವಿಧ್ವಂಸಕ ಕೃತ್ಯಗಳಿಗೆ ಬಳಸಿಕೊಂಡಿತ್ತು. ಶ್ರೀಲಂಕಾದ ತಮಿಳು ಟೈಗರ್ಸ್ ಗುಂಪು –ಮೊತ್ತಮೊದಲಿಗೆ ಜಗತ್ತಿನಲ್ಲಿ ಮಕ್ಕಳಿಗೆ ಭಯೋತ್ಪಾದನೆ ಕುರಿತು ತರಬೇತಿ ನೀಡಿತು. ಮೊತ್ತಮೊದಲ ಬಾರಿಗೆ ಆತ್ಮಹತ್ಯಾದಳ ತಂತ್ರವನ್ನು ಬಳಸಿದವರಲ್ಲಿ ತಮಿಳು ಟೈಗರ್ಸ್ ಮೊದಲಿಗರು. ನಮ್ಮ ಮಾಜಿ ಪ್ರಧಾನಿ ರಾಜೀವಗಾಂಧಿಯವರನ್ನು ಇಂತಹ ಮಾನವ ಬಾಂಬ್ ಬಲಿ ತೆಗೆದುಕೊಂಡಿತು. ಕಾಶ್ಮೀರದಲ್ಲಿರುವ ಉಗ್ರರು ಮುಸ್ಲಿಮರಾಗಿದ್ದಾರೆ. ಆದರೆ ಅವರು ಅನೇಕ ಉಗ್ರರ ಗುಂಪುಗಳಲ್ಲಿ ಒಂದು ಎನ್ನಬಹುದು. ಪಂಜಾಬಿನಲ್ಲಿ ಬಿಂದ್ರನ್‌ವಾಲೆ ನೇತೃತ್ವದ ಉಗ್ರಗಾಮಿಗಳು ಸಿಖ್ಖರಾಗಿದ್ದರೆ, ಅಸ್ಸಾಮಿನ 'ಉಲ್ಫಾ' ಹಿಂದೂ ಭಯೋತ್ಪಾದಕ ಗುಂಪು, ಅಸ್ಸಾಮಿನಲ್ಲಿ 'ಬೊಡೋ' ಕ್ರಿಶ್ಚಿಯನ್ ಮೀಝೊ ಮತ್ತು ಕ್ರಿಶ್ಚಿಯನ್ ನಾಗಾಸ್ ಉಗ್ರವಾದಿ ಗುಂಪುಗಳಿಗೆ ನೇತೃತ್ವ ನೀಡುತ್ತಿದೆ.

ವಸ್ತುಸ್ಥಿತಿ ಹೀಗಿದ್ದರೂ, ಎಲ್ಲಾ ಭಯೋತ್ಪಾದಕ ಗುಂಪುಗಳು ಮುಸ್ಲಿಂ ಎಂದೇ ಭಾವಿಸಲಾಗುತ್ತಿದೆ. ಇದಕ್ಕೆ ಮುಖ್ಯವಾದ ಕಾರಣವೆಂದರೆ ಭಾರತದ ಗಣ್ಯವರ್ಗ ಪಶ್ಚಿಮದ ಮಾಧ್ಯಮವನ್ನೇ ನಂಬಿ ನೆಚ್ಚಿಕೊಂಡಿದೆ. ಕೆಥೊಲಿಕ್ ಐರಿಷ್ ಭಯೋತ್ಪಾದನಾ ಗುಂಪು ಬ್ರಿಟ್ಟನಿನಲ್ಲಿ ಮುಸ್ಲಿಂ ಭಯೋತ್ಪಾದಕರಿಗಿಂತ ಹೆಚ್ಚಿನ ಜನರನ್ನು ಕೊಂದಿದೆ. ಆದರೆ ಲಂಡನ್ ಮತ್ತು ಮ್ಯಾಡ್ರಿಡ್ ಬಾಂಬ್ ಸ್ಫೋಟ ಪ್ರಕರಣವನ್ನು ಯುರೋಪಿನಲ್ಲಿ ಮರೆಯಲಾಗದಂತೆ ನೋಡಿಕೊಳ್ಳಲಾಗಿದೆ. ೯/೧೧ರ ಘಟನೆಯ ನಂತರ ಇಸ್ಲಾಮಿಕ್ ಭಯೋತ್ಪಾದನೆಯ ಗುರಿ ಅಮೇರಿಕಾ ಹಾಗೂ ಪಶ್ಚಿಮದ ದೇಶಗಳೆಂದೂ, ಇದರ ಗಂಭೀರ ವಿನಾಶದ ಬಗ್ಗೆ ಜಗತ್ತು ಎಚ್ಚೆತ್ತುಕೊಳ್ಳಬೇಕೆಂದೂ ಎಲ್ಲರ ಗಮನ ಸೆಳೆಯುವಲ್ಲಿ ಬುಶ್ ಯಶಸ್ವಿಯಾಗುತ್ತಾರೆ. ಇರಾಕ್ ಮೇಲಿನ ದಾಳಿ, ಸದ್ದಾಂಹುಸೇನ್ ಕೊರಳಿಗೆ ನೇಣು ಹಾಕಿರುವುದು ಸೇರಿದಂತೆ ಬುಶ್ ಪರಿವಾರ ನಡೆಸುತ್ತಿರುವ ದುಷ್ಕೃತ್ಯಗಳೆಲ್ಲವೂ ಸಮರ್ಥನೀಯವೆಂದೇ ಜಾಗತಿಕ ಸಮುದಾಯವನ್ನು ನಂಬಿಸಲಾಗುತ್ತಿದೆ. ಗ್ವಾಟೆನೆಮೋ, ಅಬೂಗಾರಿಬ್, ಇರಾಕ್, ಪ್ಯಾಲಸ್ಟೇನ್‌ನಲ್ಲಿನ ಮುಗ್ಧ ನಾಗರಿಕರು ಅನುಭವಿಸುತ್ತಿರುವ ಯಾತನೆ ಮತ್ತು ದಮನ ಪರಾಕಾಷ್ಠೆಯಲ್ಲಿದೆ. ಜಗತ್ತಿನ ಯಾವುದೇ ಅತ್ಯುನ್ನತ ಶಾಸನೀಯ ಪ್ರಾಧಿಕಾರ ಅಥವಾ ಮಾನವೀಯ ಹಕ್ಕುಗಳ ಚೌಕಟ್ಟಿನಲ್ಲಿ ಇವುಗಳಿಗೆ ಕಿಂಚಿತ್ತು ಪ್ರತಿರೋಧ ಮತ್ತು ಪರಿಹಾರಗಳು ಲಭ್ಯವಾಗುತ್ತಿಲ್ಲ. ಯಾವುದೇ ಜನತೆಯ ಮೂಲಭೂತ ಮಾನವೀಯ ಹಕ್ಕುಗಳನ್ನು ಉಲ್ಲಂಘಿಸಿ, ಕನಿಷ್ಠ ಬದುಕಿನ ಅವಕಾಶಗಳಿಂದಲೇ ವಂಚಿತರನ್ನಾಗಿಸುತ್ತಿರುವ ಒಂದು ಷಡ್ಯಂತ್ರದ ವಿರುದ್ಧ ಹತಾಶರಾಗಿ ಸಿಡಿದೇಳುವುದನ್ನು ನಾವು ಕಾಣುತ್ತಿದ್ದೇವೆ. ಸರಿ-ತಪ್ಪು, ನ್ಯಾಯ ನೀತಿಯ ಪ್ರಜ್ಞೆಯನ್ನೇ ಕಳೆದುಕೊಂಡಿರುವ ಇವರು ತಮ್ಮ ಅವಿವೇಕ ಮತ್ತು ಹಿಂಸಾ ಕೃತ್ಯಗಳಿಗೆ ನ್ಯಾಯೀಕರಣವಾಗಿ ದೇವರು-ಧರ್ಮದ ಪೋಷಾಕನ್ನು ತೊಡಿಸಿ ಜನರನ್ನು ಇನ್ನಷ್ಟು ರೊಚ್ಚಿಗೆಬ್ಬಿಸುತ್ತಾರೆ.

ಈ ಹಿಂಸಾವಾದಿ ತೀವ್ರಗಾಮಿಗಳಿಗೆ ತಮ್ಮ ಪಾಖಂಡಿತನದ ಬಗ್ಗೆ ತಿಳಿದಿದ್ದು, ಭಯೋತ್ಪಾದನೆಯನ್ನು ಒಂದು ಧರ್ಮ ಕೇಂದ್ರಿತ ಅಥವಾ ಧರ್ಮ ಪ್ರಾಯೋಜಿತ ನೈತಿಕ ಅಸ್ತ್ರವೆಂದು ಬಿಂಬಿಸುತ್ತಿರುವುದು ಶುದ್ಧ ಕಪಟತನವೆಂದು ಭಯೋತ್ಪಾದನೆಯ ವಿರುದ್ಧ ಗಂಟಲು ಬಿರಿಯುತ್ತಿರುವವರಿಗೂ ತಿಳಿದಿದೆ. ಆದರೆ ಇವರ ಕೃತ್ಯಗಳಿಗೆ ಸೌಮ್ಯವಾದಿ ಮುಸ್ಲಿಮರನ್ನು ಹೊಣೆಯಾಗಿಸುವುದು ಮತ್ತು ಇದ ನೆಪವಾಗಿಸಿ ಇಸ್ಲಾಮಿಗೆ ಕಳಂಕ ಹಚ್ಚುವುದರಲ್ಲಿ ಬಹಳ ವ್ಯವಸ್ಥಿತವಾದ ಪಿತೂರಿಇದೆ. ಮತಾಂಧ ಶಕ್ತಿಗಳು ದೇವರು ಮತ್ತು ಧರ್ಮದ ಹೆಸರನ್ನು ಬಳಸಿಕೊಂಡು ನಡೆಸಿದ ಘೋರ ಅನಾಹುತಗಳಿಗೆ ಪ್ರಜಾಪ್ರಭುತ್ವ, ಜಾತ್ಯಾತೀತ ದೇಶದಲ್ಲೇ ರಾಜಾಶ್ರಯ ದೊರೆತಿರುವುದು ನಮ್ಮ ಕಣ್ಣ ಮುಂದಿದೆ.

> **ಭಯೋತ್ಪಾದನೆಯಂತಹ ದುಷ್ಕೃತ್ಯಗಳ ಮೂಲಕ ಮುಗ್ಧರ ಪ್ರಾಣ ಮಾನಗಳಿಗೆ ಹಾನಿಯೆಸಗುವುದನ್ನು ಇಸ್ಲಾಂ ಬೆಂಬಲಿಸುವುದಿಲ್ಲ ಎಂದು ಘೋಷಿಸಿದಾಗ ಇಲ್ಲಿ ಬಿಜೆಪಿಯ ಶಹಭಾಸ್‌ಗಿರಿ ದೊರೆಯಿತು. ಬಿಜೆಪಿ ಹಿಂದೂ ವೋಟು ಬ್ಯಾಂಕನ್ನು ಒಗ್ಗೂಡಿಸಲು ಹಾಗೂ ರಾಜಕೀಯವಾಗಿ, ಚುನಾವಣಾ ಸಂದರ್ಭದಲ್ಲಿ ಮುಸ್ಲಿಂ ವಿರೋಧಿಭಾವನೆ ಮತ್ತು ಮುಸ್ಲಿಂ ಗುಮ್ಮನನ್ನು ತೋರಿಸಿ ಹಿಂದೂಗಳನ್ನು ಮುಸ್ಲಿಮರ ವಿರುದ್ಧ ಎತ್ತಿ ಕಟ್ಟುವುದಕ್ಕೆ ಈ 'ಫತ್ವಾ'ವೇನೂ ಅಡ್ಡಿಯಾಗಲಾರದೆಂದು ಬಿ.ಜೆ. ಪಿ.ಗೆ ಚೆನ್ನಾಗಿ ತಿಳಿದಿದೆ. ಭಾರತದ ರಾಜ್ಯವ್ಯವಸ್ಥೆ ಭಯೋತ್ಪಾದನೆಯನ್ನು ನಿಗ್ರಹಿಸುವ ತನ್ನ ಪ್ರಯತ್ನದಲ್ಲಿ ಯಾವುದೇ ಸಮುದಾಯವನ್ನು ಬಲಿಪಶು ಮಾಡದಂತೆ ಎಚ್ಚರಿಕೆ ವಹಿಸಬೇಕಾಗಿದೆ. ಮುಸ್ಲಿಂ ಸಮುದಾಯದ ನಾಯಕರು ಸಂಕುಚಿತ ದೃಷ್ಟಿಕೋನ ಮತ್ತು ಪ್ರತೀಕಾರ ಮನೋಭಾವಕ್ಕೆ ಯಾವುದೇ ಅವಕಾಶಗಳನ್ನು ಸೃಷ್ಟಿಸಬಾರದು.**

ದಿಯೋಬಂದ್‌ನ 'ದಾರುಲ್ ಉಲೂಂ'-ಇಸ್ಲಾಂ ಮುಗ್ಧರ ಮೇಲಿನ ಹಿಂಸೆಯನ್ನು ಕಟುವಾಗಿ ವಿರೋಧಿಸುತ್ತದೆ, ಭಯೋತ್ಪಾದನೆಯಂತಹ ದುಷ್ಕೃತ್ಯಗಳ ಮೂಲಕ ಮುಗ್ಧರ ಪ್ರಾಣ ಮಾನಗಳಿಗೆ ಹಾನಿಯೆಸಗುವುದನ್ನು ಇಸ್ಲಾಂ ಬೆಂಬಲಿಸುವುದಿಲ್ಲ ಎಂದು ಘೋಷಿಸಿದಾಗ ಇಲ್ಲಿ ಬಿಜೆಪಿಯ ಶಹಭಾಸ್‌ಗಿರಿ ದೊರೆಯಿತು. ಆರೆಸ್ಸೆಸ್ ಮತ್ತು ಸಂಘ ಪರಿವಾರದ ಬೆಂಬಲದೊಂದಿಗೆ ಬಿಜೆಪಿ ಹಿಂದೂ ವೋಟು ಬ್ಯಾಂಕನ್ನು ಒಗ್ಗೂಡಿಸಲು ಹಾಗೂ ರಾಜಕೀಯವಾಗಿ, ಚುನಾವಣಾ ಸಂದರ್ಭದಲ್ಲಿ ಮುಸ್ಲಿಂ ವಿರೋಧಿ ಭಾವನೆ ಮತ್ತು ಮುಸ್ಲಿಂ ಗುಮ್ಮನನ್ನು ತೋರಿಸಿ ಹಿಂದೂಗಳನ್ನು ಮುಸ್ಲಿಮರ ವಿರುದ್ಧ ಎತ್ತಿ ಕಟ್ಟುವುದಕ್ಕೆ ಈ 'ಫತ್ವಾ' ವೇನೂ ಅಡ್ಡಿಯಾಗಲಾರದೆಂದು ಬಿ.ಜೆ.ಪಿ.ಗೆ ಚೆನ್ನಾಗಿ ತಿಳಿದಿದೆ. ಭಾರತದ ರಾಜ್ಯವ್ಯವಸ್ಥೆ ಮತ್ತು ರಾಜಕೀಯ ನಾಯಕತ್ವ ಭಯೋತ್ಪಾದನೆಯನ್ನು ನಿಗ್ರಹಿಸುವ ತನ್ನ ಪ್ರಯತ್ನದಲ್ಲಿ ಯಾವುದೇ ಸಮುದಾಯವನ್ನು ಬಲಿಪಶು ಮಾಡದಂತೆ ಎಚ್ಚರಿಕೆ ವಹಿಸಬೇಕಾಗಿದೆ. ಅದೇ ರೀತಿ ಮುಸ್ಲಿಂ ಸಮುದಾಯದ ನಾಯಕರು ಸಂಕುಚಿತ ದೃಷ್ಟಿಕೋನ ಮತ್ತು ಪ್ರತೀಕಾರ ಮನೋಭಾವಕ್ಕೆ ಯಾವುದೇ ಅವಕಾಶಗಳನ್ನು ಸೃಷ್ಟಿಸಬಾರದು. ಪ್ರಜಾಸತ್ತಾತ್ಮಕ ಅವಕಾಶಗಳನ್ನು ಚೆನ್ನಾಗಿ ಬಳಸಿಕೊಂಡು ಹೆಚ್ಚು ಕಾರ್ಯಸಾಧುವಾದ ಸಾಮಾಜಿಕ ಸಾಮರಸ್ಯ ಮತ್ತು ಮೈತ್ರೀಕರಣದ ಹಾದಿಯಲ್ಲಿ ಸಾಗಬೇಕಾಗಿದೆ. ಮೊದಲನೆಯದಾಗಿ ಮುಸ್ಲಿಂ ನಾಯಕರು ತಮ್ಮ ಸಾಂಪ್ರದಾಯಿಕ ಮಿತ್ರರು, ಮುಸ್ಲಿಂ ಸಮುದಾಯದ ರಕ್ಷಕರೆಂದು ನಟಿಸುತ್ತಿರುವ ಸೆಕ್ಯುಲರ್ ಕ್ಯಾಂಪ್‌ನಲ್ಲಿರುವ ನಾಯಕರ ಬೂಟಾಟಿಕೆಯಿಂದ ಎಚ್ಚೆತ್ತುಕೊಂಡು ಅವರ ಕಪಿಮುಷ್ಠಿಯಿಂದ ಹೊರಗೆ ಬರಬೇಕು. ಹಳೆಯ ಸೆಕ್ಯುಲರ್‌ವಾದಿ ಮಿತ್ರರು ಒಂದಷ್ಟು ಬಣ್ಣದ ಘೋಷಣೆಗಳು ಮತ್ತು ಗೊಡ್ಡು ಸಿದ್ಧಾಂತಗಳ ಬಲೆಯಲ್ಲಿ ಮುಸ್ಲಿಂ ಸಮುದಾಯವನ್ನು ಸಿಲುಕಿಸಿ, ನಿಮ್ಮ ಎಲ್ಲಾ ಬಗೆಯ ಸಮಸ್ಯೆಗಳಿಗೇ ನಾವೇ ಪರಿಹಾರ ಎಂದು ಮೋಸಮಾಡುತ್ತಿದ್ದಾರೆ.

ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಹೆಚ್ಚು ಗೌರವ ಮತ್ತು ಘನತೆಯ ಸ್ಥಾನವನ್ನು ಎಷ್ಟು ಉತ್ತಮ ರೀತಿಯಲ್ಲಿ ಗಳಿಸಿಕೊಡಲು ಸಾಧ್ಯವೆಂದು ಕುರಿತು ಹೊಸ ಚಿಂತನೆಗಳಲ್ಲಿ ತೊಡಗಬೇಕಾಗಿದೆ. ಎರಡನೆಯದಾಗಿ ಮುಸ್ಲಿಮರು ಭಾರತದ ಪ್ರಚಲಿತ ಅದ್ವಾನಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಹೆಚ್ಚು ಜಾಗತೀಕರಣದ ಧಾವಂತದಲ್ಲಿರುವ ಜಗತ್ತಿನ ಸವಾಲುಗಳೊಂದಿಗೆ ನಮ್ಮ ಬೇಡಿಕೆಗಳಿಗೆ ಸಂಬಂಧ ಕಲ್ಪಿಸಿಕೊಳ್ಳುವ ಕೆಲಸವೂ ಆಗಬೇಕಿದೆ. ದೂರದ ದೇಶಗಳಲ್ಲಿನ ಹೋರಾಟ, ಪ್ಯಾಲಸ್ತೈನ್, ಹಮಾಸ್‌ಗಳಲ್ಲಿನ ಬೆಳವಣಿಗೆಗಳತ್ತ ಭಾರತದ ಮಧ್ಯಮ ವರ್ಗದ ಗಮನವನ್ನು ಸೆಳೆಯುವದರಿಂದ ಯಾವ ಪ್ರಯೋಜನವಿರಲಾರದು. ಅರಬ್ ಜಗತ್ತು ಅಥವಾ ಇಸ್ಲಾಮಿಕ್ ದೇಶಗಳಲ್ಲಿನ ತೀರಾ ಭಿನ್ನವಾದ ಸನ್ನಿವೇಶಗಳು ಮತ್ತು ಇದಕ್ಕೆ ಭಾರತೀಯ ಮುಸ್ಲಿಮರು ನೀಡುವ ಯಾವುದೇ ಸ್ಪಂದನ ತಾಯ್ನಾಡಿನಲ್ಲಿ ಮುಸ್ಲಿಮರ ಧ್ವನಿಗಳಿಗೆ ಶಕ್ತಿನೀಡದು. ಮೂರನೆಯದಾಗಿ ಮುಸ್ಲಿಮರು ತಾವು ಬಲಿಪಶುಗಳೆಂಬ ಮನೋಧರ್ಮದಿಂದ ಹೊರಬಂದು, ತಮ್ಮ ಪ್ರಜಾಸತ್ತಾತ್ಮಕ ಹಕ್ಕು ಮತ್ತು ಅವಕಾಶಗಳನ್ನು ಮರಳಿ ಪಡೆಯುವ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು.

ಮುಸ್ಲಿಂ ಸಮುದಾಯ ಈಗಾಗಲೇ ವಿಕೃತ

[illegible]ನಿಕ ವ್ಯಾಖ್ಯಾನಗಳಿಂದ ಚುಚ್ಚಲಡುತ್ತಿದೆ. ಇತರ [illegible]ರತೀಯ ಸಮುದಾಯಗಳಂತೆ ಸಾರ್ವಜನಿಕ ವಾಙ್ಮ[illegible]ಯವನ್ನು ಪ್ರಜಾಸತ್ತಾತ್ಮಕ ಮತ್ತು ಮಾನವೀಯಗೊಳಿಸುವುದರಲ್ಲಿ ಮುಸ್ಲಿಂ ಸಮುದಾಯಕ್ಕೂ ತನ್ನದೇ ಆದ ಪಾಲು ಇದೆ. ದಾರುಲ್ ಉಲೂಂ, ಭಯೋತ್ಪಾದನೆಯ ವಿರುದ್ಧ ನೀಡಿರುವ 'ಪತ್ವಾ'-ನಿಮ್ಮ ಜಿಹಾದಿ ಅಜೆಂಡಾದೊಂದಿಗೆ ನಾವು ಕೈ ಜೋಡಿಸುವುದಿಲ್ಲ, ನಾವು ನಿಮಗೆ ಸಿಗಲಾರೆವು ಎಂಬ ಸ್ಪಷ್ಟ ಸಂದೇಶವನ್ನು ನೀಡಿದೆ. ಅನ್ಯಾಯ, ಅನೀತಿ ಮತ್ತು ಅಧರ್ಮದಿಂದ ಕೂಡಿದ ಒಂದು ಜಿಹಾದಿನ ಪರಿಕಲ್ಪನೆ ಇಸ್ಲಾಮಿಗೆ ತೀರಾ ಪರಕೀಯವಾದದ್ದು. ರಕ್ತಪಾತದ ಮೂಲಕ ನೀವು ಸಾಧಿಸಲು ಹೊರಟಿರುವ 'ಪೊಲಿಟಿಕಲ್ ಇಸ್ಲಾಂ' (Poltical islam)ಗೂ ಹಝ್ರುತ್ ಆದಂ(ಅ.ಸ)ರವರಿಂದ ಪರಿಸಮಾಪ್ತಿಗೊಂಡ ನೈಜ, ಆಧ್ಯಾತ್ಮಿಕ ಇಸ್ಲಾಮಿಗೂ ಏನೇನೂ ಸಂಬಂಧವಿಲ್ಲ. ಇಸ್ಲಾಮ್ ಶಾಂತಿಯ ಧರ್ಮ. ಸಲಾಂ ಎಂದರೆ 'ಶಾಂತಿ' 'ನೀವೊಂದು ಉತ್ತಮ ಸಮುದಾಯ, ನಿಮ್ಮನ್ನು ಜನರೆಡೆಗೆ ಹೊರಡಿಸಲಾಗಿದೆ' ಎಂಬ ಕುರಾನ್ ಸೂಕ್ತಿ ವಿಶಾಲ ಮನುಕುಲದ ಹಿತದಲ್ಲೇ ಮುಸ್ಲಿಮರ ಹಿತ ಅಡಗಿದೆ. ಮುಸ್ಲಿಮರು ಮನುಕುಲಕ್ಕಾಗಿಯೇ ಇರುವ ಮನುಕುಲದ ಒಂದು ಭಾಗ ಎಂದು ಸಾರುತ್ತದೆ. ಸಾರ್ವತ್ರಿಕ ಮಾನವೀಯ ಸಾಹೋದರ್ಯದ ಸಂದೇಶವನ್ನು ನೀಡಿರುವ ಇಸ್ಲಾಮಿನ ಬಗ್ಗೆ ದಾರುಲ್ ಉಲೂಂ ಪತ್ವಾಕ್ಕೆ ಎಷ್ಟೋ ವರ್ಷಗಳ ಹಿಂದೆ, ಮಹಾನ ದಾರ್ಶನಿಕ, ಭಾರತದ ಆಧ್ಯಾತ್ಮದ ಮೇರು ವ್ಯಕ್ತಿ ಸ್ವಾಮಿ ವಿವೇಕಾನಂದರು ಹೇಳಿದ್ದೇನೆಂದರೆ, ವೇದಾಂತದ ಮೆದುಳು ಮತ್ತು ಇಸ್ಲಾಮಿನ ದೇಹ ಭಾರತಕ್ಕೆ ಸರ್ವಭೂಷಣ. ಜಗತ್ತಿನ ಎರಡು ಮಹಾದರ್ಶನಗಳ ಸಮನ್ವಯ ಮತ್ತು ಭ್ರಾತೃಭಾವನೆಯ ಸಂದೇಶವನ್ನು ಸ್ವಾಮಿ ವಿವೇಕಾನಂದರು ಘೋಷಿಸಿದ್ದರು.

ಸ್ವತಂತ್ರ ಭಾರತದಲ್ಲಿ ನಿರಂತರವಾಗಿ ಮುಸ್ಲಿಮರು ಸಂಘಟಿತ ಹಿಂಸೆಗೆ ತುತ್ತಾಗಿದ್ದರೂ ಸಹ ಭಾರತೀಯ ಮುಸ್ಲಿಮರು ಯಾವುದೇ ಅಂತಾರಾಷ್ಟ್ರೀಯ ಭಯೋತ್ಪಾದಕ ಸಂಘಗಳ ಜೊತೆ ತಮ್ಮನ್ನು ಗುರುತಿಸಿಕೊಂಡಿಲ್ಲ. ಮುಂಬಯಿನಲ್ಲಿ ೧೯೯೩ ಮಾರ್ಚ್‌ನಲ್ಲಿ ನಡೆದ ಸರಣಿ ಬಾಂಬ್ ಸ್ಫೋಟಗಳ ಕುರಿತು ಮಾತನಾಡುತ್ತಾ ಶ್ರೀಕೃಷ್ಣ ಆಯೋಗ ಹೇಳುವುದೇನೆಂದರೆ ಇಂತಹ ಅಪರೂಪದ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿರುವವರು ದೇಶದ ಮುಖ್ಯಧಾರೆಯ ಮುಸ್ಲಿಂ ಧಾರ್ಮಿಕ ಅಥವಾ ರಾಜಕೀಯ ಸಂಘಟನೆಗಳ ಬೆಂಬಲವನ್ನು ಎಂದೂ ಪಡೆದಿಲ್ಲ. ದೆಹಲಿ, ಜಮ್ಮು, ಮುಂಬಯಿ, ಅಹ್ಮದಾಬಾದ್, ವಾರಣಾಸಿ, ಹೈದರಾಬಾದ್, ಜೈಪುರ, ಬೆಂಗಳೂರು ಮುಂತಾದೆಡೆಗಳಲ್ಲಿ ನಡೆದ ಭಯೋತ್ಪಾದನಾ ದಾಳಿಗಳಲ್ಲಿ ಮುಗ್ಧ-ನಾಗರಿಕರ ಸಾವು-ನೋವು, ಆಸ್ತಿಪಾಸ್ತಿಗಳಿಗೆ ಅಪಾರ ನಾಶ ನಷ್ಟಗಳು ಸಂಭವಿಸಿರುವುದು ವಾಸ್ತವ.

ಸ್ಫೋಟಗಳ ನಂತರ ಮುಸ್ಲಿಂ ಸಮುದಾಯದ ನಾಯಕರು ಈ ಘಟನೆಗಳನ್ನು ಖಂಡಿಸಿದರೂ, ಸಶಸ್ತ್ರ ಇಸ್ಲಾಮಿಕ್ ಜಿಹಾದ್‌ನ ಹೆಸರಿನಲ್ಲಿ ಜಮ್ಮು-ಕಾಶ್ಮೀರ ಪಾಕಿಸ್ತಾನ ಮುಂತಾದೆಡೆಗಳಲ್ಲಿ ಬೆಳೆದು ಬರುತ್ತಿರುವ ಹಿಂಸಾ ಪಂಥ, ಇಸ್ಲಾಮಿಕ್ ನಾಮಧೇಯ ಮತ್ತು ಸಂಕೇತಗಳನ್ನು ಹೆಚ್ಚಾಗಿ ಬಳಸುತ್ತಿದೆ. 'ನಾಗರಿಕತೆಗಳ ಸಂಘರ್ಷ'(Clash of civilizations)ದ ಪೋಷಾಕಿನಲ್ಲಿ ಹಿಂಸೆ ಮತ್ತು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದವರಿಗೆ ಸೈದ್ಧಾಂತಿಕ ಮತ್ತು ಬೌದ್ಧಿಕ ತಳಹದಿಯನ್ನು ಇಸ್ಲಾಂ ನೀಡುತ್ತಿದೆಯೆಂದು

[illegible] ಗಳನ್ನು [illegible] 'ಮುಸ್ಲಿಂ' ಗುಂಪುಗಳೇ ಸ್ವತಃ ಇಸ್ಲಾಮಿನ ಬಗೆಗಿರುವ ಈ ತೆರನಾದ ವಿಕೃತ ಚಿತ್ರಣಕ್ಕೆ ಕಾರಣವಾಗಿದ್ದು, ಇಸ್ಲಾಮಿನ ಕುರಿತು ತಪ್ಪು ತಿಳವಳಿಕೆಗಳಿಗೆ ಬಹಳಷ್ಟು ಕೊಡುಗೆಗಳನ್ನು ನೀಡುತ್ತಿದೆ. ಭಯೋತ್ಪಾದನೆಯನ್ನು ಇಸ್ಲಾಂ ಮತ್ತು ಪವಿತ್ರಗ್ರಂಥ 'ಕುರ್‌ಆನ್' ಸಮರ್ಥಿಸುತ್ತದೆಯೆಂಬ ಅಪಪ್ರಚಾರವನ್ನು ಹರಡುವವರಿಗೆ ಭಯೋತ್ಪಾದನೆಯನ್ನು ನಿಗ್ರಹಿಸುವ ಯಾವುದೇ ಕಾಳಜಿಯಿಲ್ಲ. ಅವರ ಏಕೈಕ ಉದ್ದೇಶ ಇಸ್ಲಾಮಿಗೆ ಕಳಂಕ ಹಚ್ಚುವುದು ಮತ್ತು ಮುಸ್ಲಿಮರನ್ನು ಗುರಿಯಾಗಿಸಿ ಬೇಟೆಯಾಡುವುದು. ಗುಜರಾತಿನಲ್ಲಿ ನರಮೇಧದ ಕಳಂಕ ಹೊತ್ತ ನರೇಂದ್ರಮೋದಿ ಇಂದು ಅಧಿಕಾರದ ಸುಪ್ಪತ್ತಿಗೆಯಲ್ಲಿ ವಿರಾಜಮಾನರಾಗಲು ಕಾರಣ, ತಾನು ಎಸಗಿದ ಪೈಶಾಚಿಕ ಕೃತ್ಯಗಳಿಗೆ ಮೋದಿ ನೀಡುತ್ತಿರುವ ಸಮರ್ಥನೆಯೆಂದರೆ, ತಾನು ಜಿಹಾದಿಗಳ ಹುಟ್ಟಡಗಿಸಿ, ಗುಜರಾತಿನ ಗೌರವ ಕಾಪಾಡಿದ್ದೇನೆ. ಅದಕ್ಕಾಗಿ ೫.೫ ಕೋಟಿ ಗುಜರಾತಿಗಳು ಮೋದಿಯನ್ನು ಬೆಂಬಲಿಸಬೇಕು. ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳು, ಮಹಿಳೆಯರು, ಭೀಕರವಾಗಿ ಬೆಂಕಿಯಲ್ಲಿ ಸುಟ್ಟು ಕರಕಲಾದ ಹಾಲುಗಲ್ಲದ ಮಕ್ಕಳೆಲ್ಲವೂ ಜಿಹಾದಿಗಳೆಂದೇ ಗುಜರಾತಿಗಳು ದೃಢಪಡಿಸಿಕೊಂಡಂತೆ ಚುನಾವಣೆಯಲ್ಲಿ ಗುಜರಾತ್ ನರಮೇಧದ ರೂವಾರಿ ಮೋದಿಗೆ ಸರಣಿ ಜಯಭೇರಿ ನೀಡಿದರು.

ಜರ್ಮನಿಯಲ್ಲಿ ಮುಸ್ಲಿಂ ಮಹಿಳೆಯೊಬ್ಬಳು ತನ್ನ ಗಂಡನಿಂದ ವಿಚ್ಛೇಧನ ಪಡೆಯುವ ಬಗ್ಗೆ ಕೋರಿಕೆಯನ್ನು ಸಲ್ಲಿಸಿದಾಗ ನ್ಯಾಯಾಧೀಶರು, ಕುರಾನ್ ಮಹಿಳೆಗೆ ಹೊಡೆಯುವದನ್ನು ಸಮರ್ಥಿಸುತ್ತದೆಂಬ ವಾದವನ್ನು ಮುಂದಿಟ್ಟು ಅದನ್ನು ತಿರಸ್ಕರಿಸುತ್ತಾರೆ. ಬ್ರಿಟನಿನಲ್ಲಿ ಮುಸ್ಲಿಂ ಹುಡುಗಿಯರು 'ಶಿರವಸ್ತ್ರ' ಧರಿಸುವುದನ್ನು ನಿಷೇಧಿಸಲು ಶಾಲಾ ಮುಖ್ಯೋಪಾಧ್ಯಾಯಿನಿಗೆ ಅಧಿಕಾರಕೊಟ್ಟಿದೆ. ಭಾರತದಲ್ಲಿ 'ಅನ್ಯಮತೀಯ'ರಾಗಿರುವ ಮುಸ್ಲಿಮರನ್ನು ಎಲ್ಲಾ ಬಗೆಯ ಕೆಡುಕು ಮತ್ತು ದುಷ್ಕೃತ್ಯಗಳ ಪ್ರತಿರೂಪವಾಗಿ ಚಿತ್ರಿಸಲಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ ಮತ್ತು ವೈವಿಧ್ಯತೆಯನ್ನು ಪ್ರತಿಪಾದಿಸುವ ಪ್ರಜಾತಂತ್ರ ದೇಶಗಳಲ್ಲೇ ಈ ರೀತಿಯಾಗಿ ಒಂದು ಜನ ವಿಭಾಗವನ್ನು ಅನ್ಯವಾಗಿಸುವ ಅವರ ಮೇಲೆ ಸಾಂಸ್ಕೃತಿಕ ದಬ್ಬಾಳಿಕೆಯೆಸಗುವ ಚಟುವಟಿಕೆಗಳು ನಡೆಯುತ್ತಿವೆ. ಇಸ್ಲಾಂ ಎಂಬುದು ಶಾಂತಿಯ ಅಭಿದಾನವಾಗಿದೆ. ಇಸ್ಲಾಂ ಬೇಟೆಗಾರನಲ್ಲ, ಬದಲಾಗಿ ಅತಿಥಿಯೂ, ಆತಿಥೇಯನೂ ಹೌದು. ಧರ್ಮದ ಚೌಕಟ್ಟಿನಲ್ಲಿ ತನ್ನ ಜೀವನ ಕ್ರಮವನ್ನು ನಿರ್ವಹಿಸುವದರೊಂದಿಗೆ, ತನ್ನ ಸಹ ಜೀವಿಗಳ ಜೊತೆಗೂ ಒಬ್ಬ ಮುಸ್ಲಿಮನಿಗೆ ಅನೇಕ ರೀತಿಯ ಹಕ್ಕು-ಬಾಧ್ಯತೆಗಳಿವೆ. ಪವಿತ್ರ ಕುರ್‌ಆನಿನಲ್ಲಿ 'ತೌಹೀದ್'(ಏಕದೇವವಿಶ್ವಾಸ)ನ್ನು ಪ್ರತಿಪಾದಿಸುವ ಬಹಳ ಪ್ರಮುಖವಾದ ಸೂಕ್ತಿಯನ್ನು

ಸ್ವತಂತ್ರ ಭಾರತದಲ್ಲಿ ನಿರಂತರವಾಗಿ ಮುಸ್ಲಿಮರು ಸಂಘಟಿತ ಹಿಂಸೆಗೆ ತುತ್ತಾಗಿದ್ದರೂ ಸಹ ಭಾರತೀಯ ಮುಸ್ಲಿಮರು ಯಾವುದೇ ಅಂತಾರಾಷ್ಟ್ರೀಯ ಭಯೋತ್ಪಾದಕ ಸಂಘಗಳ ಜೊತೆ ತಮ್ಮನ್ನು ಗುರುತಿಸಿಕೊಂಡಿಲ್ಲ. ಮುಂಬಯಿನಲ್ಲಿ ೧೯೯೩ ಮಾರ್ಚ್‌ನಲ್ಲಿ ನಡೆದ ಸರಣಿ ಬಾಂಬ್ ಸ್ಫೋಟಗಳ ಕುರಿತು ಮಾತನಾಡುತ್ತಾ ಶ್ರೀಕೃಷ್ಣ ಆಯೋಗ ಹೇಳುವುದೇನೆಂದರೆ ಇಂತಹ ಅಪರೂಪದ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿರುವವರು ದೇಶದ ಮುಖ್ಯಧಾರೆಯ ಮುಸ್ಲಿಂ ಧಾರ್ಮಿಕ ಅಥವಾ ರಾಜಕೀಯ ಸಂಘಟನೆಗಳ ಬೆಂಬಲವನ್ನು ಎಂದೂ ಪಡೆದಿಲ್ಲ. ದೆಹಲಿ, ಜಮ್ಮು, ಮುಂಬಯಿ, ಅಹ್ಮದಾಬಾದ್, ವಾರಣಾಸಿ, ಹೈದರಾಬಾದ್, ಜೈಪುರ, ಬೆಂಗಳೂರುಗಳಲ್ಲಿ ನಡೆದ ಭಯೋತ್ಪಾದನಾ ದಾಳಿಗಳಲ್ಲಿ ಮುಗ್ಧ-ನಾಗರಿಕರ ಸಾವು-ನೋವು, ಆಸ್ತಿಪಾಸ್ತಿಗಳಿಗೆ ಅಪಾರ ನಾಶ ನಷ್ಟಗಳು ಸಂಭವಿಸಿರುವುದು ವಾಸ್ತವ.

ಹೇಳಿದ ನಂತರ ಇಸ್ಲಾಮಿಗೆ ಯಾರನ್ನೂ ಒತ್ತಾಯ ಪೂರ್ವಕ ಕರೆಯಬೇಕಾಗಿಲ್ಲ, ಯಾರ ಹೃದಯಕ್ಕೆ ದೇವರು ಪ್ರಕಾಶವನ್ನು ನೀಡುತ್ತಾರೋ ಅವರು ಬಂದೇ ಬರುತ್ತಾರೆ. ದೇವನು ಉದ್ದೇಶಿಸಿದರೆ ಮಾತ್ರ ಅವನ ಹೃದಯವನ್ನು ಇಸ್ಲಾಮಿಗೆ ತೆರೆಯುತ್ತಾನೆ. ಕುರಾನಿನ ಪ್ರತಿಯೊಂದು ಅಧ್ಯಾಯವೂ ಕೂಡಾ ಪ್ರಾರಂಭವಾಗುವುದು 'ಕರುಣೆ'ಯ ವಚನದೊಂದಿಗೆ. 'ಐಹಿಕ ಸಾರ್ವತ್ರಿಕ ದಯಾಪರನೂ ಪಾರತ್ರಿಕ ವಿಶಿಷ್ಟ ದಯಾಮಯನೂ' ಆದ ಅಲ್ಲಾಹನ ನಾಮದಿಂದಲೇ ಕುರ್‌ಆನ್ ಆರಂಭಗೊಳ್ಳುತ್ತದೆ. ಇಲ್ಲಿ ಧರ್ಮಕ್ಕೆ ಜನರನ್ನು ಕರೆಯುವಂತೆ ಅಥವಾ ಜನರ ಮೇಲೆ ಹೇರುವಂತೆ ಎಲ್ಲಿಯೂ ಹೇಳಿಲ್ಲ. 'ಅಲ್ಲಾಹನಿಗೆ' ಅನೇಕ ನಾಮಗಳಿವೆ. ಈ ಪೈಕಿ 'ರಹ್ ಮಾನ್' ಮತ್ತು 'ರಹೀಂ' ಅಂದರೆ 'ಕರುಣೆ', 'ಕಾರುಣ್ಯ' ಎಂಬ ಹೆಸರುಗಳಿಂದಲೇ ದೇವನು ಹೆಚ್ಚು ಸ್ತುತಿಸಲ್ಪಡುತ್ತಾನೆ.

ಪ್ರವಾದಿ ಮುಹಮ್ಮದ(ಸ.ಅ)ರನ್ನು ಜಗತ್ತಿಗೆ ದೇವರು ಪರಿಚಯಿಸಿದ್ದು, 'ಸರ್ವಲೋಕ ಅನುಗ್ರಹೀತರು' ಎಂದಾಗಿದೆ. ಅವರ ಪ್ರಧಾನ ಸಿದ್ಧಿ ಕರುಣೆ ಹೊರತು ದ್ವೇಷವಲ್ಲ. ಪರಸ್ಪರ ಕರುಣೆ ತೋರದವರಿಗೆ ಸತ್ಯ ವಿಶ್ವಾಸವಿಲ್ಲ ಎಂದು ಪೈಗಂಬರ್ ಹೇಳಿದಾಗ ಅವರ ಅನುಚರರು ಕೇಳುತ್ತಾರೆ, ನಾವೆಲ್ಲ ಕರುಣೆಯಿರುವವರಲ್ಲವೇ? ಆಗ ಪೈಗಂಬರರು ಉತ್ತರಿಸುತ್ತಾರೆ, ನಾನು ಹೇಳುತ್ತಿರುವುದು, ನಿಮ್ಮ ಒಡನಾಡಿಗೆ, ಮನೆಯವರಿಗೆ, ಸ್ನೇಹಿತರಿಗೆ, ತೋರಿಸುವ ಕರುಣೆಯ ಕುರಿತಾಗಿ ಅಲ್ಲ ಇಡೀ ಮನುಷ್ಯ ಸಮೂಹಕ್ಕೆ ನೀವು ಕರುಣೆ ತೋರುವವರಾಗಬೇಕು. ಅನ್ಯರ ಮೇಲೆ ಕೈ ಎತ್ತಲು, ಆಕ್ರಮಿಸಲು ಇಸ್ಲಾಂ ಅನುಮತಿಸುವುದಿಲ್ಲ. ಮನುಷ್ಯರಿಗೆ ಕರುಣೆ ತೋರದವನಿಗೆ ಅಲ್ಲಾಹು ಕರುಣೆ ತೋರಲಾರ ಎಂಬುದು ಧರ್ಮದ ತಳಹದಿ. ಸ್ವರ್ಗ ಪ್ರವೇಶಿಸಲು ಅರ್ಹನಾದ ವ್ಯಕ್ತಿಯೊಬ್ಬ, ನರಕವಾಸಿಯನ್ನು ಅಕ್ರಮಿಸಿದ್ದರೆ ಅವನಿಗೆ ಸ್ವರ್ಗ ಪ್ರವೇಶ ದುಸ್ತರವಾಗುತ್ತದೆ ಎಂದು ಇಸ್ಲಾಂ ಹೇಳುತ್ತದೆ. ನಾಯಿ ಮುಟ್ಟಿದರೆ ಏಳು ಬಾರಿ ಮಣ್ಣಿನ ನೀರಿನಲ್ಲಿ ತೊಳೆದು ಶುಚಿಗೊಳಿಸಬೇಕೆಂದು ಹೇಳುವ ಇಸ್ಲಾಂ, ಬಾಯಾರಿಕೆಯಿಂದ ಬಳಲಿ ಪ್ರಾಣ ಬಿಡಲು ಸಿದ್ಧವಾಗಿದ್ದ ನಾಯಿಯೊಂದಕ್ಕೆ ಕಷ್ಟಪಟ್ಟು ತನ್ನ ಬೂಟುಗಳಲ್ಲಿ ನೀರು ತುಂಬಿಸಿ ನೀರುಣಿಸಿದ ಕಾರಣಕ್ಕೆ ಧರ್ಮಭಕ್ತೆಯಲ್ಲದ ಮಹಿಳೆಯೊಬ್ಬಳಿಗೆ ಸ್ವರ್ಗ ಪ್ರವೇಶ ಸಾಧ್ಯವಾಯಿತು. ಅದೇ ರೀತಿ ಬೆಕ್ಕೊಂದನ್ನು ಕಟ್ಟಿ ಹಾಕಿ ಅದಕ್ಕೆ ಅನ್ನ ನೀರು ನೀಡದೆ ಅದನ್ನು ತನ್ನಷ್ಟಕ್ಕೆ ಬಿಟ್ಟು ಬಿಡದ ಧರ್ಮನಿಷ್ಠೆ ಮಹಿಳೆಯೊಬ್ಬಳು ನರಕ ಪ್ರವೇಶಿಸುತ್ತಾಳೆ. ಯಾವ ಕರುಳಿರುವ ಒಂದು ಜೀವಿಗೆ ಬೇಕಾಗಿ ನೀವು ಕಷ್ಟಪಟ್ಟರೂ ನಿಮಗೆ ಸತ್ಕರ್ಮದ ಫಲವಿದೆಯೆಂದು ಇಸ್ಲಾಂ ಹೇಳುತ್ತದೆ.

ಕೆಡುಕಿನ ವಿರುದ್ಧ, ನಮ್ಮ ಆಸೆ-ಆಮಿಷಗಳ ವಿರುದ್ಧ ಹೋರಾಡುವುದೇ ನಿಜವಾದ ಜಿಹಾದ. ಗುಲಾಮಗಿರಿಯನ್ನು ವಿರೋಧಿಸಿದ ಪ್ರವಾದಿಯವರು ಹೆಣ್ಣುಮಕ್ಕಳು, ಅನಾಥಮಕ್ಕಳ ಸಂರಕ್ಷಣೆಯ ಬಗ್ಗೆ ವಿಶೇಷ ಕಾಳಜಿ ತೋರಿಸಿದರು. ಪರಿಸರದ ಬಗ್ಗೆ ವಿಶೇಷ ಆಸಕ್ತಿಯನ್ನು ತೋರಿದ ಪೈಗಂಬರರು ಅನ್ಯಾಯವಾಗಿ ಒಂದು ಮರವನ್ನು ಕಡಿಯುವುದನ್ನು ಸಹಿಸುತ್ತಿರಲಿಲ್ಲ. ಪೂಜಾ ಕೋಣೆಯಲ್ಲಿ ಜಪಮಾಲೆ ಹಿಡಿದು ದೈವನಾಮ ಜಪಿಸುವುದು, ಆರಾಧನಾಲಯದಲ್ಲಿ ಪ್ರಾರ್ಥನಾ ನಿರತನಾಗಿರುವುದನ್ನು ಮನುಷ್ಯನ ಧರ್ಮನಿಷ್ಠೆಯ ಕುರುಹಾಗಿ ಅಂಗೀಕರಿಸಲಾಗದು. ಧರ್ಮ ನಿಷ್ಠೆಯಿರುವುದು ಧಾರ್ಮಿಕ ಆಚಾರ, ಸಂಪ್ರದಾಯ ಮತ್ತು ವೇಷಭೂಷಣಗಳಲ್ಲಲ್ಲ. ಜೀವನದ ಬಹುಮುಖ ರಂಗಗಳಲ್ಲಿ ಮನುಷ್ಯ ವ್ಯವಹರಿಸುವ, ಸಂವಹನದಲ್ಲಿ ತೊಡಗುವ ಅವನು ನೆಚ್ಚಿಕೊಳ್ಳುವ ಆದರ್ಶ ಮತ್ತು ಮೌಲ್ಯಗಳೇ ನೈಜ ಧಾರ್ಮಿಕತೆಯಾಗಿದೆ.

ಬ್ರಿಟಿಷ್ ಅಧಿಪತ್ಯದ ವಿರುದ್ಧ ಸೆಟೆದು ನಿಂತು, ತಾಯ್ನಾಡಿನ ಸ್ವಾತಂತ್ರ್ಯ ಮತ್ತು ಸ್ವಾಭಿಮಾನಕ್ಕಾಗಿ ಅನ್ಯಾಯ, ದೌರ್ಜನ್ಯದ ಮುಂದೆ ಮಂಡಿಯೂರದೆ ಪ್ರತಿಭಟಿಸಿದ್ದು ನಿಜಕ್ಕೂ ಒಂದು ವೀರೋಚಿತ ಹೋರಾಟ. ಈ ಸಾಮಾನ್ಯ ಜ್ಞಾನದಿಂದ ನಮಗೆ ತಿಳಿಯುವುದೇನೆಂದರೆ, ಆತ್ಮ ರಕ್ಷಣೆಗಾಗಿ, ಒಂದು ಜನತೆಯನ್ನು ಅಮಾನುಷ ದೌರ್ಜನ್ಯ ಮತ್ತು ಹಿಂಸೆಗೊಳಪಡಿಸಿದಾಗ, ಅವರ ಮನೆ-ಮಾರುಗಳನ್ನು ಬಿಟ್ಟು ಓಡುವಂತೆ ಬಲಪ್ರಯೋಗ ಮಾಡಿದಾಗ, ಅವರ ಅಭಿವ್ಯಕ್ತಿ ಸ್ವಾತಂತ್ರ್ಯ ಘನತೆ ಮತ್ತು ಗೌರವದ ಬದುಕಿಗೆ ಅಡ್ಡಿಯುಂಟುಮಾಡಿದಾಗ ಅದಕ್ಕೆ ಪ್ರತಿರೋಧವನ್ನು ತೋರುವುದನ್ನು ಜಗತ್ತಿನ ಎಲ್ಲಾ ಧರ್ಮಗಳು ಸಮ್ಮತಿಸಿವೆ. ಸತ್ಯ, ಧರ್ಮ, ನ್ಯಾಯ, ನೀತಿಯ ಸಂಸ್ಥಾಪನೆ, ಕೆಡುಕಿನ ವಿರುದ್ಧ ಒಳಿತಿನ ಜಯ, ಎಲ್ಲಾ ಧರ್ಮಗಳು ಸಾರುವ ಸಂದೇಶವಾಗಿದೆ.

ಆದರೆ ಇಸ್ಲಾಂ ಪ್ರತಿರೋಧವನ್ನು ತೋರುವಾಗ ಬಹಳಷ್ಟು ಶರ್ತುಗಳು ಮತ್ತು ನೈತಿಕ ಚೌಕಟ್ಟನ್ನು ಕಟ್ಟುನಿಟ್ಟಾಗಿ ಹೇಳಿದೆ. ಮುಗ್ಧ ನಾಗರಿಕರು ವಿಶೇಷವಾಗಿ ಮಹಿಳೆಯರು, ಮಕ್ಕಳು, ವೃದ್ಧರು, ಅಶಕ್ತರು ಮತ್ತು ಭಕ್ತರಿಗೆ ಪೂರ್ಣ ರೀತಿಯ ರಕ್ಷಣೆಯನ್ನು ನೀಡಬೇಕು. ಆದರೆ ಭಯೋತ್ಪಾದಕರು, ವಿಮಾನ, ರೈಲು, ಬಸ್ಸಿನಲ್ಲಿರುವ ಪ್ರಯಾಣಿಕರು, ಮಾರುಕಟ್ಟೆ, ಹೊಟೇಲು ಮತ್ತಿತರ ಸಂಸ್ಥೆಗಳಲ್ಲಿರುವ ಮುಗ್ಧ ಜನತೆಯನ್ನು ಗುರಿಯಾಗಿಸುತ್ತಿರುವುದು ಅಮಾನವೀಯ ಮತ್ತು ಇಸ್ಲಾಂ ವಿರೋಧಿ ಎಂಬುದು ಸರ್ವವಿಧಿತ. ಈ ಬಗ್ಗೆ ಇಸ್ಲಾಂ ಏನು ಹೇಳುತ್ತದೆ ಎಂದು ತಿಳಿದುಕೊಳ್ಳಲು ಯಾವುದೇ ಧರ್ಮಗ್ರಂಥಗಳ, ಧಾರ್ಮಿಕ ಪಂಡಿತರ ಮೊರೆ ಹೋಗಬೇಕಾಗಿಲ್ಲ. ಇಸ್ಲಾಂ ಶಾಂತಿ ಮತ್ತು ಸದ್ಭಾವನೆಯ ಧರ್ಮ. ಶಾಂತಿ ಕದಡುವುದು, ದುಷ್ಕೃತ್ಯಗಳ ಲಾಲಸೆ, ಸಾಮಾಜಿಕ ಪ್ರಕ್ಷುಬ್ಧತೆ, ರಕ್ತಪಾತ, ಮುಗ್ಧ ಜನತೆಯನ್ನು ಕೊಲ್ಲುವುದು ಮತ್ತು ಅವರ ಸಂಪತ್ತನ್ನು ಲೂಟಿಗೈಯುವುದು ಮಾನವತೆಯ ವಿರುದ್ಧ ಎಸಗುವ ಅತ್ಯಂತ ಹೀನ ಅಪರಾಧವೆಂದು ಇಸ್ಲಾಂ ಸಾರುತ್ತದೆ. ಧರ್ಮದ ಹೆಸರಿನಲ್ಲಿ ಹಿಂಸೆ, ಪ್ರಕ್ಷುಬ್ಧತೆ ಮತ್ತು ರಕ್ತಪಾತವನ್ನು ಈ ಭೂಮಿಯಲ್ಲಿ ಓರ್ವ ನೈಜ ಮುಸ್ಲಿಂ ಹೇಗೆ ಸಮರ್ಥಿಸಬಲ್ಲ?

ಶತಮಾನಗಳಿಂದ ಮುಸ್ಲಿಮರು ನಿರ್ವಹಿಸುವ ಕಡ್ಡಾಯ ನಮಾಝುನಲ್ಲಿ ಪಠಿಸುವ ಸೂಕ್ತಿಗಳು 'ಶಾಂತಿ'-ಸುರಕ್ಷೆ ಸುಭಿಕ್ಷೆಯನ್ನು ದೇವನಲ್ಲಿ ಬೇಡುವುದಾಗಿದೆ. ಪರಸ್ಪರ ಮುಸ್ಲಿಮರು ಭೇಟಿಯಾಗುವಾಗ ಅವರು 'ಶಾಂತಿ'ಯ ಅಭಿವಾದನದೊಂದಿಗೆ ಮಾತು ಮುಂದುವರೆಸುತ್ತಾರೆ. ಇಸ್ಲಾಮೀನ ಮೂಲಭೂತ ಪ್ರಮಾಣಗಳು ಮತ್ತು ಬೌದ್ಧಿಕ ಪರಂಪರೆ ಸಹಿಷ್ಣುತೆ, ಸದಾಚಾರ ಮತ್ತು ಸಾತ್ವಿಕ ಮಾನವೀಯ ಮೌಲ್ಯಗಳಿಗೆ ಬದ್ಧನಾಗಿದ್ದು, ಭಯೋತ್ಪಾದಕರು ತಮ್ಮ ಕೃತ್ಯಗಳಿಂದ ಸಾಧಿಸಲು ಹೊರಟಿರುವುದಾದರೂ ಏನನ್ನು? ಭಾರತ ಸೇರಿದಂತೆ ಜಗತ್ತಿನಲ್ಲಿ ಮುಸ್ಲಿಂ ದ್ವೇಷಗಳ ಮತ್ತು ಯುದ್ಧ ಪಿಪಾಸುಗಳ ಶಕ್ತಿಯನ್ನು ಹೆಚ್ಚಿಸಲು ಭಯೋತ್ಪಾದಕರು ಕಾರಣರಾಗಿದ್ದಾರೆ. ಇದರಿಂದ ಇಸ್ಲಾಮಿಗೆ ಅಥವಾ ಮುಸ್ಲಿಮರಿಗೆ ಯಾವ ಬಗೆಯ ಲಾಭವೂ ಇಲ್ಲ. □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ - ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಕಟ್ಟಕಡೆಯ ಮರವನ್ನು ಕತ್ತರಿಸಿದ ನಂತರ
ಕಟ್ಟಕಡೆಯ ನದಿಗೆ ವಿಷವಿಕ್ಕಿದ ನಂತರ
ಕಟ್ಟಕಡೆಯ ಮೀನನ್ನು ಹಿಡಿದ ನಂತರ
ಆಗ, ಆಗಷ್ಟೇ
ನಿನಗೆ ಗೊತ್ತಾಗುತ್ತದೆ:
ಹಣವನ್ನು ತಿನ್ನಲಾಗುವುದಿಲ್ಲ ಎಂದು

–ಕ್ರೀ ಇಂಡಿಯನ್ ಸಾಲುಗಳು

ಜೂನ್‌ನಲ್ಲಿ ನಡೆದ ಸರ್ಕಾರಿ ಚರ್ಚೆಗಳನ್ನು ನೋಡಿ ನಾಗರಿಕತೆ ನಾಚಿಕೆಪಟ್ಟುಕೊಳ್ಳಬೇಕು: ರೈತ ಸಾಲ ಮರುಪಾವತಿಗೆ ವಿಫಲನಾಗಿ ಸತ್ತನಾ ಅಥವಾ ರಸಗೊಬ್ಬರದ ಅಭಾವದಿಂದಾಗಿ ಸತ್ತನಾ ಇಲ್ಲ ಪರಿಹಾರದ ಆಸೆಗಾಗಿ ಸತ್ತನಾ ಅಥವಾ ಕುಟುಂಬ ಕಲಹ ಅಥವಾ ಪ್ರೇಮ ವೈಫಲ್ಯ..... ಹೀಗೆ: ಮನಸ್ಸಿನೊಳಗಿನ ಕೊಳಕಿಗೆಲ್ಲಾ ಈ ಚರ್ಚೆ ಕನ್ನಡಿಯಾಯಿತು. ಒಬ್ಬ ವ್ಯಕ್ತಿಯ ಬದುಕಿನ ಹಕ್ಕಿನ ನಿರಾಕರಣೆಯಾಗಿದೆ, ತನ್ನ ಬದುಕಿನ ಹಕ್ಕು ರಕ್ಷಿಸಿಕೊಳ್ಳಲಾಗದೇ ಹತಾಶನಾಗಿ ಆತ ಆತ್ಮಹತ್ಯೆಯ ಮೊರೆಹೋಗಿದ್ದಾನೆ. ಈ ಸಾವೇ ಒಂದು event ಅದರ ಬದಲು ನಾವು ಇನ್ನೆಲ್ಲೆಲ್ಲೋ focus ಮಾಡುತ್ತಿದ್ದೇವೆ ಯಾಕೆ? ಯಾಕೆಂದರೆ ಯಾವ ಜವಾಬ್ದಾರಿಯನ್ನು ಹೊತ್ತುಕೊಳ್ಳಲೂ ನಾವು ತಯಾರಿಲ್ಲ.

ಒಂದು event ಎಂದು ಪರಿಗಣಿಸಿದರೆ ಜೂನ್‌ನ ಮೂವತ್ತು ದಿನಗಳಲ್ಲಿ ನಡೆದ ಮೂವತ್ತೈದು ಆತ್ಮಹತ್ಯೆಗಳನ್ನು ಪ್ರತ್ಯೇಕಿಸಿಕೊಂಡು ನೋಡಲು ಬರುವುದಿಲ್ಲ. ಇವನ್ನೊಂದು ಸರಣಿಯ ಭಾಗವಾಗಿ ಪರಿಗಣಿಸಿದರೆ ಒತ್ತಡಗಳು ಬೆಳೆದುಕೊಂಡು ಬಂದ ಪ್ರಕ್ರಿಯೆಯನ್ನು ಗಮನಕ್ಕೆ ತೆಗೆದುಕೊಳ್ಳಲೇ ಬೇಕಾಗುತ್ತದೆ. ಪಿ. ಸಾಯಿನಾಥ ಗುರುತಿಸುವ ಹಾಗೆ The idea was to look at those conditions in terms of <u>prousses.</u> Too often poverty and deprivation get covered as <u>events.</u> That is, when some disaster strikes when people die. ಅಂದರೆ ರಸಗೊಬ್ಬರದ ಅಭಾವ/ ಪರಿಹಾರದ ಆಸೆಗಾಗಿ ರೈತ ಸತ್ತು ಬಿಟ್ಟ ಎಂದರೆ ನಮ್ಮ ಪಾಲಿನ ಸಮಸ್ಯೆ ಮುಗಿದ ಹಾಗೆ!

ಒಂದು event ಎಂದು ಪರಿಗಣಿಸಿದರೆ ಜೂನ್‌ನ ಮೂವತ್ತು ದಿನಗಳಲ್ಲಿ ನಡೆದ ಮೂವತ್ತೈದು ಆತ್ಮಹತ್ಯೆಗಳನ್ನು ಪ್ರತ್ಯೇಕಿಸಿಕೊಂಡು ನೋಡಲು ಬರುವುದಿಲ್ಲ. ಒತ್ತಡಗಳು ಬೆಳೆದುಕೊಂಡು ಬಂದ ಪ್ರಕ್ರಿಯೆಯನ್ನು ಗಮನಕ್ಕೆ ತೆಗೆದುಕೊಳ್ಳಲೇ ಬೇಕಾಗುತ್ತದೆ. ಪಿ. ಸಾಯಿನಾಥ ಗುರುತಿಸುವ ಹಾಗೆ The idea was to look at those conditions in terms of prousses. Too often poverty and deprivation get covered as events. That is, when some disaster strikes when people die. **ಅಂದರೆ ರಸಗೊಬ್ಬರದ ಅಭಾವ/ ಪರಿಹಾರದ ಆಸೆಗಾಗಿ ರೈತ ಸತ್ತು ಬಿಟ್ಟ ಎಂದರೆ ನಮ್ಮ ಪಾಲಿನ ಸಮಸ್ಯೆ ಮುಗಿದ ಹಾಗೆ!**

ಈ ಆತ್ಮಹತ್ಯೆಗಳು ವಾಸ್ತವದ ಕೃಷಿ ಬಿಕ್ಕಟ್ಟಿನ, ವಿಸ್ತೃತ ನೆಲೆಯಲ್ಲಿ ಆರ್ಥಿಕ ಬಿಕ್ಕಟ್ಟನೊಂದಿಗೆ ಆತ್ಯಂತಿಕವಾಗಿ ನಾವು ಸ್ವೀಕರಿಸಿದ ಅಭಿವೃದ್ಧಿ ಮಾದರಿಯ ಪರಿಣಾಮವೇ ಆಗಿದೆ ಎಂಬುದನ್ನಷ್ಟೇ ಇಲ್ಲಿ ಸೂಚಿಸ ಬಯಸುತ್ತೇನೆ.

ಹಕ್ಕಿನ ಪ್ರಶ್ನೆ–ಹಸಿವು ವರ್ಸಸ್ ಲಾಭ: ಕೆಲವು ಅಗತ್ಯ ಮಿಥ್‌ಗಳು:

ಹೆಚ್ಚುತ್ತಿರುವ ಆಹಾರ ವಸ್ತುಗಳ ಬೆಲೆಗಳ ಬಗ್ಗೆ ಚರ್ಚಿಸಲು ವಿಶ್ವ ಆಹಾರ ಶೃಂಗವನ್ನು ತುರ್ತಾಗಿ ರೋಮ್‌ನಲ್ಲಿ ಜೂನ್ ೫ರಿಂದ ಮೂರು ದಿನಗಳವರೆಗೆ ವಿಶ್ವಸಂಸ್ಥೆಯ ಅಂಗವಾದ ಆಹಾರ ಮತ್ತು ವ್ಯವಸಾಯ ಸಂಸ್ಥೆ ಆಯೋಜಿಸಿತ್ತು. ಪರಿಹಾರದ ಬಗ್ಗೆ ಯೋಚಿಸುವುದಿರಲಿ, ನಿಜವಾದ ಸಮಸ್ಯೆಯನ್ನು ಗುರುತಿಸಲು ಕೂಡ ಇದು ವಿಫಲವಾಯಿತು. ದೋಹಾ ಹಾಗೂ ಕ್ಯಾನ್‌ಕುನ್ ವಿಶ್ವ ವ್ಯಾಪಾರ ಶೃಂಗಗಳ ನಿರ್ಧಾರದ ಚೌಕಟ್ಟಿನೊಳಗೆ ನಡೆದ ಚರ್ಚೆ ಅಂತಿಮವಾಗಿ ಆಹಾರ ರಫ್ತು ರಾಷ್ಟ್ರಗಳು (ವಿಯೆಟ್ನಾಂ, ಕಾಂಬೋಡಿಯಾ, ಭಾರತ ಇ.) ವ್ಯಾಪಾರ ಅಡೆತಡೆಗಳನ್ನು ನಿವಾರಿಸುವ ಮೂಲಕವಷ್ಟೇ ವಿಶ್ವ ಮಾರುಕಟ್ಟೆಯ ದರಗಳನ್ನು ನಿಯಂತ್ರಿಸಬೇಕು ಎಂದಾಯಿತೇ ಹೊರತು ಕಳೆದೆರಡು ವರ್ಷಗಳಿಂದ ಆಹಾರ ಉತ್ಪನ್ನಗಳು ಇಂಧನ ಉತ್ಪಾದನೆಗೆ ಬಳಕೆಯಾಗುತ್ತಿರುವ ಬಗ್ಗೆಯಾಗಲೀ (ವರದಿಯ ಪ್ರಕಾರ ಅಮೇರಿಕಾದಲ್ಲಿ ಬೆಳೆಯುವ ಒಟ್ಟು ಮೆಕ್ಕೆ ಜೋಳದ ಇಪ್ಪತ್ತು ಪ್ರತಿಶತ ಎಥೆನಾಲ್ ಉತ್ಪಾದನೆಗೆ ಬಳಕೆಯಾಗುತ್ತಿದೆ) ಅಥವಾ ಒಂದೊಮ್ಮೆ ಆಹಾರ ಸ್ವಾವಲಂಬನೆ ಸಾಧಿಸಿದ ರಾಷ್ಟ್ರಗಳಿಂದ ಈಗ ಆಮದಿನ ಬೇಡಿಕೆ ಹೆಚ್ಚುತ್ತಿರುವ ಬಗೆಗಾಗಲೀ ಅಥವಾ ಅಮೇರಿಕಾದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಅಲ್ಲಿ ಸ್ಥಳೀಯ ಮಟ್ಟಗಳಲ್ಲಿ ದಾಸ್ತಾನುಗೊಳ್ಳುತ್ತಿರುವ ಆಹಾರೋತ್ಪನ್ನಗಳ ಬಗೆಗಾಗಲೀ ಗಮನ ಹರಿಯಲಿಲ್ಲ. ಬಡ ರಾಷ್ಟ್ರಗಳ ನಿರಂತರ ಆಹಾರ ಕ್ಷಾಮದ ಬಗೆಗಿನ ಪ್ರಸ್ತಾಪವೇ ಇರಲಿಲ್ಲ.

ಜೈವಿಕ ಅವಶ್ಯಕತೆಯಾದ ಆಹಾರ ಕೂಡ ಬಂಡವಾಳಶಾಹಿ ಜಗತ್ತಿನಲ್ಲಿ ಲಾಭಗಳಿಸಲು ಮಾರುವ ಸರಕಾಗುತ್ತದೆ ಹಾಗೂ ಕೊಳ್ಳುವ ಸಾಮರ್ಥ್ಯ ಇಲ್ಲ ಅನ್ನುವ ಕಾರಣಕ್ಕಾಗಿ ಮಿಲಿಯಾಂತರ ಜನರ ಹಸಿವೆಯ ಪ್ರಶ್ನೆ ನಿರಾಕರಿಸಲ್ಪಡುತ್ತದೆ.

ಆದರೂ ನಾವು ದಿನೇ ದಿನೇ ಶ್ರೀಮಂತಗೊಳ್ಳುತ್ತಿರುವ ಸಮೃದ್ಧ ಜಗತ್ತಿನಲ್ಲಿದ್ದೇವೆ ಎಂದು ಭಾವಿಸಲು ಪೂರಕವಾಗಿರುವ

ಸೂಚಿಕೆ:೦೧: **ವಿಶ್ವ ಹಣಕಾಸು ಸಂಸ್ಥೆ ಗುರುತಿಸಿರುವಂತೆ (ಆಹಾರೋತ್ಪನ್ನಗಳಿಗೆ ಸಂಬಂಧಿಸಿದ) ಹಣದುಬ್ಬರ: ವಿವಿಧ ವರ್ಷಗಳಲ್ಲಿ (ಮಾರ್ಚ್‌ನಿಂದ ಮಾರ್ಚ್‌ಗೆ)**

		೨೦೦೮	೨೦೦೭	೨೦೦೬	೨೦೦೫	೨೦೦೦
ಅಕ್ಕಿ ಗೋದಿ ಜೋಳ	US $/mt “	೬೭೨.೬೪ ೪೩೯.೭೨ ೨೩೩.೮೫	೩೨೬.೧೮ ೧೯೯.೧೦ ೧೬೯.೫೨	೨೭೯.೭೪ ೧೭೪.೪೪ ೧೦೪.೮೯	೨೯೫.೦೦ ೧೫೦.೯೯ ೦೯೯.೯೪	೨೨೮.೮೦ ೧೦೫.೭೦ ೯೫.೦೧
ಆಹಾರೋತ್ಪನ್ನ ಬೆಲೆ ಸೂಚಿ	೧೬.೭ಯುನಿಟ್	೧೭೨.೫೪	೧೧೮.೭೭	೧೦೫.೫೬	೧೦೩.೧೭	೮೩.೨೪

ಒಡೆತನಕ್ಕೆ ಕೇಡಿಲ್ಲವಾಗಿ–೨

ಮೂರ್ಖ ಸರ್ಕಾರಗಳು ಹಾಗೂ ದುಷ್ಟ ನೀತಿಗಳು

ಶ್ರೀಶ ಉಡುಪ

ಮಿಥ್‌ಗಳು ನಿರಂತರವಾಗಿರುತ್ತವೆ. **(ನೋಡಿ: ಸೂಚಿಕೆ-೦೧)**

ಅಕ್ಕಿಯ ಬೆಲೆ ೨೦೦೦ದ ಹೊತ್ತಿಗೆ ಒಂದು ಮೆಟ್ರಿಕ್‌ಟನ್‌ಗೆ ೨೨೮.೮೦ ಡಾಲರ್ ಇದ್ದ ಬೆಲೆ ೨೦೦೬ ಹೊತ್ತಿಗೆ ೫೯೭.೭೪ ಡಾಲರ್‌ಗೆ ಏರಿದೆ. ೨೦೦೮ರ ಹೊತ್ತಿಗೆ ವಿಪರೀತ ಏರಿಕೆ ಕಂಡು ೬೭೨.೬೪ ಡಾಲರ್‌ಗಳಷ್ಟಾಗಿದೆ. ಗೋಧಿಯ ಬೆಲೆಯು ೨೦೦೭ರಲ್ಲಿ ಒಂದು ಮೆಟ್ರಿಕ್‌ಟನ್‌ಗೆ ೧೯೯.೧೦ ಡಾಲರ್ ಇದ್ದರೆ ೨೦೦೮ಕ್ಕೆ ೪೫೯.೭೨ ಡಾಲರ್ ಆಗಿದೆ. ಜೋಳ ಕೂಡ ಮೆಟ್ರಿಕ್ ಟನ್‌ಗೆ ಇದೇ ಅವಧಿಯಲ್ಲಿ ೧೬೯.೫೨ ಡಾಲರಗಳಿಂದ ೨೩೩.೮೫ ಡಾಲರ್‌ಗೆ ಏರಿಕೆ ಕಂಡಿದೆ. ಆದರೆ ಭಾರತದ ರೈತ ಕುಟುಂಬದ ದಿನದ ಸರಾಸರಿ ಜೀವನವೆಚ್ಚ ೮೫ ರೂ.ಗಳು. ಯಾವುದೇ ನೆಲೆಯಲ್ಲೂ ಸಮರ್ಥನೀಯವಲ್ಲದ ಈ ಗಣನೀಯ ಬೆಲೆ ಏರಿಕೆ ಸಾಮಾನ್ಯ ವ್ಯಕ್ತಿಯೊಬ್ಬನ ಜೀವನ ನಿರ್ವಹಣೆಯ ಒತ್ತಡವನ್ನು ಹೆಚ್ಚಿಸಿದ್ದಲ್ಲದೆ ನಿರಂತರವಾಗಿ ಆಹಾರ ವಂಚಿತತೆ (food dep riration)ಗೂ ಕಾರಣವಾಗಿದೆ.

ವಿಶ್ವ ಸಂಸ್ಥೆಯ ಮಾನವ ಅಭಿವೃದ್ಧಿ ಸೂಚಿ ಕೂಡ ಸಮೃದ್ಧತೆಯ ಮಿಥ್‌ಅನ್ನು ಸಮರ್ಥಿಸುವುದಿಲ್ಲ: **(ನೋಡಿ: ಸೂಚಿಕೆ-೦೨)**

ಒಂಬತ್ತನೇ ಸ್ಥಾನದಲ್ಲಿದ್ದ ಅಮೆರಿಕಾ ಹನ್ನೆರಡನೇ ಸ್ಥಾನಕ್ಕಿಳಿದಿದ್ದರೆ ಭಾರತ ೧೨೬ರಿಂದ ೧೨೮ಕ್ಕೆ ಕುಸಿದಿದೆ. ಈ ಹಣದುಬ್ಬರ ತೈಲಬೆಲೆಗಳ ಏರಿಕೆಯ ಪರಿಣಾಮ; ಸಂಪತ್ತೆಲ್ಲ ತೈಲ ರಫ್ತು ರಾಷ್ಟ್ರಗಳತ್ತ ಹರಿದಿದೆ ಎಂಬ ವಾದಗಳೂ ಕೂಡ ಸುಳ್ಳಾಗುತ್ತವೆ. ತೈಲ ಆರ್ಥಿಕತೆಗಳಾದ ಇಥಿಯೋಪಿಯಾ ಹಾಗೂ ಸೌದಿ ಅರೇಬಿಯಾಗಳು ಕ್ರಮವಾಗಿ ೧೬೭ರಿಂದ ೧೬೯ಕ್ಕೆ ಹಾಗೂ ೫೯ರಿಂದ ೬೧ಕ್ಕೆ ಕುಸಿದಿವೆ.

ಭಾರತದಲ್ಲಿ ತಲಾವಾರು ಆಹಾರ ಲಭ್ಯತೆ ಹಾಗೂ ಬಳಕೆಗಳು ನಿರಂತರವಾಗಿ ಕುಸಿಯುತ್ತಿವೆ: **(ನೋಡಿ: ಸೂಚಿಕೆ-೦೩)**

ಸೂಚಿಕೆ ಮೂರರ ಆಯ್ದ ವರ್ಷಗಳ ಮಾಹಿತಿಯನ್ನು ಗಮನಿಸಿದಾಗ ಕಳೆದ ವರ್ಷಗಳಲ್ಲಿ ತಲಾವಾರು ಆಹಾರ ಲಭ್ಯತೆಯ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಕುಸಿದಿರುವುದು ಕಂಡುಬರುತ್ತದೆ. ನಡುವಿನ ವರ್ಷಗಳಲ್ಲಿ ಒಂದಷ್ಟು ಏರುಪೇರುಗಳಿದ್ದರೂ ಅವೂ ಕೂಡ ಆಹಾರ ಲಭ್ಯತೆಯಲ್ಲಾದ ಒಟ್ಟು ಕುಸಿತವನ್ನು ನಿರಾಕರಿಸುವುದಿಲ್ಲ.

ಇದನ್ನೇ ಇನ್ನಷ್ಟು ವಿವರವಾಗಿ ಪರಿಶೀಲಿಸಬಹುದು. **(ನೋಡಿ: ಸೂಚಿಕೆ-೦೪)**

ಅಕ್ಕಿ, ಗೋಧಿ ಹಾಗೂ ಇತರ ಧಾನ್ಯಗಳ ತಲಾವಾರು ಬಳಕೆಗಳಲ್ಲಿ ಗಮನಾರ್ಹ ಇಳಿಕೆ ಕಂಡುಬರುತ್ತದೆ.

ಸೂಚಿಕೆ: ೦೨: ಮಾನವ ಅಭಿವೃದ್ಧಿ ಸೂಚಿಯಲ್ಲಿ ಆಯ್ದ ರಾಷ್ಟ್ರಗಳು:

	೨೦೦೫-೦೬	೨೦೦೭-೦೮
ಅಮೆರಿಕಾ	೮	೧೨
ಭಾರತ	೧೨೬	೧೨೮
ಇಥಿಯೋಪಿಯಾ	೧೬೭	೧೬೯
ಸೌದಿ ಅರೇಬಿಯಾ	೫೯	೬೧

ಅಕ್ಕಿಯ ಬಳಕೆ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲೇ ಹೆಚ್ಚಾಗಿದೆ. ೧೯೮೭ರಲ್ಲಿ ವ್ಯಕ್ತಿಯೊಬ್ಬ ವರ್ಷಕ್ಕೆ ೮೮.೧ ಕೆಜಿ ಅಕ್ಕಿಯನ್ನು ಬಳಸುತ್ತಿದ್ದರೆ ೧೯೯೯ರಲ್ಲಿ ೮೧ಕೆಜಿಯನ್ನಷ್ಟೆ ಬಳಸುತ್ತಾನೆ. ಅಂದರೆ ಗ್ರಾಮೀಣ ಪ್ರದೇಶಗಳಲ್ಲಿ ಈ ಹನ್ನೆರಡು ವರ್ಷಗಳಲ್ಲಿ ಅಕ್ಕಿಯ ತಲಾವಾರು ಬಳಕೆ ೭.೧ ಕಿ.ಗ್ರಾಂನಷ್ಟು ಕುಸಿದಿದೆ. ಈ ಅವಧಿಯಲ್ಲಿ ನಗರ ಪ್ರದೇಶಗಳಲ್ಲಿ ಅಕ್ಕಿಯ ಬಳಕೆ ೬೮.೧ ಕಿ.ಗ್ರಾಂನಿಂದ ೬೨.೫ ಕಿಗ್ರಾಂಗೆ ಕುಸಿದಿದೆ. ಗೋಧಿ ಹಾಗೂ ಇತರ ಧಾನ್ಯಗಳ ತಲಾವಾರು ಬಳಕೆಯು ಕಡಿಮೆಯಾಗಿದೆ. ಆದರೆ ಹಾಲಿನ ತಲಾವಾರು ಬಳಕೆ ಗಾಮೀಣ ಪ್ರದೇಶಗಳಲ್ಲಿ ಇಳಿಕೆಯನ್ನು ಕಂಡಿದ್ದರೆ ನಗರ ಪ್ರದೇಶಗಳಲ್ಲಿ ಹೆಚ್ಚಾಗಿದೆ. ೧೯೮೭ರಲ್ಲಿ ೬೪.೯ರಷ್ಟಿದ್ದ ನಗರ ಪ್ರದೇಶಗಳ ತಲಾವಾರು ಹಾಲಿನ ಬಳಕೆ ೧೯೯೯ರ ಹೊತ್ತಿಗೆ ೭೨.೪ಕ್ಕೆ ಏರಿದೆ. ಹಣ್ಣು, ಮೀನು, ಮೊಟ್ಟೆ ಹಾಗೂ ಮಾಂಸಗಳ ಬಳಕೆಯಲ್ಲಿ ಏರಿಕೆ ಕಂಡು ಬರುತ್ತದೆ. ಇವು ಆಹಾರ ಸೇವನೆಯ ಕ್ರಮದಲ್ಲಿ ಆಗಿರುವ ಪಲ್ಲಟವನ್ನು ಕೂಡಾ, ಒಟ್ಟು ತಲಾವಾರು ಆಹಾರ ಬಳಕೆಯಲ್ಲಾದ ಇಳಿಕೆಯ ಜೊತೆ, ಸೂಚಿಸುತ್ತವೆ.

ಸೂಚಿಕೆ: ೦೩: ಭಾರತದಲ್ಲಿ ತಲಾವಾರು ಆಹಾರ ಲಭ್ಯತೆ (ಗ್ರಾಂಗಳಲ್ಲಿ)

ವರ್ಷ	ಮುಕ್ತ ಮಾರುಕಟ್ಟೆ	ಸಾರ್ವಜನಿಕ ವಿತರಣಾ ವ್ಯವಸ್ಥೆ	ಒಟ್ಟು ತ.ಆ. ಲಭ್ಯತೆ
೧೯೬೬	-	-	೪೮೦
೧೯೮೫	-	-	೪೬೩
೧೯೯೦-೯೧	೪೧೪.೮	೩೪.೫೯	೪೪೯.೩
೧೯೯೮-೯೯	೩೯೩.೯	೪೪.೬೮	೪೩೮.೬
೧೯೯೯-೦೦	೩೮೩.೪	೩೮.೯೨	೪೨೨.೩
೨೦೦೦-೦೧	೩೬೭.೬	೨೭.೭೩	೩೯೫.೪

ಆಕರ: ೧) ಆರ್ಥಿಕ ಸರ್ವೆ: ಭಾರತ ಸರಕಾರ , ೨೦೦೧-೦೨, ೨) ಗ್ರಾಹಕ ವ್ಯವಹಾರ ಖಾತೆಯ ತಿಂಗಳ ಸಂಚಿಕೆಗಳು:EPW-XL-೧೧ ರಲ್ಲಿ ಉಲ್ಲೇಖಿತವಾದಂತೆ ೩) ಬತ್ತದ ಚಿಲುಮೆ: ವಂದನಾಶಿವ: ಯುಪಿವಿವಿ: ೨೦೦೫

ಹಸಿವೆಯ ವಿಸ್ತರಣೆಗೆ ಕಾರಣವಾದ ಆಹಾರ ಬಿಕ್ಕಟ್ಟನ್ನು ಸೃಷ್ಟಿಸಿದ ಅಂಶಗಳಲ್ಲಿ ಇದೂ ಒಂದು. ಉತ್ಪಾದನೆಯಲ್ಲಿ ಆಗಿರುವ ಇಳಿಕೆ ಹಾಗೂ ಅವೂ ಕೂಡ ಆಹಾರ ಬೆಳೆಗಳಿಂದ ಆಹಾರೇತರ ಬೆಳೆಗಳತ್ತ ಸಾಗುತ್ತಿರುವುದು ಇನ್ನೊಂದು ಕಾರಣ. **(ನೋಡಿ: ಸೂಚಿಕೆ-೦೫)**

೧೯೮೧-೮೫ರಿಂದ ೨೦೦೧-೦೫ರ ವರೆಗಿನ ವರ್ಷಗಳ ಅವಧಿಯಲ್ಲಿ ಆಹಾರ ಧಾನ್ಯಗಳ ತಲಾವಾರು ಉತ್ಪಾದನೆ ೨೪ಕೆಜಿಗಳಷ್ಟು ಕುಸಿದಿದೆ. ಇದಕ್ಕೆ ಕಾರಣ ಆಹಾರ ಬೆಳೆಗಳಿಂದ ಆಹಾರೇತರ ಬೆಳೆಗಳತ್ತ ಆಗಿರುವ ಉತ್ಪಾದನಾ ಪಲ್ಲಟ್ಟ. **(ನೋಡಿ: ಸೂಚಿಕೆ-೦೬)**

ಭಾರತದಲ್ಲಿ ೧೯೮೧-೮೨ರಲ್ಲಿ ೪೮.೦೫ ಪ್ರತಿಶತ ಮೌಲ್ಯದ ಆಹಾರ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ೧೯೯೮-೯೯ರಲ್ಲಿ ಈ ಪ್ರಮಾಣ ಕೇವಲ ೩೯.೮೫% ಅಷ್ಟೇ ಆಗಿದೆ. ಆಹಾರ ಬೆಳೆಗಳನ್ನು ಬೆಳೆಯುವ ಕ್ಷೇತ್ರ ವಿಸ್ತಾರ ಕೂಡ ಈ ಸಂದರ್ಭದಲ್ಲಿ ಇಳಿಕೆಯನ್ನು ಕಂಡಿದೆ. ಇವೆರಡೂ ಅಂಶಗಳೂ ಆಹಾರ ಉತ್ಪಾದನೆಯಲ್ಲಾದ ಕುಸಿತವನ್ನೇ ಸೂಚಿಸುತ್ತವೆ. ದಕ್ಷಿಣ ವಲಯದಲ್ಲಿ ಈ ಕುಸಿತ ಗಣನೀಯವಾಗಿದೆ. ೪೧.೮೨%ರಷ್ಟಿದ್ದ ಆಹಾರ ಬೆಳೆಗಳ ಮೌಲ್ಯ ೨೮.೨೦%ಕ್ಕೆ ಇಳಿದುಬಿಟ್ಟಿದೆ. ಅಂದರೆ ಎರಡು ದಶಕದೊಳಗೆ ಆಹಾರ ಬೆಳೆಗಳು ಮೌಲ್ಯವಾರು ನೋಡಿದಾಗ ೧೩.೬೨%ರಷ್ಟು ಕುಸಿದಿವೆ. ಉತ್ತರ ವಲಯದಲ್ಲಷ್ಟೇ ಸ್ವಲ್ಪವೇ ಪಲ್ಲಟ್ಟ ಉಂಟಾಗಿದೆ. ಒಟ್ಟು ಪಲ್ಲಟದ ಪ್ರಮಾಣ ಆಹಾರದ ಅಭದ್ರತೆಯತ್ತ ಸಾಗುತ್ತಿರುವುದನ್ನು ಸೂಚಿಸುತ್ತದೆ.

ತೊಂಬತ್ತರ ದಶಕದಲ್ಲುಂಟಾದ ಆಹಾರ ವಸ್ತುಗಳ ದರಗಳ ಏರಿಕೆಯ ಕಾರಣವನ್ನು ತೈಲ ಬೆಲೆಗಳ ಜೊತೆ ತಳುಕು ಹಾಕಲು ಬರುವುದಿಲ್ಲ. ಯಾಕೆಂದರೆ ೧೯೮೦ ರಿಂದ ೧೯೮೬ರವರೆಗೆ ೦.೮೬ನಷ್ಟಿದ್ದ ತೈಲ ಬೆಲೆ ಹಾಗೂ ಆಹಾರ ದರಸೂಚಿಯ ನಡುವಿನ Correlation, ೧೯೮೭ರಿಂದ ೧೯೯೯ರವರೆಗೆ ೦.೨೪ ಅಷ್ಟೇಆಗಿತ್ತು. ಉತ್ಪಾದನೆ ಹಾಗೂ ಬಳಕೆಯಲ್ಲಾದ ಪಲ್ಲಟಗಳ ಜೊತೆಗೆ ಸರಕಾರದ ತಪ್ಪು ಆರ್ಥಿಕ ನೀತಿಗಳು ಇದಕ್ಕೆ ಕಾರಣ. ಜಾಗತೀಕರಣ-ಉದಾರೀಕರಣಗಳನ್ನು ಜಾರಿಗೊಳಿಸುತ್ತಾ

ಸೂಚಿಕೆ: ೦೪: ಭಾರತದಲ್ಲಿ ವಿವಿಧ ಆಹಾರೋತ್ಪನ್ನಗಳ ತಲಾವಾರು ಬಳಕೆ (ಕೆಜಿ/ವ್ಯಕ್ತಿ/ವರ್ಷ)

ವಿವರ	೧೯೮೭		೧೯೯೩		೧೯೯೯	
	ಗ್ರಾಮೀಣ	ನಗರ	ಗ್ರಾಮೀಣ	ನಗರ	ಗ್ರಾಮೀಣ	ನಗರ
ಅಕ್ಕಿ	೮೮.೧	೬೮.೧	೮೫.೪	೬೪.೨	೮೧.೦	೬೨.೫
ಗೋಧಿ	೬೧.೬	೬೦.೪	೫೩.೫	೫೭.೪	೫೩.೯	೫೫.೪
ಇ.ಧಾನ್ಯಗಳು	೧೭೯.೫	೧೩೯.೧	೧೬೩.೦	೧೨೯.೩	೧೫೨.೬	೧೨೫.೦
ಸಕ್ಕರೆ	೧೧.೦	೧೨.೩	೯.೨	೧೧.೮	೧೦.೧	೧೨.೦
ಮೀನು, ಮೊಟ್ಟೆ ಹಾಗೂ ಮಾಂಸ	೩.೩	೪.೯	೪.೧	೬.೩	೫.೦	೬.೮
ಹಾಲು	೫೮.೦	೬೪.೯	೫೧.೪	೬೮.೩	೩೦.೫	೭೨.೪
ಹಣ್ಣು	೧೦.೩	೧೮.೮	೯.೮	೨೦.೧	೧೭.೦	೧೯.೦

ಆಕರ: Agricalture Diversification in south Asia: ಪಿ.ಕೆ ಜೋಶ್ ಹಾಗೂ ಇತರರು: EPW xxxix-24 ರಲ್ಲಿ ಉಲ್ಲೇಖಿಸಲಾಗಿರುವಂತೆ

ಸೂಚಿಕೆ: ೦೫: ವಿಶ್ವದಲ್ಲಿ ಆಹಾರ ಧಾನ್ಯಗಳ ತಲಾವಾರು ಉತ್ಪಾದನೆ (ಕೆಜಿಗಳಲ್ಲಿ)

ವರ್ಷ	ಗೋಧಿ	ಅಕ್ಕಿ	ಜೋಳ	ಒಟ್ಟು ಧಾನ್ಯಗಳು
೧೯೮೧-೮೫	೧೦೪	೬೩	೯೩	೩೩೪
೧೯೮೬-೯೦	೧೦೪	೬೪	೯೦	೩೨೬
೧೯೯೧-೯೫	೧೦೦	೬೪	೯೪	೩೧೬
೧೯೯೬-೦೦	೧೦೦	೬೬	೧೦೧	೩೧೯
೨೦೦೧-೦೫	೯೫	೬೩	೧೦೪	೩೧೦

ಆಕರ: FAO STAT ಹಾಗೂ FAO Food Outlook -EPW-XL111-೨೬&೨೭ರಲ್ಲಿ ಉಲ್ಲೇಖಿತವಾದಂತೆ.

ಭಾರತೀಯ ಮಾರುಕಟ್ಟೆ +ಆರ್ಥಿಕತೆಗಳನ್ನು ಜಾಗತಿಕ ಮಾರುಕಟ್ಟೆ +ಆರ್ಥಿಕತೆಗಳ ಜೊತೆ ಏಕೀಕರಿಸುವ ಪ್ರಯತ್ನ ಪ್ರಾರಂಭವಾಯಿತು. ಇದರ ಜೊತೆಗೆ ನಡೆದ ರೂಪಾಯಿಯ ಅಪಮೌಲೀಕರಣ ದೇಶಿ ಮಾರುಕಟ್ಟೆಯ ಬೆಲೆ ನೀತಿಯ ಮೇಲೆ ಪರಿಣಾಮ ಬೀರಿತು. ಈ ಮುನ್ನ ಬೆಲೆಗಳು ಆಂತರಿಕ ಅಂಶಗಳನ್ನೇ ಮುಖ್ಯವಾಗಿ ಅವಲಂಬಿಸಿದ್ದವು. ಈಗ ಜಾಗತಿಕ ಬೆಲೆಗಳಿಗೆ ಹೋಲಿಸಿದರೆ ಇಲ್ಲಿನ ಬೆಲೆಗಳು, ಪ್ರಮುಖವಾಗಿ ಸರಕಾರ ಕೊಡುವ ಬೆಂಬಲ ಬೆಲೆ, ತುಂಬ ಕೆಳಮಟ್ಟದಲ್ಲಿದ್ದವು. ಈ ಪರಿಸ್ಥಿತಿಗಳಿಂದ ಉಂಟಾದ ಒತ್ತಡಗಳು ಬೆಂಬಲ ಬೆಲೆಯ ಏರಿಕೆಗೆ ಕಾರಣವಾದವು.

೧೯೯೦ರಿಂದ ೯೩ರ ನಡುವೆ ಗೋಧಿಯ ಬೆಂಬಲ ಬೆಲೆಯನ್ನು ೨೦ ಪ್ರತಿಶತಕ್ಕಿಂತಲೂ ಹೆಚ್ಚು ಹೆಚ್ಚಿಸಲಾಯಿತು. ೧೯೯೬-೯೭ರಲ್ಲಿ ಮತ್ತೆ ೨೫ ಪ್ರತಿಶತ ಹೆಚ್ಚಿಸಲಾಯಿತು. ಹಾಗೇ ೧೯೯೦ರಿಂದ ೯೪ರನಡುವೆ ಅಕ್ಕಿಯ ಬೆಂಬಲ ಬೆಲೆಯನ್ನು ೧೧ರಿಂದ ೧೭ ಪ್ರತಿಶತ ಹೆಚ್ಚಿಸಲಾಯಿತು. ಆದರೆ ಈ ಹೊತ್ತಿಗೆ ಮಾರುಕಟ್ಟೆಯ ಒಟ್ಟು ಬೆಲೆ ಮಟ್ಟದಲ್ಲಾದ ಏರಿಕೆಯಿಂದ ಹೆಚ್ಚಿಸಿದ ಬೆಂಬಲ ಬೆಲೆಯಿಂದ ರೈತನಿಗೆ ಹೆಚ್ಚೇನೂ ಪ್ರಯೋಜನವಾಗಿಲ್ಲ. ಆದರೆ ೧೯೯೭ರಿಂದ ಅಂತರರಾಷ್ಟ್ರಿಯ ದರಗಳು ಕುಸಿಯಲು ಶುರುವಾದಾಗ ಅದು ದೇಶಿ ಮಾರುಕಟ್ಟೆಯ ಮೇಲೂ ಪರಿಣಾಮ ಬೀರಿತು.

ಇದರ ಪರಿಣಾಮವಾಗಿ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿಘಟನೆಯಿಂದಾಗಿ ಆಹಾರ ಧಾನ್ಯಗಳ ದಾಸ್ತಾನು ನಿಗದಿತ ಮಿತಿಗೂ ಮೀರಿ ಹೆಚ್ಚುತ್ತಾ ಹೋಯಿತು. (ಸೂಚಿಕೆ ೫) ಉಪಯೋಗಕ್ಕೆ ಬಾರದ ಈ ಮಿತಿ ಮೀರಿದ ದಾಸ್ತಾನು ಒಂದೆಡೆ ಹಾಗೂ ಆಹಾರೇತರ ಬೆಳೆಗಳತ್ತ ಉತ್ಪಾದನಾ ಪಲ್ಲಟ ಇನ್ನೊಂದೆಡೆ, ಜೊತೆಗೆ ಹೆಚ್ಚುತ್ತಾ ಹೋದ ಉತ್ಪಾದನಾ ವೆಚ್ಚ, ಮಾರುಕಟ್ಟೆಯ ಮೇಲೆ ಬಹುರಾಷ್ಟ್ರೀಯ ಕಂಪನಿಗಳ ಹೆಚ್ಚಿದ ಹಿಡಿತ.... ಇವೆಲ್ಲ ಹಸಿವಿನ ವಿಸ್ತರಣೆಗೆ ಕಾರಣವಾದವು. ಈ ಹೊತ್ತಿಗಾಗಲೇ ಜೈವಿಕ ಹಕ್ಕಾದ ಆಹಾರ ಲಾಭದ ಸರಕಾಗಿ ಪೂರ್ಣಮಟ್ಟಿಗೆ ಪರಿವರ್ತನೆಗೊಂಡಿತ್ತು.

ದೋಷಪೂರ್ಣ ಸರ್ಕಾರಿ ನೀತಿಗಳ ಪರಂಪರೆ:

ಇಂಡಿಯಾದ ಸನ್ನಿವೇಶದಲ್ಲಿ ಸರ್ಕಾರಗಳ 'ಕ್ರಾಂತಿಕಾರಿ ಆರ್ಥಿಕ ಕಾರ್ಯಕ್ರಮಗಳ' ಬಗ್ಗೆ ಲೋಹಿಯಾ ಬರೆದ ಮಾತುಗಳು ಇವು: 'ಪ್ರತಿವರ್ಷವೂ ಪರಿಸ್ಥಿತಿ ಹೆಚ್ಚು ಕಡಿಮೆ ಹಾಗೇ ಇರುತ್ತದೆ. ಅದು ಸರ್ಕಾರದ ಕೆಟ್ಟ ನೀತಿಯ ಪರಿಣಾಮವಾಗಿದೆ. ಕಳೆದ ವರ್ಷಗಳು ಮೂರ್ಖತನ ಹಾಗೂ ದುಷ್ಟತನದಿಂದ ಕೂಡಿದ ಅಸಂಖ್ಯ ನ್ಯೂನ್ಯತೆಗಳ ವರ್ಷಗಳಾಗಿವೆ': ಮುಂದುವರೆದು ರಾಸಾಯನಿಕ ಗೊಬ್ಬರಗಳಿಗೆ ಸರ್ಕಾರಗಳು ಕೊಡುತ್ತಿರುವ ಮಹತ್ವದ ಬಗ್ಗೆ ಬರೆಯುತ್ತಾ, 'ರಾಸಾಯನಿಕ ಗೊಬ್ಬರಗಳ ಬಗ್ಗೆ ಒಂದು ಸತ್ಯಾಂಶವನ್ನು ಅರ್ಥಮಾಡಿಕೊಳ್ಳುವ ಅವಶ್ಯಕತೆ ಇದೆ. ಅಮೆರಿಕಾ ಅಥವಾ ರಷ್ಯಾದ. ಗೊಬ್ಬರಗಳ ಕಾರ್ಖಾನೆಗಳಿಗೆ ಕೋಟಿಗಟ್ಟಲೆ ಬಂಡವಾಳವಿದೆ. ಈ ಗೊಬ್ಬರದ ಕಾರ್ಖಾನೆಗಳ ಮಾಲೀಕರು ಭಾರತವೂ ಸೇರಿದಂತೆ ಅನೇಕ ರಾಷ್ಟ್ರಗಳ ವಿಶ್ವವಿದ್ಯಾಲಯಗಳಿಗೆ ಲಕ್ಷಾಂತರ ರೂಪಾಯಿಗಳ ಧನ ಸಹಾಯವನ್ನು ನೀಡುತ್ತಾರೆ. ಇದು ಸಂಶೋಧನೆ ಮತ್ತು ಅಧ್ಯಯನಗಳಿಗಾಗಿ ವಿನಿಯೋಗವಾಗುತ್ತದೆ. ದಾನಿಗಳ ಔದಾರ್ಯ ತನ್ನದೇ ಆದ ಪ್ರಭಾವವನ್ನು ಬೀರುತ್ತದೆ. ವರ್ತಮಾನ ಪತ್ರಿಕೆಗಳು ಜಾಹೀರಾತುಗಳನ್ನು ಪಡೆಯುತ್ತವೆ. ಆದ್ದರಿಂದ ವಿಶ್ವವಿದ್ಯಾಲಯಗಳ ಸಂಶೋಧಕರು ಮತ್ತು ವರ್ತಮಾನ ಪತ್ರಿಕೆಗಳು ಹಾಗೂ ಜಾಹೀರಾತು ಬರೆಯುವವರು ರಾಸಾಯನಿಕ ಗೊಬ್ಬರಗಳ ಭಾರೀ ಬೆಂಬಲಿಗರಾಗಿರುತ್ತಾರೆ.

ಈ 'ಮೂರ್ಖ' ಹಾಗೂ 'ದುಷ್ಟ' ಸರ್ಕಾರಿ ನೀತಿಗಳನ್ನು ರಾಷ್ಟ್ರೀಯ ನೆಲೆಗಟ್ಟಿನಲ್ಲಿ ಗುರುತಿಸುವುದಾದರೆ ಅದು ಶುರುವಾಗುವುದು ವಸಾಹತು ಆಳ್ವಿಕೆಯ ದಿನಗಳಿಂದ. ವ್ಯಾಪಾರದಿಂದ ಆರಂಭಗೊಂಡು ಕ್ರಮೇಣ ಪ್ರಭುತ್ವಗಳಾಗಿ ರೂಪುಗೊಂಡ ಇಂಪೀರಿಯಲ್ ಶಕ್ತಿಗಳು ಸ್ಥಳೀಯ ಆರ್ಥಿಕತೆಯನ್ನು ವಾಣಿಜ್ಯಕ ಆರ್ಥಿಕತೆಯಿಂದ ಸ್ಥಳಾಂತರಿಸಿದರು. ಬ್ರಿಟೀಷರು ಮೊದಲಿಗೆ ಕಾಡನ್ನು ವಸಾಹತೀಕರಣಗೊಳಿಸಿದರು. ಬದುಕಿನ ಪ್ರಾಥಮಿಕ ಮೂಲವಾಗಿದ್ದ ಅದನ್ನು ಮರಮುಟ್ಟಿನ ಗಣಿಯನ್ನಾಗಿಸಿದರು. ಆಟ್ಕಿನ್ಸನ್ ಗೆಜೆಟಿಯರ್ ಪ್ರಕಾರ 'ಎಲ್ಲೆಡೆ ಕಾಡುಗಳಲ್ಲಿನ ಒಳ್ಳೆಯ ಮರಗಳನ್ನು ಕತ್ತರಿಸಲಾಗಿದೆ. ೧೮೫೬-೬೧ರ ಅವಧಿಯಲ್ಲಿ ಮರ ಕತ್ತರಿಸುವಿಕೆ ಅತ್ಯಂತ ತೀವ್ರವಾಗಿತ್ತು.... ಬೇಡಿಕೆ ಮೀರಿ ಹಳೆಯ ಮರಗಳನ್ನು ಕತ್ತರಿಸಲು ಅನುಮತಿ ನೀಡಲಾಯಿತು. ಕೆಲವು ವರುಷಗಳ ನಂತರ ಗುತ್ತಿಗೆದಾರರು ಕತ್ತರಿಸಿ ಬಿಟ್ಟುಹೋದ ಮರಗಳನ್ನು ಡಿಪೋಗೆ ತಂದು ಹಾಕುವುದೇ ಮುಖ್ಯ ಕೆಲಸವಾಯಿತು.' ವಸಹಾತಿಶಾಹಿ ಅರಣ್ಯ ಪಾಲನೆ ನೆಲೆಗೊಂಡಿದ್ದು ವೈಜ್ಞಾನಿಕ ನಿರ್ವಹಣೆಯಿಂದಲ್ಲ; ಬದಲಿಗೆ ಮಿಲಿಟರಿ ಅಗತ್ಯಗಳ ಪೂರೈಕೆಗೆ. ಅರ್ಧ ಶತಮಾನಕ್ಕೂ ಮಿಕ್ಕಿ ನಡೆದ ಅನಿಯಂತ್ರಿತ ಅರಣ್ಯನಾಶದ ನಂತರ ಅದಕ್ಕೆ ನಿಯಂತ್ರಣ ಹೇರುವ ಪ್ರಯತ್ನ ನಡೆಯಿತು. ೧೮೬೫ರಲ್ಲಿ ಭಾರತೀಯ ಅರಣ್ಯ ಕಾಯ್ದೆಯನ್ನು ಜಾರಿಗೊಳಿಸಿ ಕಾಡು ಹಾಗೂ ಬೇಸಾಯ ಜಾಗವನ್ನು ರಕ್ಷಿತ ಅರಣ್ಯ ಎಂಬುದಾಗಿ ಘೋಷಿಸಲು ಸರ್ಕಾರಕ್ಕೆ ಸಾಧ್ಯವಾಯಿತು. ಇದು ಕೈಗಾರಿಕಾ ವಸ್ತು ಪೂರೈಕೆ ದೃಷ್ಟಿಕೋನದ ಅರಣ್ಯಗಳ ವೈಜ್ಞಾನಿಕ ನಿರ್ವಹಣೆಗೆ ನಾಂದಿ ಹಾಡಿತು. ನಂತರದಲ್ಲಿ ಬಂದ ೧೮೭೮ ಹಾಗೂ ೧೯೨೭ರ ಕಾಯ್ದೆಗಳು ಜನರನ್ನು ಅರಣ್ಯಗಳಿಂದ ಹೊರಗಿಟ್ಟವು. ಈ ಎಲ್ಲ ಕಾಯಿದೆಗಳ ನಿರ್ವಚನ ಅರಣ್ಯವನ್ನು ವಾಣಿಜ್ಯಕವಾಗಿ ಮೌಲ್ಯಗಳುಳ್ಳ ಮರಗಳಿಗೆ ಸೀಮಿತವಾಗಿಸಿದೆ ಹಾಗೂ ಮೂಲ ನಿವಾಸಿಗಳ ಸಂಪನ್ಮೂಲ, ಜ್ಞಾನ ಹಾಗೂ ಬದುಕುವ ಹಕ್ಕನ್ನು ನಿರಾಕರಿಸಿವೆ.

ಸ್ವಾತಂತ್ರ್ಯೋತ್ತರ ದಿನಗಳಲ್ಲೂ ಈ ವಸಾಹತುಶಾಹಿ ಬಳುವಳಿಗಳು ಮುಂದುವರೆದುಕೊಂಡು ಬಂದಿವೆ. ಜೊತೆಗೆ ಅರಣ್ಯೀಕರಣ ಯೋಜನೆಗಳು ಸೇರಿಕೊಂಡಿವೆ. ಸಾಮಾಜಿಕ ಅರಣ್ಯ ಯೋಜನೆಗಳು 'ಏಕ ಪ್ರಭೇಧದ ಏಕ ಉತ್ಪನ್ನವನ್ನು ಉದ್ದೇಶವಾಗಿರಿಸಿಕೊಂಡ ಕೃಷಿ ಹಾಗೂ ಜಲನಿರ್ವಹಣೆಗೆ ಹೊರತಾದ ಮಾರುಕಟ್ಟೆ ಅಗತ್ಯ ಪೂರೈಸುವ' ವಸಾಹತುಶಾಹಿ ನಿರ್ವಚನದ ಮಾದರಿಯನ್ನು ಪರಿಪೂರ್ಣವಾಗಿ ಪಾಲಿಸುತ್ತವೆ. ಇವು ಉಂಟುಮಾಡುವ ಒತ್ತಡದಿಂದ ಒಟ್ಟೂ ಪರಿಸರದ ಸ್ವರೂಪವೇ ಬದಲಾಗಿ ಬಿಡುತ್ತದೆ. ಇದು ಕೃಷಿಯಲ್ಲಿ ಯಾವ ಮಟ್ಟಿನ ಅವಾಂತರಕ್ಕೆ ಕಾರಣವಾಗಬಲ್ಲದು ಎಂಬುದಕ್ಕೆ ಕರ್ನಾಟಕದ ಯಶಸ್ವಿ ಸಾಮಾಜಿಕ ಅರಣ್ಯ ಜಿಲ್ಲೆಯಾದ ಕೋಲಾರವೇ ಉದಾಹರಣೆ. ೧೯೮೪ರ ಸರಕಾರಿ ಅಂಕಿ ಅಂಶಗಳ ಪ್ರಕಾರ೧೪ ನೀಲಗಿರಿ ಬೆಳೆಸುವ ಸಾಮಾಜಿಕ ಅರಣ್ಯೀಕರಣ ಯೋಜನೆಗೆ ಕೋಲಾರ ತನ್ನ ೬೩.೩ ಪ್ರತಿಶತದಷ್ಟು ಕೃಷಿ ಭೂಮಿಯನ್ನು ಬಲಿಕೊಟ್ಟಿದೆ. ಈ ಜಮೀನಿನಲ್ಲಿ ಮೊದಲು ಬೆಳೆಯುತ್ತಿದ್ದದ್ದು ರಾಗಿಯನ್ನು. ೧೯೭೭-೭೮ರಲ್ಲಿ ೧,೪೧,೭೭೨ ಹೆಕ್ಟೇರ್‌ನಲ್ಲಿ ೧,೭೫,೯೫ ಟನ್ ರಾಗಿ ಬೆಳೆಯಲಾಗಿತ್ತು. ಇದು ಕ್ರಮೇಣ ಕುಸಿದು ಕೃಷಿಪ್ರದೇಶ ೧೯೮೦-೮೧ರ ಹೊತ್ತಿಗೆ ೪೮,೪೦೬ ಹೆಕ್ಟೇರ್‌ಗೆ ಹಾಗೂ ಉತ್ಪಾದನೆ ೧೩೩೪೦ ಹೆಕ್ಟೇರ್‌ಗೆ ಇಳಿಯಿತು. ಇವತ್ತು ಅದು ಮುಂಚೂಣಿ ಬರ ಪೀಡಿತ ಜಿಲ್ಲೆ. ಇದಕ್ಕೆ ವ್ಯಕ್ತವಾದ ಜನರ ಪ್ರತಿಭಟನೆಯ ನಂತರ ಅರಣ್ಯ ಯೋಜನೆ ತಳೆದ ಹೊಸ ಅವತಾರ 'ಬಂಜರು ಭೂಮಿ ಅಭಿವೃದ್ಧಿ'.

೧೯೮೪ರಲ್ಲಿ ವಿಶ್ವಬ್ಯಾಂಕ್ ಭಾರತಕ್ಕಾಗಿ ರಾಷ್ಟ್ರೀಯ ಅರಣ್ಯ ಯೋಜನೆಯನ್ನು ರೂಪಿಸಿತು. ಅದರ ಬಹು ಮುಖ್ಯ ಅಂಶ ಬಂಜರು ಭೂಮಿಗಳ ಖಾಸಗೀಕರಣ. ೧೯೮೫ರಲ್ಲಿ ಅದು ರೂಪಿಸಿದ ೮ಬಿಲಿಯನ್ ಡಾಲರ್ ವೆಚ್ಚದ 'ಉಷ್ಣವಲಯದ ಕಾಡುಗಳ ಕ್ರಿಯಾ ಯೋಜನೆ' ಬಂಜರು ಭೂಮಿಗಳನ್ನು ಕಾರ್ಪೋರೇಟ್ ಸಂಸ್ಥೆಗಳು ಕೈ

ಸೂಚಿಕೆ: ೦೬: ಭಾರತದಲ್ಲಿ ಆಹಾರ ಉತ್ಪಾದನಾ ಪಲ್ಲಟ (ವಲಯವಾರು) ಮೌಲ್ಯಗಳಲ್ಲಿ -ಪ್ರತಿಶತ

ವಲಯ	೧೯೮೧-೮೨		೧೯೯೮-೯೯	
	ಆಹಾರ ಬೆಳೆಗಳು	ಆಹಾರೇತರ ಬೆಳೆಗಳು	ಆಹಾರ ಬೆಳೆಗಳು	ಆಹಾರೇತರ ಬೆಳೆಗಳು
ಪೂರ್ವ	೫೧.೭೩	೪೮.೨೭	೪೩.೦೪	೫೬.೯೬
ಈಶಾನ್ಯ	೪೪.೪೩	೫೫.೫೭	೩೫.೮೦	೬೪.೨೦
ಉತ್ತರ	೫೪.೯೨	೪೫.೦೮	೫೩.೭೪	೪೬.೨೬
ದಕ್ಷಿಣ	೪೧.೮೨	೫೮.೧೮	೨೮.೨೦	೭೧.೮೦
ಪಶ್ಚಿಮ	೪೪.೪೪	೫೫.೫೬	೩೬.೧೦	೬೩.೯೦
ಒಟ್ಟು	೪೮.೦೫	೫೧.೯೫	೩೯.೮೫	೬೦.೧೫

ಆಕರ: cmi 2001: EPW-xxxix-24ರಲ್ಲಿ ಉಲ್ಲೇಖಿಸಿರುವಂತೆ

ವಶಮಾಡಿಕೊಳ್ಳಲು ಸಾಧ್ಯವಾಗಿಸಿತು. ಈ ಎಲ್ಲ ಹುನ್ನಾರಗಳನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ಜಾರಿಗೆ ತರಲು ೧೯೮೫ರಲ್ಲಿ ಬಂಜರು ಭೂಮಿ ಅಭಿವೃದ್ಧಿ ಮಂಡಳಿ ಹುಟ್ಟಿಕೊಂಡಿತು. ಇಲ್ಲಿ ಬಂಜರು ಭೂಮಿಯೆಂದು ಗುರುತಿಸುವುದೇ ಮೂಲಭೂತವಾಗಿ ವಿವಾದಾತ್ಮಕವಾಗಿದೆ. ಉದಾಹರಣೆಗೆ ಹರಿಹರ ಪಾಲಿ ಫೈಬರ್ಸ್‌ನ ಪ್ರಕರಣವನ್ನೇ ತೆಗೆದುಕೊಳ್ಳೋಣ. ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ರೆವಿನ್ಯೂ ದಾಖಲೆಗಳಲ್ಲಿ 'ಸಿ'ಹಾಗೂ 'ಡಿ' ಎಂದು ನಮೂದಾಗಿದ್ದ ಜಮೀನನ್ನು ಬಂಜರು ಭೂಮಿಯೆಂದು ಪರಿಗಣಿಸಿ ಈ ಯೋಜನೆಯಡಿ ಅಭಿವೃದ್ಧಿಗಾಗಿ ಆಯ್ಕೆಮಾಡಿಕೊಳ್ಳಲಾಯಿತು. ಹರಿಹರ ಪಾಲಿ ಫೈಬರ್ಸ್‌ನ ೧೦೦ ಕಿಮೀ ತ್ರಿಜ್ಯದಲ್ಲಿರುವ ೪೫೦೦೦ ಎಕರೆ ಜಮೀನಿನಲ್ಲಿ ನೀಲಗಿರಿ ಬೆಳೆದು ಕಾರ್ಖಾನೆಗೆ ವರ್ಗಾಯಿಸಲು ಯೋಜನೆ ಸಿದ್ಧವಾಯಿತು. ಈ ಭೂಮಿಯಲ್ಲಿ ನೀಲಗಿರಿ ನೆಡುವುದು ಭೂಮಿಯನ್ನು ಬಂಜರಾಗಿಸುವ ಪ್ರಯತ್ನ ಎಂದು ಜನ 'ಮಣ್ಣು ರಕ್ಷಣಾ ಕೂಟ'ವನ್ನು ರಚಿಸಿಕೊಂಡು ಪ್ರತಿಭಟಿಸಿದ್ದರು.

ಸಾಮಾನ್ಯ ಸಂಪನ್ಮೂಲಗಳ ಬಗ್ಗೆ ವಿಸ್ತೃತ ಅಧ್ಯಯನ ಮಾಡಿರುವ ಎನ್.ಎಸ್. ಜೋಧಾ ಪ್ರಕಾರ ಬಂಜರುಭೂಮಿ ಅಭಿವೃದ್ಧಿ ಎನ್ನುವುದು ಬಹಳಷ್ಟು ಸಂದರ್ಭಗಳಲ್ಲಿ ಗೋಮಾಳಗಳ ಖಾಸಗೀಕರಣ ಎಂಬ ಸಮಾನಾರ್ಥ ಹೊಂದಿವೆ. ಬಡಜನರ ಇಂಧನ ಹಾಗೂ ಪಶುಗಳ ಮೇವಿನ ಮೂಲಗಳಾಗಿದ್ದ ಗೋಮಾಳಗಳು ಸಾವಯವ ಪದಾರ್ಥಗಳನ್ನು ಪೂರೈಸುವುದಲ್ಲದೇ ಕೃಷಿ ಭೂಮಿಯ ಒತ್ತಡಗಳನ್ನು ಕಡಿಮೆ ಮಾಡುತ್ತವೆ ಎಂದು ಜೋಧಾ ತಿಳಿಸುತ್ತಾರೆ. ಅಂದರೆ ಪಶು ಹಾಗೂ ಸಾವಯವ ಅಂಶಗಳನ್ನು ತ್ಯಜಿಸಿ ಕೃಷಿಯನ್ನು ಆಧುನೀಕರಣಗೊಳಿಸುವುದು ಅನಿವಾರ್ಯವಾಗಿ ಬಿಡುತ್ತದೆ. ಸಾವಯವ ಕೃಷಿಯನ್ನು ಅಸಾಧ್ಯವಾಗಿಸುವ ಒತ್ತಡಗಳು ಯಾವೆಲ್ಲ ಮೂಲಗಳಿಂದ ಹೇಗೆ ರೂಪುಗೊಂಡಿವೆ ಎಂಬುದನ್ನಷ್ಟೇ ವಿವರಿಸಲು ಪ್ರಯತ್ನಿಸುತ್ತಿದ್ದೇನೆ.

ನೀರುಮಾರಾಟಕ್ಕಿದೆ:

ಇಂಥ ಪ್ರಕಟಣೆಗೆ ಕೆಲವು ವರ್ಷಗಳ ಹಿಂದೆ ಪ್ರಾಯಶಃ ಯಾವ ಅರ್ಥವೂ ಇದ್ದಿರಲಿಲ್ಲ. ಜನ ಸಮುದಾಯಗಳ ಸಾಮಾನ್ಯ ಗ್ರಹಿಕೆಗೆ ಹೊರತಾದ ಕಲ್ಪನೆ ಇದು. ಫ್ಯೂಡಲ್ ವ್ಯವಸ್ಥೆಯಲ್ಲಿ ಸಮಾಜೋ-ಆರ್ಥಿಕ ಹಾಗೂ ರಾಜಕೀಯವಾಗಿ ಬಲಿಷ್ಠರಾದವರ ಸ್ವತ್ತಾಗಿದ್ದು ಸಾಮಾನ್ಯ ಒಡೆತನದ ಸಂಪನ್ಮೂಲ ಎನಿಸಿಕೊಂಡು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಾರಾಟಕ್ಕೆ ಲಭ್ಯವಿರುವ ಪ್ರಾಕೃತಿಕ ಬಂಡವಾಳ ಎನಿಸಿಕೊಂಡ ಸಂಪನ್ಮೂಲಗಳಲ್ಲಿ ನೀರೂ ಕೂಡ ಒಂದು. ಲಭ್ಯ ಶುದ್ಧ ಜಲದ ಶೇಕಡಾ ೯೭ರಷ್ಟನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತದೆ. ಲಕ್ಷಾಂತರ ಜನರ ನಿರ್ವಸತಿಗೆ ಹೆಕ್ಟೇರುಗಟ್ಟಲೆ ಅರಣ್ಯ ಮುಳುಗಡೆಗೆ ಕಾರಣವಾದ ನೆಹರೂವಿನ ಇಂಡಿಯಾದ

ಆಧುನಿಕ ದೇಗುಲಗಳಾದ ಅಣೆಕಟ್ಟುಗಳನ್ನು ಕಟ್ಟಿದ ಸಾಧನೆಯ ನಂತರ ಕೂಡ ಭಾರತೀಯ ನೀರಾವರಿಯ ಪ್ರಸ್ತುತ ಸ್ಥಿತಿಗತಿ ಹೀಗಿದೆ.

ಅಂದರೆ ಒಟ್ಟು ಕೃಷಿ ಭೂಮಿಯ ಪ್ರತಿಶತ ೪೦.೫೩ ಮಾತ್ರ ನೀರಾವರಿ ವ್ಯಾಪ್ತಿಗೆ ಒಳಪಟ್ಟಿದೆ ಹಾಗೂ ಅದರಲ್ಲಿ ೧೨.೭೪ ಪ್ರತಿಶತವಷ್ಟೇ ಕಾಲುವೆಗಳಿಂದ ಪ್ರಯೋಜನ ಪಡೆದುಕೊಳ್ಳುತ್ತಿವೆ. ನೀರಾವರಿಯ ಬಹುಪಾಲು ಅಂತರ್ಜಲವನ್ನೇ ಅವಲಂಬಿಸಿದೆ. ೧೯೭೦ರ ಹೊತ್ತಿಗೆ ೧೩,೧೦೬ ಸಾವಿರ ಹೆಕ್ಟೇರುಗಳಷ್ಟು ಭೂಮಿ ಕಾಲುವೆ ನೀರಾವರಿಯ ಪ್ರಯೋಜನ ಪಡೆದುಕೊಳ್ಳುತ್ತಿತ್ತು. ೨೦೦೦ದ ಹೊತ್ತಿಗೆ ಈ ಪ್ರದೇಶ ೧೭,೪೫೩ ಸಾವಿರ ಹೆಕ್ಟೇರುಗಳಷ್ಟಾಗಿದೆ. ಅಂದರೆ ಈಚಿನ ಮೂವತ್ತು ವರ್ಷಗಳಲ್ಲಿ ೪೩೪೭ಸಾವಿರ ಹೆಕ್ಟೇರುಗಳಷ್ಟು ಭೂಮಿಯಷ್ಟೇ ಹೆಚ್ಚುವರಿಯಾಗಿ ಕಾಲುವೆ ನೀರಾವರಿ ವ್ಯಾಪ್ತಿಗೆ ಸೇರ್ಪಡೆಗೊಂಡಿದೆ. ೨೦೦೦ದ ಹೊತ್ತಿಗೆ ಒಟ್ಟು ವ್ಯವಸಾಯಕ್ಕೆ ಒಳಪಟ್ಟ ಭೂಪ್ರದೇಶ ೧೪೨,೧೮೮ ಸಾವಿರ ಹೆಕ್ಟೇರುಗಳು. ನೀರಾವರಿ ಅಣೆಕಟ್ಟುಗಳ ಆರ್ಥಿಕ ಹಾಗೂ ಪರಿಸರಿಕ ವೆಚ್ಚಗಳನ್ನು ಇದು ಸಮರ್ಥಿಸುತ್ತದೆಯೇ?

ಎರಡನೆಯದಾಗಿ ಕುಡಿಯುವ ನೀರಿನ ಪ್ರಶ್ನೆ. ೧೯೪೭ರಲ್ಲಿ ೫೦೦೦ ಘ.ಮೀ. ನಷ್ಟಿದ್ದ ನೀರಿನ ಲಭ್ಯತೆ ೨೦೦೨ರ ಹೊತ್ತಿಗೆ ೨೦೦೦ ಘ.ಮೀಗೆ ಇಳಿದಿದೆ. ಅಂತರ್ಜಲ ಪ್ರತಿವರ್ಷ ಶೇಕಡಾ ೫ರಿಂದ ೭ರಷ್ಟು ಕುಸಿಯುತ್ತಿದೆ. ಸರ್ಕಾರ ಇದಕ್ಕೆ ಪ್ರತಿಕ್ರಿಯಿಸುತ್ತಿರುವುದು ನೀರಿನ ಪೂರೈಕೆಯ ಸಾಂಪ್ರದಾಯಿಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಮೂಲಕ. ಈಗ ಅದು ನೀರನ್ನು ಮಾರಲು ಹೊರಟಿದೆ. ಸ್ವತಂತ್ರ ಭಾರತ ನೀರು ಮೂಲಭೂತ ಹಕ್ಕು ಎಂದು ಭಾವಿಸಿ ಅದರ ಪೂರೈಕೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿತ್ತು. ೧೯೮೭ರ ರಾಷ್ಟ್ರೀಯ ಜಲನೀತಿ ಕುಡಿಯುವ ನೀರಿನ ಪೂರೈಕೆಯನ್ನು ತನ್ನ ಗುರಿಯಾಗಿಸಿಕೊಂಡಿತ್ತು. ಜಲಮೂಲಗಳ ಮರುಪೂರ್ಣ ವೈಫಲ್ಯದಿಂದಾಗಿ ಪ್ರಾರಂಭವಾದ ೧೯೮೬ರ ರಾಜೀವ್‌ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಆಂದೋಲನ ಅಂತಿಮವಾಗಿ ನೀರು ಬೆಲೆ ಕಟ್ಟಬಹುದಾದ (ಮಾರಾಟಕ್ಕೆ) ಪದಾರ್ಥ ಎಂಬ ಕಲ್ಪನೆಗೆ ದಾರಿ ಮಾಡಿಕೊಟ್ಟಿತು. ಇದು ೮ನೇ ಪಂಚ

(೩೫ನೇ ಪುಟಕ್ಕೆ)

ಸೂಚಿಕೆ: ೦೭: ರಾಜ್ಯವಾರು ನೀರಾವರಿಗೊಳ್ಪಟ್ಟ ಪ್ರದೇಶಗಳು ಹಾಗೂ ಮೂಲಗಳು: ೧೯೯೯-೨೦೦೦

ರಾಜ್ಯಗಳು	ನೀರಾವರಿ ಪ್ರದೇಶ ಕೃಷಿಭೂಮಿಯ ಪ್ರತಿಶತದಂತೆ	ಪ್ರತಿಶತ ಹಂಚಿಕೆ			
		ಕಾಲುವೆ	ಕೆರೆ	ಬಾವಿ	ಇತರ
ಆಂಧ್ರಪ್ರದೇಶ	೪೧.೩೨	೩೭.೨೭	೧೪.೫೫	೪೩.೩೪	೪.೫೪
ತಮಿಳುನಾಡು	೫೪.೩೯	೨೯.೨೧	೨೧.೩೦	೪೮.೮೯	೦.೬೧
ಕರ್ನಾಟಕ	೨೪.೩೪	೩೯.೦೧	೯.೬೨	೩೭.೬೪	೧೩.೭೪
ಕೇರಳ	೧೬.೯೭	೨೨.೬೩	೧೩.೯೫	೩೨.೧೧	೩೧.೩೨
ಮಹಾರಾಷ್ಟ್ರ	೧೬.೮೦	೩೫.೩೬	–	೬೪.೬೪	–
ಗುಜರಾತ್	೩೧.೮೮	೧೯.೫೩	೦.೮೧	೭೮.೮೪	೦.೮೧
ರಾಜಸ್ಥಾನ	೩೬.೧೮	೨೮.೮೫	೧.೩೯	೬೮.೯೧	೦.೮೪
ಮಧ್ಯಪ್ರದೇಶ	೩೭.೫೬	೧೭.೭೦	೨.೩೩	೬೫.೫೭	೧೪.೪೦
ಛತೀಸಗಢ*	೨೨.೧೯	–	–	–	–
ಉತ್ತರಪ್ರದೇಶ+	೭೨.೧೯	೨೪.೪೯	೦.೭೫	೭೨.೯೩	೧.೮೪
ಉತ್ತರಾಂಚಲ*					
ಪಂಜಾಬ್	೯೪.೪೮	೩೨.೩೭	–	೬೭.೫೬	೦.೦೭
ಹರಿಯಾಣ	೮೧.೩೧	೪೯.೯೦	೦.೦೩	೪೯.೬೨	೦.೪೮
ಬಿಹಾರ+	೪೯.೫೫	೩೭.೫೨	೧೩.೭೬	೩೭.೨೬	೧೧.೪೬
ಜಾರ್ಖಂಡ*					
ಪ.ಬಂಗಾಳ	೩೪:೯೩	–	–	–	–
ಒರಿಸ್ಸಾ	೩೪.೪೦	೪೫.೪೧	೧೪.೫೯	೪೦.೦೦	–
ಅಸ್ಸಾಂ	೨೧.೧೮	೬೩.೨೯	–	–	೩೬.೭೧
ತ್ರಿಪುರಾ	೧೨.೫೪	೬೦.೦೦	೧೪.೨೯	೧೧.೪೩	೧೪.೨೯
ಮಿಜೋರಾಂ	೯.೮೯	೧೦೦.೦೦	–	–	–
ಮೇಘಾಲಯ	೨೦.೦೦	–	–	–	೧೦೦.೦
ನಾಗಾಲ್ಯಾಂಡ	೨೪.೧೪	–	–	–	೧೦೦.೦
ಮಣಿಪುರ	೪೬.೪೩	–	–	–	೧೦೦.೦
ಅರುಣಾಚಲ ಪ್ರದೇಶ	೨೧.೦೮	–	–	–	೧೦೦.೦
ಜಮ್ಮು&ಕಾಶ್ಮೀರ	೪೧.೩೪	೯೨.೦೮	೦.೯೯	೦.೬೬	೬.೯೩
ಹಿಮಾಚಲಪ್ರದೇಶ	೧೮.೫೧	೨.೯೪	–	೧೨.೭೫	೮೩.೩೩
ಗೋವಾ	೧೫.೪೯	೧೮.೧೮	–	೮೧.೮೨	–
# ಭಾರತ	೪೦.೫೩	೩೧.೪೪	೪.೭೩	೫೮.೭೬	೫.೦೮

*೧೯೯೮-೯೯

ಆಕರ: ಕೃಷಿ, ೨೦೦೪; CMIE pp 35 ಹಾಗೂ 39/ EPW-XL-53 ರಲ್ಲಿ ಪ್ರಕಟವಾದಂತೆ.

ಗಾಂಧಿಯವರ 'ಹಿಂದ್ ಸ್ವರಾಜ್ಯ'ಕ್ಕೆ ನೂರು

ಡಾ. ಬಿ ಎಂ ಪುಟ್ಟಯ್ಯ

ಗಾಂಧಿಯವರು ಈಗ ಬದುಕಿದ್ದಿದ್ದರೆ ಬಹುರಾಷ್ಟ್ರೀಯ ಕಂಪನಿಗಳು, ಎಸ್‌ಇಜೆಡ್, ರಸಗೊಬ್ಬರ, ಕ್ರಿಮಿನಾಶಕ, ಕಂಪ್ಯೂಟರ್, ಲ್ಯಾಪ್‌ಟಾಪ್, ಟಿವಿ, ಮೊಬೈಲ್, ಇ-ಮೇಲ್, ಎಸ್‌ಎಂಎಸ್, ಇಂಟರ್‌ನೆಟ್ ಮತ್ತು ಐ.ಟಿ., ಬಿ.ಟಿ.ಗಳನ್ನು ವಿರೋಧಿಸುತ್ತಿದ್ದರು ಎಂಬುದು ಗಾಂಧಿವಾದಿಗಳ ನಂಬಿಕೆಯೂ ಹೌದು; ಜೊತೆಗೆ ಗಾಂಧಿಯವರ ವಿಚಾರಗಳು ಒಟ್ಟುಗೂಡಿರುವ 'ಹಿಂದ್ ಸ್ವರಾಜ್ಯ' ಪುಸ್ತಕದ ಮುಖ್ಯ ತಿರುಳೂ ಹೌದು.

೧೯೦೮ರಲ್ಲಿ ಗಾಂಧಿಯವರು ದಕ್ಷಿಣ ಆಫ್ರಿಕಾದ ವ್ಯವಹಾರವನ್ನು ಬ್ರಿಟಿಶ್ ಮಂತ್ರಿಮಂಡಲದೊಂದಿಗೆ ಚರ್ಚಿಸಲು ಲಂಡನ್ನಿಗೆ ಹೋದರು. ಅದನ್ನು ಮುಗಿಸಿ ಕೊಂಡು, ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಹೋಗುತ್ತಿದ್ದಾಗ ಗುಜರಾತಿ ಭಾಷೆಯಲ್ಲಿ 'ಹಿಂದ್ ಸ್ವರಾಜ್ಯ'ವನ್ನು ಬರೆದರು. ೧೯೦೮ರ ನವೆಂಬರ್ ೧೩ರಿಂದ ೨೨ರ ವರೆಗೆ (೧೦ ದಿನಗಳಲ್ಲಿ) ಹಗಲೂ ರಾತ್ರಿ ಇದನ್ನು ಬರೆದರು. ೧೯೩೮ರಲ್ಲಿ ಗಾಂಧಿಯವರು 'ಈ ಪುಸ್ತಕದ ಒಂದು ಪದವನ್ನೂ ಬದಲಿಸಲಾರೆ' ಎಂದು ಬರೆದುಕೊಂಡರು. ಕಳೆದ ಶತಮಾನದ ೭೦–೮೦ರ ದಶಕದಲ್ಲಿ ಗಾಂಧಿಯವರ ವಿಚಾರಗಳು ಅಷ್ಟೊಂದು ಪ್ರಸ್ತಾಪಕ್ಕೆ ಬರಲಿಲ್ಲ.

ಹಾಗೆ ನೋಡಿದರೆ ಆ ಕಾಲದಲ್ಲಿ ಗಾಂಧಿಯವರ ವಿಚಾರಗಳನ್ನು ತೆರೆಮರೆಯಲ್ಲಿ ತೆಳುವಾಗಿ ವಿರೋಧಿಸಲಾಗುತ್ತಿತ್ತು. ಆದರೆ ೯೦ರ ದಶಕದಿಂದೀಚೆಗೆ 'ಗಾಂಧಿಯವರ ವಿಚಾರಗಳು ಮಾತ್ರ ಹಳ್ಳಿಗಳನ್ನು ಮತ್ತು ಇಡಿಯಾಗಿ ಭಾರತವನ್ನು ಉಳಿಸಬಲ್ಲವು' ಎಂದು, ಕೆಲವು ಹೋರಾಟಗಾರರು, ಚಿಂತಕರು, ಬರಹಗಾರರು ಹೇಳುತ್ತಿದ್ದಾರೆ ಅಥವಾ ಅವರ ಮೂಲಕ ಹೇಳಿಸಲಾಗುತ್ತಿದೆ. ಎನ್‌ಜಿಓಗಳ ಮೂಲಕ ಈ ವಿಚಾರಗಳನ್ನು ಇನ್ನಷ್ಟು ವ್ಯಾಪಕವಾಗಿ ಹರಡಲಾಗುತ್ತಿದೆ. 'ಗಾಂಧಿ ಮತ್ತು ಅಂಬೇಡ್ಕರರ ವಿಚಾರಗಳಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ.

ಇಬ್ಬರ ವಿಚಾರಗಳೂ ಒಂದೇ ಆಗಿದ್ದವು, ಅವರಿಬ್ಬರೂ ಒಂದೇ ನಾಣ್ಯದ ಎರಡು ಮುಖಗಳು' ಎಂಬ ಅಭಿಪ್ರಾಯಗಳನ್ನು ಅಗ್ಗವಾಗಿ ಪ್ರಚಾರ ಮಾಡಲಾಗುತ್ತಿದೆ. 'ರಾಜ್ಯ ವ್ಯವಸ್ಥೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಗಾಂಧಿಯವರ ವಿಚಾರಗಳು ಮಾತ್ರವೇ ಏಕೈಕ ಪರಿಹಾರ' ಎಂಬ ಅಭಿಪ್ರಾಯಗಳೂ ಬರುತ್ತಿವೆ. ಮಾಧ್ಯಮಗಳು ಇವಕ್ಕೆ ಹೆಚ್ಚು ಮಹತ್ವ ಕೊಡುತ್ತಿವೆ. ಹಾಗಾದರೆ ಗಾಂಧಿಯವರ ಆಲೋಚನೆಗಳಲ್ಲಿ ಅಂತಹ ಮಹತ್ವ ಏನಿದೆ ಎಂಬುದನ್ನು ಗಮನಿಸೋಣ.

'ಹಿಂದ್ ಸ್ವರಾಜ್ಯ' ಪುಸ್ತಕವು ಗಾಂಧಿಯವರ ವಿಚಾರಗಳ ಪ್ರಣಾಳಿಕೆಯಾಗಿದೆ. ಹಾಗಾಗಿ 'ಹಿಂದ್ ಸ್ವರಾಜ್ಯ' ಪುಸ್ತಕವನ್ನು ಪರಿಶೀಲಿಸುವ ಮೂಲಕವೆ ಗಾಂಧಿ ಕಂಡಿದ್ದ 'ಗ್ರಾಮರಾಜ್ಯ'ದ ಕನಸು ಯಾವುದು ಎಂಬುದನ್ನು ಅರಿಯಬಹುದು. ೧೮೮೫ರಲ್ಲಿ ಬ್ರಿಟಿಶ್ ಅಧಿಕಾರಿಯಿಂದ ಸ್ಥಾಪನೆ ಮಾಡಿಸಿದ 'ಭಾರತದ ರಾಷ್ಟ್ರೀಯ ಕಾಂಗ್ರೆಸ್'ನ ಪ್ರಸ್ತಾಪದಿಂದ ಈ ಪುಸ್ತಕ ಶುರುವಾಗುತ್ತದೆ. ಹಿಂದುಸ್ಥಾನಿಯರಿಗೆ ನಿಜವಾದ ಜಾಗೃತಿ ಎಂಬುದು ವಂಗಭಂಗದಿಂದ ಹುಟ್ಟಿತು ಎಂಬುದು ಗಾಂಧಿಯವರ ಗ್ರಹಿಕೆ.

ಇಂಗ್ಲೀಶರ ಆಧುನಿಕ ನಾಗರೀಕತೆ, ಪಾರ್ಲಿಮೆಂಟ್, ರೈಲು, ವಕೀಲರು, ವೈದ್ಯರು, ಇಂಗ್ಲಿಶ್ ಶಿಕ್ಷಣ, ಅಕ್ಷರಜ್ಞಾನ ಇವುಗಳನ್ನು ಗಾಂಧಿ ಅತ್ಯಂತ ಗಟ್ಟಿಯಾಗಿ ವಿರೋಧಿಸುತ್ತಾರೆ. ಆಧುನಿಕ ನಾಗರೀಕತೆಯ ಪರಿಣಾಮವೇ ಇಂಗ್ಲೆಂಡಿನ ಮತ್ತು ಇಂಗ್ಲೀಶರ ದುಸ್ಥಿತಿಗೆ ಕಾರಣ. ಹಿಂದುಸ್ಥಾನ ಇಂಗ್ಲೆಂಡನ್ನು ಅನುಕರಿಸಿದರೆ ಸರ್ವನಾಶವಾಗುತ್ತದೆ. ನಾಗರೀಕತೆಯ ಭಕ್ತರು ಧರ್ಮವನ್ನು ಮೂಢತನ ಎನ್ನುತ್ತಾರೆ.. ನಾಗರೀಕತೆಗಿಂತ ಧಾರ್ಮಿಕ ಅಂಧಶ್ರದ್ಧೆ ಕಡಿಮೆ ಹಾನಿಕರ, ಪ್ರಾಪಂಚಿಕ ಪಾಖಂಡಿಗಳಿಗಿಂತ ಧಾರ್ಮಿಕ ಪಾಖಂಡಿಗಳು ಲೇಸು.

ದೈಹಿಕ ಕೆಲಸವಿಲ್ಲದ ಕೇವಲ ಶರೀರ ಸುಖವನ್ನು ಮಾತ್ರ ನಾಗರೀಕತೆ ಹೊಂದಿದೆ.ಈ ನಾಗರೀಕತೆ ಶುದ್ಧ ಅಧರ್ಮ. ಯುರೋಪಿನ ಜನ ಇದರ ಮಾಯಾಜಾಲದಲ್ಲಿ ಸಿಕ್ಕಿ ಹುಚ್ಚರಾಗಿದ್ದಾರೆ. ಗೃಹಲಕ್ಷ್ಮಿಯರಾಗಿ, ಮನೆಯ ಅರಸಿಯರಾಗಿ ಇರಬೇಕಾದ ಹೆಂಗಸರು ಬೀದಿ ಬೀದಿ ಅಲೆಯುತ್ತಾರೆ. ದುಡ್ಡಿಗಾಗಿ, ಹೊಟ್ಟೆಪಾಡಿಗಾಗಿ ಕಾರ್ಖಾನೆಗಳಲ್ಲಿ ಕೂಲಿ ಮಾಡಲು ಹೋಗುತ್ತಾರೆ. ಹೆಂಗಸರಿಗೂ ಮತಾಧಿಕಾರ ಬೇಕು ಎಂಬ ಚಳವಳಿ ಬೆಳೆಯಲು ಇದು ಒಂದು ಕಾರಣ ಎಂಬುದು ಗಾಂಧಿಯವರ ಅಭಿಪ್ರಾಯ.

ಪಾರ್ಲಿಮೆಂಟ್ ತಾನಾಗಿ ಒಂದಾದರೂ ಒಳ್ಳೆಯ ಕೆಲಸ ಮಾಡಲಿಲ್ಲ. ಹಾಗಾಗಿ ಅದು ಬಂಜೆ. ಅದಕ್ಕೆ ಯಾರೂ ಒಡೆಯರಿಲ್ಲ; ಯಜಮಾನರಿಲ್ಲ. ಹಾಗಾಗಿ ಅದು ವೇಶ್ಯೆ ಎಂಬುದು ಗಾಂಧಿಯವರ ಹೇಳಿಕೆ. ರೈಲು ಜನರ ದೈಹಿಕ ಶ್ರಮವನ್ನು ಕಡಿಮೆ ಮಾಡಿದೆ, ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ರೈಲಿನಲ್ಲಿ ಓಡಾಡುವುದರಿಂದ ಅದು ರೋಗಗಳನ್ನು ಹರಡಿದೆ. ವಕೀಲಿ ವೃತ್ತಿ ಕೇವಲ ಹಣ ಗಳಿಕೆಯದಷ್ಟೆ. ವಕೀಲರು ತಮ್ಮ ಸುಖಲೋಲುಪತೆಗೆ ಜಗಳಗಳನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ವಕೀಲರು ಮತ್ತು ಕೋರ್ಟುಗಳನ್ನು ನಂಬಿ ಜಗಳಗಳು ಜಾಸ್ತಿಯಾಗುತ್ತಿವೆ.

ಇದಕ್ಕಿಂತ ಹಳ್ಳಿಗಳ ನ್ಯಾಯ ತೃಪ್ತಿಕರವಾಗಿತ್ತು. ವೈದ್ಯರೂ ಕೂಡ ಅಷ್ಟೆ. ಅವರು ರೋಗವನ್ನು ಗುಣಪಡಿಸಬಹುದು. ಅವರನ್ನು ನಂಬುವ ಜನರು ತಮ್ಮ ಆರೋಗ್ಯ ರಕ್ಷಣೆಗೆ ಕಾಳಜಿ ತೋರುವುದಿಲ್ಲ. ಹಾಗಾಗಿ ರೋಗಗಳು ಮತ್ತು ಅವುಗಳ ಪ್ರಮಾಣ ಜಾಸ್ತಿಯಾಗುತ್ತಲೇ ಸಾಗಿದೆ. ಆಸ್ಪತ್ರೆಗಳು ಪಾಪದ ತವರು. ಅದರಿಂದ ಜನರು ತಮ್ಮ ಶರೀರದ ಬಗ್ಗೆ ಅಸಡ್ಡೆ ತೋರುತ್ತಾರೆ. ಅನೀತಿ ಹೆಚ್ಚುತ್ತದೆ. ಆದ್ದರಿಂದ ರೈಲು, ವಕೀಲರು ಮತ್ತು ವೈದ್ಯರು ಹಿಂದುಸ್ಥಾನವನ್ನು ಕಂಗಾಲ ದೇಶವಾಗಿ ಮಾಡಿದ್ದಾರೆ ಎಂಬುದು ಗಾಂಧಿಯವರ ತೀರ್ಮಾನ.

ಇಂಗ್ಲಿಶ್ ಶಿಕ್ಷಣ ಪಡೆದು ನಾವು ದೇಶವನ್ನು ಗುಲಾಮತನಕ್ಕೆ ತಳ್ಳಿದ್ದೇವೆ. ಅಕ್ಷರಜ್ಞಾನ ಇಂದ್ರಿಯ ನಿಗ್ರಹ ಮಾಡುವುದಿಲ್ಲ, ಅದರ ದುರುಪಯೋಗ ಆಗುತ್ತದೆ, ಹಾಗಾಗಿ ಅದು ವ್ಯರ್ಥ, ನಮ್ಮ ಹಳೆಯ ಪಾಠಶಾಲೆಗಳ ಪದ್ಧತಿಯೇ ಸಾಕು ಎಂಬುದು ಗಾಂಧಿಯವರ ಆಲೋಚನೆ. ಇಂಗ್ಲೀಶರಿಗೆ ಇತಿಹಾಸ ಬರೆಯುವ ರೂಢಿ ಇದೆ. ಅವರು ಎಲ್ಲ ಜಾತಿಗಳ ರೂಢಿ ಸಂಪ್ರದಾಯಗಳನ್ನು ಅಧ್ಯಯನ ಮಾಡುವ ಸೋಗು ಹಾಕುತ್ತಾರೆ. ಅದರ ಮೋಹಜಾಲದಲ್ಲಿ ನಮ್ಮನ್ನು ನೂಕುತ್ತಾರೆ. ಅಜ್ಞಾನವಶದಿಂದ ನಾವು ಅವರ ಕಾಲಿಗೆ ಬಿದ್ದು ಅದನ್ನೆಲ್ಲ ನಂಬುತ್ತೇವೆ ಎಂಬುದು ಗಾಂಧಿಯವರ ನಂಬಿಕೆ.

ಈ ಪುಸ್ತಕದಲ್ಲಿ ಯಾವ ವಿಚಾರಗಳಿವೆ ಎಂಬುದು ಒಂದು ಅಂಶ. ಅದಕ್ಕಿಂತ ಹೆಚ್ಚಾಗಿ ಆ ವಿಚಾರಗಳನ್ನು ಹೇಗೆ ಅಥವಾ ಯಾವ ರೂಪದಲ್ಲಿ ಮಂಡಿಸಲಾಗಿದೆ ಎಂಬುದು ಅಷ್ಟೇ ಮುಖ್ಯವಾದ ಮತ್ತೊಂದು ಅಂಶ. ಮೇಲೆ ಪ್ರಸ್ತಾಪಿಸಿದ ಗಾಂಧಿಯವರ ವಿಚಾರಗಳು 'ಹಿಂದ್ ಸ್ವರಾಜ್ಯ' ಪುಸ್ತಕದಲ್ಲಿ ಓದುಗ – ಸಂಪಾದಕ, ಇಬ್ಬರ ನಡುವೆ ನಡೆಯುವ ಸಂಭಾಷಣೆಯ ರೂಪದಲ್ಲಿವೆ. ಮೊದಲು ಓದುಗ ಪ್ರಶ್ನೆ ಕೇಳುತ್ತಾನೆ. ನಂತರ ಸಂಪಾದಕ ಉತ್ತರಿಸುತ್ತಾನೆ ಇಲ್ಲವೆ - ವಿವರಿಸುತ್ತಾನೆ. ಸಾಮಾನ್ಯವಾಗಿ ಕೆಲವು

೧೯೦೮ರಲ್ಲಿ ಗಾಂಧಿಯವರು ದಕ್ಷಿಣ ಆಫ್ರಿಕಾದ ವ್ಯವಹಾರವನ್ನು ಬ್ರಿಟಿಶ್ ಮಂತ್ರಿಮಂಡಲದೊಂದಿಗೆ ಚರ್ಚಿಸಲು ಲಂಡನ್ನಿಗೆ ಹೋದರು. ಅದನ್ನು ಮುಗಿಸಿಕೊಂಡು, ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಹೋಗುತ್ತಿದ್ದಾಗ ಗುಜರಾತಿ ಭಾಷೆಯಲ್ಲಿ 'ಹಿಂದ್ ಸ್ವರಾಜ್ಯ'ವನ್ನು ಬರೆದರು. ೧೯೦೮ರ ನವೆಂಬರ್ ೧೩ರಿಂದ ೨೨ರ ವರೆಗೆ (೧೦ ದಿನಗಳಲ್ಲಿ) ಹಗಲೂ ರಾತ್ರಿ ಇದನ್ನು ಬರೆದರು. ೧೯೩೮ರಲ್ಲಿ ಗಾಂಧಿಯವರು 'ಈ ಪುಸ್ತಕದ ಒಂದು ಪದವನ್ನೂ ಬದಲಿಸಲಾರೆ' ಎಂದು ಬರೆದುಕೊಂಡರು. ಕಳೆದ ಶತಮಾನದ ೭೦-೮೦ರ ದಶಕದಲ್ಲಿ ಗಾಂಧಿಯವರ ವಿಚಾರಗಳು ಅಷ್ಟೊಂದು ಪ್ರಸ್ತಾಪಕ್ಕೆ ಬರಲಿಲ್ಲ. ಹಾಗೆ ನೋಡಿದರೆ ಆ ಕಾಲದಲ್ಲಿ ಗಾಂಧಿಯವರ ವಿಚಾರಗಳನ್ನು ತೆರೆಮರೆಯಲ್ಲಿ ತೆಳುವಾಗಿ ವಿರೋಧಿಸಲಾಗುತ್ತಿತ್ತು. ಆದರೆ ೯೦ರ ದಶಕದಿಂದೀಚೆಗೆ 'ಗಾಂಧಿಯವರ ವಿಚಾರಗಳು ಮಾತ್ರ ಭಾರತವನ್ನು ಉಳಿಸಬಲ್ಲವು' ಎಂದು ಕೆಲವು ಚಿಂತಕರು, ಬರಹಗಾರರು ಹೇಳುತ್ತಿದ್ದಾರೆ.

ವಿಚಾರಗಳಿಗೆ ಭಿನ್ನಮತಗಳು ಬರುತ್ತವೆ. ಯಾವಾಗಲೂ ಈ ಭಿನ್ನಮತಗಳು ವಿಚಾರ ಮಂಡನೆಯಾದ ಮೇಲೆ ಬರುತ್ತವೆ.

ಆದರೆ ಈ ಪುಸ್ತಕದಲ್ಲಿ ಗಾಂಧಿಯವರು ತಮ್ಮ ವಿಚಾರಗಳಿಗೆ ಬರಬಹುದಾದ ಭಿನ್ನಮತಗಳನ್ನು ಮೊದಲೇ ಊಹಿಸಿಕೊಂಡು, ಅವುಗಳನ್ನು ಓದುಗನ ಪಾತ್ರದ ಮೂಲಕ ಪ್ರಶ್ನೆಗಳನ್ನಾಗಿ ಮಾರ್ಪಡಿಸಿದ್ದಾರೆ. ಸಂಭಾಷಣೆಯ ಈ ವಿಧಾನವು ಉತ್ತರ ಕೊಡುವ ಸಂಪಾದಕನ ವಿಚಾರಗಳನ್ನು ಮಾತ್ರ ನಂಬುವಂತೆ, ಒಪ್ಪುವಂತೆ ಮಾಡಿದೆ. ಅಂದರೆ ಇಲ್ಲಿಯ ಸಂಭಾಷಣೆಯ ಸ್ವರೂಪವು ಭಿನ್ನಮತಗಳನ್ನು ಇಲ್ಲದಂತೆ ಮಾಡುವ ನಯವಾದ ಉಪಾಯವನ್ನು ಹೊಂದಿದೆ. ಓದುಗನ ರೂಪದಲ್ಲಿ ಪ್ರಶ್ನೆ ಕೇಳಿಸದೇ ಇದ್ದಿದ್ದರೆ ಇಲ್ಲಿಯ ವಿಚಾರಗಳು ಅಷ್ಟೊಂದು ಮಹತ್ವದವು ಅಥವಾ ಒಪ್ಪಬಹುದಾದವು ಎನಿಸುತ್ತಿರಲಿಲ್ಲ.

ಈ ಪುಸ್ತಕ ಬರೆದು ನೂರು ವರ್ಷ ಕಳೆದಿದೆ. ಆದರೆ ಇಂಡಿಯಾದ ಪರಿಸ್ಥಿತಿಗೆ ಇಲ್ಲಿಯ ಯಾವ ವಿಚಾರಗಳೂ ಹೊಂದುತ್ತಿಲ್ಲ. ಗಾಂಧಿ ಏನನ್ನು ಆಶಿಸಿದ್ದರೊ ಅದೆಲ್ಲವೂ ಈಗ ತಲೆಕೆಳಗಾಗಿದೆ. ಗಾಂಧಿಯವರ ಯಾವ ಅಭಿಪ್ರಾಯ ಮತ್ತು ಆಲೋಚನೆಗೆ ಈಗ ಜಾಗವಿಲ್ಲವಾಗಿದೆ. ಹಾಗಿದ್ದರೆ ಈ ಯುಗದಲ್ಲಿ ಗಾಂಧಿಯವರ ವಿಚಾರಗಳನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಆರಂಭದಲ್ಲೆ ಹೇಳಿದಂತೆ ೯೦ರ ದಶಕದ ನಂತರ ಗಾಂಧಿಯವರ ವಿಚಾರಗಳು ಮಾತ್ರ ಪರ್ಯಾಯ ಎಂದು ಹೇಳಲಾಗುತ್ತಿದೆ. 'ಇಡೀ ಜಗತ್ತೇ ನಮ್ಮ ಪದಾರ್ಥಗಳನ್ನು ಮಾರುವ ಪೇಟೆಯಾಗಬೇಕು ಎಂಬುದು ಇಂಗ್ಲೀಶರ ಆಸೆ' ಎಂದು ಗಾಂಧಿ ಈ ಪುಸ್ತಕದಲ್ಲಿ ಗುರುತಿಸಿದ್ದಾರೆ. ಇದು ನಿಜವಾಗಲೂ ಈಗ ಜಾರಿಗೆ ಬಂದಿದೆ.

ಗಾಂಧಿಯವರು ಬಲವಾಗಿ ಸೂಚಿಸುವ ಇಂದ್ರಿಯ ನಿಗ್ರಹ, ಆತ್ಮಬಲ, ಸತ್ಯಾಗ್ರಹ ಈ ಯಾವುವೂ ಇಂದು ಉಪಯೋಗಕ್ಕೆ ಬರುತ್ತಿಲ್ಲ. ಹಾಗಿದ್ದರೆ ಗಾಂಧಿಯವರ ಆಲೋಚನೆಯಲ್ಲಿರುವ ಗುಣ ಯಾವುದು ಎಂಬುದನ್ನು ಪರೀಕ್ಷಿಸಬೇಕು. 'ರೋಗವನ್ನು ನಾಶ ಮಾಡುವ ಮೊದಲು ರೋಗದ ಕಾರಣವನ್ನು ತಿಳಿದು, ಆ ಕಾರಣವೇ ಇಲ್ಲದಂತೆ ಮಾಡಬೇಕು' ಎಂಬುದು ಗಾಂಧಿಯವರ ಸೂಚನೆ. ಹಾಗಿದ್ದರೆ ಹಿಂದುಸ್ಥಾನದ ರೋಗದ ಕಾರಣವನ್ನು ಗಾಂಧಿ ಗುರುತಿಸಿದ್ದು ಹೇಗೆ? ಇಂಗ್ಲೀಶರ ವ್ಯಾಪಾರ, ಅವರ ಆಧುನಿಕ ನಾಗರೀಕತೆಗಳಲ್ಲಿ ಮಾತ್ರ ರೋಗದ ಕಾರಣವನ್ನು ಗುರುತಿಸಿದರು.

ಇಂಗ್ಲೀಶರು ಇಂಡಿಯಾಕ್ಕೆ ಬರುವುದಕ್ಕಿಂತ ಮೊದಲೂ ಇಂಡಿಯಾದಲ್ಲಿ ಸಮಸ್ಯೆಗಳಿದ್ದವು. ಅವರು ಬಂದ ನಂತರ ಅವು ಬೇರೆಬೇರೆ ರೂಪ ಪಡೆದವು. ಆ ಸಮಸ್ಯೆಗಳನ್ನು ಮತ್ತು ಅವುಗಳ ಕಾರಣಗಳನ್ನು ಗಾಂಧಿಯವರು ಪರಿಗಣಿಸುವುದಿಲ್ಲ. ಇಂಡಿಯಾದ ಬಾಹ್ಯಶತ್ರುವಾಗಿದ್ದ ಇಂಗ್ಲೆಂಡ್ ಮತ್ತು ಇಂಗ್ಲೀಶರನ್ನು ಮಾತ್ರ ಶತ್ರು ಎಂದು ಗುರುತಿಸುತ್ತಾರೆ. ಆಂತರಿಕ ಶತ್ರುಗಳನ್ನು ನಯವಾಗಿ ಮುಚ್ಚಿಡುತ್ತಾರೆ. ಎಲ್ಲಾ ಸಮಸ್ಯೆಗಳಿಗೂ ನಾಗರೀಕತೆಯನ್ನೇ ಹೊಣೆ ಮಾಡುತ್ತಾರೆ. ಇಂಡಿಯಾದ ಚರಿತ್ರೆಯಲ್ಲಿ ಗಾಂಧಿಯವರಿಗೆ ಯಾವ ತೊಂದರೆ ತಾಪತ್ರಯಗಳೂ ಕಾಣುವುದಿಲ್ಲ. ಅದೆಲ್ಲವೂ ತುಂಬ ತೃಪ್ತಿಕರವಾಗಿತ್ತು, ಅದು ಹಾಗೇ ಮುಂದುವರಿಯಬೇಕು, ಎಲ್ಲರೂ



ಅವರವರ ಕೆಲಸ ಮಾಡಿಕೊಂಡು ಹೋಗಬೇಕು, ಇರುವ ಸ್ಥಿತಿಯನ್ನು ಬದಲಿಸಬಾರದು ಎಂಬುದು ಗಾಂಧಿಯವರ ಆಲೋಚನೆ.

ಆದರೆ ಚರಿತ್ರೆಯ ಸಹಜ ನಡಿಗೆ ಇದ್ದುದನ್ನು ಹಾಗೇ ಉಳಿಸಲಿಲ್ಲ; ಉಳಿಸುವುದೂ ಇಲ್ಲ. ನಿರಂತರ ಚಲನೆ ಮತ್ತು ಬದಲಾವಣೆ ನಿಸರ್ಗ ನಿಯಮ. ನಿರಂತರ ಮಾನವರ ಶ್ರಮ, ಶ್ರಮದ ವಿಕಾಸ ಮತ್ತು ಬದಲಾವಣೆ, ನಿರಂತರ ಉತ್ಪಾದನೆ, ಉತ್ಪಾದನೆಯ ವಿಕಾಸ ಮತ್ತು ಬದಲಾವಣೆ ಇದು ಸಾಮಾಜಿಕ ನಿಯಮ. ಇದರ ಕಡೆಗೆ ಗಾಂಧಿಯವರ ಆಲೋಚನೆ ಮುಖಮಾಡುವುದಿಲ್ಲ. ಅವರ ಆಲೋಚನೆಗೆ ಚಲನೆಯೇ ಇಲ್ಲ ಎಂದೂ ಹೇಳಬಹುದು. ಮುಂದುವರಿದು ಅವರ ಆಲೋಚನೆಯಲ್ಲಿ ಚಲನೆ ಇದ್ದರೂ ಅದು ಹಿಮ್ಮುಖವಾಗಿದೆ ಎಂದು ಹೇಳ

ಬಹುದು. ನಿಸರ್ಗ ಮತ್ತು ಸಮಾಜ ಹಿಂದಕ್ಕೆ ಚಲಿಸಲಾರದು. ಅದು ಮುಂದೆ ಮುಂದೆ ವಿಕಾಸವಾಗುತ್ತ, ಅಗಲವಾಗುತ್ತ, ಸೂಕ್ಷ್ಮವಾಗುತ್ತ, ಸಂಕೀರ್ಣವಾಗುತ್ತ, ವಕ್ರವಾಗುತ್ತ ಸಾಗುತ್ತದೆ. ಬದಲಾವಣೆಯ ಸ್ವರೂಪದ ಈ ನಿಯಮವನ್ನೇ ಗುರುತಿಸುವ ಗೋಜಿಗೆ ಗಾಂಧಿ ಹೋಗುವುದಿಲ್ಲ.

ಇದರ ಅಂದಾಜು ಗಾಂಧಿಗೆ ಇರಲಿಲ್ಲ ಎಂದು ಹೇಳಲು ಬರುವುದಿಲ್ಲ. ಆದರೆ ಆ ಗ್ರಹಿಕೆಯ ವಿಧಾನವನ್ನು ಅವರು ಬಳಸಿಲ್ಲ ಎಂದು ಖಂಡಿತ ಹೇಳಬಹುದು. ಅಂದರೆ ಚಲನೆ ಮತ್ತು ಬದಲಾವಣೆ ಎಂಬುದಕ್ಕೆ ಗಾಂಧಿಯವರ ಆಲೋಚನೆಯ ವಿಧಾನ ತದ್ವಿರುದ್ಧವಾಗಿದೆ. ಚಲನೆ ಮತ್ತು ಬದಲಾವಣೆಯನ್ನು ಸಮಾಜದಲ್ಲಿ ಯಾರು ಬಯಸುತ್ತಾರೆ ಎಂಬುದನ್ನು ಗಮನಿಸಬೇಕು. ತುಳಿಯುವವರು ಚಲನೆ ಮತ್ತು ಬದಲಾವಣೆಯನ್ನು ಬಯಸುವುದಿಲ್ಲ. ತುಳಿಸಿಕೊಳ್ಳುವವರಿಗೆ ಅದರ ಅನುಭವ ಅರಿವಿಗೆ ಬಂದಾಗ ಚಲನೆ ಮತ್ತು ಬದಲಾವಣೆಯನ್ನು ಬಯಸುತ್ತಾರೆ.

ಎಷ್ಟೇ ಮಿತಿಗಳಿದ್ದರೂ ಇಂಗ್ಲೀಶರ ಶಿಕ್ಷಣ ಅನುಭವವನ್ನು ಅರಿವಿಗೆ ತರುವ ಕೆಲಸ ಮಾಡಿತು. ದುರಂತವೆಂದರೆ ಅನುಭವವನ್ನು ಅರಿವಿಗೆ ತರುವ ಇಂಗ್ಲಿಶ್ ಶಿಕ್ಷಣವನ್ನೇ ಗಾಂಧಿ ವಿರೋಧಿಸಿದರು. ಬರೋಡ ಮಹಾರಾಜರ ಪ್ರಯತ್ನವನ್ನು ಅವರು ಕಟುವಾಗಿ ವಿರೋಧಿಸಿದರು.

ಜಾತಿ ಮತ್ತು ಅಸ್ಪೃಶ್ಯತೆಯ ಕ್ರೂರ ಅನುಭವಗಳನ್ನು ಅಂಬೇಡ್ಕರರು ಅರಿವಿಗೆ ತರುವ ಕೆಲಸ ಮಾಡಿದರು. ಇಲ್ಲೇ ಗಾಂಧಿಗೂ ಮತ್ತು ಅಂಬೇಡ್ಕರರಿಗೂ ಇರುವ ವ್ಯತ್ಯಾಸವನ್ನು ಖಚಿತ ಮಾಡಿಕೊಳ್ಳಬೇಕು. ಶೋಷಣೆ ಮತ್ತು ಅಪಮಾನದ ಅನುಭವ ಅರಿವಿಗೆ ಬಂದರೆ ಆ ಬಗ್ಗೆ ವಿರೋಧ ಹುಟ್ಟುತ್ತದೆ. ಆ ವಿರೋಧ ಹೋರಾಟಕ್ಕೆ ಕಾರಣವಾಗುತ್ತದೆ. ಈ ವಿಷಯದಲ್ಲಿ ಗಾಂಧಿಗೆ ಕಿಂಚಿತ್ತೂ ಆಸಕ್ತಿ ಇರಲಿಲ್ಲ ಅಥವಾ ಈ ಪ್ರಕ್ರಿಯೆಗೆ ಗಾಂಧಿ ವಿರುದ್ಧವಾಗಿದ್ದರು.

೯೦ರ ದಶಕದ ನಂತರ ಸಾಮ್ರಾಜ್ಯಶಾಹಿಯ ಪ್ರತ್ಯಕ್ಷ ಮತ್ತು ಪರೋಕ್ಷ ದಾಳಿಗೆ ಇಡೀ ದೇಶವೇ ತತ್ತರಿಸುತ್ತಿದೆ. ಇದರ ಪರಿಣಾಮ ಮತ್ತು ಪರ್ಯಾಯಗಳನ್ನು ಜನತೆಯ ನೆಲೆಯಲ್ಲಿ ಗ್ರಹಿಸಲಾರದ ಬೌದ್ಧಿಕ ಬಡವರು ಹಳೆಯದನ್ನೆಲ್ಲ ಉಳಿಸಬೇಕು ಎಂದು ಹಪಾಹಪಿಸುತ್ತಿದ್ದಾರೆ. ಸಾಮ್ರಾಜ್ಯಶಾಹಿಯ ಲೂಟಿಗೆ ಪೂರಕವಾದ ವಿಚಾರಗಳನ್ನೇ ಪರ್ಯಾಯ ಎಂಬ ಹೆಸರಿನಲ್ಲಿ ಪ್ರಚಾರ ಮಾಡಿಸಲಾಗುತ್ತಿದೆ. ಈ ಕುತಂತ್ರದ ರಾಜಕೀಯಕ್ಕೆ ಗಾಂಧಿಯ ವಿಚಾರಗಳ ರೂಪ ಕೊಡಲಾಗಿದೆ. ಅಂದರೆ ಅವರ ವಿಚಾರಗಳ ರೂಪದಲ್ಲಿ ನಡೆಸುತ್ತಿರುವ ತಂತ್ರ ಇದು.

ದೇಶದೊಳಗಿನ ಅಸಮಾನತೆ ಮತ್ತು ಶೋಷಣೆಯನ್ನು ಗುರುತಿಸದೇ ಇದ್ದ ಆಲೋಚನೆಗಳನ್ನು ಎಂತಹ ದುರುಪಯೋಗಕ್ಕೆ ಬಳಸಿಕೊಳ್ಳಲಾಗುತ್ತದೆ ಎಂಬುದಕ್ಕೆ ಇದೊಂದು ಸಮರ್ಥ ನಿದರ್ಶನ. ಅಂದರೆ ಸಾಮ್ರಾಜ್ಯಶಾಹಿ ಸುಲಿಗೆಗೆ ಅನುಕೂಲವಾಗುವ ವಿಚಾರಗಳನ್ನು ಗಾಂಧಿಯ ವಿಚಾರಗಳೊಂದಿಗೆ ಸೇರಿಸಿ ಪ್ರಚಾರ ಮಾಡಲಾಗುತ್ತಿದೆ. ಇದರಲ್ಲಿ ಗಾಂಧಿಯವರ ಆಲೋಚನೆಯ ದೌರ್ಬಲ್ಯವೂ; ಸಾಮ್ರಾಜ್ಯಶಾಹಿಯ ಪಿತೂರಿಯೂ ಒಟ್ಟೊಟ್ಟಿಗೆ ಸೇರಿಕೊಂಡಿದೆ. □

ಬಸವಣ್ಣ: ಛತ್ರಪತಿ ಶಾಹು ಮಹಾರಾಜ

ಜಗತ್ತಿನ ಇತಿಹಾಸವನ್ನು ಕೆದಕಿದಾಗ ನಮಗೆ ಸಿಗುವ ಮಾಹಿತಿ ಪಂಡಿತರ, ಪಾಳೇಗಾರರ ನಿರಂಕುಶ ಪ್ರಭುಗಳ ಚರಿತ್ರೆಯೇ ಹೊರತು ಸಾಮಾನ್ಯರ, ದುಡಿಯುವ ವರ್ಗದ ಚರಿತ್ರೆಯಲ್ಲ. ಪ್ರಜೆಗಳಿಂದಲೇ ರಾಜರು, ರಾಜರಿಂದ ಪ್ರಜೆಗಳಲ್ಲ ಎನ್ನುವುದು ವಿಹಿತವಾದುದು. ರಾಜರಿಲ್ಲದೆ, ಪಾಳೇಗಾರರಿಲ್ಲದೆ ಪ್ರಜೆಗಳು ಬದುಕು ಮಾಡಬಹುದು. ಪ್ರಜೆಗಳಿಲ್ಲದೆ ಯಾರೂ ರಾಜರಾಗಲು ಸಾಧ್ಯವಿಲ್ಲ. ಈ ನೆಲದ ಅಶ್ರಮಿಕ ವರ್ಗ ತನ್ನ ಸ್ವಾರ್ಥ ಸಾಧನೆಗಾಗಿ ಹೊಗಳುಭಟ್ಟನ ವೃತ್ತಿಯನ್ನು ಅನುಸರಿಸಿದೆ. ಕ್ಷತ್ರಿಯ ರಾಜನಿಗೆ ಇಲ್ಲ ಸಲ್ಲದ ಸಲಹೆಗಳನ್ನು ನೀಡುವುದರ ಮೂಲಕ ಈ ದೇಶದ ಇತಿಹಾಸವನ್ನೆಲ್ಲ ವೈದಿಕರು ನುಚ್ಚುನೂರು ಮಾಡಿದ್ದಾರೆ. ಶೂದ್ರ ವರ್ಗದವರನ್ನು ಕೋತಿಗಳನ್ನಾಗಿ ಕರಡಿಗಳನ್ನಾಗಿ ಚರಿತ್ರೆಯಲ್ಲಿ ಸೃಷ್ಟಿಸಿದ್ದಾರೆ. ಮೇಲಾಗಿ ಶಿಕ್ಷಣದ ಸೊತ್ತು ಬ್ರಾಹ್ಮಣರಿಗೆ ಮಾತ್ರ ಸೇರಿದ್ದು ಎಂದು ಹೇಳುತ್ತಾ ಇಡೀ ಸಾಮಾಜಿಕ ವ್ಯವಸ್ಥೆಯನ್ನು ತಮ್ಮ ಮೂಗಿನ ನೇರಕ್ಕೆ ಉಳಿಸಿಕೊಂಡು ಬಂದಿದ್ದಾರೆ.

ಪರಂಪರೆಯಿಂದ ಪ್ರಸ್ತುತ ಸಂದರ್ಭದವರೆಗಿನ ದೇಶದ ಸ್ಥಿತಿಗತಿಯನ್ನು ಅವಲೋಕನ ಮಾಡಿದರೆ, ನಮಗೆ ಸಿಗುವ ಉತ್ತರದಿಂದ ಸಾಮಾನ್ಯ ಮನುಷ್ಯ ಕ್ಷೋಭೆಗೊಳಗಾಗುತ್ತಾನೆ. ದೇಶದ ತುಂಬೆಲ್ಲ ವೈದಿಕ ಪ್ರಾಬಲ್ಯ, ಸಂಘ ಪರಿವಾರದ ಮತಾಂಧತೆಯ ದೊಂಬರಾಟ, ಗಾಂಧಿ ಹುಟ್ಟಿದ ನಾಡಿನಲ್ಲಿ ಮಹಿಳೆಯರನ್ನು ಸಾರ್ವಜನಿಕವಾಗಿ ಅತ್ಯಾಚಾರಕ್ಕೊಳಪಡಿಸುವ ಪದ್ಧತಿ, ಕ್ರೈಸ್ತ ಪಾದ್ರಿ ಹಾಗೂ ಮಕ್ಕಳನ್ನು ಜೀವಂತದಹನ ಇವೆಲ್ಲ ಸಂಘ ಪರಿವಾರದವರಿಗೆ ಹಬ್ಬದೂಟವೇ ಸರಿ. ಬಸವನ ನಾಡಿನಲ್ಲಿ ದಲಿತರ ಜೀವಂತ ದಹನ ಇವೆಲ್ಲ ಸಾಮಾನ್ಯ ಸಂಗತಿಗಳಾಗಿವೆ. ತೊಗಾಡಿಯಾನಂತಹ ಮತಾಂಧರಿಗೆ ಹರಿಯಾಣಾ ರಾಜ್ಯದ ಐದು ಜನ ದಲಿತರ ಜೀವಕ್ಕಿಂತ 'ಹಸು'ವಿನ ಜೀವ ಪ್ರಮುಖವಾಗುತ್ತದೆ. ಈ ಎಲ್ಲ ವಿಚಾರಗಳನ್ನು ಹಂಚಿಕೊಳ್ಳುವ ಉದ್ದೇಶವೇನೆಂದರೆ ಮತಾಂಧರು ಎಂದೂ ಸಾಮಾಜಿಕ ಬದಲಾವಣೆಯತ್ತ ನಡೆದವರಲ್ಲ. ಕಣ್ಣಿಗೆ ಕಾಣದ ದೇವರು, ನಂಬಿಕೆ ಸಂಪ್ರದಾಯಗಳು, ಹಸು, ಕೋತಿ, ನಾಯಿ, ಹಾವು, ಚೇಳು, ಹವನ, ಹೋಮ ಇವರಿಗೆ ಪ್ರಮುಖವಾಗುತ್ತವೆ. ಮನುಷ್ಯನಿಗಿಂತ ಜಾತಿ ಶ್ರೇಷ್ಠವಾಗುತ್ತದೆ ವಿನಹ ಜೀವ ಶ್ರೇಷ್ಠವಾಗುವುದಿಲ್ಲ.

ಈ ತರಹದ ಜೀವ ವಿರೋಧಿ ನೆಲೆಯನ್ನು ತಿಳಿಗೊಳಿಸುವ ಸಲುವಾಗಿ, 'ಜಗತ್ತಿನ ಸಾಮಾಜಿಕ ಚರಿತ್ರೆಯಲ್ಲಿ ಹಲವು ಅದಮ್ಯ ಚೇತನಗಳು ಆಗಿ ಹೋಗಿವೆ. ಸಾಮಾಜಿಕ ವ್ಯವಸ್ಥೆ ಜಡತ್ವ ಹೊಂದಿ ಸಂಪ್ರದಾಯದ ಸಂದಿಗ್ಧದಲ್ಲಿ ನರಳುವಂತಹ ಸನ್ನಿವೇಶ ನಿರ್ಮಾಣವಾದಾಗ,ಅನೇಕ ಸುಧಾರಕರು ಉದಿಸಿ, ಸಮಾಜ ಸುಧಾರಣೆ ಮಾಡುತ್ತಾ ಬಂದಿದ್ದಾರೆ. ಭಾರತೀಯ ಸಂದರ್ಭದಲ್ಲಿ ಸುಮಾರು ಎರಡು ಸಾವಿರದ ಐದು ನೂರು ವರ್ಷಗಳ ಹಿಂದೆಯೇ ಸಮಾಜ ಸುಧಾರಣೆಗೆ ಭದ್ರ ತಳಹದಿಯನ್ನು ಹಾಕಿಕೊಟ್ಟ ಜನಸಮುದಾಯವನ್ನು ವೈಚಾರಿಕ ಬೆಳಕಿನೆಡೆಗೆ ಕೊಂಡೊಯ್ಯುವ ಪ್ರಯತ್ನದಲ್ಲಿ ಪ್ರಥಮ ಹೆಜ್ಜೆ ಇಟ್ಟವರೆಂದರೆ ಮಹಾನ್ ಮಾನವತಾವಾದಿ ಭಗವಾನ್ ಬುದ್ಧ. ಬುದ್ಧನ ಚಿಂತನೆ, ಮಾನವೀಯ ಮೌಲ್ಯಗಳ ನೆಲೆಯಲ್ಲಿ ದುಡಿದ ಮಹಾನ್‌ಸಾಧಕ ಬಸವಣ್ಣ, ಹನ್ನೆರಡನೆಯ ಶತಮಾನದಲ್ಲಿ ಕನ್ನಡದ ನೆಲದಲ್ಲಿ ಜಾಜ್ವಲ್ಯಮಾನವಾಗಿ ಕಂಗೊಳಿಸಿ ಇಪ್ಪತ್ತನೇ ಶತಮಾನದ ಸಂದರ್ಭದಲ್ಲೂ ಚರ್ಚೆ, ಅನುಸರಣೆಗೆ ವ್ಯಾಪಕವಾಗಿ ವಿಸ್ತರಿಸಿಕೊಂಡಿರುವುದನ್ನು ಕಾಣುತ್ತೇವೆ.

ಬುದ್ಧ-ಬಸವ, ಬಸವ-ಮಹಾವೀರ, ಬಸವ-ಕಬೀರ, ಬಸವ-ಫುಲೆ, ಬಸವ-ಪೆರಿಯಾರ್, ಬಸವ-ಕನಕ, ಬಸವ-ಗಾಂಧಿ, ಬಸವ-ಅಂಬೇಡ್ಕರ್ ಹೀಗೆ ಅನೇಕರನ್ನು ತೌಲನಿಕವಾಗಿ ವಿವೇಚನೆಗೊಳಪಡಿಸುತ್ತಾ ಚಿಂತನೆಗೆ ತೊಡಗಿದಾಗ ಅವರಲ್ಲಿ ಕೆಲವು ವೈರುಧ್ಯಗಳು ಕಂಡರೂ ಅನೇಕ ಸಾದೃಶ ಅಂಶಗಳನ್ನು ಗುರುತಿಸಬಹುದಾಗಿದೆ. ಈ ಮೇಲೆ ಸೂಚಿಸಿದ ಮಹಾನ್ ಸಾಧಕರನ್ನು ಹೋಲಿಸಿ ಬರೆದ ಬರಹಗಳು ಹೇರಳವಾಗಿ ಬಂದಿವೆ. ಆದರೆ, ೧೨ನೇ ಶತಮಾನದ ಬಸವಣ್ಣ ಇಪ್ಪತ್ತನೇ ಶತಮಾನದ ಅಂದರೆ ಸ್ವಾತಂತ್ರ್ಯ ಪೂರ್ವದ ಛತ್ರಪತಿ ಶಾಹು ಮಹಾರಾಜರ ಕುರಿತು ಬಹುತೇಕವಾಗಿ ತೌಲನಿಕ ವಿವೇಚನೆ ನಡೆದಿಲ್ಲವೆನ್ನುವುದು ನನ್ನ ಭಾವನೆ. ಇದು ನನ್ನ ಮಿತಿಯೂ ಆಗಿರಬಹುದು. ಬಸವಣ್ಣ ಹಾಗೂ ಛತ್ರಪತಿ ಶಾಹು ಮಹಾರಾಜರ ಜೀವನ-ಸಾಧನೆಗಳನ್ನು ತೌಲನಿಕವಾಗಿ ವಿವೇಚನೆಗೊಳಪಡಿಸುವುದು ಪ್ರಸ್ತುತ ಲೇಖನದ ಆಶಯವಾಗಿದೆ.

ಬಸವಣ್ಣ ಮತ್ತು ಶಾಹು ಮಹಾರಾಜರು ಈ ಇಬ್ಬರ ನಡುವೆ ಎಂಟನೂರು ವರ್ಷಗಳಷ್ಟು ಕಾಲದ ಅಂತರವಿದೆ. ಆದರೆ ಅವರಿಬ್ಬರಲ್ಲಿ ಅನೇಕ ಸಾಮ್ಯ ಅಂಶಗಳು ಕಾಣಬಹುದಾಗಿದೆ. "ಕರ್ನಾಟಕದ ಸಾಂಸ್ಕೃತಿಕ ಸಂದರ್ಭದಲ್ಲಿ ಹನ್ನೆರಡನೇ ಶತಮಾನಕ್ಕೆ ಐತಿಹಾಸಿಕ ಹಿನ್ನೆಲೆಯ ಜೊತೆಗೆ ಸಾಹಿತ್ಯಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕವಾದ ಕ್ರಾಂತಿ ಜಗತ್ತಿನ ಯಾವುದೇ ಸಂದರ್ಭದಲ್ಲಿ ನಡೆದಿರುವುದು ವಿರಳವೆಂದೇ ಹೇಳಬೇಕಾಗುತ್ತದೆ.

ಬಸವಣ್ಣನ ಹಿನ್ನೆಲೆಯನ್ನು ಗಮನಿಸಿದಾಗ ಸಮಾಜದ ಶ್ರೇಣೀಕೃತ ವ್ಯವಸ್ಥೆಯ ಉನ್ನತ ಸ್ಥರದಲ್ಲಿ ಜನಿಸಿದರೂ, ಆತನ

ಬುದ್ಧ-ಬಸವ, ಬಸವ-ಮಹಾವೀರ, ಬಸವ-ಕಬೀರ, ಬಸವ-ಫುಲೆ, ಬಸವ-ಪೆರಿಯಾರ್, ಬಸವ-ಕನಕ, ಬಸವ-ಗಾಂಧಿ, ಬಸವ-ಅಂಬೇಡ್ಕರ್ ಹೀಗೆ ಅನೇಕರನ್ನು ತೌಲನಿಕವಾಗಿ ವಿವೇಚನೆಗೊಳಪಡಿಸುತ್ತಾ ಚಿಂತನೆಗೆ ತೊಡಗಿದಾಗ ಅವರಲ್ಲಿ ಕೆಲವು ವೈರುಧ್ಯಗಳು ಕಂಡರೂ ಅನೇಕ ಸಾದೃಶ ಅಂಶಗಳನ್ನು ಗುರುತಿಸಬಹುದಾಗಿದೆ. ಈ ಮೇಲೆ ಸೂಚಿಸಿದ ಮಹಾನ್ ಸಾಧಕರನ್ನು ಹೋಲಿಸಿ ಬರೆದ ಬರಹಗಳು ಹೇರಳವಾಗಿ ಬಂದಿವೆ. ಆದರೆ, ೧೨ನೇ ಶತಮಾನದ ಬಸವಣ್ಣ ಇಪ್ಪತ್ತನೇ ಶತಮಾನದ ಅಂದರೆ ಸ್ವಾತಂತ್ರ್ಯ ಪೂರ್ವದ ಛತ್ರಪತಿ ಶಾಹು ಮಹಾರಾಜರ ಕುರಿತು ಬಹುತೇಕವಾಗಿ ತೌಲನಿಕ ವಿವೇಚನೆ ನಡೆದಿಲ್ಲವೆನ್ನುವುದು ನನ್ನ ಭಾವನೆ. ಇದು ನನ್ನ ಮಿತಿಯೂ ಆಗಿರಬಹುದು. ಬಸವಣ್ಣ ಹಾಗೂ ಛತ್ರಪತಿ ಶಾಹು ಮಹಾರಾಜರ ಜೀವನ-ಸಾಧನೆಗಳನ್ನು ತೌಲನಿಕವಾಗಿ ವಿವೇಚನೆಗೊಳಪಡಿಸುವುದು ಪ್ರಸ್ತುತ ಲೇಖನದ ಆಶಯವಾಗಿದೆ.

ಎಚ್.ಟಿ. ಪೋತೆ

ಚಿಂತನೆಯೆಲ್ಲವೂ ಶೋಷಿತರ ಉದ್ಧಾರದ ದಿಕ್ಕಿನತ್ತ ನಡೆದಿದೆ ಎಂಬುದು ಗಮನಿಸಬಹುದಾದ ಅಂಶ. ಬ್ರಾಹ್ಮಣ ದಂಪತಿಗಳ ಮಗನಾದರೂ ಕ್ರಾಂತಿಕಾರಿಯಾಗಿ ಎಲ್ಲವನ್ನೂ ಪ್ರಶ್ನಿಸುತ್ತ ಬೆಳೆದದ್ದು, ಅದ್ಭುತವಾದ ವಿಚಾರವೇ ಸರಿ. ಉಪನಯನ, ಸಂಸ್ಕಾರದ ಸಂಕೋಲೆಗೊಳಗಾಗದೆ, ತನ್ನದೇ ಆದ ಸ್ವತಂತ್ರ ದಾರಿಯಲ್ಲಿ ಮುನ್ನಡೆದು ಅಂಧಕಾರದಲ್ಲಿ ತೊಳಲುತ್ತಿದ್ದ ಸಮಾಜವನ್ನು ಪರಿವರ್ತನೆಯ ದಾರಿಯಲ್ಲಿ ಮುನ್ನಡೆಸಿದ್ದು ಮಹತ್ವದ ಮೈಲುಗಲ್ಲೆಂದೇ ಪರಿಗಣಿಸಬೇಕಾಗುತ್ತದೆ. ಹುಟ್ಟಿನಿಂದ ಬ್ರಾಹ್ಮಣನಾದರೂ 'ಆನು ಹಾರುವನೆಂದರೆ ಕೂಡಲ ಸಂಗಮದೇವ ನಗುವನಯ್ಯಾ' ಎಂದು ತನ್ನ ಆತ್ಮ ವಿಮರ್ಶೆ ಮಾಡಿಕೊಳ್ಳುವುದರ ಜೊತೆಗೆ 'ಉನ್ನತ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ' ಎಂದು ತನ್ನ ಇಷ್ಟದೇವರಲ್ಲಿ ಪ್ರಾರ್ಥಿಸುತ್ತಾರೆ. ವ್ಯಕ್ತಿಯ ಯೋಗ್ಯತೆಯನ್ನು ಅವನಲ್ಲಿರುವ ಪ್ರತಿಭೆ ಮತ್ತು ಮಾನವೀಯ ಅಂತಃಕರಣದಿಂದ ಗುರ್ತಿಸಿದ ಬಸವಣ್ಣ ಉನ್ನತ ಕುಲದಲ್ಲಿ ಹುಟ್ಟಿದವರೆಲ್ಲ ಉನ್ನತರು ಎಂಬ ಅವ್ಯೆಚಾರಿಕ ಚಿಂತನೆಯನ್ನು ಸ್ಪಷ್ಟವಾಗಿ ನಿರಾಕರಿಸುತ್ತಾರೆ.[೨] 'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವ ನೋದಿ ಹಾರುವನಾದ... ...' ಇಲ್ಲಿ ವೃತ್ತಿ ಶ್ರೇಷ್ಠತೆಯನ್ನು ಅಳೆಯಲಾಗದು. ಹುಟ್ಟು ಮನುಷ್ಯನ ಶ್ರೇಷ್ಠತ್ವದ ಸಾಧನವಲ್ಲ. ಹುಟ್ಟಿದ ಮೇಲೆ ನಾವು ಪ್ರದರ್ಶಿಸುವ ಗುಣಗಳ ಮೇಲೆ ಶ್ರೇಷ್ಠತೆಯನ್ನು ಅಳೆಯಬೇಕೆಂಬುದು ಬಸವಣ್ಣನವರ ನಿಲುವು. ಅದಕ್ಕೇ ಆತ ನಾವು ಮಾಡುವ ಕೆಲಸ-ಕಾಯಕಗಳ ಮೇಲೆ ಜಾತಿ ಪದ್ಧತಿ ರೂಢಿಯಲ್ಲಿ ಬಂದಿದೆ ಇದು ಹೋಗಬೇಕೆಂಬುದು ಅವರ ಮೂಲ ಧ್ಯೇಯವಾಗಿದೆ. ಹಾಗೆಯೇ ತಮ್ಮ ತಮ್ಮ ಸಾಧನೆಯಿಂದ ಶ್ರೇಷ್ಠರಾದವರನ್ನು ಸ್ಮರಿಸುತ್ತ ಬಸವಣ್ಣನವರು ಜಾತಿವಾದಿಗಳಿಗೆ ಪರಂಪರೆಯ ಸಾಂಸ್ಕೃತಿಕ ಪಠ್ಯವನ್ನು ತೆರೆದಿಡುತ್ತಾರೆ.

ವ್ಯಾಸ ಬೋಯಿತಿಯ ಮಗ
ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿಂ ಭೋ
ಕುಲದಿಂದ ಮುನ್ನೇನಾದರಿಂ ಭೋ
ಸಾಕ್ಷಾತ್ ಅಗಸ್ತ್ಯ ಕಬ್ಬಿಲ ದೂರ್ವಾಸ ಮಚ್ಚಿಗ
ಕಶ್ಯಪ ಕಮ್ಮಾರ ಕೌಂಡಿಲ್ಯನೆಂಬ ಋಷಿ
ಮೂರು ಲೋಕವರಿಯೆ ನಾಯಿಂದ ಕಾಣಿರೊ.
ನಮ್ಮ ಕೂಡಲಸಂಗನ ವಚನ ವಿಂತೆಂದು
ಶ್ವಪಚೋಪಿಯಾದರೇನು ಶಿವಭಕ್ತನೇ ಕುಲಜ

ಈಗಲೂ ಜನಪದರಲ್ಲಿ ಒಂದು ಮಾತಿದೆ, ನೀರಿನ ಮೂಲ ಋಷಿ ಮೂಲ, ಕೇಳಬಾರದೆಂದು ಅಂದರೆ ಜಗತ್ತು ಮೆಚ್ಚುವಂತಹ ಶ್ರೇಷ್ಠ ಸಾಧನೆಯನ್ನು ಮಾಡಿದವರಾರು ಉಚ್ಚ ಕುಲದಿಂದ ಬಂದವರಲ್ಲ. ಶ್ರೇಷ್ಠತೆಯನ್ನು ಕುಲಕ್ಕಂಟಿಸಿದ ಜಾತಿವಾದಿಗಳಿಗೆ ಬಸವಣ್ಣ ಈ ಮೇಲಿನಂತೆ ಉತ್ತರಿಸಿದ್ದಾನೆ. ಮುಂದುವರೆದು ಬಸವಣ್ಣ ತನ್ನ ಈ ವಚನದಲ್ಲಿ ಹೀಗೆ ಹೇಳುತ್ತಾನೆ.

'ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ
ಜಲವೊಂದೇ ಶೌಚಾಚಮನಕ್ಕೆ
ಕುಲವೊಂದೆ ತನ್ನತಾನರಿದವಂಗೆ
.. ..

ಬಸವಣ್ಣನವರು ಅನುಭವ ಮಂಟಪದಲ್ಲಿ ಸರ್ವರಿಗೂ ಸಮಾನವಾದ ಅವಕಾಶ ಕಲ್ಪಿಸಿಕೊಟ್ಟರು. ಹೀಗಾಗಿಯೇ ಮಾದಾರ ಚೆನ್ನಯ್ಯ, ಧೂಳಯ್ಯ, ದೊಡ್ಡಯ್ಯ, ಸಮಗಾರ ಹರಳಯ್ಯ, ಉರಿಲಿಂಗ ಪೆದ್ದಿ, ಮುಂತಾದವರು ಅಕ್ಷರ ಸಂಸ್ಕೃತಿಯೆಡೆಗೆ ಬರುವಂತಾಯಿತು. ಸೂಳೆ ಸಂಕವ್ವೆ, ಆಯ್ದಕ್ಕಿ ಲಕ್ಕಮ್ಮ, ಕಾಳವ್ವೆ ಮುಂತಾದ ದಲಿತ ಮಹಿಳೆಯರು ಸಹ ಸಾಮಾಜಿಕವಾಗಿ ಸಮಾನ ಸ್ಥಾನಮಾನ ಪಡೆದುದಲ್ಲದೆ, ಶಿಕ್ಷಿತರಾಗುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಪಡೆದ ಕಾಲ ಅದಾಗಿತ್ತು.

ಊರಾಚೆ ಕೊಚ್ಚೆಯಲ್ಲಿ ವಾಸಿಸುವ ಕೆಳವರ್ಗದವರನ್ನು ಬಸವಣ್ಣ ಅಪ್ಪಿಕೊಳ್ಳುವುದರ ಮೂಲಕ ಅವರಲ್ಲಿ ಆತ್ಮ ವಿಶ್ವಾಸವನ್ನು ಹೆಚ್ಚಿಸಿದ, ಜಾತಿರಹಿತ ಸಮಾಜ ನಿರ್ಮಾಣದ ಕನಸು ಕಂಡ ಬಸವಣ್ಣ ಅಸ್ಪೃಶ್ಯರ ಸಮಗಾರ ಹರಳಯ್ಯ ದಂಪತಿಗಳ ಮಗನಿಗೆ ವಿಪ್ರ ಮೂಲದ ಮಧುವರಸನ ಮಗಳನ್ನು ಕೊಟ್ಟು ಮದುವೆ ಮಾಡುವುದರ ಮೂಲಕ ಹೊಸ ಇತಿಹಾಸ ನಿರ್ಮಾಣ ಮಾಡಿದ. ಇಂದು ಅನೇಕ ವಿಷಯಗಳಲ್ಲಿ ಬಸವಾದಿ ಶರಣರ ವಿಚಾರಗಳನ್ನು ಉದಾಹರಿಸಿ ಬಾಳುವ ಸಂಸ್ಕೃತಿ ನಮ್ಮದಾಗಿದ್ದರೂ, ನಾವ್ಯಾರೂ ಅವರ ಒಂದಿಷ್ಟು ವಿಚಾರಗಳನ್ನು ಇಲ್ಲಿಯವರೆಗೆ ಪಾಲಿಸಲಾಗಿಲ್ಲ. ವಿಪರ್ಯಾಸವೆಂದರೆ ಬಸವ ತತ್ವಾನುಯಾಯಿಗಳಲ್ಲದೇ ವೀರಶೈವ, ಲಿಂಗಾಯತ, ಪಂಚಪೀಠ ಹೀಗೆ ತಾರತಮ್ಯ ಮಾಡಿಕೊಂಡು ಬಸವಣ್ಣನವರನ್ನು ಗೌರವಿಸದಷ್ಟು ಕೆಳಮಟ್ಟಕ್ಕೆ ಇಳಿದದ್ದೂ ನೋವಿನ ಸಂಗತಿಯಾಗಿದೆ.

ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣ ಮಂತ್ರಿಯಾಗಿದ್ದರೂ, ಉತ್ತಮ ಕುಲದಲ್ಲಿ ಹುಟ್ಟಿದ್ದರೂ ತಾನು ಉಚ್ಚ ಕುಲದವನೆಂದು ಎಂದೂ ಹೇಳಿಕೊಳ್ಳಲಿಲ್ಲ. ಶಿವಭಕ್ತರಿಗಿಂತ ಹಿರಿಯರಿಲ್ಲ, ಎನಗಿಂತ ಕಿರಿಯರಿಲ್ಲ ಎಂದು ಸರಳ ಸಹಜ ಸ್ವಭಾವದ ಬಸವಣ್ಣ "ಅಯ್ಯಾ ಎಂದರೆ ಸ್ವರ್ಗ, ಎಲ್ಲವೋ ಎಂದರೆ ನರಕ" ಎಂದು ಹೇಳುವುದರ ಮೂಲಕ ಗೌರವ ಕೊಡುವ, ತೆಗೆದುಕೊಳ್ಳುವ ಸಂಸ್ಕೃತಿಯ ವಿಚಾರಗಳನ್ನು ಪ್ರತಿಪಾದಿಸಿದ್ದಾನೆ.

ಸಮಾಜದಲ್ಲಿ ನೆಲೆಯೂರಿದ್ದ ಮೌಢ್ಯತೆ ಸಂಪ್ರದಾಯಗಳನ್ನು ವಿರೋಧಿಸಿದಷ್ಟೇ ಅಲ್ಲ, ಪ್ರತಿಯೊಬ್ಬರಲ್ಲಿ ಬೇರೂರಿದ್ದ ಬೇಧ, ಭಾವ, ಮತ, ಪಂಥಗಳಲ್ಲಿ ಹೊರಳಾಡುತ್ತಿದ್ದವರನ್ನು ನಾಚಿಸುವಂತೆ 'ಇವನಾರವ ಇವನಾರವ ಎಂದೆನಿಸದಿರಯ್ಯಾ ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ' ಎಂದು ಬಸವಣ್ಣ ಹುಟ್ಟಿದ್ದು ವಿಪ್ರ ಕುಲದಲ್ಲಾದರೂ ಗುಣ ಸ್ವಭಾವದಿಂದ ಕೂಡಿ ಬಾಳುವ ಬದುಕಿಗೆ ದಾರಿ ತೋರಿದ್ದಾನೆ. ಶ್ರೇಷ್ಠವಾದುದನ್ನು ಸಾಧಿಸಿ ತೋರಿಸಿದ ಮಹಾ ಮಾನವ, ಎಲ್ಲರನ್ನು ಅಕ್ಕ ಅಣ್ಣ ಅಪ್ಪ, ಅಮ್ಮ, ಎಂದು ಕರೆದಿರುವುದಲ್ಲದೆ, ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ ಎನ್ನುತ್ತ, ಎಲ್ಲರನ್ನು ಕಳ್ಳು ಬಳ್ಳಿಯಂತೆ ನೋಡುವ ದೊಡ್ಡ ಗುಣ ಬಸವಣ್ಣನದಾಗಿತ್ತು, ಕಳಬೇಡ, ಎಂದಿಗೂ ಅಪಮಾನಿಸುವ ಗುಣ ಅವರದಾಗಿರಲಿಲ್ಲ, ಇಂತಹುದೇ ಗುಣಗಳನ್ನು ಹೊಂದಿದ ವ್ಯಕ್ತಿಯೊಬ್ಬರು ಅರಸರಾಗಿದ್ದೂ ಅರಸೊತ್ತಿಗೆಯ ವಿಲಾಸಿ ಬದುಕಿಗೆ ಒಗ್ಗಿಕೊಳ್ಳದೆ ಸಾಮಾನ್ಯರ, ಮಹಿಳೆಯರ, ದುರ್ಬಲರ, ದಲಿತರ ಹಿತಕ್ಕಾಗಿ ಅವಿರತವಾಗಿ ದುಡಿದ ವ್ಯಕ್ತಿ ಛತ್ರಪತಿ ಶಾಹು ಮಹಾರಾಜರು. ಬಸವಣ್ಣ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದುಕೊಂಡು ಸಮಾಜದ ಬದಲಾವಣೆ ಕಾರ್ಯಕ್ಕೆ ಮುಂದಾಗಿ ದುಡಿದರೆ, ಶಾಹು ಮಹಾರಾಜರು ಸ್ವತಃ ಅರಸರಾಗಿದ್ದುಕೊಂಡು ಆಧುನಿಕ ಯುಗದಲ್ಲಿ ದಲಿತರ, ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಸುಮಾರು ೫೦೦ಕ್ಕೂ ಹೆಚ್ಚು ಸಂಸ್ಥಾನಗಳಿದ್ದರೂ ಮಾನವೀಯ ಮೌಲ್ಯಗಳ ಉಳಿವಿಗಾಗಿ ಮಿಡಿದ ಸಂಸ್ಥಾನಗಳು ಬೆರಳಣಿಕೆಯಷ್ಟು ಮಾತ್ರ ಎನ್ನುವುದು ನಾವ್ಯಾರು ಮರೆಯುವಂತಿಲ್ಲ.

ಮಾನವ ವಿರೋಧಿ ಚಿಂತನೆಯ, ಸಾಂಪ್ರದಾಯಿಕವಾದ ಪದ್ಧತಿಯ ಸಂಘ ಪರಿವಾರದ ವಿರುದ್ಧ ದುಡಿದ ಮಹನೀಯರಲ್ಲಿ ಛತ್ರಪತಿ ಶಾಹು ಮಹಾರಾಜರು ಒಬ್ಬರು. ರಾಜಾ ಎಂದಾಕ್ಷಣ ನಮ್ಮ ಕಲ್ಪನೆಗೆ ನಿಲುಕುವ ಅರ್ಥವೇ ಬೇರೆ. ರಾಣಿ ಮಹಾ ರಾಣಿಯರ ನೆನಪಿನಲ್ಲಿ ಸ್ಮಾರಕಗಳನ್ನು ನಿರ್ಮಾಣ ಮಾಡುವುದು ವಿರೋಧಿಗಳನ್ನು ಸೋಲಿಸಿ ಅವರ ಹೆಂಡಂದಿರನ್ನು ಸಹ ಪತ್ನಿಯರನ್ನಾಗಿಸಿ ಕೊಳ್ಳುವುದು, ಪ್ರಜೆಗಳನ್ನು ತನ್ನ ಸೇವಕರಂತೆ ನಡೆಸಿಕೊಳ್ಳುವುದು; ಹೀಗಿದ್ದರೆ ಮಾತ್ರ ರಾಜ ಎಂಬ ಸಾಂಪ್ರದಾಯಿಕ ನಂಬಿಕೆಯೊಂದು ನಮ್ಮಲ್ಲಿತ್ತು, ಆದರೆ ಛತ್ರಪತಿ ಶಾಹು ಮಹಾರಾಜರು ಈ ವರ್ಗಕ್ಕೆ ಸೇರಿದವರಲ್ಲ.

ಛತ್ರಪತಿ ಶಾಹು ಮಹಾರಾಜ ವೈದಿಕರ ಪರಾಯಣ ಸಂಸ್ಕೃತಿಗೆ ತಲೆ ಹಾಕಿದವರಲ್ಲ. ಸ್ವತಂತ್ರ ವಿಚಾರಧಾರೆಯ ಮಾನವ ಪ್ರೇಮಿಯಾಗಿದ್ದರು. ಬುದ್ಧನ ಕಾಲದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತರುವಲ್ಲಿ ಪ್ರಯತ್ನಿಸಿ ಫಲ ಕಂಡವರು. ಸಮಾಜದಲ್ಲಿ ಸರ್ವಾಂಗೀಣ ಬದಲಾವಣೆ ತರುವಲ್ಲಿ ಹಾತೊರೆದವರು. ಆ ಹಿನ್ನೆಲೆಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ದಿಷ್ಟ ಗುರಿ ಮುಟ್ಟಿದವರು.

ಗುಜರಾತಿನಲ್ಲಿ ಜಯಭೇರಿ ಹೊಡೆದ ಬಿಜೆಪಿ ಹಾಗೂ ಸಂಘ ಪರಿವಾರದವರು ಗೋದ್ರಾದ ಘಟನೆಯನ್ನು ಎನ್‌ಕ್ಯಾಶ್ ಮಾಡಿಕೊಂಡು ಗುಜರಾತ ಹೆಣಗಳ ಮೇಲೆ ಓಡಾಡಿದವರು. ಈ ಹಿನ್ನೆಲೆಯಲ್ಲಿ ಮತಾಂಧರು ಅವಾಸ್ತವವನ್ನು ವಾಸ್ತವವೆಂದು ಬೀಗುತ್ತಿದ್ದರೆ, ಈ ದೇಶದ ಮಹಿಳೆಯರಿಗಾಗಿ, ದಲಿತರಿಗಾಗಿ ಶಾಹು ಮಹಾರಾಜರು ನೂರು ವರ್ಷದ ಕೆಳಗೆ ಸಮಾನತೆಗಾಗಿ ಶೇಕಡಾ ೫೦ ರಷ್ಟು ಮೀಸಲಾತಿ ಜಾರಿಗೆ ತಂದಕಾರಣ ಅವರ ವಿಚಾರ ಹಾಗೂ ಸಾಧನೆಗಳನ್ನು ಗೌರವಿಸುವ ನಿಟ್ಟಿನಲ್ಲಿ ಚಿಂತಿಸುತ್ತಿದ್ದರೆ, ಮತಾಂಧರ ವಿಚಾರಗಳು ಇದರ ವಿರುದ್ಧ ದಿಕ್ಕಿನಲ್ಲಿ ಸಾಗಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಭಾರತದಲ್ಲಿ ಅನೇಕ ಅರಸರು ಆಗಿ ಹೋಗಿದ್ದಾರೆ. ಅಂತಹವರಲ್ಲಿ ಕೆಲವರು ಮಾತ್ರ ಮಾನವೀಯ ಮೌಲ್ಯಗಳಿಗೆ ನಿಜವಾದ ಅರ್ಥ ಬರುವಂತೆ ಶ್ರಮಿಸಿದ್ದಾರೆ. ಅಂತಹವರಲ್ಲಿ ಸಾಮ್ರಾಟ ಅಶೋಕ, ಛತ್ರಪತಿ ಶಿವಾಜಿ ಮಹಾರಾಜರು; ಇವರ ನಂತರ ಭಾರತ ಕಂಡ ಜೀವಪರ ಚಿಂತನೆಯ ವಿಚಾರವಾದಿ ಕ್ರಾಂತಿಕಾರಿ ಅರಸರೆಂದರೆ ಶಾಹು ಮಹಾರಾಜರು ಮತ್ತು ಸಯ್ಯಾಜಿರಾವ್ ಗಾಯಕವಾಡ, ನಾಲ್ವಡಿ ಕೃಷ್ಣರಾಜ್ ಒಡೆಯರ್ ಪ್ರಮುಖರಾಗಿದ್ದಾರೆ.

೨೬.೦೭.೧೮೭೪ ರಂದು ಕೊಲ್ಲಾಪುರದ ಕಾಗಲವಾಡಿಯ ಅಪ್ಪಾ ಸಾಹೇಬ ಘಾಟಗೆ ಹಾಗೂ ರಾಧಾಬಾಯಿ ದಂಪತಿಗಳ ಉದರದಲ್ಲಿ ಜನಿಸಿದ ಮಗುವೆ ಶಾಹು ಮಹಾರಾಜ, ಇವರ ಜನ್ಮ ಹೆಸರು ಯಶವಂತ ಜಯಸಿಂಹ ಘಾಟಗೆ ಎಂದಿತ್ತು. ಮರಾಠಾ ಸಮುದಾಯದ ಕುಣಬಿ ಜಾತಿಗೆ ಸೇರಿದವರಾಗಿದ್ದರು. ವೈದಿಕ ಪದ್ಧತಿಯ ಬಿಗುವಿನಲ್ಲಿಯೂ ಶಾಹು ಮಹಾರಾಜರು ತಮ್ಮ ನಿಶ್ಚಿತ ಗುರಿಯನ್ನು ಮುಟ್ಟಿದವರು.

ಭಾರತೀಯ ಇತಿಹಾಸದಲ್ಲಿ ಶಿವಾಜಿಯ ಹೆಸರು

ಚಿರಸ್ಥಾಯಿಯಾದುದು. ಇತಿಹಾಸವಾಗಿ ಉಳಿಯದ ಆಧುನಿಕ ಯುಗದ ಅನೇಕ ಮಾನವ ಪ್ರೇಮಿಗಳಿಗೆ, ಚಿಂತಕರಿಗೆ, ಸಮಾಜವಾದಿಗಳಿಗೆ ಸ್ಫೂರ್ತಿ ನೀಡುವ ಶಕ್ತಿ ಅವರ ವ್ಯಕ್ತಿತ್ವದಲ್ಲಿದೆ ಎನ್ನುವುದು ಗಮನಿಸುವ ವಿಚಾರವಾಗಿದೆ. ಬಹು ಪರಾಕ್ರಮಿ ಶೂದ್ರ ದೊರೆ ಶಿವಾಜಿ ಮಂತ್ರಶಕ್ತಿಯ ವೈದಿಕರ ಕಡು ವಿರೋಧದ ಮಧ್ಯೆ ಆಗ್ರಾದಿಂದ ದಿಲ್ಲಿಯವರೆಗೆ ತನ್ನ ಸೀಮಾರೇಖೆಗಳನ್ನು ವಿಸ್ತರಿಸಿಕೊಂಡಿದ್ದರು. ಶೂದ್ರ ಜಾತಿಯವನಾದ ಕಾರಣ ಇವರ ಸಾಹಸ ಪರಾಕ್ರಮಗಳು ವೈದಿಕರ ಕಣ್ಣು ಕುಕ್ಕುವಂತಾಗಿತ್ತು. ಶೂದ್ರನಾದವನು ಸಾಮ್ರಾಟನಾಗುವುದು ವೈದಿಕ ಧರ್ಮಕ್ಕೆ ಅಪಚಾರವೆಂದು ಬ್ರಾಹ್ಮಣರ ವಿಚಾರವಾಗಿದೆ. ಛತ್ರಪತಿ ಶಿವಾಜಿ ಮಹಾರಾಜನ ಆಡಳಿತದಲ್ಲಿ ಮೋಸದಿಂದ ನುಸುಳಿದ ವೈದಿಕರು ರಾಜ್ಯಭಾರ ಕುಸಿಯುವಂತೆ ತಮ್ಮ ಕುಯುಕ್ತಿ ಮೆರೆದರು. ಮಹಾರಾಜರ ಮಕ್ಕಳನ್ನು ವಿಲಾಸಿ ಬದುಕಿಗಟ್ಟಿ ಎಲ್ಲ ಹಂತದಲ್ಲಿ ರಾಜ್ಯದಾಡಳಿತವನ್ನು ಹಾಳುಗೆಡುವಿದ ಕುಖ್ಯಾತಿ ವೈದಿಕರಿಗೆ ಸೇರುವಂತಹದ್ದು. ಚರಿತ್ರೆಯುದ್ದಕ್ಕೂ ವೈದಿಕರು ಕುಯುಕ್ತಿಯಿಂದಲೇ ಎಲ್ಲರನ್ನು ನಿರ್ನಾಮ ಮಾಡುತ್ತಾ ಬಂದಿದ್ದಾರೆ. ವೈರಿಯನ್ನು ನೇರವಾಗಿ ಎದುರಿಸದ ವೈದಿಕರು ಮೋಸ ವಂಚನೆ ಮುಂತಾದ ಹೀನ ಕೆಲಸದಿಂದಲೇ ಯಶಸ್ಸನ್ನು ಕಂಡವರು.

ಛತ್ರಪತಿ ಶಿವಾಜಿಯ ನಂತರ ಪೇಶ್ವೆ ಆಡಳಿತವನ್ನು ಹೊಂದಿದ ವೈದಿಕರು ಬಹುಜನರನ್ನು, ಮಹಿಳೆಯರನ್ನು ಹೀನಾಯವಾಗಿ ಕಂಡರು. ಹಣವನ್ನು ಅನುತ್ಪಾದಕ ಕೆಲಸಗಳಿಗೆ ಬಳಸಿ ಭಂಡಾರವನ್ನು ಬರಿದು ಮಾಡಿ, ವಿಲಾಸಿ ಜೀವನ ಸಾಗಿಸಿದ್ದಲ್ಲದೆ ವಿದೇಶೀಯರನ್ನು ವ್ಯಾಪಾರದ ಹೆಸರಿನಲ್ಲಿ ಒಳಬಿಟ್ಟುಕೊಂಡು, ದೇಶವನ್ನು ಇಂಗ್ಲಿಶರ ಸುಪರ್ದಿಗೆ ಒಪ್ಪಿಸಿದರು. ಸ್ವಹಿತಾಸಕ್ತಿಗಾಗಿ ಸಂಗಾತಿಗಳನ್ನು ಮಾಡಿಕೊಳ್ಳುವ ವೈದಿಕರು ನಾಡಿಗಾಗಿ ತ್ಯಾಗ ಮಾಡಿದ ಉದಾಹರಣೆಗಳು ದೊರೆಯುವುದು ದುರ್ಲಭ. ಇಂಗ್ಲಿಶರ ಆಳ್ವಿಕೆಯಲ್ಲಿಯೂ ಪರೋಕ್ಷವಾಗಿ ಈ ದೇಶವನ್ನು ಆಳಿದವರು ವೈದಿಕರೆ.

ಕೊಲ್ಹಾಪುರದ ಶಾಹುಮಹಾರಾಜರ ಪೂರ್ವಜರನ್ನು ಇಂಗ್ಲಿಶರು ಮತ್ತು ಕುಟಿಲ ನೀತಿಯಲ್ಲಿ ಪ್ರವೀಣರಾದ ಬ್ರಾಹ್ಮಣರು ತಮ್ಮ ಅಮೌಲಿಕ ವ್ಯಕ್ತಿತ್ವದಿಂದ ಕೆಲವರನ್ನು ಹುಚ್ಚರೆಂದು ಘೋಷಿಸಿದ್ದರು. "ಇನ್ನು ಕೆಲವರನ್ನು ವಿಷಕೊಟ್ಟು ಕೊಲ್ಲಲಾಗಿತ್ತು. ಏಪ್ರಿಲ್ ೨೯. ೧೮೯೪ ರಲ್ಲಿ ತಮ್ಮ ೨೦ನೇ ವಯಸ್ಸಿನಲ್ಲಿ ಶಾಹು ಮಹಾರಾಜ ಅವರಿಗೆ ಕೊಲ್ಹಾಪುರ ಸಂಸ್ಥಾನ ಕಾರ್ಯಭಾರ ಸಂಭಾಳಿಸುವ ಅವಕಾಶ ದೊರಕಿತು. ಇಂಗ್ಲಿಶ್ ಅಧಿಕಾರಿ ಮತ್ತು ಅವನ ಗಳಸ್ಯ ಕಂಠಸ್ಯ ದುಷ್ಟ ವೈದಿಕ ಅಧಿಕಾರಿ ಸೇರಿ ಶಾಹು ಮಹಾರಾಜ ಅವರನ್ನು ಪರದೇಶಕ್ಕೆ ಆರಾಮವಿರಲು ಕಳುಹಿಸುವ ಸಂಚು ರೂಪಿಸಿದ್ದರು. ಶಾಹು ಮಹಾರಾಜರು ಬಹಳ ಬುದ್ಧಿವಂತಿಕೆಯಿಂದ ಈ ಸಂಚನ್ನು ವಿಫಲಗೊಳಿಸಿದರು. ಆ ಮೂಲಕ ರಾಜಕಾರ್ಯದಲ್ಲಿ ಮಗ್ನರಾದರು. ಜನರ ಕಷ್ಟನಷ್ಟಗಳನ್ನು ತಿಳಿಯುವ ಯತ್ನ ಮಾಡಿದರು. ರಾಜಭಂಡಾರ ಬರಿದಾಗಲು ಕಾರಣಗಳನ್ನು ಹುಡುಕಿ ಸೋರುವಿಕೆಯನ್ನು ತಡೆಗಟ್ಟಿ ಅದನ್ನು ಭರ್ತಿ ಮಾಡುವ ಕಾಯಕದಲ್ಲಿ ತೊಡಗಿದರು" (ತೇಜಸ್ವಿ ಕಟ್ಟೀಮನಿ). ಈ ಘಟನೆ ಬಸವಣ್ಣನವರ ಬದುಕಿನಲ್ಲಿ ನಡೆದ ಘಟನೆಗಳನ್ನು ನೆನಪಿಗೆ ತರುತ್ತದೆ.

ಶೂದ್ರ ವರ್ಗದಿಂದ ಬಂದ ಶಾಹು ಮಹಾರಾಜರು ಸಮಸಮಾಜದ ನಿರ್ಮಾಣದಲ್ಲಿ ತೊಡಗಿದರು. ಪ್ರಜೆಗಳನ್ನು ಸುಖವಾಗಿಡುವುದು ಅವರ ಕಷ್ಟನಷ್ಟಗಳನ್ನು ಕಂಡು ಸ್ಪಂದಿಸುವುದು ನಿಜವಾದ ರಾಜಧರ್ಮ ಎಂದು ಭಾವಿಸಿದ್ದರು. ರಾಜಧರ್ಮವನ್ನರಿತ ಶಾಹು ಮಹಾರಾಜರು ಆತ್ಮಬಲ ಕಳೆದುಕೊಂಡ ಶೂದ್ರರನ್ನು, ಅತಿ ಶೂದ್ರರನ್ನು ಒಂದೆಡೆ ಸೇರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದರು. ವಿಶೇಷವಾಗಿ ಕೃಷಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಬದಲಾವಣೆ ತಂದರು. ವೈದಿಕ ಪದ್ಧತಿಯ ನಿಯಮದಿಂದಾಗಿ ಸಮಾಜದಲ್ಲಿ ಜಾತಿ ತಾಂಡವವಾಡುತ್ತಿತ್ತು. ಮತಪಂಥಗಳನ್ನು ತೊರೆದು ಶೋಷಿತರಾದ ಬಹುಜನರನ್ನು ಒಂದೆಡೆ ತರುವಲ್ಲಿ ಹಗಲಿರುಳು ಶ್ರಮಿಸಿದರು. ಇತಿಹಾಸದ ಅರಿವಿದ್ದ ಶಾಹು ಮಹಾರಾಜರು ವೈದಿಕರ ಕುತಂತ್ರ ನೀತಿಯನ್ನು ಎಚ್ಚರಿಕೆಯಿಂದ ಎದುರಿಸಿದರು.

ಸಾತಾರಾದಲ್ಲಿ ಕಾರ್ಯನಿಮಿತ್ತ ಶಾಹು ಮಹಾರಾಜರು ಠಿಕಾಣಿ ಹೂಡಿದ್ದರು. ಅಲ್ಲಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಬ್ರಾಹ್ಮಣನು ಭೋಜನಪ್ರಿಯ ಎಂಬ ಜನಪ್ರಿಯ ಮಾತಿನಂತೆ ಅಡುಗೆ ತಯಾರಿಕೆ ಕೆಲಸದ ಮೇಲುಸ್ತುವಾರಿಯನ್ನು ವೈದಿಕರೇ ವಹಿಸಿಕೊಂಡಿದ್ದರು. ಶಾಹು ಮಹಾರಾಜರು ತಮ್ಮ ಸ್ನಾನದ ನಂತರ ಊಟದ ತಯಾರಿ ನೋಡಲು ಅಡುಗೆ ಮನೆ ಕಡೆಗೆ ಹೆಜ್ಜೆ ಹಾಕಿದರು. ರಾಜರು ಬರುವುದನ್ನು ಗಮನಿಸಿದ ಬ್ರಾಹ್ಮಣಭಟ್ಟ ತನ್ನ ಪ್ರೀತಿಯ ಬೆಕ್ಕನು ಬಲಗೈಯಲ್ಲಿ ಹಿಡಿದುಕೊಂಡು ಓಡಿ ಬಂದು ಶಾಹು ಮಹಾರಾಜರನ್ನು ತಡೆದು ನೀವು ಒಳಗೆ ಬರಕೂಡದು ನೀವು ಹೊರಗಡೆ ನಿಲ್ಲಬೇಕು ಎಂದು ಹೇಳಿದ. ಯಾಕೆ ಎಂದು ಅರಸರು ಪ್ರಶ್ನೆಮಾಡಿದರು. ಒಂದು ವೇಳೆ ನೀವು ಒಳಗೆ ಬಂದಿದ್ದೇ ಆದರೆ ಮಾಡಿದ ಅಡುಗೆ ಮತ್ತು ಅಡುಗೆ ಮನೆ ಎರಡೂ ಮೈಲಿಗೆಯಾಗುತ್ತದೆ, ಇದರಿಂದ ನಿಮಗೆ ಪಾಪ ಹತ್ತುತ್ತದೆ ಎಂದು ನುಡಿದ. ಈ ಮಾತನ್ನು ಕೇಳಿದ ಮಹಾರಾಜರು ನನ್ನಂತಹವನಿಗೇ ಈ ಗತಿಯಾದರೆ ನನ್ನ ಸಮಾಜದ ಸಾಮಾನ್ಯ ಜನರ ಗತಿಯೇನು? ಬೆಕ್ಕಿಗಿಂತಲೂ ಕಡೆಯಾಯಿತಲ್ಲ ನನ್ನ ಹಾಗೂ ನನ್ನವರ ಬದುಕು ಎಂದು ಆಘಾತಕ್ಕೊಳಗಾದ ರಾಜರು ಜಾತಿ ವ್ಯವಸ್ಥೆ ವಿರುದ್ಧ ಸಿಡಿದದ್ದು ಹೊಸ ಸಮಾಜದ ನಿರ್ಮಾಣದಲ್ಲಿ ತೊಡಗಿದರು.

ಕೊಲ್ಹಾಪುರದ ಕಾಗಲವಾಡಿಯ ಅಪ್ಪಾಸಾಹೇಬ ಘಾಟಗೆ ಹಾಗೂ ರಾಧಾಬಾಯಿ ದಂಪತಿಗಳ ಉದರಲ್ಲಿ ಜನಿಸಿದ ಮಗುವೆ ಶಾಹು ಮಹಾರಾಜ. ಮರಾಠಾ ಸಮುದಾಯದ ಕುಣಬಿ ಜಾತಿಗೆ ಸೇರಿದವರಾಗಿದ್ದರು. ವೈದಿಕ ಪದ್ಧತಿಯ ಬಿಗುವಿನಲ್ಲಿಯೂ ಶಾಹು ಮಹಾರಾಜರು ತಮ್ಮ ನಿಶ್ಚಿತ ಗುರಿಯನ್ನು ಮುಟ್ಟಿದವರು. ಭಾರತೀಯ ಇತಿಹಾಸದಲ್ಲಿ ಶಿವಾಜಿಯ ಹೆಸರು ಚಿರಸ್ಥಾಯಿಯಾದುದು. ಇತಿಹಾಸವಾಗಿ ಉಳಿಯದೆ ಆಧುನಿಕ ಯುಗದ ಅನೇಕ ಮಾನವ ಪ್ರೇಮಿಗಳಿಗೆ ಚಿಂತಕರಿಗೆ, ಸಮಾಜವಾದಿಗಳಿಗೆ ಸ್ಫೂರ್ತಿ ನೀಡುವ ಶಕ್ತಿ ಅವರ ವ್ಯಕ್ತಿತ್ವದಲ್ಲಿದೆ ಎನ್ನುವುದು ವಿಶೇಷ.

ಮುಂದೊಮ್ಮೆ ಮಹಾರಾಜರು ಆರ್ಯ ಸಮಾಜದೆಡೆಗೆ ಆಕರ್ಷಿತರಾದರು. ನದಿಯಲ್ಲಿ ಸ್ನಾನ ಮಾಡಿ ಮಂತ್ರ ಹೇಳಿಕೊಡಿ ಅಂದಾಗ ವೈದಿಕರು ಶೂದ್ರನಿಗೆ ವೇದ ಮಂತ್ರ ಹೇಳುವುದು ಧರ್ಮ ಬಾಹಿರವಾಗುತ್ತದೆ ಎಂದು ತಿರಸ್ಕರಿಸಿದರು. ಶಾಹು ಮಹಾರಾಜ ರಂತೆ ಶಿವಾಜಿ ಮಹಾರಾಜರಿಗೂ ವೈದಿಕರು ಅವಮಾನ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಜ್ಯೋತಿಬಾ ಫುಲೆಯವರನ್ನು ಸಹ ಮದುವೆ ದಿಬ್ಬಣದಿಂದ ಹೊರ ದೂಡಿದ್ದರು. ಈ ಎಲ್ಲ ಪರಿಣಾಮಗಳಿಂದಾಗಿ ಹೊಸದೊಂದು ಯುಗ ಕಾಣುವಂತಾಯಿತು. ಹಾಗೆ ಡಾ. ಅಂಬೇಡ್ಕರ್ ಅವರ ಬದುಕಿನಲ್ಲಿಯೂ ಈ ತರಹದ ಅನೇಕ ಅವಮಾನಗಳು ನಡೆದಿವೆ. ಬಾಲ್ಯದಲ್ಲಿ ಗಾಡಿಯವ ತಳ್ಳಿದ್ದು, ಕ್ಷೌರ ಮಾಡದೆ ಇದ್ದದ್ದೂ, ಜವಾನ ಕಡತವನ್ನು ದೂರದಿಂದ ಎಸೆದದ್ದು, ಹೋಟೆಲಿನಿಂದ ಹೊರದಬ್ಬಿದ್ದು ಹೀಗೆ ಹತ್ತು ಹಲವಾರು ಘಟನೆಗಳನ್ನು ಗಮನಿಸಬಹುದಾಗಿದೆ. ತಮಗಾದ ಎರಡೂ ಅವಮಾನಗಳಿಂದ ಕ್ರೋಧಗೊಂಡ ಶಾಹು ಮಹಾರಾಜರು ವೈದಿಕರ ಈ ಕುತಂತ್ರಗಳನ್ನು ನಿರ್ಮೂಲನಗೊಳಿಸಲು ಯತ್ನಿಸಿದರು.

ಕುತಂತ್ರಿಗಳಾದ ಬ್ರಾಹ್ಮಣರು ಫುಲೆಯವರ ಸತ್ಯಶೋಧಕ ಸಮಾಜದ ಒಟ್ಟು ವಿಚಾರಗಳು ಶಾಹುಮಹಾರಾಜರಿಗೆ ತಲುಪದಂತೆ ನೋಡಿಕೊಂಡಿದ್ದರು. ಆರ್ಯ ಸಮಾಜದ ಢೋಂಗಿ ವಿಚಾರಗಳನ್ನು ತಿಳಿದ ಮಹಾರಾಜರು ಅದರಿಂದ ದೂರಾದರು. ಈ ವೇಳೆಗಾಗಲೇ ಜ್ಯೋತಿಬಾ ಫುಲೆಯವರ ಸತ್ಯಶೋಧಕ ಸಮಾಜದ ಕೆಲವು ಕಾರ್ಯಕರ್ತರು ಮಹಾರಾಜರ ಸಂಪರ್ಕದಲ್ಲಿದ್ದರು. ರೋಗಿ ಬಯಸಿದ್ದೂ ಹಾಲು ವೈದ್ಯ ಹೇಳಿದ್ದೂ ಹಾಲು ಎನ್ನುವಂತೆ ೧೯೧೧ ರಲ್ಲಿ ಸತ್ಯ ಶೋಧಕ ಸಮಾಜವನ್ನು ಪುನರ್ ಸಂಘಟಿಸಿ ಸನಾತನ ವ್ಯವಸ್ಥೆಯ ವಿರುದ್ಧ ಸೆಟೆದು ನಿಂತರು.

ಫುಲೆಯವರ ಸತ್ಯಶೋಧಕ ಸಮಾಜದ ವಿಚಾರಗಳನ್ನು ತಿಳಿದ ಶಾಹು ಮಹಾರಾಜರು ಶೂದ್ರ ಅತಿಶೂದ್ರರ ಬದುಕನ್ನು ಹಸನುಗೊಳಿಸುವಲ್ಲಿ ಮುಂದಾದರು. ಮೌಢ್ಯತೆ, ಸಂಪ್ರದಾಯ, ದೇವರ ಗೊಡ್ಡು ವಿಚಾರಗಳ ಹೆಸರಿನಲ್ಲಿ ಬೌದ್ಧಿಕ ಸಾಮರ್ಥ್ಯವನ್ನು ಹಾಳು ಮಾಡಿದ್ದಲ್ಲದೆ ಅವರನ್ನು ಸೇವಕರಂತೆ ಕಂಡ ವೈದಿಕರ ಕುತಂತ್ರವನ್ನು ಭೇದಿಸಲು ಫುಲೆಯವರ ವಿಚಾರ ಧಾರೆಗಳು ಸೂಕ್ತವೆಂದರಿತರು.

ಅಕ್ಷರ ಸಂಸ್ಕೃತಿಯಿಂದ ಬಹುಸಂಖ್ಯಾತ ಶೂದ್ರರನ್ನು, ದಲಿತರನ್ನು, ಮೇಲಾಗಿ ಮಹಿಳೆಯನ್ನು ದೂರಿಟ್ಟ ವೈದಿಕರ ವಿಚಾರಗಳ ವಿರುದ್ಧ ಶಾಹು ಮಹಾರಾಜರು ದಲಿತರಿಗೆ ಮಹಿಳೆಯರಿಗೆ ಶಿಕ್ಷಣ ಕೊಡಿಸುವ ಸಲುವಾಗಿ ಖಜಾನೆಯ ಹಣವನ್ನು ವಿನಿಯೋಗಿಸ ತೊಡಗಿದರು. ದೇಶಕ್ಕಂಟಿಕೊಂಡ ಹೀನ ಪದ್ಧತಿ ಎಂದರೆ ಅಸ್ಪೃಶ್ಯತೆ. ಈ ಹೀನ ಪದ್ಧತಿಯನ್ನು ಹೋಗಲಾಡಿಸಲು ಶಾಲಾ ಕಾಲೇಜುಗಳ ಪಠ್ಯಕ್ರಮದಲ್ಲಿ ಅಡಕವಾಗಿದ್ದ ಅವಾಸ್ತವ ವಿಷಯಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕಿದರು. ಅಂಧವಿಶ್ವಾಸ ಹುಟ್ಟಿಸುವ ಪಠ್ಯಕ್ರಮವನ್ನು ತೆಗೆಸಿ, ಸತ್ಯ ಹಾಗೂ ಜ್ಞಾನ ಹೆಚ್ಚಿಸುವಂತಹ ಹೊಸ ಹೊಸ ವಿಚಾರಗಳನ್ನು ಪಠ್ಯಕ್ರಮದಲ್ಲಿ ಅಳವಡಿಸುವಂತೆ ಕ್ರಮ ಕೈಗೊಂಡರು. ಬಸವಣ್ಣನವರ ವಚನಗಳಲ್ಲಿ ಜನತೆಗೆ ಅಂಟಿಕೊಂಡಿದ್ದ ಮೌಢ್ಯ

ಹಾಗೂ ಕ್ಷುದ್ರದೇವತಾರಾಧನೆ ಪದ್ಧತಿಗಳನ್ನು ಖಂಡಿಸಿರುವುದನ್ನು ಕಾಣಬಹುದಾಗಿದೆ.

ಸಂಸ್ಥಾನದಲ್ಲಿ ಶಾಲೆಗಳ ನಿರ್ಮಾಣ ಕೈಗೊಂಡರು. ಅಧ್ಯಕ್ಷ ಪುರೋಹಿತ ಶಿಕ್ಷಕರನ್ನು ಕಿತ್ತು ಹಾಕಿದರು. ಗುಡಿ ಗುಂಡಾರದ ಆದಾಯಗಳನ್ನು ಶಿಕ್ಷಣದ ಪ್ರಗತಿಗಾಗಿ ಖರ್ಚಾಗುವಂತೆ ನೋಡಿಕೊಂಡರು. ಶಿಕ್ಷಣ ಕರ, ಗ್ರಂಥಾಲಯ, ಅನುದಾನ ಬುಕ್ ಬ್ಯಾಂಕ್, ಮಿಲಿಟರಿ ಶಿಕ್ಷಣ, ತಾಂತ್ರಿಕ ಕಾಲೇಜು ಈ ಮುಂತಾದ ಯೋಜನೆಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಬೆಳೆಸಿದರು. ಮಹಿಳೆಯರಿಗೆ ಶಿಕ್ಷಣ ನೀಡುವ ಸಲುವಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡರು. ದಲಿತ ವಿದ್ಯಾರ್ಥಿನಿಯರಿಗಾಗಿ, ಊಟ ವಸತಿ ವೆಚ್ಚವನ್ನು ಸಂಸ್ಥಾನದ ವತಿಯಿಂದ ಭರಿಸಿದರು. ಉತ್ತಮ ಶಿಕ್ಷಕರ ಅವಶ್ಯಕತೆಯನ್ನರಿತು ೧೯೨೧ರಲ್ಲಿ ಶಿಕ್ಷಣ ತರಬೇತಿ ಕೇಂದ್ರವನ್ನು ತೆರೆದರು. ೧೯೧೨ ರಲ್ಲಿ ವತನದಾರಿ ಶಿಕ್ಷಕರ ಯೋಜನೆ ಮತ್ತು ೧೯೧೭ರಲ್ಲಿ ಪಗಾರಿ ಶಿಕ್ಷಕರ ಯೋಜನೆಗಳನ್ನು ಜಾರಿಗೆ ತಂದರು. ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡಲು ೧೯೧೭ ರಲ್ಲಿ ಘೋಷಿಸಿದರು. ೧೯೨೦ ರಲ್ಲಿ ಮೆಟ್ರಿಕ್ ಪರೀಕ್ಷಾ ಕೇಂದ್ರಗಳನ್ನು ಶುರು ಮಾಡಿದರು (ಡಾ. ತೇಜಸ್ವಿ ಕಟ್ಟೀಮನಿ). ದೇಶಕ್ಕೆ ಅಂಟಿಕೊಂಡಿರುವ ಜಾತಿಪದ್ಧತಿ ನಿರ್ಮೂಲನೆ ಆಗಬೇಕಾದರೆ ತುಳಿತಕ್ಕೊಳಗಾದ ವರ್ಗದಿಂದಲೇ ಪ್ರತಿಭಟನೆ ಬರಬೇಕೆಂದು ಚಿಂತಿಸಿದರು. ಅವರಿಗೆ ಶಿಕ್ಷಣ ನೀಡುವುದರ ಮೂಲಕ ಆ ನಿಟ್ಟಿನಲ್ಲಿ ಅವರಲ್ಲಿ ಅರಿವು ಮೂಡಿಸಿದವರು ಶಾಹು ಮಹಾರಾಜರು, ಹೀಗೆ ಅವರನ್ನು ಜಾಗೃತರನ್ನಾಗಿ ಮಾಡಿದವರು.

ಡಾ॥ ಬಾಬಾ ಸಾಹೇಬ ಅಂಬೇಡ್ಕರ್ ಅವರ ವಿದ್ವತ್ತು ಮತ್ತು ಪ್ರತಿಭೆಯ ಬಗ್ಗೆ ಕೇಳಿ ತಿಳಿದ ಶಾಹುಮಹಾರಾಜರು ಸ್ವತಃ ಅಂಬೇಡ್ಕರ್ ಅವರನ್ನು ಕಂಡು (೧೯೨೦ ದತ್ತೂಬಾ ಪವಾರರು ಜೊತೆಗಿದ್ದರು) ಸಾಮಾಜಿಕ ಅಸಮಾನತೆಯ ಕಳವಳಕಾರಿಯಾದ ಅನೇಕ ವಿಷಯಗಳನ್ನು ಕೇಳಿ ತಿಳಿದು ಚರ್ಚಿಸಿ ದುಃಖಿತರಾದರು. ಬಾಬಾಸಾಹೇಬರು ಪ್ರಾರಂಭ ಮಾಡಲಿಚ್ಚಿಸಿದ್ದ 'ಮೂಕನಾಯಕ' ಪತ್ರಿಕೆಗೆ ಎಲ್ಲ ನೆರವು ನೀಡಿದರು. ಅರಸೊತ್ತಿಗೆಯ ಸುಖವನ್ನು ಬದಿಗಿಟ್ಟ ಶಾಹು ಮಹಾರಾಜರು ತಮ್ಮ ಜೀವಿತದುದ್ದಕ್ಕೂ ಶೋಷಿತರ ಉದ್ಧಾರಕ್ಕಾಗಿ ಅವಿರತವಾಗಿ ದುಡಿದರು. ದಲಿತರಿಗೆ ಕೊಟ್ಟ ಮೀಸಲಾತಿಯಿಂದ ಬೇಸತ್ತ ಬ್ರಾಹ್ಮಣರು ಶಾಹು ಮಹಾರಾಜರನ್ನು ದೇಶ ದ್ರೋಹಿ ಎಂದು ಜರಿದರು. ಬ್ರಿಟಿಷರ ಗುಲಾಮ, ಭಿಕಾರಿ ಎಂದು ಕರೆದರು.

ಈ ದೇಶದ ಧರ್ಮಾಂಧರ ಪ್ರಮುಖ ನಾಯಕರೆಂದರೆ ಲೋಕಮಾನ್ಯ ತಿಲಕರು. ಇವರನ್ನು ಕಟ್ಟಾ ಹಿಂದೂವಾದಿ ಅಥವಾ ಬ್ರಾಹ್ಮಣವಾದಿ ಎಂದು ಕರೆದರೆ ತಪ್ಪಾಗಲಾರದು. ಮಹಾರಾಜರ ಕುರಿತು ತಮ್ಮ ಕೇಸರಿ ಪತ್ರಿಕೆಯಲ್ಲಿ ಲೋಕ ವಿರೋಧಿ, ಬ್ರಾಹ್ಮಣ ದ್ರೋಹಿ ಎಂದು ಅಪಪ್ರಚಾರ ಮಾಡಿದರು. ತಂದೆಯ ಆಡಳಿತ ಕಾಲದಲ್ಲಿ ನೂರು ಜನ ಬ್ರಾಹ್ಮಣರು ಮಂತ್ರಿಗಳಿದ್ದುದನ್ನು ಅರಿತ ಶಾಹು ಮಹಾರಾಜರು ತಮ್ಮ ಆಡಳಿತದಲ್ಲಿ ಅವರ ಹುದ್ದೆಗಳನ್ನು ಕಡಿತಗೊಳಿಸಿದರು. ರೈತರು, ಇತರ ಜಾತಿಯವರು ಶಾಸನ ಸಭೆಗೆ ಆರಿಸಿ ಹೋದಾಗ ಎಲ್ಲ ಜಾತಿಗಳವರಿಗೆ ಅವಕಾಶ ಸಿಗುತ್ತಿರುವುದನ್ನು ಕಂಡು ತಿಲಕರು ಕ್ಷೋಭೆಗೊಳಗಾದರು. ಬ್ರಾಹ್ಮಣವಾದಿ ತಿಲಕರು ಶಾಹು ಮಹಾರಾಜರ ಸಾಧನೆ, ಪ್ರಗತಿಯನ್ನು ಸಹಿಸದೆ 'ಶಾಹು ಮಹಾರಾಜಕಾ ರಾಜ್ ಧೇಡೊಂಕಾ ರಾಜ್ ಹೈ'ಎಂದು ಅವಹೇಳನ ಮಾಡಿದರು. ಈ ಮಾತು ಅವರ ಮತೀಯವಾದಕ್ಕೆ ಹಿಡಿದ ಕನ್ನಡಿ. ಬ್ರಾಹ್ಮಣರು ಮಾತ್ರ ಉನ್ನತಿ ಸಾಧಿಸಬೇಕು ಸಂಸತ್ತಿನ ಹಾಗೂ ಶಾಸನ ಸಭೆಗಳ ಒಡೆಯರಾಗಬೇಕೆಂಬ ಹುಚ್ಚು ಹಂಬಲ ಅವರದಾಗಿತ್ತು.

ಡಾ॥ ಬಾಬಾಸಾಹೇಬ ಅಂಬೇಡ್ಕರ್ ಅವರ ಹಿಂದು ಕೋಡ್‌ಬಿಲ್ ಶಾಹು ಮಹಾರಾಜರ ಹಿಂದು ನೀತಿಸಂಹಿತೆ ಆಧರಿಸಿರುವಂತಹದ್ದು ಎನ್ನುವುದು ಗಮನಾರ್ಹ. ಈ ನಿಯಮವನ್ನು ೧೯೨೦ರಲ್ಲಿ ತಮ್ಮ ಸಂಸ್ಥಾನದಲ್ಲಿ ಶಾಹು ಮಹಾರಾಜರು ಜಾರಿಗೆ ತಂದಿದ್ದರು. ನಾಗಪೂರದ ಸಮಾರಂಭವೊಂದರಲ್ಲಿ ಶಾಹು ಮಹಾರಾಜರು 'ಡಾ॥ ಬಾಬಾಸಾಹೇಬ ಅಂಬೇಡ್ಕರ್ ಅವರು ಅಸ್ಪೃಶ್ಯರ, ಶೋಷಿತರ, ಬಡವರ ಹಿಂದುಳಿದವರ ಸಂರಕ್ಷಣೆ ಮಾಡುವರೆಂದು ನಾನು ನಂಬಿದ್ದೇನೆ. ಶತಮಾನಗಳಿಂದ ಉಳಿದುಕೊಂಡು ಬಂದ ಜಾತಿ ಪದ್ಧತಿಯನ್ನು ನಿರ್ಮೂಲನ ಮಾಡಲು ಅವರು ಸರ್ವಶಕ್ತರೆಂದು ನನಗನಿಸಿದೆ'. ಎಂದು ನೆರೆದ ಸಭೆಯಲ್ಲಿ ಪ್ರಕಟಿಸಿದರು. ಈ ಸಮ್ಮೇಳನದಲ್ಲಿ ಡಾ॥ ಅಂಬೇಡ್ಕರ್ ಅವರು ಮುಖ್ಯ ಅತಿಥಿಯಾಗಿದ್ದರು. ಇನ್ನು ಮುಂದೆ ಸಾಮಾಜಿಕ ಪರಿವರ್ತನೆಯ ಚಳವಳಿಯನ್ನು ಡಾ॥ ಅಂಬೇಡ್ಕರ್ ಅವರು ಮುನ್ನಡೆಸುತ್ತಾರೆ ಎಂದು ಘೋಷಿಸಿದರು. ತಮ್ಮ ಹೆಗಲ ಮೇಲಿದ್ದ ಸಾಮಾಜಿಕ ಚಳವಳಿಯ ಜವಾಬ್ದಾರಿಯನ್ನು ಡಾ॥ ಅಂಬೇಡ್ಕರ್ ಅವರಿಗೆ ವಹಿಸಿಕೊಡುವುದರ ಮೂಲಕ ಬದುಕನ್ನು ಸಾರ್ಥಕಪಡಿಸಿಕೊಂಡರು.

ಶಾಹು ಮಹಾರಾಜರು ಆಧುನಿಕ ಯುಗದ ಸಂದರ್ಭದಲ್ಲಿ ಮಹಿಳೆಯರ, ದಲಿತರ ಅಭಿವೃದ್ಧಿಗಾಗಿ ಸತತವಾಗಿ ಪ್ರಯತ್ನಿಸಿದರು. ಅಂಬೇಡ್ಕರ್ ಅವರ ಹೋರಾಟಕ್ಕೆ ಬೆಂಬಲವಾಗಿ ನಿಂತರೆ ಬಸವಣ್ಣ, ಮಾದರ ಚೆನ್ನಯ್ಯ, ಧೂಳಯ್ಯ, ಸಮಗಾರ ಹರಳಯ್ಯರಂತಹವರನ್ನು ಬಾಚಿ ತಬ್ಬಿಕೊಂಡರು. ಅವರಲ್ಲಿ ಆತ್ಮ ವಿಶ್ವಾಸ ತುಂಬಿದರು. ಅವರ ವೃತ್ತಿಯ ಕುರಿತು ಗೌರವದಿಂದ ಮಾತಾಡಿದರು. ಹರಳಯ್ಯ ದಂಪತಿಗಳ ಪಾದರಕ್ಷೆಗಳನ್ನು ತಲೆಯ ಮೇಲಿಟ್ಟುಕೊಂಡು ಗೌರವಿಸಿದರು. ಮಾದಾರ ಚೆನ್ನಯ್ಯನ ಮನೆಯ ಅಂಬಲಿಯನ್ನು ಕುಡಿದರು. ಈ ಕಾರ್ಯವನ್ನು ಕಂಡ ವೈದಿಕರು ಸಹಿಸದಾದರು. ಬಿಜ್ಜಳನಲ್ಲಿ ದೂರನ್ನು ಕೊಟ್ಟರೂ ಬಸವಣ್ಣನ ಎದೆಗುಂದದೆ ಅಸ್ಪೃಶ್ಯರ ಸೇವೆ ಮಾಡಿದರು. ಈ ಅಂಶಗಳನ್ನು ಗಮನಿಸಿದಾಗ ಬಸವಣ್ಣ ಹಾಗೂ ಶಾಹು ಮಹಾರಾಜರು ತುಡಿತ ಒಂದೆಯಾಗಿರುವುದು ಹೆಮ್ಮೆ ಪಡುವ ವಿಷಯವಾಗಿದೆ.

ಬಸವಾದಿ ಶರಣರ ಸಾಮಾಜಿಕ ಕಾರ್ಯವನ್ನು ವಿಪ್ರಮೂಲದವರು ಎಂದೂ ಪ್ರೋತ್ಸಾಹಿಸಲಿಲ್ಲ. ಅದೇ ರೀತಿ ಶಾಹು ಮಹಾರಾಜರ ಸಮಾಜಮುಖಿ ಕಾರ್ಯಗಳನ್ನು ತಿಲಕರಾದಿಯಾಗಿ ಎಲ್ಲರೂ ವಿರೋಧಿಸಿರುವುದು ಜನಜನಿತವಾಗಿದೆ. ಇಂಥವರು ಎಲ್ಲ ಕಾಲಕ್ಕೂ ಎಲ್ಲ ಸಂದರ್ಭದಲ್ಲೂ ಕಾಣಸಿಗುತ್ತಾರೆ.

ಬಸವಣ್ಣನ ಕಾಲದ ವಿಪ್ರರಂಥವರು, ಶಾಹು ಮಹಾರಾಜರ ಕಾಲದ ತಿಲಕರಂಥ ಅನೇಕ ಫ್ಯಾಸಿಸ್ಟರು, ಸಂಘ ಪರಿವಾರಗಳು, ದಲಿತರ ಪ್ರಗತಿಯನ್ನು ವಿರೋಧಿಸುವವರಾಗಿದ್ದಾರೆ. ದಲಿತರನ್ನು, ಶೋಷಿತರನ್ನು ಶೋಷಣೆ ಮಾಡುವಲ್ಲಿ ಅವಮಾನಿಸುವಲ್ಲಿ ಕೃತಾರ್ಥತೆಯನ್ನು ಹೊಂದುತ್ತಿದ್ದಾರೆ. ರಾಮ ಮಂದಿರದ ಹೆಸರಿನಲ್ಲಿ ದೇಶದ ಶಾಂತಿಯನ್ನು ಕದಡಿ ಗೋದ್ರಾ ದಹನದಲ್ಲಿ ಅನ್ನವನ್ನು ಬೇಯಿಸಿ ತಿನ್ನುತ್ತಿರುವಂಥ ಮತಾಂಧರಿಗೆ ಬಸವಣ್ಣ, ಶಾಹು ಮಹಾರಾಜ, ಫುಲೆಯಂತಹವರ ವಿಚಾರಗಳನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ.

'ಬಹುಜನ ಹಿತಾಯ ಬಹುಜನ ಸುಖಾಯ' ಎನ್ನುವುದು ಸಂಪೂರ್ಣ ಅರ್ಥ ಪಡೆಯುವವರೆಗೂ ಈ ರಾಷ್ಟ್ರದಲ್ಲಿ ಶಾಂತಿ ನೆಲೆಯೂರಿ ನಿಲ್ಲುವುದಿಲ್ಲ. ಶಾಂತಿ ನೆಲೆಸಬೇಕಾದಲ್ಲಿ ಜಾತೀಯತೆ ನಿರ್ಮೂಲನೆ ಮಾಡುವಲ್ಲಿ ಶೋಷಿತ ಹಾಗೂ ಶೂದ್ರವರ್ಗದವರಿಂದ ನಿರಂತರವಾದ ಸಮರ ನಡೆಯಬೇಕು. ಮತ್ತು ಶೂದ್ರ ಹಾಗೂ ಕೆಳವರ್ಗದವರು ಸಂಘಟಿತರಾಗಿ ಸುಶಿಕ್ಷಿತರಾಗಬೇಕು ಬುದ್ಧ, ಬಸವ, ಶಾಹು ಮಹಾರಾಜ ಹಾಗೂ ಅಂಬೇಡ್ಕರರ ಜೀವಿತದ ಇತಿವೃತ್ತವನ್ನು ಓದಿ ಮನನ ಮಾಡಿಕೊಳ್ಳಬೇಕು ಅವರು ನಡೆದ ಮಾರ್ಗದಲ್ಲಿ ನಡೆಯಲು ಯತ್ನಿಸಬೇಕು, ಅವರು ಹೇಳಿದಂತೆ ಶಿಕ್ಷಣವೊಂದೇ ಅಭ್ಯುದಯದ ದಾರಿ, ಅಜ್ಞಾನದ ಪರದೆಯನ್ನು ಹರಿಯುವ ಸಾಧನವೆಂದು ಅರಿಯಬೇಕು. ಅಂದಾಗ ಸಮಾಜದಲ್ಲಿ ಸಮಾನತೆ ಬರುವುದು, ಸಮೃದ್ಧಿ ನೆಲೆಸುವುದು. □

(೨೯ನೇ ಪುಟದಿಂದ)

ವಾರ್ಷಿಕ ಯೋಜನೆಯಲ್ಲಿ (೧೯೯೨-೯೭) ಸ್ಪಷ್ಟವಾಗಿ ಧ್ವನಿತಗೊಂಡಿದೆ. ೯ನೇ ಯೋಜನೆ (೧೯೯೭-೨೦೦೨) ನೀರನ್ನು ಸರ್ಕಾರ ಜನರಿಗೆ ಪೂರೈಸಬೇಕು ಎಂಬ ದಾರಿ ಬಿಟ್ಟು ಅದೊಂದು ಕೊರತೆ ಇರುವ **ಆರ್ಥಿಕ** ಸಂಪನ್ಮೂಲ ಎಂದು ಪರಿಗಣಿಸಿತು. ೧೯೮ರ ರಾಷ್ಟ್ರೀಯ ಜಲ ಕಾರ್ಯ ನೀತಿ ನೀರನ್ನು ಸಾಮಾಜಿಕ ಒಳಿತಿಗಾಗಿ ಇರುವ ಸಂಪನ್ಮೂಲ ಎಂಬುದರ ಬದಲಾಗಿ ಬೆಲೆ ನಿಗದಿ ಪಡಿಸಬಹುದಾದ ಸಂಪನ್ಮೂಲ ಎಂದು ಪರಿಗಣಿಸಿ ಸರಕಾರವನ್ನು ಪೂರೈಕೆದಾರನ ಬದಲು ಮಧ್ಯವರ್ತಿಯ ಜಾಗದಲ್ಲಿರಿಸಿ ಖಾಸಗಿ ಕ್ಷೇತ್ರದ ಭಾಗವಹಿಸುವಿಕೆಗೆ ಒತ್ತು ನೀಡಿದೆ. ಎಂ.ಎನ್.ಸಿ ಹಾಗೂ ಟಿ.ಎನ್.ಸಿಗಳ ಕೊಳ್ಳಿಗೆ ಜಲ ಸಂಪನ್ಮೂಲವನ್ನು ಮುಕ್ತವಾಗಿ ತೆರೆದಿಟ್ಟ ಈ ನೀತಿಯ ಪರಿಣಾಮ ಈಗಾಗಲೇ ವಿವಿಧ ರೀತಿಗಳಲ್ಲಿ ಪ್ರಕಟಗೊಂಡಿದೆ.

ಆದರೆ ಇದಕ್ಕೆ ನ್ಯಾಯಾಂಗದ ಸಮರ್ಥನೆಯೂ ದೊರೆತಿರುವುದು ದುರಂತದ ಗಂಭೀರತೆಯನ್ನು ಇನ್ನಷ್ಟು ಹೆಚ್ಚಿಸಿದೆ. ಕೇರಳ ಹೈಕೋರ್ಟಿನ ವಿಭಾಗೀಯ ಪೀಠ ೨೦೦೫ರ ಎಪ್ರೀಲ್ ೭ರಂದು ನೀಡಿದ ತೀರ್ಪು ಹೀಗಿದೆ: ಕೋಕಾಕೋಲಾ ಕಂಪನಿ ದಿನಕ್ಕೆ ೫ಲಕ್ಷ ಲೀಟರಗಳಷ್ಟು ನೀರನ್ನು ಬಳಸಿಕೊಂಡು ಪ್ಲಾಚಿಮಾಡ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಜಲಕ್ಷಾಮಕ್ಕೆ ಕಾರಣವಾಗಿತ್ತು. ಆದರೂ, ಕೇಂದ್ರ ಅಂತರ್ಜಲ ಮಂಡಳಿ ಹಾಗೂ ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ನೀರಿನ ದುರ್ಬಳಕೆಯ ಬಗ್ಗೆ ವರದಿ ಸಲ್ಲಿಸಿದಾಗ್ಯೂ ತಾನು ನೇಮಿಸಿದ ತಜ್ಞರ ಸಮಿತಿಯ ವರದಿಯ ಆಧಾರದಲ್ಲಿ ಹೈಕೋರ್ಟ್ ಪೆರುಮಟ್ಟಿ ಪಂಚಾಯಿತಿ ಕಂಪನಿಯ ಲೈಸೆನ್ಸ್ ಅನ್ನು ರದ್ದುಮಾಡಿದ ಆದೇಶವನ್ನು ಅಮಾನ್ಯ ಮಾಡಿದೆ.

ಆಹಾರ ಹಾಗೂ ಭೂಸಂಪತ್ತಿನ ಜೊತೆಗೆ ಜನ ಈಗ ನೀರಿನಿಂದಲೂ ವಂಚಿತರಾಗುತ್ತಾರೆ.

ಒಡೆತನಕ್ಕೆ ಕೇಡಿಲ್ಲವಾಗಿ
ಎನ್ನ ತೊತ್ತುತನಕ್ಕೆ ಕೇಡಿಲ್ಲಾ.!? □

ದು:ಖದ ಅನುಸಂಧಾನವೇ ಕಾವ್ಯ-ಕಲೆಗಳ ಉದ್ಯೋಗ

ಡಾ. ಎಸ್. ನಟರಾಜ್ ಬೂದಾಳು

ಕೆ.ಟಿ. ಶಿವಪ್ರಸಾದ್ ಅವರ ಈ ಕಲಾಕೃತಿಯು ಬೌದ್ಧ ಮೀಮಾಂಸೆಯ ಪ್ರಧಾನ ಲಕ್ಷಣಗಳನ್ನು ವಿವರಿಸಲು ಒಂದು ಒಳ್ಳೆಯ ಉದಾಹರಣೆ. "Lock your unwanted memories" ಎಂಬ ಹೆಸರಿನ ಈ ಕಲಾಕೃತಿಯು ಒಂದು ಚೌಕಟ್ಟಿರುವ ಬಾಗಿಲು. ಅದಕ್ಕೆ ಬೀಗ ಹಾಕುವ ಮೂಲಕ ನಮಗೆ ಸೇರದ ನೆನಪುಗಳನ್ನು ಬಂಧಿಸಬಹುದೆಂಬುದು ಇದರ ರಚನಾವಿಧಾನ. ಅದು ಬೌದ್ಧ ಕಲಾ ಮೀಮಾಂಸೆಯನ್ನು ಸೂತ್ರ ರೂಪದಲ್ಲಿ ಮಂಡಿಸುವ ಕೃತಿಯೆಂದೇ ನನಗೆ ಅನ್ನಿಸಿದೆ. ನೋಡುಗರೇ ತಮಗೆ ಬೇಕಿಲ್ಲದ ನೆನಪನ್ನು ಇಟ್ಟು ಬಾಗಿಲಿಗೆ ಬೀಗ ಹಾಕುವುದರ ಮೂಲಕವೇ ಈ ಕೃತಿ ನಿರ್ಮಾಣವಾಗಿದೆ. ಮೊದಲನೆಯದಾಗಿ, ತನಗೆ ಬೇಕಿಲ್ಲದ ನೆನಪೊಂದನ್ನು ಇಟ್ಟು ಬೀಗ ಹಾಕುವ ಮೂಲಕ ನೋಡುಗನೇ ಈ ಕೃತಿಯ ರಚನಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾನೆ. ಯಾವುದೇ ಒಂದು ಕಲಾಕೃತಿ, ಅದು ಸಾಹಿತ್ಯ ಕೃತಿಯಾಗಲೀ, ಸಂಗೀತ ಕೃತಿಯಾಗಲೀ, ಪೇಂಟಿಂಗ್ ಆಗಲೀ, ಅನುಸಂಧಾನ ಮಾಡಬಲ್ಲ ಸಹೃದಯಿ, ಅದರ ಸಂದರ್ಭ ಮತ್ತು ಕಲಾವಿದನ 'ಸಾಪೇಕ್ಷ' ಕಲಾಕೃತಿ – ಈ ಮೂರರ ಸಂಬಂಧದಲ್ಲಿ ಉಂಟಾಗಲು ಸಾಧ್ಯವೇ ಹೊರತು ಏಕಾಕಿಯಾಗಿ ಉಂಟಾಗಲು ಸಾಧ್ಯವೇ ಇಲ್ಲ. ಕಲಾವಿದ ಒಂದು ಸಾಪೇಕ್ಷ ಕೃತಿಯನ್ನು ಸಿದ್ಧಪಡಿಸಬಲ್ಲನೇ ಹೊರತು ಅಂತಿಮ ಕೃತಿಯನ್ನಲ್ಲ. ಮತ್ತು ಎಲ್ಲ ಕೃತಿಗಳೂ ಆಗುತ್ತಲೇ ಇರುತ್ತವೆಯೇ ಹೊರತು ಆಗಿ ಇರುವುದಿಲ್ಲ. ತನಗೆ ಬೇಡದ ನೆನಪೊಂದನ್ನು ಇಟ್ಟು ಬೀಗ ಹಾಕುವ ಮೂಲಕ. ಈ ತಾತ್ವಿಕತೆಯನ್ನು ಹೇಳುವುದರ ಜೊತೆಗೆ ಈ ಕೃತಿ ನೇರವಾಗಿ ದು:ಖದ ಅನುಸಂಧಾನಕ್ಕೆ ತೊಡಗುತ್ತದೆ. ಪ್ರತಿಯೊಬ್ಬ ನೋಡುಗನಿಗೂ ಈ ಎಲ್ಲ ಅಂಶಗಳೂ ವ್ಯಕ್ತವಾಗಿಯೇ ಗೋಚರಿಸುತ್ತವೆ. ಹಾಗಾಗಿ ಇದು ಒಂದು ಉತ್ತಮ ಕಲಾಕೃತಿಯೂ ಹೌದು ಹಾಗೆಯೇ ಕಲಾಮೀಮಾಂಸೆಯನ್ನು ಸೂತ್ರ ರೂಪದಲ್ಲಿ ಮಂಡಿಸುವ ಕೃತಿಯೂ ಹೌದು. ಇಲ್ಲಿ ಕಲಾವಿದ ಕೂಡ ಪಕ್ಕಕ್ಕೆ ಸರಿದು ನಿಲ್ಲುವ ಮೂಲಕ ತನ್ನನ್ನು ತಾನೇ ನಿರಚನೆಗೊಳಿಸಿಕೊಳ್ಳುತ್ತಾನೆ.ಈ ಕೃತಿ ಅನೇಕ ತಾತ್ವಿಕ ಪರಿಕಲ್ಪನೆಗಳನ್ನು ಮರು 'ಓದಿಗೆ' ಒಡ್ಡುತ್ತದೆ.ಮೊದಲನೆಯದು, ಕಲಾಕೃತಿಯೊಂದರ ಬಗೆಗಿನ ನಿಲುವನ್ನು



ಯಾವುದೇ ಒಂದು ಕಲಾಕೃತಿ, ಅದು ಸಾಹಿತ್ಯ ಕೃತಿಯಾಗಲೀ, ಸಂಗೀತ ಕೃತಿಯಾಗಲೀ, ಪೇಂಟಿಂಗ್ ಆಗಲೀ, ಅನುಸಂಧಾನ ಮಾಡ ಬಲ್ಲ ಸಹೃದಯಿ, ಅದರ ಸಂದರ್ಭ ಮತ್ತು ಕಲಾವಿದನ 'ಸಾಪೇಕ್ಷ' ಕಲಾಕೃತಿ - ಈ ಮೂರರ ಸಂಬಂಧದಲ್ಲಿ ಉಂಟಾಗಲು ಸಾಧ್ಯವೇ ಹೊರತು ಏಕಾಕಿಯಾಗಿ ಉಂಟಾಗಲು ಸಾಧ್ಯವೇ ಇಲ್ಲ. ಕಲಾವಿದ ಒಂದು ಸಾಪೇಕ್ಷ ಕೃತಿಯನ್ನು ಸಿದ್ಧಪಡಿಸಬಲ್ಲನೇ ಹೊರತು ಅಂತಿಮ ಕೃತಿಯನ್ನಲ್ಲ. ಮತ್ತು ಎಲ್ಲ ಕೃತಿಗಳೂ ಆಗುತ್ತಲೇ ಇರುತ್ತವೆಯೇ ಹೊರತು ಆಗಿ ಇರುವುದಿಲ್ಲ. ತನಗೆ ಬೇಡದ ನೆನಪೊಂದನ್ನು ಇಟ್ಟು ಬೀಗ ಹಾಕುವ ಮೂಲಕ ಈ ತಾತ್ವಿಕತೆಯನ್ನು ಹೇಳುವುದರ ಜೊತೆಗೆ ಈ ಕೃತಿ ನೇರವಾಗಿ ದು:ಖದ ಅನುಸಂಧಾನಕ್ಕೆ ತೊಡಗುತ್ತದೆ.

ಕುರಿತದ್ದು. ಇಲ್ಲಿ ಎರಡು ಕವಲುಗಳಿವೆ. ಒಂದು, ಯಾವುದೇ ಕಾವ್ಯ ಅಥವಾ ಕಲಾಕೃತಿಯ ಒಂದು ಮೂಲಪಠ್ಯವಿದೆ; ಆ ಮೂಲ ಒಂದೇ ಇರುವುದರಿಂದ ಅದು ಬದಲಾಯಿಸಲಾಗದ್ದು; ಕಲಾಕೃತಿಯೆನ್ನುವುದು ಈಗಾಗಲೇ ಸೃಷ್ಟಿಯಾಗಿ 'ಇದೆ'. ಈಗಾಗಲೇ ಇರುವ ಮೂಲವನ್ನು ಒಪ್ಪಿಕೊಳ್ಳುವುದಷ್ಟೇ ನೋಡುಗನ ಕೆಲಸ. ಅವನು ನೋಡಬೇಕಾದ ಕೃತಿ ಅವನಿಂದ 'ಹೊರಗಿದೆ'. ಈಗಾಗಲೇ ಇರುವ ಮೂಲವನ್ನು ಒಪ್ಪಿಕೊಳ್ಳಿ; ಅದಿರುವಂತೆಯೇ ಓದಿ/ನೋಡಿ ದಕ್ಕಿಸಿಕೊಳ್ಳಿ ಮತ್ತು ಮೂಲವನ್ನು ಸವಿಯುವ ಆನಂದವೇ ಅದರ ಗಂತವ್ಯ. ಹೀಗೆ ಮೂಲದ ಜೊತೆಗೆ ಒಂದಾಗುವುದರಿಂದ, ನಿಮ್ಮನ್ನು ಕವಿದಿರುವ ವಿಸ್ಮೃತಿಯು ಸರಿದು 'ಆ ಈಶ್ವರ ನಾನೇ' ಎಂಬ ನೆನಪು ಮರುಕಳಿಸುತ್ತದೆ. ಇದು ಸ್ಥೂಲವಾಗಿ ಭಾರತೀಯ ಎಂದು ಕರೆದುಕೊಳ್ಳುವ ಸಂಸ್ಕೃತ ಕಾವ್ಯ ಮೀಮಾಂಸೆಯ ನಿಲುವು.

ಸೌಂದರ್ಯಾನುಭವವನ್ನು ಕುರಿತಾದ ಅದರ ನಿಲುವು ಕೂಡ ಇದೇ ರೀತಿಯದ್ದು. " ಕವಿಯು ಲೋಕ ವಸ್ತುವಿನ ಮಧುರ ಸಮ್ಮಿಳನದಲ್ಲಿ ಪಡೆದ ಆನಂದಾನುಭವವನ್ನು ಕಲಾಕೃತಿಯನ್ನಾಗಿ ಎಂದರೆ ಸೌಂದರ್ಯದ ವಸ್ತುವನ್ನಾಗಿ ರೂಪಿಸುತ್ತಾನೆ. ಈ ಸೌಂದರ್ಯಾನುಭವದ ಫಲವಾದ ಕಲಾಕೃತಿ ಕವಿಯು ಪ್ರೇಮಪೂರ್ವಕವಾಗಿ ವಸ್ತುವಿನೊಂದಿಗೆ ಪಡೆದ ಆತ್ಮಸಂಗದ ಮಧುರಫಲವಾಗಿ ಆನಂದದಾಯಕವಾಗುತ್ತದೆ. ಕವಿಯ ಆನಂದ ಕೃತಿಯಾಗಿ ಮೂರ್ತಗೊಂಡು ಸೌಂದರ್ಯದ ವಸ್ತುವಾಯಿತು. **ಸೌಂದರ್ಯ ಎಂದರೆ ಆನಂದದ ಮೂರ್ತರೂಪವೇ.**ಈ ಸುಂದರ ಕಲಾಕೃತಿಯಿಂದ ಸಹೃದಯರಾದವರು ಮತ್ತೆ ಆನಂದವನ್ನು ಪಡೆಯುತ್ತಾರೆ.

ಕವಿ ನಿರ್ಮಿತವಾದ ಕಲಾವಸ್ತುವಿನಿಂದ ಸಹೃದಯರು ಆನಂದವನ್ನು ಪಡೆಯಲು ಕಾರಣ ಅದು ಕವಿಯ ಆನಂದದ ಮೂರ್ತರೂಪ ಎನ್ನುವ ಅಂಶದಿಂದ ನಾವು ಇಡೀ ಸೃಷ್ಟಿಯ ಸೌಂದರ್ಯವು ನೀಡುವ ಆನಂದದ ರಹಸ್ಯವನ್ನು ಊಹಿಸಬಹುದು. ನಮ್ಮ ಋಷಿಗಳು, ಈ ಸೃಷ್ಟಿ ಆನಂದದಿಂದ ಮೂಡಿದೆ, ಆನಂದದಲ್ಲೇ ಬದುಕಿದೆ, ಆನಂದದಲ್ಲೇ ಮುಳುಗುತ್ತದೆ – ಎಂಬ ಅಮೋಘ ತತ್ತ್ವವನ್ನು ಹೇಳಿದರು." (ಜಿ.ಎಸ್. ಶಿವರುದ್ರಪ್ಪ: ಸೌಂದರ್ಯ ಸಮೀಕ್ಷೆ: ೧೯೭೦ ಪುಟ ೧೭)

ಶಕ್ತಿ ಸಂಚಯನ ಮತ್ತು ಶಕ್ತಿ ಸಂಚಾಲನ ಇದೇ ಸೃಷ್ಟಿವ್ಯಾಪಾರದ ಲಕ್ಷಣವೆಂಬಂತೆ ತೋರುತ್ತದೆ. ಆನಂದ ಮತ್ತು ಸೌಂದರ್ಯವೆಂದರೆ ಇದೇ. ಯಾವ ಆನಂದ ಸಂಚಯನಗೊಂಡಾಗ ಸೌಂದರ್ಯವಾಗಿ, ಸಂಚಾಲನಗೊಂಡಾಗ ಆನಂದವಾಗುವುದೋ ಅದರ ಅನಂತ ವಿನ್ಯಾಸಗಳೇ ಈ ರೂಪಸೃಷ್ಟಿ. ಹೂವಾಗಿ ಸಂಚಯನಗೊಂಡ ಆನಂದ ಸುಂದರವಾಗಿ ತೋರಿ ಕಂಪಾಗಿ ಸಂಚಾಲನಗೊಳ್ಳುತ್ತದೆ. ಹಕ್ಕಿಗೊರಳಿನಲ್ಲಿ ದನಿಯಾಗಿ ಸಂಚಯನಗೊಂಡ ಆನಂದ ಮಧುರದನಿ ತರಂಗಗಳಾಗಿ ಸಂಚಾಲನಗೊಳ್ಳುತ್ತದೆ. ಕವನವಾಗಿ ಸಂಚಯನಗೊಂಡ ಆನಂದ ಸಹೃದಯಾನಂದವಾಗಿ ಸಂಚಾಲನಗೊಳ್ಳುತ್ತದೆ. ಎಂದರೆ ಸಂಚಯನ ಸಂಚಾಲನಕ್ಕಾಗಿಯೇ. ಸಂಚಯನ ಸಂಚಾಲನ ವ್ಯಾಪಾರದಲ್ಲಿ ರೂಪವೇನಿದ್ದರೂ ಕೇವಲ ಮಾಧ್ಯಮ ಮಾತ್ರ. ಈ ಎಲ್ಲ ಆನಂದದ ವ್ಯಾಪಾರದಲ್ಲಿ ಅದು ನಿರ್ಮಿಸಿಕೊಂಡು ಚಣಕಾಲ ತೋರುವ ಮಾಧ್ಯಮವನ್ನು ನಾವು ಸೌಂದರ್ಯದ ವಸ್ತು ಎನ್ನುತ್ತೇವೆ. ಆನಂದ ಅಲೆಯಾದಾಗ ಹಿಗ್ಗಾಗಿಯೂ ಘನೀಭೂತವಾದಾಗ ಸೌಂದರ್ಯವಾಗಿಯೂ ಪರಿಣಮಿಸುತ್ತದೆ.

ಡಾ. ನಟರಾಜ್ ಎಸ್. ಬೂದಾಳು ಪರಿಚಯ

ಗುಬ್ಬಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿರುವ ಡಾ. ನಟರಾಜ್ ಎಸ್. ಬೂದಾಳು ಅವರು ನಮ್ಮ ನಡುವಿನ ವಿಭಿನ್ನ ಚಿಂತಕರು.

ಕನ್ನಡದ ಸಮಕಾಲೀನ ಸಾಂಸ್ಕೃತಿಕ ವಲಯದಲ್ಲಿ ಚಾಲ್ತಿಯಲ್ಲಿರುವ ಯಾವುದೇ ಚಿಂತನಾ ಮಾದರಿಗಳಿಗೂ ಜೋತುಬೀಳದೆ, ಸಂಸ್ಕೃತಿ ಕಥನಗಳ ರೂಪಣೆಯಲ್ಲಿ ಪ್ರಧಾನ ಪಾತ್ರವಹಿಸುವ ತತ್ವಶಾಸ್ತ್ರದ ಸೂಕ್ಷ್ಮತೆಗಳನ್ನೂ ಬಿಡಿಸುವುದು ಬೂದಾಳರ ಆಸಕ್ತಿಯ ವಿಷಯ.

ಈ ಶಿಸ್ತಿನ ತಿಳವಳಿಕೆಯ ಮೂಲಕವೇ ಕನ್ನಡದ ಸಂಕಥನಗಳ ಮತ್ತು ವರ್ತಮಾನ ವನ್ನು ವ್ಯಾಖ್ಯಾನಿಸುವ ಪ್ರಯತ್ನ ಮಾಡು ತ್ತಿದ್ದಾರೆ. ಆಮೂಲಕ ಸಾಂಸ್ಕೃತಿಕ ರಾಜಕಾರಣ ದಲ್ಲಿ ಮರೆಯಾಗಿದ್ದ ಜ್ಞಾನ ಮೀಮಾಂಸೆಯ ಹಲವು ಆಯಾಮಗಳನ್ನು ಅನಾವರಣ ಗೊಳಿಸುವಲ್ಲಿ ಗಂಭೀರವಾಗಿ ತೊಡಗಿಕೊಂಡಿದ್ದಾರೆ.

'ನಾಗಾರ್ಜುನನ ಮಧ್ಯಮಾರ್ಗ', 'ನಾಗಾರ್ಜುನನ ತಾತ್ವಿಕತೆ ಮತ್ತು ಕೃತಿಗಳು' ಹಾಗೂ 'ನಾಗಾರ್ಜುನನ ಮೂಲ ಮಾಧ್ಯಮಿಕಕಾರಿಕ' ಇವು ಈ ಪ್ರಕಾರದ ಕೃತಿಗಳು. ಇದಲ್ಲದೆ ಬೂದಾಳರ 'ಸೂಜಿಗಲ್ಲಿನ ಹುಡುಗಿ' ಮತ್ತು 'ಕಪ್ಪು ಹುಡುಗನ ಬೆಳಗು' ಎಂಬ ಎರಡು ಕವನ ಸಂಕಲನ ಕೂಡ ಪ್ರಕಟವಾಗಿವೆ.

ಮೊದಲ ಕವನ ಸಂಕಲನಕ್ಕೆ ೨೦೦೨ರಲ್ಲಿ ಪುತಿನ ಪ್ರಶಸ್ತಿ, 'ನಾಗಾರ್ಜುನನ ಮೂಲ ಮಾಧ್ಯಮಿಕಕಾರಿಕಾ'ಕೆ ೨೦೦೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ವೀಚಿ ಪ್ರಶಸ್ತಿ ಬಂದಿವೆ.

'ಅಲ್ಲಮ ಪ್ರಭು ಮತ್ತು ಬೌದ್ಧ ಧರ್ಮದ ಶೂನ್ಯತೆಯ ಪರಿಕಲ್ಪನೆ' ಈಗ ಪ್ರಕಟಣೆಗೆ ಸಿದ್ಧವಾಗಿದೆ.

ಆನಂದದ ನಿಲ್ದಾಣವೇ ಸೌಂದರ್ಯ; ಎಲ್ಲೆಲ್ಲಿ ಆನಂದ ಹೆಪ್ಪುಗಟ್ಟುತ್ತದೆಯೋ ಅದೇ ಸೌಂದರ್ಯ. ಆದುದರಿಂದಲೇ 'a thing of beauty is joy for ever' ಹಾಗೆ ನೋಡಿದರೆ ಎಲ್ಲವೂ ಆನಂದದ ಮೂರ್ತರೂಪವಾದುದರಿಂದ ಎಲ್ಲವೂ ಸುಂದರ." (ಜಿ.ಎಸ್. ಶಿವರುದ್ರಪ್ಪ: ಸೌಂದರ್ಯಸಮೀಕ್ಷೆ: ೧೯೭೦: ಪುಟ ೧೭-೧೮)

ಶಕ್ತಿ ಸಂಚಯನ ಮತ್ತು ಶಕ್ತಿ ಸಂಚಾಲನ ಇದೇ ಸೃಷ್ಟಿ ವ್ಯಾಪಾರದ ಲಕ್ಷಣವೆಂಬಂತೆ ತೋರುತ್ತದೆ. ಯಾವ ಆನಂದ ಸಂಚಯನಗೊಂಡಾಗ ಸೌಂದರ್ಯವಾಗಿ, ಸಂಚಾಲನಗೊಂಡಾಗ ಆನಂದವಾಗುವುದೋ ಅದರ ಅನಂತ ವಿನ್ಯಾಸಗಳೇ ಈ ರೂಪ ಸೃಷ್ಟಿ. ಹೂವಾಗಿ ಸಂಚಯನಗೊಂಡ ಆನಂದ ಸುಂದರವಾಗಿ ತೋರಿ ಕಂಪಾಗಿ ಸಂಚಾಲನಗೊಳ್ಳುತ್ತದೆ. ಹಕ್ಕಿಗೊರಳಿನಲ್ಲಿ ದನಿಯಾಗಿ ಸಂಚಯನಗೊಂಡ ಆನಂದ ಮಧುರದನಿ ತರಂಗಗಳಾಗಿ ಸಂಚಾಲನ ಗೊಳ್ಳುತ್ತದೆ. ಎಂದರೆ ಸಂಚಯನ ಸಂಚಾಲನಕ್ಕಾಗಿಯೇ. ಸಂಚಯನ ಸಂಚಾಲನ ವ್ಯಾಪಾರದಲ್ಲಿ ರೂಪವೇನಿದ್ದರೂ ಕೇವಲ ಮಾಧ್ಯಮ ಮಾತ್ರ. ಈ ಎಲ್ಲ ಆನಂದದ ವ್ಯಾಪಾರದಲ್ಲಿ ಅದು ನಿರ್ಮಿಸಿಕೊಂಡು ಚಣಕಾಲ ತೋರುವ ಮಾಧ್ಯಮವನ್ನು ನಾವು ಸೌಂದರ್ಯದ ವಸ್ತು ಎನ್ನುತ್ತೇವೆ.

ಮೇಲಿನ ಎರಡೂ ಉದ್ಧೃತ ಭಾಗಗಳನ್ನು ದಯವಿಟ್ಟು ಗಂಭೀರವಾಗಿ ಪರಿಭಾವಿಸಬೇಕು. 'ಭಾರತೀಯವೆಂದು' ಕರೆದುಕೊಳ್ಳುವ ಸಂಸ್ಕೃತ ಮೀಮಾಂಸೆಯ ಎರಡು ಮುಖ್ಯ ನಿಲುವುಗಳನ್ನು ಈ ಎರಡು ಭಾಗಗಳು ಮುಂದಿಡುತ್ತಿವೆ. ಎರಡನೆಯ ಭಾಗವು ಲೋಕಸಮಸ್ತದ ಒಂದು ಲಕ್ಷಣವನ್ನು ವಿವರಿಸಿದರೆ, ಮೊದಲನೆಯ ಭಾಗವು ಲೋಕಸಮಸ್ತದಲ್ಲಿ ಅಂತರ್ಗತವಾಗಿ ಎಲ್ಲದರಲ್ಲಿಯೂ ಇದೆಯೆನ್ನಲಾಗುವ ಅಂತಸ್ಸತ್ವವನ್ನು ಸೂಚಿಸುತ್ತದೆ. ಈ ಎರಡು ಸಂಗತಿಗಳು ಬಹಳ ಮುಖ್ಯವಾದುವು. ಏಕೆಂದರೆ ಬೌದ್ಧ ಮೀಮಾಂಸೆಯು ಈ ಎರಡೂ ಸಂಗತಿಗಳನ್ನು ನಿರಾಕರಿಸುತ್ತದೆ. ಹಾಗೆ ನೋಡಿದರೆ ಬೌದ್ಧಮೀಮಾಂಸೆಯ ಈ ನಿಲುವನ್ನು ಸಂಸ್ಕೃತ ಮೀಮಾಂಸೆಯ ಜೊತೆಗಿಟ್ಟು ನೋಡುವ ಕ್ರಮವೇ ಸರಿಯಲ್ಲ. ಆದರೆ ಈಗಾಗಲೇ ನಮ್ಮ ಚಿಂತನಾಕ್ರಮದಲ್ಲಿ ತನ್ನದೊಂದು ಜಾಗವನ್ನು ಸಂಸ್ಕೃತ ಮೀಮಾಂಸೆಯು ಆಕ್ರಮಿಸಿ ಕೊಂಡಿರುವದರಿಂದ ಅದನ್ನು ನಿವಾರಿಸಲು ಈ ಉದ್ಧರಣೆ ಅವಶ್ಯಕವೆಂದು ಭಾವಿಸುತ್ತೇನೆ.

ಈ ಸಂಗತಿಗಳನ್ನು ಕುರಿತಾದ ಬೌದ್ಧ ಮೀಮಾಂಸೆಯ ನಿಲುವೇನೆಂಬುದನ್ನು ಪರಿಶೀಲಿಸೋಣ. ಮೊದಲನೆಯದಾಗಿ ಬೌದ್ಧ ತಾತ್ವಿಕತೆಯು ಲೋಕಸಮಸ್ತವನ್ನೂ ಮೂರು ಲಕ್ಷಣಗಳ ಮೂಲಕ ವಿವರಿಸುತ್ತದೆ. ಅವು ತ್ರಿಲಕ್ಷಣಗಳೆಂದು ಪ್ರಸಿದ್ಧವಾಗಿವೆ. ಅವು ಯಾವುವೆಂದರೆ:

೧. ಎಲ್ಲ ಸಂಖಾರಗಳೂ (ಸಂಯೋಜನೆಗಳೂ) ಅನಿತ್ಯವಾದವು – ಸಬ್ಬೇ ಸಂಖಾರ ಅನಿಚ್ಚ.

೨. ಎಲ್ಲ ಸಂಖಾರಗಳೂ ದು:ಖದಿಂದ ಕೂಡಿವೆ. – ಸಬ್ಬೇ ಸಂಖಾರ ದು:ಖ

೩. 'ಆತ್ಮವೆಂಬುದೇನೂ' ಇಲ್ಲದಿರುವುದೇ ಎಲ್ಲದರ ಧರ್ಮ – ಸಬ್ಬೇ ಧಮ್ಮ ಅನಾತ್ತ.

ಲೋಕ ಸಮಸ್ತವೂ ಅನೇಕಾಂಶಗಳಿಂದಾದ ಸಂಯೋಜನೆಗಳೇ ಹೊರತು ಸ್ವತಂತ್ರ ವಸ್ತುವೊಂದದೆ ಯೆಂಬುದನ್ನು ಬೌದ್ಧ ಧರ್ಮವು ಮಾನ್ಯ ಮಾಡುವುದಿಲ್ಲ. ಈ ಸಂಯೋಜನೆಗಳು ಸದಾ ಬದಲಾಗುತ್ತಲೇ ಇರುತ್ತವೆ. ಯಾವುದೊಂದೂ ಒಂದು ಕ್ಷಣವೂ ಸ್ಥಗಿತವಲ್ಲ. ಈ ಅಂಶವನ್ನು ಪರಿಣಾಮಕಾರಿಯಾಗಿ ವಿವರಿಸಲು ಒಂದೆರಡು ವಿವರಣೆಗಳನ್ನು ಕೊಡುವ ಪರಿಪಾಠವಿದೆ. ಮೊದಲನೆಯದಾಗಿ ಗ್ರೀಕ್ ತಾತ್ವಿಕ ಹೆರಾಕ್ಲೀಟಸ್‌ನ ಹೇಳಿಕೆಯೊಂದನ್ನು ತೆಗೆದುಕೊಳ್ಳೋಣ. 'ಒಂದು ನದಿಗೆ ಎರಡು ಸಾರಿ ಕಾಲಿಡಲು ಸಾಧ್ಯವಿಲ್ಲ' ಎಂಬುದೇ ಆ ಹೇಳಿಕೆ. ಇದನ್ನು ಬೌದ್ಧಮಾಧ್ಯಮಿಕರು ಹೀಗೆ ವಿಸ್ತರಿಸುತ್ತಾರೆ: ಒಂದು ನದಿಗೆ ಎರಡು ಸಾರಿ ಕಾಲಿಡಲು ಸಾಧ್ಯವಿಲ್ಲ. ಹಾಗೆ ಕಾಲಿಟ್ಟ ಆ ಮನುಷ್ಯ ಒಬ್ಬನೇ ಅಲ್ಲ, ಹಾಗೆ ಬೇರೆ ಬೇರೆಯೂ ಅಲ್ಲ. ಎರಡು ಸಾರಿ ಕಾಲಿಟ್ಟ ಆ ನದಿ ಒಂದೇ ಅಲ್ಲ, ಮತ್ತು ಬೇರೆ ಬೇರೆ ಅಲ್ಲ, ಎರಡು ಸಾರಿ ಕಾಲಿಟ್ಟ ಪರಿಸ್ಥಿತಿಗಳು ಒಂದೇ ಅಲ್ಲ ಮತ್ತು ಬೇರೆ ಬೇರೆ ಅಲ್ಲ. ಎರಡು ಸಾರಿ ಕಾಲಿಟ್ಟಾಗ ಆದ ಪರಿಣಾಮಗಳು ಒಂದೇ ಅಲ್ಲ ಮತ್ತು ಬೇರೆ ಬೇರೆ ಅಲ್ಲ.' ಇದನ್ನು ಭಿನ್ನಾಭಿನ್ನ ನಿರಾಕರಣೆ ಎನ್ನುತ್ತಾರೆ. ಲೋಕವನ್ನು ಪರಿಣಾಮಕಾರಿಯಾಗಿ ವಿವರಿಸಲು ಇದೊಂದು ಪರಿಕರ. ಇದರ ಪೂರ್ಣಪ್ರಮಾಣದ ವಿವರಣೆಯನ್ನು ನಂತರ ನೀಡಬಹುದು. ಸದ್ಯಕ್ಕೆ ಲೋಕದ ಎಲ್ಲವೂ ನಿರಂತರ ಬದಲಾವಣೆಯಲ್ಲಿದೆ ಎಂಬುದನ್ನು ಸೂಚಿಸಲು ಈ ಉದಾಹರಣೆ ಸಾಕು.

ದುಃಖವೆಂಬ ಪದಕ್ಕೆ ಇರುವ ಅರ್ಥವನ್ನು ವಿವರಿಸುವ ಅನೇಕ ಪ್ರಯತ್ನಗಳಿವೆ. ಪಾಲಿ ಭಾಷೆಯ 'ದುಃಖ'ಕ್ಕೆ ಕನ್ನಡದ 'ದುಃಖ' ಸಮಾನಾರ್ಥಕ ಪದ ಅಲ್ಲ. ದುಃಖವನ್ನು ಒಂದು ಲೋಕಲಕ್ಷಣವನ್ನಾಗಿಯೂ, ನಾಲ್ಕು ಶ್ರೇಷ್ಠ ಸತ್ಯಗಳಲ್ಲಿ ಮೊದಲನೆಯ ಸತ್ಯವನ್ನಾಗಿಯೂ ಬುದ್ಧ ಗುರುತಿಸಿದ್ದಾನೆ. ದು:ಖ ಪದಕ್ಕೆ ಮೂರು ವಿವರಣೆಗಳಿವೆ. ಅ) ಸಾಮಾನ್ಯ ನೋವು ಸಂಕಟಗಳಿಗೆ ಸಂಬಂಧಿಸಿದುದು ದು:ಖದು:ಖತಾ, ಆ)ಎಲ್ಲ ಸಂಯೋಜನೆಗಳಲ್ಲಿಯೂ ಇರುವ ಗುಣ (ಸಂಖಾರ ದು:ಖ) ಮತ್ತು ಇ)ನಿತ್ಯ ಚಲನಶೀಲವಾದ ಲೋಕಪ್ರವಾಹದಲ್ಲಿ ಉಂಟಾಗುವ ಹಿತಾಹಿತ ಭಾವನೆಗಳು ಸದಾ ಬದಲಾಗುತ್ತಲೇ ಇರುವುದರಿಂದ ಎರಡೂ ದು:ಖವೇ. ಹಾಗಾಗಿ ಹಿತವಾದ ಅನುಭವವಾಗಲೀ ಸಂಕಟದ ಅನುಭವವಾಗಲೀ ಅದು ದು:ಖವೇ. ಕನ್ನಡದ ದು:ಖ ಪದವು ಇದೆಲ್ಲವನ್ನು ನುಡಿಯಲಾರದು.

ಬುದ್ಧ ಗುರುವು ತಿಳಿಸಿದ ಮೂರು ಲೋಕಲಕ್ಷಣಗಳಲ್ಲಿ 'ದುಃಖವೂ ಒಂದು. (೧) ಎಲ್ಲ ಸಂಯೋಜನೆಗಳೂ ಅನಿತ್ಯವಾದವು (೨) ಎಲ್ಲ ಸಂಯೋಜನೆಗಳೂ ದುಃಖದಿಂದ ಕೂಡಿವೆ (೩) ಎಲ್ಲ ಧರ್ಮಗಳೂ ಅನಾತ್ಮವಾಗಿವೆ ಈ ತ್ರಿಲಕ್ಷಣಗಳಲ್ಲಿ ಮೊದಲಿನ ಎರಡು ಲಕ್ಷಣಗಳು ಎಲ್ಲ ಸಂಯೋಜನೆಗಳನ್ನು ಕುರಿತವುಗಳಾಗಿವೆ. ಲೋಕದ ಎಲ್ಲವೂ ಅಂದರೆ ವಸ್ತು ಮತ್ತು ಜೀವ ಸಮುಚ್ಚಯದ ಎಲ್ಲವೂ ಸಂಯೋಜನೆಗಳೇ ಆಗಿವೆ ಮತ್ತು ಅವು ಸದಾ ಬದಲಾಗುತ್ತಲೇ ಇರುತ್ತವೆ. ಎರಡನೆಯದಾಗಿ ಈ ಸಂಯೋಜನೆಗಳು ದುಃಖದಿಂದ ಕೂಡಿವೆ. ವಸ್ತು ಪ್ರಪಂಚದ ಸಂಯೋಜನೆಗಳಿಗೆ ಅನ್ವಯವಾಗುವ ಈ 'ದುಃಖವು' ಜೀವ ಪ್ರಪಂಚಕ್ಕೆ ಅನ್ವಯವಾಗುವ ಭಾವ ವಿಶೇಷವಲ್ಲ, ಬದಲಿಗೆ ಸರ್ವವೂ 'ಆಗುವಿಕೆ'ಯಲ್ಲಿಯೇ ಇರುತ್ತದೆ. ಆಗಿ ಇರುವುದು ಯಾವುದೂ ಇಲ್ಲ. ಹೀಗೆ ಆಗುವ 'ತಲ್ಲಣ'ದಲ್ಲಿಯೇ ಎಲ್ಲ ಸಂಯೋಜನೆಗಳೂ ನಿರಂತರ ಬದಲಾವಣೆ ಮತ್ತು ಚಲನೆಯಲ್ಲಿಯೇ ಇರುತ್ತವೆ. ಈ ತಲ್ಲಣವನ್ನೇ ದುಃಖವೆಂಬ ಲಕ್ಷಣವನ್ನಾಗಿ ವಿವರಿಸಲಾಗಿದೆ. ಮನುಷ್ಯನಿಗೆ ಸಂಬಂಧಿಸಿದಂತೆ ಸಂತೋಷದ ಅನುಭವವೂ ದುಃಖವೇ. ಅದು ನಿರಂತರವಾಗದುದಕ್ಕೆ ದುಃಖ. ಸಂಕಟದ ಅನುಭವ ದೂರಾಗದುದಕ್ಕೆ ದುಃಖ ಇತ್ಯಾದಿ.

ಅನಿತ್ಯವಾದ ಸಂಯೋಜನೆಗಳನ್ನು ನಿತ್ಯ ವಸ್ತುಗಳೆಂದು ಭಾವಿಸಿ ವ್ಯವಹರಿಸುವುದರಿಂದ; ಸದಾ ಆಗುವಿಕೆಯಲ್ಲಿಯೇ ಇರುವ ಸಂಯೋಜನೆಗಳನ್ನು ಆಗಿ ಇರುವ ವಸ್ತುಗಳೆಂದು ಭಾವಿಸುವುದರಿಂದ ಮತ್ತು ಈ ಲೋಕವನ್ನು ಪರಿಭಾವಿಸುತ್ತಿರುವ ನಾವೂ ಸೇರಿದಂತೆ ಲೋಕಸಮಸ್ತದಲ್ಲಿ ಸ್ವತಂತ್ರ ಅಸ್ತಿತ್ವವೊಂದನ್ನು ಗುರುತಿಸಿಕೊಂಡು ವ್ಯವಹರಿಸುವ ಮಿಥ್ಯಾ ನಿಲುವಿನಿಂದಾಗಿ ನಾವು 'ದುಃಖ'ಕ್ಕೆ ಒಳಗಾಗುತ್ತೇವೆ. ಲೋಕಲಕ್ಷಣಗಳನ್ನು ಅರಿತು ಆ ಅರಿವನ್ನು ಸ್ವಯವಾಗಿಸಿಕೊಂಡರೆ ಯಾವುದಕ್ಕೂ ಅಂಟಿಕೊಳ್ಳುವ ಸಂದರ್ಭವೇ ಉಂಟಾಗುವುದಿಲ್ಲ. ಲೋಕಸಂಬಂಧದ ಜಾಲದಲ್ಲಿ ನಾವು ಬೆರೆತು ಹೋಗುವುದರಿಂದ 'ದುಃಖಪಡುವ ಸ್ವತಂತ್ರ ಭಾವ'ವುಳ್ಳ ಜೀವಿಯೊಂದು ಇರಲೂ ಸಾಧ್ಯವಿಲ್ಲ ಮತ್ತು ದುಃಖವೂ ಸಾಧ್ಯವಿಲ್ಲ. ಇದು ಬೌದ್ಧ ತಾತ್ವಿಕತೆಯು ನೀಡುವ ವಿವರಣೆ.

ಕಾವ್ಯ/ಕಲೆಗಳು ಲೋಕದ ಸರಿಯಾದ ವ್ಯಾಖ್ಯಾನಕ್ಕೆ ತೊಡಗಿದ್ದೇ ಆದಲ್ಲಿ, ಅವು ನಿಶ್ಚಿತವಾಗಿ ದು:ಖದ ಅನುಸಂಧಾನದಲ್ಲಿ ತೊಡಗಿರಲೇಬೇಕು. ಏಕೆಂದರೆ ಲೋಕಸಂಬಂಧದ ಸರಿಯಾದ ಅರಿವು ನಮ್ಮನ್ನು ದು:ಖದಿಂದ ಬಿಡುಗಡೆಗೊಳಿಸುತ್ತದೆ. ಅದನ್ನೇ ಅಲ್ಲಮಪ್ರಭು ಹೀಗೆ ನುಡಿಯುತ್ತಿರಬಹುದು:

ಸುಖವ ಬಲ್ಲಾತ ಸುಖಿಯಲ್ಲ
ದುಃಖವ ಬಲ್ಲಾತ ದುಃಖಿಯಲ್ಲ
ಸುಖ ದುಃಖವೆರಡನೂ ಬಲ್ಲಾತ ಜ್ಞಾನಿಯಲ್ಲ
ಹುಟ್ಟದ ಮುನ್ನ ಸತ್ತವರ ಕುರುಹಬಲ್ಲಡೆ ಬಲ್ಲ ಗುಹೇಶ್ವರ.

ಕಲಾಕೃತಿಯಾಗಲೀ, ಕಾವ್ಯವಾಗಲೀ ಈಗಾಗಲೇ 'ಆಗಿ' ಇರುವಂಥದ್ದಲ್ಲ, ಅದು ಸದಾ ಆಗುತ್ತಲೇ ಇರುವ ಪ್ರಕ್ರಿಯೆ ಎಂದು ತಿಳಿದವಷ್ಟೆ. ಆದರೆ ಕಣ್ಣೆದುರಿಗಿರುವ ಕಾವ್ಯವನ್ನು, ಚಿತ್ರವನ್ನು 'ಸಿದ್ಧವಾಗಿಲ್ಲ' ಎಂದಾಗ ನಾವು ಗಲಿಬಿಲಿಗೊಳ್ಳುತ್ತೇವೆ. ಅಕ್ಷರರೂಪದಲ್ಲಿ, ಚಿತ್ರರೂಪದಲ್ಲಿರುವ ಈ ಪ್ರತ್ಯಕ್ಷ ಪ್ರಮಾಣವನ್ನು ನಾವು 'ಇದೆ' ಎಂದು ಒಪ್ಪಿಬಿಡುವ ವಿಕಲ್ಪಕ್ಕೆ ಒಳಗಾಗಿರುವುದರಿಂದ ನಮಗೆ ಈ ಆತಂಕವುಂಟಾಗುತ್ತದೆ. ಆದರೆ ಸ್ವಲ್ಪ ಭಿನ್ನವಾಗಿ ಯೋಚಿಸುವುದಾದರೆ ಒಂದು ಸಂಗೀತದ ಕೃತಿಯನ್ನು 'ಇದೆ' ಎಂದು ಹೇಳಲು ಸಾಧ್ಯವೆ? ಅದು ಹಾಡುಗಾರನ ಸಾಮರ್ಥ್ಯ, ಕೇಳುಗನ ಮನೋಭಿತ್ತಿ ಮತ್ತು ಹಾಡುತ್ತಿರುವ ಆವರಣಕ್ಕೆ ಅನುಗುಣವಾಗಿ ಉಂಟಾಗಬೇಕಾದ ಕೃತಿ. ಹಾಗಾದರೆ ' ಆಕೃತಿಗೆ' ಇರುವ ಪಠ್ಯಗಳೆಷ್ಟು? ಅಸಂಖ್ಯ. ಎಷ್ಟು ಕೇಳುಗರಿರುತ್ತಾರೆಯೋ ಅಷ್ಟು. ಅದರ 'ಮೂಲಪಠ್ಯ' ಎನ್ನಬಹುದಾದ 'ಒಂದು' ಪಠ್ಯ ಇದೆಯೆ? ಖಂಡಿತವಾಗಿಯೂ ಇಲ್ಲ. ಇರುವುದು ಸಾಪೇಕ್ಷ ಪಠ್ಯ ಮಾತ್ರ, ಅಷ್ಟೇ ಅಲ್ಲ, ಒಬ್ಬನೇ ಕೇಳುಗ ಒಂದು ಹಾಡನ್ನು ಅನೇಕ ಸಾರಿ ಕೇಳಿದಾಗ ಉಂಟಾಗುವ ಪಠ್ಯಗಳೂ ಕೂಡ ಒಂದೇ ಅಲ್ಲ ಮತ್ತು ಬೇರೆ ಬೇರೆಯೂ ಅಲ್ಲ. ಹೀಗೆ ಲೋಕವನ್ನೆಲ್ಲ ಸಂಬಂಧದಲ್ಲಿ ಗ್ರಹಿಸುವುದೇ ಸರಿಯಾದ ಕ್ರಮ. ಆದರೆ ಅದನ್ನು ನಾವು ಮಾಡುತ್ತಿಲ್ಲ. ಬದಲಿಗೆ ಎಲ್ಲವನ್ನು ಭಿನ್ನ ಭಿನ್ನ ಸ್ವತಂತ್ರ ಚೂರುಗಳಾಗಿ ಗ್ರಹಿಸುತ್ತಿದ್ದೇವೆ. ಲೋಕದ ಈ ಸಂಬಂಧದ ನಿಜವನ್ನು ಅರಿತಾಗ ಗುಹೇಶ್ವರನೆಂಬ ಪ್ರಜ್ಞೆಯೊಡನೆ ನಮಗೆ ಸಂಬಂಧವೇರ್ಪಡುತ್ತದೆ ಎಂದು ಅಲ್ಲಮ ಈ ವಚನದಲ್ಲಿ ನುಡಿಯುತ್ತಿದ್ದಾನೆಂದು ಅನ್ನಿಸುತ್ತದೆ.

ಎತ್ತಣ ಮಾಮರ? ಎತ್ತಣ ಕೋಗಿಲೆ?
ಎತ್ತಣಿಂದೆತ್ತ ಸಂಬಂಧವಯ್ಯ?
ಬೆಟ್ಟದ ನೆಲ್ಲಿಕಾಯಿ ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯ?
ಗುಹೇಶ್ವರಲಿಂಗಕ್ಕೆಯು ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯ?

ಹಾಗಾದರೆ ಕಾವ್ಯ/ಕಲಾಕೃತಿಯೆನ್ನುವ ಈ 'ಪ್ರಕ್ರಿಯೆ'ಯನ್ನು ಹೇಗೆ ವಿವರಿಸಿಕೊಳ್ಳಬೇಕು? ಕಲಾಕೃತಿಯೆನ್ನುವುದು ಒಂದು finished product ಅಲ್ಲ. ಅದು ಸದಾ ಆಗುತ್ತಲೇ ಇರುವ ಒಂದು ಪ್ರಕ್ರಿಯೆಯೇ ಹೊರತು ಆಗಿ ಇರುವಂಥದಲ್ಲ. ಎಲ್ಲ ಕಾವ್ಯಗಳೂ ಆಗುತ್ತಲೇ ಇರುತ್ತವೆ. ಪ್ರತಿಯೊಬ್ಬನ ಪ್ರತಿಯೊಂದು ಓದಿನಲ್ಲಿಯೂ ಉಂಟಾಗುತ್ತದೆ ಮತ್ತು ಓದುವಿಕೆ ಭಂಗಗೊಂಡಾಕ್ಷಣ ಭಂಗಗೊಳ್ಳುತ್ತದೆ. ಪ್ರತಿಯೊಂದು ಪಠ್ಯವೂ ಒಂದು 'ಸಾಪೇಕ್ಷ ಪಠ್ಯವೇ' ಹೊರತು ಮೂಲಪಠ್ಯವಲ್ಲ. (ಏಕೆಂದರೆ ಮೂಲಪಠ್ಯ ವೆಂಬುದಿರುವುದಿಲ್ಲ.) ಇಲ್ಲಿನ ಈ ಸಾಪೇಕ್ಷ ಪಠ್ಯ ಒಂದು ಸಾಪೇಕ್ಷ ಕಾರಣವಾದರೆ, ಓದುಗ/ನೋಡುಗ 'ಪರಿಸ್ಥಿತಿ' ಯೆನಿಸಿಕೊಳ್ಳುತ್ತಾನೆ. ಇವೆರಡರ ಸಂಬಂಧದಲ್ಲಿ ಉಂಟಾಗುವುದೇ ಪರಿಣಾಮ ಪಠ್ಯ. ಜಗತ್ತಿನ ಶ್ರೇಷ್ಠ ಕೃತಿಗಳೆಲ್ಲ ದು:ಖದ ಅನುಸಂಧಾನಕ್ಕೇ ತೊಡಗುತ್ತವೆ. ಮಹಾಕವಿ ವಾಲ್ಮೀಕಿಯೂ 'ಮಾನಿಷಾದ'ದ ಮೂಲಕ ಇದೇ ಸೂಚನೆಯನ್ನು ನೀಡಿದರೂ, ಅದರ ಪರಿಹಾರಕ್ಕಾಗಿ ಈ ಲೋಕವನ್ನು ನಿರ್ಮಿಸಿ ನಿರ್ವಹಿಸುತ್ತಿದೆ ಎನ್ನುವ ಮತ್ತೊಂದನ್ನು ಕಲ್ಪಿಸಿ ಅದರೊಡನೆ ಐಕ್ಯವಾಗುವ ಪರಿಹಾರವನ್ನು ಮುಂದಿಡುತ್ತಾನೆ.

ಕಲಾಕೃತಿಯೊಂದಕ್ಕೆ ನಿಜವಾದ ಸವಾಲೆಂದರೆ ಲೋಕದ ಈ ನಿತ್ಯ ಚಲನೆಯ ಅರಿವನ್ನು ನೋಡುಗನಿಗೆ

ಅನಿತ್ಯವಾದ ಸಂಯೋಜನೆಗಳನ್ನು ನಿತ್ಯ ವಸ್ತುಗಳೆಂದು ಭಾವಿಸಿ ವ್ಯವಹರಿಸುವುದರಿಂದ; ಸದಾ ಆಗುವಿಕೆಯಲ್ಲಿಯೇ ಇರುವ ಸಂಯೋಜನೆಗಳನ್ನು ಆಗಿ ಇರುವ ವಸ್ತುಗಳೆಂದು ಭಾವಿಸುವುದರಿಂದ ಮತ್ತು ಈ ಲೋಕವನ್ನು ಪರಿಭಾವಿಸುತ್ತಿರುವ ನಾವೂ ಸೇರಿದಂತೆ ಲೋಕ ಸಮಸ್ತದಲ್ಲಿ ಸ್ವತಂತ್ರ ಅಸ್ತಿತ್ವವೊಂದನ್ನು ಗುರುತಿಸಿಕೊಂಡು ವ್ಯವಹರಿಸುವ ಮಿಥ್ಯಾನಿಲುವಿನಿಂದಾಗಿ ನಾವು 'ದುಃಖ'ಕ್ಕೆ ಒಳಗಾಗುತ್ತೇವೆ. ಲೋಕಲಕ್ಷಣಗಳನ್ನು ಅರಿತು ಆ ಅರಿವನ್ನು ಸ್ವಯವಾಗಿಸಿಕೊಂಡರೆ ಯಾವುದಕ್ಕೂ ಅಂಟಿಕೊಳ್ಳುವ ಸಂದರ್ಭವೇ ಉಂಟಾಗುವುದಿಲ್ಲ.

ತಂದುಕೊಡುವುದು. ದು:ಖದ ಪ್ರಮುಖ ಕಾರಣವು ನಾವು ಹುಟ್ಟಿನಿಂದಲೇ ಲೋಕವನ್ನು ಸ್ಥಗಿತವೆಂದು, ಶಾಶ್ವತವೆಂದು ಭಾವಿಸುವುದರಲ್ಲಿದೆ. ಇದು ವಾಸ್ತವ ಮತ್ತು ನಮ್ಮ ಗ್ರಹಿಕೆಯ ನಡುವೆ ತೀವ್ರವಾದ ಸಂಘರ್ಷಕ್ಕೆ ಕಾರಣವಾಗುತ್ತದೆ. ಲೋಕದ ವಸ್ತುಗಳನ್ನು ಸ್ವತಂತ್ರ ಶಾಶ್ವತ ವಸ್ತುಗಳೆಂದು ಗ್ರಹಿಸಿ ಅವುಗಳಿಗೆ ಜೋತುಬೀಳುತ್ತೇವೆ. ಆದರೆ ಅವು ನಿರಂತರವಾಗಿ ಹರಿಯುತ್ತ ಬದಲಾಗುತ್ತ ಹೋಗುತ್ತವೆ. ಗ್ರಹಿಸುತ್ತಿರುವವನು ಕೂಡ ಇದೇ ಪ್ರಕ್ರಿಯೆಯಲ್ಲಿರುವುದರಿಂದ ಸದಾ ಬದಲಾಗುತ್ತಲೇ ಇರುತ್ತಾನೆ. ಇದು ಇಮ್ಮಡಿ ದು:ಖಕ್ಕೆ ಕಾರಣವಾಗುತ್ತದೆ. ಗ್ರಹಿಸುವವನ ಗ್ರಹಿಕೆಯಲ್ಲಿನ ದೋಷವನ್ನು ಸರಿಪಡಿಸುವುದರ ಮೂಲಕವೇ ದು:ಖವನ್ನು ಪರಿಹರಿಸಬೇಕೆಂಬುದು ಇಲ್ಲಿಯ ನಿಲುವು. ದೋಷಪೂರ್ಣವಾದ ಗ್ರಹಿಕೆಗೆ ಒಮ್ಮೆ ಒಗ್ಗಿ ಹೋದರೆ ಆ ಸಂರಚನೆ ಗಟ್ಟಿಗೊಳ್ಳುತ್ತದೆ. ಅಂತಹ ಸಂರಚನೆಯನ್ನು ಒಡೆಯುವುದು ಕಷ್ಟ. ಒಂದು ಝೆನ್ ಕತೆಯನ್ನು ಇಲ್ಲಿ ಉಲ್ಲೇಖಿಸಬಹುದು.

ಕಲಾಶಾಲೆಯಲ್ಲಿ ಒಂದುದಿನ ಝೆನ್ ಗುರು ಶಿಷ್ಯರುಗಳಿಗೆ ಬಿದಿರನ್ನು ಚಿತ್ರಿಸಲು ಸೂಚಿಸಿದರು. ಅದಕ್ಕೆ ಬೇಕಾಗುವ ಡ್ರಾಯಿಂಗ್ ಶೀಟುಗಳು, ಬ್ರಷ್‌ಗಳು ಮತ್ತು ಕಪ್ಪು ಇಂಡಿಯನ್ ಇಂಕು ಇಷ್ಟನ್ನು ಒದಗಿಸಿಕೊಟ್ಟರು. ಅಂದು ಸಂಜೆ ಎಲ್ಲರ ಚಿತ್ರಗಳನ್ನು ಪರಿಶೀಲಿಸುವಾಗ, ಒಬ್ಬ ಶಿಷ್ಯ ಬೇಕಾಬಿಟ್ಟಿಯಾಗಿ ಚಿತ್ರ ತಯಾರಿಸಿದ್ದನು. ಗುರು ಸಂಜೆ ಅವನೊಬ್ಬನನ್ನೇ ಕರೆದು ಹಾಗೇಕೆ ಮಾಡಿದೆ ಎಂದು ಪ್ರಶ್ನಿಸಿದಾಗ, ಆ ಶಿಷ್ಯ ತಾನು ಬರೆದದ್ದು ಸರಿಯಾಗೇ ಇದೆ ಎನ್ನುವಂತೆ ವಾದಿಸಿದ. ಗುರು ತಾನೇ ಒಂದು ಹಾಳೆಯಲ್ಲಿ ಬಿದಿರಿನ ಚಿತ್ರವನ್ನು ಕೆಂಪು ಇಂಕಿನಲ್ಲಿ ಬರೆದು'ಬಿದಿರಿನ ಚಿತ್ರವನ್ನು ಹೀಗೆ ಬರೆಯಬೇಕು' ಎಂದರು. ಅದನ್ನು ಕಿರುಗಣ್ಣಿನಲ್ಲಿ ದಿಟ್ಟಿಸಿದ ಶಿಷ್ಯ,'ಕೆಂಪು ಬಣ್ಣದ ಬಿದಿರನ್ನು ನಾನೆಂದೂ ಕಂಡಿಲ್ಲ.' ಎಂದನು. ಅದಕ್ಕೆ ಗುರು,'ಹೌದು ನೀನು ಹೇಳಿದ್ದು ಸರಿ. ಹಾಗೆಯೇ ನಾನೂ ಕೂಡ ಕಪ್ಪು ಬಣ್ಣದ ಬಿದಿರನ್ನು ಕಂಡಿಲ್ಲ.'

ಕೆ.ಟಿ. ಶಿವಪ್ರಸಾದರ "Lock your unwanted memories" ಎಂಬ ಹೆಸರಿನ ಈ ಕೃತಿ ಮುಂದಿಡುವ ಪ್ರಮುಖ ತಾತ್ವಿಕಾಂಶಗಳನ್ನು ಹೀಗೆ ಪಟ್ಟಿ ಮಾಡಬಹುದು:

೧. ಬೌದ್ಧ ಮೀಮಾಂಸೆಯ ಪ್ರಕಾರ ಕಲಾಕೃತಿಯೊಂದರ ಆತ್ಯಂತಿಕ ಉದ್ದೇಶವೆಂದರೆ ದು:ಖದ ಅನುಸಂಧಾನವೇ ಹೊರತು, ಆನಂದವಲ್ಲ.

೨. ಕಲಾಕೃತಿಯೊಂದು ಸಿದ್ಧವಾಗಿ ಇರುವುದಿಲ್ಲ. ಅದು ನಿರಂತರವಾಗಿ ಆಗುತ್ತಲೇ ಇರುತ್ತದೆ. ಹಾಗಾಗಿ ಯಾವುದರ ಮೂಲಪಠ್ಯವೂ ಇರಲು ಸಾಧ್ಯವಿಲ್ಲ.

೩) ಲೋಕದ ಅಸಂಖ್ಯ ಸಂಕಟಗಳ ಅನಾವರಣವು ಉಂಟುಮಾಡುವ ಪರಿಣಾಮವೇ ಕರುಣಾ–ಮೈತ್ರಿ.

೪. ಕವಿ / ಕಲಾವಿದ – ಸಾಪೇಕ್ಷಪಠ್ಯ–ಆವರಣ–ನೋಡುಗ – ಪರಿಣಾಮ ಪಠ್ಯ – ಈ ಸರಣಿ ನಿರಂತರವಾಗಿ ಮುಂದುವರಿಯುತ್ತಲೇ ಇರುತ್ತದೆ. ಈ ಯಾವ ಅಂಶಗಳೂ ಸ್ವತಂತ್ರವಲ್ಲ ಮತ್ತು ಕಲಾಪ್ರಕ್ರಿಯೆಯೊಂದು ಸಾಧ್ಯವಾಗುವುದು ಇವೆಲ್ಲವುಗಳ ಸಂಬಂಧದಲ್ಲಿ ಮಾತ್ರ.

೫. 'ತಿಳಿವು–ತಿಳಿವುದು–ತಿಳಿದವನು' –ಈ ತ್ರೈಬಿನ್ನವ (ತ್ರಿಕ) ದಾಟಿ ನಿಂತವನಲ್ಲಿ ಉಂಟಾಗುವುದು ಮಹಾಕರುಣೆ ಮತ್ತು ಲೋಕವಾತ್ಸಲ್ಯವೇ ಹೊರತು ಏಕಾಕಿಯಾಗಿ ಪಡೆವ ಆನಂದವಲ್ಲ. □

ಕುರುಹು

ಎದೆಗೆ ಇಲ್ಲಿ ನದಿಯ ಹರಿವು
ಬತ್ತಿದಂತೆ ಕಂಡರೂ ಕೆದರಿದಷ್ಟು
ಒರತೆ ನೀರು ಒಡಲಲೆಷ್ಟು ಜೀವಗಳು

ಹಟ್ಟಿ ನಗುವಿನ ಪುಟ್ಟ–ಗೌರಿಯರ
ಮೂಡಿದ ಹೆಜ್ಜೆಯಲಿ ಹದಗೊಂಡ ನೆಲವು
ಬೆವರಿನ ಹನಿಗೆ ಬೆಲೆ ಇಲ್ಲದ ದುಡಿಮೆಯು

ನಮ್ಮ ಪ್ರೀತಿಯ ಜಾಲಿ ಮರವು
ಯಾರ ಹೊಲಕೆ ಬೇಲಿಯು
ನೆತ್ತರಲಿ ನರಳುತಿರುವವು ಕಾಗೆ–ಕೌಜುಗದ ಗೂಡುಗಳು.

ಜೀವಕ್ಕಿಲ್ಲಿ ಬೆಲೆಯೂ ಇಲ್ಲ
ನೆಲ ನಂಬಿದವರಿಗೆ ನೆಲೆಯೂ ಇಲ್ಲ
ಬಿಳಿಯಂಗಿಯೊಳಗಿನ ಕಪ್ಪಿಟ್ಟ ಮುಖಗಳದೇ ಕಾರುಬಾರು.

ಬಲಗೈ ಗುರುತು ಎಡಗೈಯಿಗಿಲ್ಲ
ಎಡಗೈ ಗುರುತು ಬಲಗೈಯಿಗಿಲ್ಲ
ದೇಹವನೇ ಸೀಳಿ ಕುರುಹು ಕಳೆದುಕೊಂಡವರು

ಎಂದು ಎದ್ದಾರಿವರು ಜಗದ ಜನರ ಮರೆತವರು
ಶಂಭೂಕನ ಗೋರಿಯನೆ ಸಿಂಹಾಸನವಾಗಿಸಿಕೊಂಡವರ
ಕಾಲಕೆಳಗೆ ತೆವಳಿದವರು ಕಾಲನೂರಿ ನಿಂತಾರೇನು?

○ ಅನಸೂಯ ಕಾಂಬಳೆ

ವಿಕೇಂದ್ರೀಕೃತ ಅಭಿವೃದ್ಧಿಗೆ ಬಂದ ವಿಪತ್ತು!

ಧರೆ ಹತ್ತಿ ಉರಿದರೆ

- ೩ -

ಡಾ. ಟಿ.ಆರ್. ಚಂದ್ರಶೇಖರ್



ಸಂವಿಧಾನೇತರ ಸಂಸ್ಥೆಯಾದ ರಾಜ್ಯ ಯೋಜನಾ ಮಂಡಳಿಯು ಜಿಲ್ಲಾ ಪಂಚಾಯಿತಿಗಳ ಮೇಲೆ ಮತ್ತು ಜಿಲ್ಲಾ ಯೋಜನಾ ಸಮಿತಿಗಳ ಮೇಲೆ ಅಂಕುಶ ಪ್ರಯೋಗಿಸುತ್ತಿದೆ. ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವ ಅಧಿಕಾರವನ್ನು ಸರ್ಕಾರವು ತನಗೆ ತಾನೆ ಕೊಟ್ಟುಕೊಂಡು ಬಿಟ್ಟಿದೆ. ಇದನ್ನು ಕೆಡಿಪಿ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾ ಪಂಚಾಯಿತಿಯಲ್ಲಿ ವಿವಿಧ ಇಲಾಖೆಗಳ ಕಾರ್ಯವೈಖರಿಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಮತ್ತು ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಪ್ರತಿತಿಂಗಳೂ ಸಮೀಕ್ಷೆ ಮಾಡುತ್ತಾರೆ. ಅದೊಂದು ಕುತೂಹಲಕಾರಿ ಪ್ರಹಸನದಂತೆ ಕಂಡರೆ ಆಶ್ಚರ್ಯವಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಅದರ ಮೌಲ್ಯಮಾಪನ ನಡೆಸುವುದು ಸಂವಿಧಾನೇತರ ಸಂಗತಿಯಾಗಿದೆ. ಅಧಿಕಾರಿಗಳನ್ನು ಹೀಯಾಳಿಸುವ ಜನಪ್ರತಿನಿಧಿಗಳು, ವ್ಯವಹಾರ ನಡೆಸಲು ಅದೇ ಅಧಿಕಾರಿಗಳ ಮುಂದೆ ನಿಲ್ಲುವುದು ಬೇರೆಯದೆ ಪ್ರಹಸನ.

ದಿ. ರಾಜೀವ್ ಗಾಂಧಿ ಅವರ ಆಸಕ್ತಿಯಿಂದಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡುವ ಉದ್ದೇಶದಿಂದ ಸಂವಿಧಾನದ ೭೩. ಮತ್ತು ೭೪ನೆಯ ತಿದ್ದುಪಡಿಯನ್ನು ಮಾಡಿದ್ದು ಸರಿಯಷ್ಟೆ! ಕುತೂಹಲದ ಸಂಗತಿಯೆಂದರೆ ಸಂವಿಧಾನದ ತಿದ್ದುಪಡಿಗೆ ಮೂಲ ಪ್ರೇರಣೆಯು ಕರ್ನಾಟಕವು ೧೯೮೦ರ ದಶಕದಲ್ಲಿ ನಡೆಸಿದ ಪ್ರಯೋಗದಿಂದ(೧೯೮೩ರ ಕರ್ನಾಟಕ ಜಿಲ್ಲಾ ಪಂಚಾಯತಿ, ಮಂಡಳ ಪಂಚಾಯತಿ,ಗ್ರಾಮ ಪಂಚಾಯತಿ ಮತ್ತು ನ್ಯಾಯ ಪಂಚಾಯತಿ ಮಸೂದೆ) ಬಂದಿತು ಎಂಬುದು ಇಂದು ನಿಚ್ಚಳವಾಗಿದೆ. ಇಂತಹ ವಿಕೇಂದ್ರೀಕರಣ ವ್ಯವಸ್ಥೆಯ ಉಚ್ಛ್ರಾಯ ಕಾಲ ಕರ್ನಾಟಕಕ್ಕೆ ಸಂಬಂಧಿಸಿದಂತೆ ಕಳೆದ ಶತಮಾನದ ೮೦ರ ದಶಕ ಮತ್ತು ೯೦ರ ದಶಕದ ಆದಿ ಭಾಗದಲ್ಲೇ ಮುಗಿದು ಹೋದುದನ್ನು ತಜ್ಞರು ಗುರುತಿಸಿದ್ದಾರೆ. ಇಂದು ಅದು ಅವನತಿಯನ್ನು ಅನುಭವಿಸುತ್ತಿದೆ.

ಕಳೆದ ಶತಮಾನದ ೯೦ರ ದಶಕವು(ಕೊನೆಯ ಭಾಗ) ಪಂಚಾಯತ್ ರಾಜ್ ವ್ಯವಸ್ಥೆಯ ಅವನತಿಯ ಕಾಲವೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಡುತ್ತಿದ್ದಾರೆ. ಈ ಅವನತಿಯ ಪ್ರಕ್ರಿಯೆ ಇಂದೂ ಮುಂದುವರಿದಿದೆ. ಇಂದು ಅದು ತನ್ನ ಅರ್ಥವನ್ನೇ ಕಳೆದುಕೊಳ್ಳುತ್ತಿದೆ. ಅದರ ಅಧಿಕಾರವನ್ನು ಪೈಪೋಟಿಯ ಮೇಲೆ ಮೊಟಕುಗೊಳಿಸುವಲ್ಲಿ ಸರ್ಕಾರಗಳು ನಿರತವಾಗಿವೆ. ಈ ಕ್ಷೇತ್ರದಲ್ಲಿ ಕರ್ನಾಟಕವು ಸಾಧಿಸಿದ್ದ ಸಾಧನೆಯ ಸ್ಥಾನವನ್ನು ಇಂದು ಅದು ಕಳೆದುಕೊಳ್ಳುತ್ತಿದೆ. ನಮ್ಮ ರಾಜ್ಯದಲ್ಲಿ ಸರ್ಕಾರಗಳನ್ನು ನಡೆಸುವ ಪಕ್ಷಗಳಿಗೆ ಸ್ಥಳೀಯ ಸಂಸ್ಥೆಗಳ ಬಗ್ಗೆ ಗೌರವವಿದ್ದಂತೆ ಕಾಣುವುದಿಲ್ಲ. ಅನೇಕ ಮುಖಗಳಲ್ಲಿ ಅವುಗಳ ಅಧಿಕಾರ ಹರಣ ಮತ್ತು ಅವುಗಳ ಅಧಿಕಾರದ ಮೇಲೆ ಆಕ್ರಮಣ ನಿರಂತರವಾಗಿ ಅವು ನಡೆಸುತ್ತಿವೆ.

ಈ ವಿಷಯದಲ್ಲಿ ವಿವಿಧ ರಾಜಕೀಯ ಪಕ್ಷಗಳ ನಡುವೆ ಯಾವುದೇ ವ್ಯತ್ಯಾಸಗಳು ಕಂಡುಬರುವುದಿಲ್ಲ. ಉದಾಹರಣೆಗೆ ಸಂವಿಧಾನ ಬದ್ಧವಾದ ಜಿಲ್ಲಾ ಯೋಜನಾ ಸಮಿತಿಗಳನ್ನು ಸರ್ಕಾರಗಳು ನಡೆಸಿಕೊಂಡು ಬರುತ್ತಿರುವುದನ್ನು ಇದಕ್ಕೆ ನಿದರ್ಶನವಾಗಿ ನೋಡಬಹುದು. ಸಂವಿಧಾನೇತರ ಸಂಸ್ಥೆಯಾದ ರಾಜ್ಯ ಯೋಜನಾ ಮಂಡಳಿಯು ಜಿಲ್ಲಾ ಪಂಚಾಯಿತಿಗಳ ಮೇಲೆ ಮತ್ತು ಜಿಲ್ಲಾ ಯೋಜನಾ ಸಮಿತಿಗಳ ಮೇಲೆ ಅಂಕುಶ ಪ್ರಯೋಗಿಸುತ್ತಿದೆ. ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವ ಅಧಿಕಾರವನ್ನು ಸರ್ಕಾರವು ತನಗೆ ತಾನೆ ಕೊಟ್ಟುಕೊಂಡುಬಿಟ್ಟಿದೆ.

ಇದನ್ನು ಕೆಡಿಪಿ (ಕರ್ನಾಟಕ ಡೆವಲಪ್ ಮೆಂಟ್ ಪ್ರೋಗ್ರಾಮ್) ಎಂದು ಕರೆಯಲಾಗಿದೆ. ಈ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾ ಪಂಚಾಯಿತಿಯಲ್ಲಿ ವಿವಿಧ ಇಲಾಖೆಗಳ ಕಾರ್ಯವೈಖರಿಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಮತ್ತು ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಪ್ರತಿ ತಿಂಗಳೂ ಸಮೀಕ್ಷೆ ಮಾಡುತ್ತಾರೆ. ಅದೊಂದು ಕುತೂಹಲಕಾರಿ ಪ್ರಹಸನದಂತೆ ಕಂಡರೆ ಆಶ್ಚರ್ಯವಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಅದರ ಮೌಲ್ಯಮಾಪನ ನಡೆಸುವುದು ಸಂವಿಧಾನೇತರ ಸಂಗತಿಯಾಗಿದೆ. ಏಕೆಂದರೆ ಅವರಿಗೆ ಕಾನೂನಿನಲ್ಲಿ ಅಂತಹ ಅಧಿಕಾರವಿಲ್ಲ. ಅದನ್ನು ಕುರಿತೇ ಒಂದು ಅಧ್ಯಯನ ನಡೆಸಬಹುದು.

ಕೆಡಿಪಿ ಸಭೆಗಳಲ್ಲಿ ಅಧಿಕಾರಿಗಳನ್ನು ಬಾಯಿಗೆ ಬಂದಂತೆ ಮಾತನಾಡಿ ಹೀಯಾಳಿಸುವ ಜನಪ್ರತಿನಿಧಿಗಳು ಅದು ಮುಗಿದ ತಕ್ಷಣವೆ ತಮ್ಮ ಕಡತಗಳ ಬಗ್ಗೆ ವಿಚಾರಿಸಲು ಮತ್ತು ಎಲ್ಲ ರೀತಿಯ ವ್ಯವಹಾರ ನಡೆಸಲು ಅದೇ ಅಧಿಕಾರಿಗಳ ಮುಂದೆ ನಿಲ್ಲುವುದು ಬೇರೆಯದೆ ಪ್ರಹಸನ(ಅಧಿಕಾರಿಗಳು ಕೇವಲ ತಮ್ಮ ಸಂವಹನ ಸಾಮರ್ಥ್ಯದ ಕೊರತೆಯಿಂದಾಗಿ, ಭಾಷೆಗೆ ಸಂಬಂಧಿಸಿದ ಸಮಸ್ಯೆಯಿಂದಾಗಿ ಕೆಡಿಪಿ ಸಭೆಗಳಲ್ಲಿ ಜನಪ್ರತಿನಿಧಿಗಳಿಂದ ಅನ್ನಿಸಿಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಕೆಡಿಪಿಯಲ್ಲಿ ಮಾಹಿತಿಯನ್ನು ಹೇಗೆ ಸಲ್ಲಿಸಬೇಕೆಂಬುದರ ಬಗ್ಗೆ ಅಧಿಕಾರಿಗಳಿಗೆ ತರಬೇತಿಯ ಅಗತ್ಯವಿದೆ.ಅಲ್ಲಿ ನಾನು ನೋಡಿದಂತೆ ಸಂವಹನದ ಸಮಸ್ಯೆಯನ್ನು ಅಧಿಕಾರಿಗಳು ಎದುರಿಸುತ್ತಿದ್ದಾರೆ.

ಅಭಿವೃದ್ಧಿಗೆ ಸಂಬಂಧಿಸಿದ ಸಂಗತಿಗಳನ್ನು ಮತ್ತು ಮಾಹಿತಿಯನ್ನು ಹೇಗೆ ಮಂಡಿಸಬೇಕೆಂಬುದರ ಬಗ್ಗೆ ಅದರಲ್ಲೂ ಕನ್ನಡದಲ್ಲಿ ಸಲ್ಲಿಸಬೇಕೆಂಬುದರ(ಇಂಗ್ಲೀಶನ ಕತೆಯನ್ನು ಹೇಳದಿರುವುದೆ ಲೇಸು) ಬಗ್ಗೆ ಅನೇಕ ಅಧಿಕಾರಿಗಳಿಗೆ ತಿಳುವಳಿಕೆಯಿಲ್ಲ. ಅನೇಕ ಸಂದರ್ಭದಲ್ಲಿ ಅವರು ಏನು ಹೇಳುತ್ತಿದ್ದಾರೆಂಬುದು ಯಾರಿಗೂ ತಿಳಿಯುವುದಿಲ್ಲ. ಈ ಸಭೆಗಳಿಗೆ ಸಲ್ಲಿಸುವ ವರದಿಗಳಲ್ಲಿ ಯಾವ ಅರ್ಥಶಾಸ್ತ್ರಜ್ಞನು ಅಲ್ಲಿ ಏನು ಹೇಳಲಾಗಿದೆಯೆಂಬುದನ್ನು ಬಿಡಿಸಿ ಹೇಳುವುದು ಸಾಧ್ಯವಿಲ್ಲವಾಗಿದೆ, ಈ ಬಗ್ಗೆ ತರಬೇತಿ ಬೇಕೆಂದು ಅಧಿಕಾರಿಗಳಿಗೂ ಅನ್ನಿಸಿಲ್ಲ ಮತ್ತು ಯೋಜನಾ ಇಲಾಖೆಗೂ ಹಾಗೂ ಪಂಚಾಯತ್ ರಾಜ್ ಇಲಾಖೆಗೂ ಅನ್ನಿಸಿಲ್ಲ.) ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರ ಸಬಲೀಕರಣವೆನ್ನುವುದು ತಮಾಷೆಯ ಸಂಗತಿಯಾಗಿಬಿಟ್ಟಿದೆ.

ಈ ದಿಶೆಯಲ್ಲಿ ರಾಜಕೀಯ ಪಕ್ಷಗಳ ವೈಫಲ್ಯ ಎದ್ದು ಕಾಣುತ್ತದೆ. ಕರ್ನಾಟಕದಲ್ಲಿ ವಿಕೇಂದ್ರೀಕರಣವು ಎದುರಿಸುತ್ತಿರುವ ವಿಪತ್ತನ್ನು ಕುರಿತಂತೆ ಪ್ರಸ್ತುತ ಪ್ರಬಂಧದಲ್ಲಿ ಚರ್ಚೆಮಾಡುವ ಪ್ರಯತ್ನ ಮಾಡಲಾಗಿದೆ. ಅಂಬೇಡ್ಕರ್ ಅವರು ಪಂಚಾಯತಿ ರಾಜ್ ಸಂಸ್ಥೆಗಳ ಬಗ್ಗೆ ಅತೀವ ವಿರೋಧಿಗಳಾಗಿದ್ದರು. ಇದಕ್ಕೆ ಮುಖ್ಯ ಕಾರಣವೆಂದರೆ ಇಂತಹ ಸಂಸ್ಥೆಗಳು ಜಮೀನುದಾರರ ವಶದಲ್ಲಿ ದಲಿತರಿಗೆ ಮೃತ್ಯುಪಾಯವಾಗಿ ಬಿಡಬಹುದೆಂಬ ಆತಂಕ-ಭಯ ಅವರಿಗಿತ್ತು. ಇಂದು ಅದು ಬೇರೆ ರೀತಿಯಲ್ಲಿ ಕಂಡುಬರು

ತ್ತಿರುವುದನ್ನು ಸಮಾಜ ವಿಜ್ಞಾನಿಗಳು ಗುರುತಿಸುತ್ತಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ವಿಕೇಂದ್ರೀಕರಣವು ಎದುರಿಸುತ್ತಿರುವ ಸಮಸ್ಯೆಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಲು ಪ್ರಯತ್ನಿಸಲಾಗಿದೆ.

ಭಾಗ-೧

ಜಿಲ್ಲಾ ಯೋಜನಾ ಸಮಿತಿಗಳ ಕಾರ್ಯಭಾರ ಮತ್ತು ಕಾರ್ಯವೈಖರಿ

ಪ್ರತಿಯೊಂದು ಜಿಲ್ಲಾ ಯೋಜನಾ ಸಮಿತಿಯೂ ತನ್ನ ಜಿಲ್ಲೆಗೆ ಸಂಬಂಧಿಸಿದಂತೆ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು ಅದರ ಬಹು ಮುಖ್ಯ ಕಾರ್ಯವಾಗಿದೆ. ಅದು ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಯೋಜನೆಗಳನ್ನು ಸಂಯೋಜಿಸಿ ಜಿಲ್ಲೆಗೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಬೇಕಾಗುತ್ತದೆ. ಕರ್ನಾಟಕದಲ್ಲಿ ಇದುವರೆವಿಗೂ ಯಾವುದೇ ಜಿಲ್ಲಾ ಯೋಜನಾ ಸಮಿತಿಯು ಅಂತಹ ಯೋಜನೆಯನ್ನು ಸಿದ್ಧಪಡಿಸಿರುವ ಒಂದೇ ಒಂದು ಉದಾಹರಣೆಯೂ ನಮಗೆ ದೊರೆಯುವುದಿಲ್ಲ. ಅವು ಅಕ್ಷರಶಃ ನಿಸ್ತೇಜವಾಗಿ ಬಿಟ್ಟಿವೆ.

ಸಂವಿಧಾನಾತ್ಮಕವಾಗಿ ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರು ಜಿಲ್ಲಾ ಪಂಚಾಯತಿಯ ಅಧ್ಯಕ್ಷರೇ ಆಗಿರುತ್ತಾರೆ. ಜಿಲ್ಲೆಯಲ್ಲಿನ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಕೇಂದ್ರದಲ್ಲಿರುವ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಅದರ ಉಪಾಧ್ಯಕ್ಷರಾಗಿರುತ್ತಾರೆ. ಈ ಕಾರಣದಿಂದಾಗಿಯೆ ಅವು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬ ಅಭಿಮತವಿದೆ. ಅಂದರೆ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ತಮ್ಮ ಜವಾಬುದಾರಿಯನ್ನು ನಿಭಾಯಿಸುವುದರಲ್ಲಿ ವಿಫಲರಾಗಿದ್ದಾರೆಂದು ಇದರ ಅರ್ಥವಾಗಿ ಬಿಡುತ್ತದೆ. ಆದರೆ ಇದು ಸರಿಯಾದ ತಿಳುವಳಿಕೆಯಲ್ಲ. ಈ ಕಾರಣದಿಂದ ಅವು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಅವುಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರನ್ನು ಅಧ್ಯಕ್ಷರನ್ನಾಗಿ ಮಾಡುವ ಹುನ್ನಾರವೊಂದು ತಣ್ಣಗೆ ರಾಜ್ಯದಲ್ಲಿ ನಡೆದಿದೆ.

ಅದೊಂದು ಅತ್ಯಂತ ಅಪಾಯಕಾರಿಯಾದ ಕ್ರಮವಾದೀತು. ಇದನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ವಹಿಸಿ ಕೊಡುವುದೆಂದರೆ ಪಂಚಾಯತ್ ರಾಜ್ ಸಂಸ್ಥೆಗಳ ಅಪಮೌಲ್ಯವೆಂದೇ ತಿಳಿಯಬೇಕು. ವಿಕೇಂದ್ರೀಕರಣದ ಮೂಲ ತತ್ವಕ್ಕೆ ಇದರಿಂದ ಧಕ್ಕೆ ಉಂಟಾಗುತ್ತದೆ. ಮುಂದೆ ಜಿಲ್ಲಾ ಉಸ್ತುವಾರಿ ಸಚಿವ ಹುದ್ದೆಯು ಸಂವಿಧಾನೇತರವಾದುದೆಂದು ವಾದಿಸಲಾಗಿದೆ. ಜಿಲ್ಲಾ ಯೋಜನಾ ಸಮಿತಿಗಳು ತಮ್ಮ ಜವಾಬುದಾರಿಯನ್ನು ಸರಿಯಾಗಿ ನಿಭಾಯಿಸದಿದ್ದರೆ ಅದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಅವುಗಳಿಗೆ ಸರಿಯಾಗಿ ಸಿಬ್ಬಂದಿಯನ್ನು ರೂಪಿಸಿಲ್ಲ ಮತ್ತು ಅವರಿಗೆ ಸರಿಯಾದ ತರಬೇತಿಯನ್ನೂ ನೀಡಿಲ್ಲ ಮತ್ತು ತರಬೇತಿ ಕೈಪಿಡಿಗಳನ್ನು ಸಿದ್ಧಪಡಿಸಿಲ್ಲ.

ರಾಜ್ಯ ಯೋಜನಾ ಇಲಾಖೆ ಮತ್ತು ಯೋಜನಾ ಮಂಡಳಿಗಳು ತಮ್ಮ ಜವಾಬುದಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ. ಉದಾಹರಣೆಗೆ ಇಂದು ರಾಜ್ಯದಲ್ಲಿ ಎಲ್ಲ ಜಿಲ್ಲಾ ಯೋಜನಾ ಸಮಿತಿಗಳು 'ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆ'(ಐದು ವರ್ಷದ ಮುನ್ನೋಟ ಯೋಜನೆ : ೨೦೦೭-೦೮ ರಿಂದ ೨೦೧೧-೨೦೧೨) ಸಿದ್ಧಪಡಿಸುವ ಕಾರ್ಯದಲ್ಲಿ ನಿರತವಾಗಿವೆ. ಆದರೆ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ಹೇಗೆ ತಯಾರಿಸಬೇಕೆಂಬುದಕ್ಕೆ ರಾಜ್ಯಮಟ್ಟದಲ್ಲಿ ಯಾವುದೇ ಸಂಸ್ಥೆಯೂ ತರಬೇತಿ ನೀಡುತ್ತಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ನಮೂನೆಗಳನ್ನಾಗಲಿ ಅಥವಾ ಒಂದು ಮಾದರಿ ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆಯನ್ನಾಗಲಿ ಸಿದ್ಧಪಡಿಸುವ ತೊಂದರೆಯನ್ನು ರಾಜ್ಯ ಯೋಜನಾ ಮಂಡಳಿಯು ತೆಗೆದುಕೊಂಡಿಲ್ಲ.

ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರ ಸಬಲೀಕರಣವೆನ್ನುವುದು ತಮಾಷೆಯ ಸಂಗತಿಯಾಗಿಬಿಟ್ಟಿದೆ.ಈ ದಿಶೆಯಲ್ಲಿ ರಾಜಕೀಯ ಪಕ್ಷಗಳ ವೈಫಲ್ಯ ಎದ್ದು ಕಾಣುತ್ತದೆ. ಕರ್ನಾಟಕದಲ್ಲಿ ವಿಕೇಂದ್ರೀಕರಣವು ಎದುರಿಸುತ್ತಿರುವ ವಿಪತ್ತನ್ನು ಕುರಿತಂತೆ ಪ್ರಸ್ತುತ ಪ್ರಬಂಧದಲ್ಲಿ ಚರ್ಚೆಮಾಡುವ ಪ್ರಯತ್ನ ಮಾಡಲಾಗಿದೆ. ಅಂಬೇಡ್ಕರ್ ಅವರು ಪಂಚಾಯತಿ ರಾಜ್ ಸಂಸ್ಥೆಗಳ ಬಗ್ಗೆ ಅತೀವ ವಿರೋಧಿಗಳಾಗಿದ್ದರು. ಇದಕ್ಕೆ ಮುಖ್ಯ ಕಾರಣವೆಂದರೆ ಇಂತಹ ಸಂಸ್ಥೆಗಳು ಜಮೀನುದಾರರ ವಶದಲ್ಲಿ ದಲಿತರಿಗೆ ಮೃತ್ಯುಪಾಯವಾಗಿ ಬಿಡಬಹುದೆಂಬ ಆತಂಕ-ಭಯ ಅವರಿಗಿತ್ತು. ಇಂದು ಅದು ಬೇರೆ ರೀತಿಯಲ್ಲಿ ಕಂಡುಬರುತ್ತಿರುವುದನ್ನು ಸಮಾಜ ವಿಜ್ಞಾನಿಗಳು ಗುರುತಿಸುತ್ತಿದ್ದಾರೆ. ಕರ್ನಾಟಕದಲ್ಲಿ ವಿಕೇಂದ್ರೀಕರಣವು ಎದುರಿಸುತ್ತಿರುವ ಸಮಸ್ಯೆಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಲು ಪ್ರಯತ್ನಿಸಲಾಗಿದೆ.

ಯೋಜನಾ ಇಲಾಖೆ ಮತ್ತು ರಾಜ್ಯ ಯೋಜನಾ ಮಂಡಳಿಗಳು ಒಟ್ಟಿಗೆ ಸೇರಿಕೊಂಡು ಒಂದು ಮಾದರಿ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಬಹುದಾಗಿತ್ತು. ಅದನ್ನು ಉಳಿದ ಜಿಲ್ಲೆಗಳ ಸಿಬ್ಬಂದಿಗೆ ತರಬೇತಿ ಕೈಪಿಡಿಯಾಗಿ ಬಳಸಬಹುದಾಗಿತ್ತು. ಇಂತಹ ಪ್ರಯತ್ನವನ್ನು ಮಾಡದೆ ಜಿಲ್ಲಾ ಯೋಜನಾ ಸಮಿತಿಗಳನ್ನು ದೂರುವುದರಲ್ಲಿ ಯಾವುದೆ ಅರ್ಥವಿಲ್ಲ. ಸಾಮಾನ್ಯವಾಗಿ ರಾಜ್ಯ ಯೋಜನಾ ಮಂಡಳಿಗೆ ಶೈಕ್ಷಣಿಕ ವಲಯದಲ್ಲಿನ ಒಬ್ಬ ತಜ್ಞ ಅರ್ಥಶಾಸ್ತ್ರಜ್ಞರನ್ನು ಉಪಾಧ್ಯಕ್ಷರನ್ನಾಗಿ ನೇಮಿಸುವ ಪರಿಪಾಠ ಕರ್ನಾಟಕದಲ್ಲಿತ್ತು.

ಅದಕ್ಕೆ ಪ್ರಸ್ತುತ ಸರ್ಕಾರವು ತಿಲಾಂಜಲಿಯಿಟ್ಟಂತೆ ತೋರುತ್ತಿದೆ. ಅದನ್ನು ಮಂತ್ರಿ ಮಂಡಳದಲ್ಲಿ ಸ್ಥಾನ ದೊರೆಯದ ನಿರಾಶ್ರಿತರಿಗೆ ಆಶ್ರಯ ನೀಡುವ ತಾಣವನ್ನಾಗಿ ಮಾಡಲಾಗುತ್ತಿದೆ(ಪ್ರಸ್ತುತ ರಾಜ್ಯ ಯೋಜನಾ ಮಂಡಳಿಗೆ ಮಾನ್ಯ ಶಂಕರಮೂರ್ತಿಗಳನ್ನು ಉಪಾಧ್ಯಕ್ಷರಾಗಿ ನೇಮಿಸಲಾಗಿದೆ. ಆದರೆ ಅದಕ್ಕೆ ಸದಸ್ಯರುಗಳನ್ನು ಇದುವರೆವಿಗೂ ನೇಮಿಸುವ ಬಗ್ಗೆ ಸರ್ಕಾರವು ತಲೆ ಕೆಡಿಸಿಕೊಂಡಿಲ್ಲ). ಈ ಮಂಡಳಿಯನ್ನು ಪೂರ್ಣಪ್ರಮಾಣದಲ್ಲಿ ರೂಪಿಸಿ ಅದೆಷ್ಟೋ ವರ್ಷಗಳಾಗಿಬಿಟ್ಟಿವೆ. ಅದಕ್ಕೆ ಇಂದಿಗೂ ಸದಸ್ಯರನ್ನು ನೇಮಿಸುವುದು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಅಭಿವೃದ್ಧಿಯೇ ನಮ್ಮ ಮಂತ್ರವೆನ್ನುವ ಸರ್ಕಾರದ ಗತಿ ಇಲ್ಲಿಗೆ ಬಂದಿದೆ. ಅದನ್ನು ಕೇವಲ ಹೆಸರಿಗೆ ಮಾತ್ರ ಎನ್ನುವಂತೆ ಮಾಡಲಾಗಿದೆ.

ಈ ಸಂಸ್ಥೆಯು ಎಲ್ಲ ವಿಷಯಗಳಲ್ಲೂ ವಿಫಲವಾಗಿದೆ. ಪ್ರಾಸಂಗಿಕವಾಗಿ ಇಲ್ಲಿ ನೆನಪಿಸಿಕೊಳ್ಳಬೇಕಾದ ಸಂಗತಿಯೆಂದರೆ, ರಾಜ್ಯ ಯೋಜನಾ ಮಂಡಳಿ ಮತ್ತು ರಾಷ್ಟ್ರೀಯ ಯೋಜನಾ ಆಯೋಗಗಳು ರಾಜಕೀಯ ಸಂಸ್ಥೆಗಳಾಗಿದ್ದರೆ ಜಿಲ್ಲಾ ಯೋಜನಾ ಸಮಿತಿಯು ಸಂವಿಧಾನಾತ್ಮಕ ಸಂಸ್ಥೆಯಾಗಿದೆ. ಆದರೆ ಅದನ್ನು ಕೇಳುವವರಿಲ್ಲದಂತಾಗಿದೆ.

ಭಾಗ-೨

ಡಾ।ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಗೆ ಅವಮಾನ!

ಉದಾಹರಣೆಗೆ ೨೦೦೭-೦೮ರಲ್ಲಿ ಸರ್ಕಾರವು ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯನ್ನು ಅನುಷ್ಠಾನಗೊಳಿಸುವಾಗ ಅದರ ಬಾಬ್ತು ಅನುದಾನ ಹಂಚುವ ಸೂತ್ರವನ್ನು ಬದಲಾಯಿಸಿತು.ಈ ಬದಲಾವಣೆಯಿಂದಾಗಿ ರಾಜ್ಯದ ಅತ್ಯಂತ ಹಿಂದುಳಿದ ಗುಲಬರ್ಗಾ ವಿಭಾಗಕ್ಕೆ ೨೦೦೭-೦೮ರಲ್ಲಿ ಒಟ್ಟು ಅನುದಾನ ರೂ.೧೩೭೧.೩೦ ಕೋಟಿಯಲ್ಲಿ ರೂ.೧೨೮ ಕೋಟಿಯಷ್ಟು ನಷ್ಟವಾಗಿ ಹೋಯಿತು.

ಸಮಿತಿಯ ಸೂತ್ರವನ್ನು ಅನುಸರಿಸಿದರೆ ಗುಲಬರ್ಗಾ ವಿಭಾಗಕ್ಕೆ ಒಟ್ಟು ವಾರ್ಷಿಕ ಅನುದಾನದಲ್ಲಿ ದೊರೆಯುವ ಪ್ರಮಾಣ ಶೇ೪೦. ಆದರೆ ಸರ್ಕಾರಿ ಸೂತ್ರವನ್ನು ಅನುಸರಿಸಿದರೆ ಅದಕ್ಕೆ ದೊರೆಯುವ ಪ್ರಮಾಣ ಕೇವಲ ಶೇ೩೨. ಅಂದರೆ ಇಲ್ಲಿ ನಷ್ಟ ಶೇ೮.೦೦. ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯಲ್ಲಿನ ಅನುದಾನ ಹಂಚಿಕೆ ಸೂತ್ರವನ್ನು ತಿರಸ್ಕರಿಸಿ ಸರ್ಕಾರವು ತನ್ನದೇ ಸೂತ್ರವನ್ನು ಯಾವುದೇ ವಿವೇಚನೆಯಿಲ್ಲದೆ ಅನುಷ್ಠಾನಗೊಳಿಸಿದಾಗ ರಾಜ್ಯ ಯೋಜನಾ ಮಂಡಳಿಯು ಮೂಕ ಪ್ರೇಕ್ಷಕನಂತೆ ಮೌನವಹಿಸಿತ್ತು. ಈ ಸೂತ್ರದ ಬದಲಾವಣೆಯ ಸಲಹೆ ಅದರದೆ ಎಂಬ ಮಾತು ಕೇಳಿಬರುತ್ತಿದೆ! ಈ ಸಮಿತಿಯ ಎಂಟು ವರ್ಷಗಳ ಅಭಿವೃದ್ಧಿ ಯೋಜನೆಯನ್ನು ಸಮಿತಿಯು ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳಿಸಲು ಸಲಹೆ ನೀಡಿತ್ತು.

ವಾಸ್ತವವಾಗಿ ಅದು ಅಭಿವೃದ್ಧಿಯನ್ನು ಅಳೆಯಲು ತಾಲೂಕುಗಳನ್ನು ಅಭಿವೃದ್ಧಿ ಘಟಕಗಳನ್ನಾಗಿ ಮಾಡಿಕೊಂಡಿತ್ತು. ಆದರೆ ಯೋಜನಾ ಮಂಡಳಿಗೆ ಅಭಿವೃದ್ಧಿ ಪ್ರಕ್ರಿಯೆಯನ್ನು ತಾಲೂಕು ಮಟ್ಟಕ್ಕೆ ಒಯ್ಯುವುದು ಸಾಧ್ಯವಾಗಿಲ್ಲ. ಈ ಮಂಡಳಿಯು ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸುಗಳನ್ನು ಕೇವಲ ಎಂಟು ವರ್ಷದ ಯೋಜನೆಗೆ ಸೀಮಿತಗೊಳಿಸಿಬಿಟ್ಟಿದೆ. ಆದರೆ ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸುಗಳು ಕೇವಲ ಅದಕ್ಕೆ ಮಾತ್ರ ಸೀಮಿತವಾದುದಲ್ಲ. ಅದು ಅನೇಕ ಇತರೆ ಸಲಹೆ ಸೂಚನೆಗಳನ್ನು ನೀಡಿದೆ.

ಅವುಗಳ ಕಡೆಗೆ ನಾವು ಗಮನವನ್ನೆ ನೀಡುತ್ತಿಲ್ಲ. ಉದಾಹರಣೆಗೆ ಅದರ ಒಂದು ಬಹು ಮುಖ್ಯ ಸಲಹೆಯೆಂದರೆ ತಕ್ಷಣ ಪ್ರಾದೇಶಿಕ ಅಭಿವೃದ್ಧಿ ನೀತಿಯೊಂದನ್ನು ಪ್ರಕಟಿಸುವುದು ಮತ್ತು ಪ್ರಾದೇಶಿಕ ಅಸಮಾನತೆಯ ಮೇಲೆ

[illegible] ...ರದ ಪ್ರಕಟವಾಗಿ ಐದಾರು ವರ್ಷಗಳು ಕಳೆದರೂ ನಮ್ಮ ಸರ್ಕಾರಕ್ಕೆ ಪ್ರಾದೇಶಿಕ ಅಭಿವೃದ್ಧಿ ನೀತಿಯೊಂದನ್ನು ಪ್ರಕಟಿಸುವುದು ಸಾಧ್ಯವಾಗಿಲ್ಲ.ಈ ಸರ್ಕಾರಕ್ಕಾಗಲಿ, ಯೋಜನಾ ಮಂಡಳಿಗಾಗಲಿ ಅಥವಾ ಯೋಜನಾ ಇಲಾಖೆಗಾಗಲಿ ಇದರ ಬಗ್ಗೆ ರವಷ್ಟು ಚಿಂತೆ ಇದ್ದಂತೆ ಕಾಣದು.

ಐಂದು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಅದಕ್ಕೆ ಸಂಬಂಧಿಸಿದ ಕ್ರಿಯಾಯೋಜನೆಗಳನ್ನು ಸಿದ್ಧಪಡಿಸುವ ಜವಾಬುದಾರಿಯನ್ನು ಸರ್ಕಾರವು ರಾಜ್ಯ ಮಟ್ಟದ ಇಲಾಖೆಗಳಿಗೆ ವಹಿಸಿಕೊಟ್ಟಿದೆ.(ಈ ಬಗ್ಗೆ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿ ಸುತ್ತೋಲೆಗಳನ್ನು ನೋಡಬಹುದು). ಅಭಿವೃದ್ಧಿ ಯೋಜನೆಗಳನ್ನು ರಾಜ್ಯಮಟ್ಟದ ಇಲಾಖೆಗಳು ಸಿದ್ಧಪಡಿಸುವುದಾದರೆ ನಮ್ಮ ಪಂಚಾಯತ್ ರಾಜ್ ಸಂಸ್ಥೆಗಳೇಕಿರಬೇಕು ? ಜಿಲ್ಲಾ ಪಂಚಾಯತಿಯ ಜನಪ್ರತಿನಿಧಿಗಳ ಸಹಭಾಗಿತ್ವದಲ್ಲಿ ಅಭಿವೃದ್ಧಿ ಯೋಜನೆಗಳು ಸಿದ್ಧವಾಗಬೇಕು.

ಆದರೆ ಪ್ರಸ್ತುತ ಸರ್ಕಾರವು ಆ ಜವಾಬುದಾರಿಯನ್ನು ರಾಜ್ಯ ಮಟ್ಟದ ಅಧಿಕಾರಿಗಳಿಗೆ ವಹಿಸಿಕೊಟ್ಟಿದೆ. ಅಭಿವೃದ್ಧಿಯ ಬಗ್ಗೆ ಮಾತನಾಡಿದರೆ ಸಾಕಾಗುವುದಿಲ್ಲ. ಅದನ್ನು ಆಚರಣೆಯಲ್ಲಿ ತರಬೇಕು. ಪ್ರಸ್ತುತ ಸರ್ಕಾರದ ಕಾರ್ಯವೈಖರಿಯನ್ನು ನೋಡಿದರೆ ಅದು 'ಆಚರಣೆಯಲ್ಲಿ ಸೊನ್ನೆ : ಸಿದ್ಧಾಂತದಲ್ಲಿ ಮತ್ತು ರೆಟೆರಿಕ್ಕಿನಲ್ಲಿ ಜೋರು' ಎನ್ನುವಂತಾಗಿದೆ.

ಭಾಗ-೩

ಪಂ.ರಾ.ಸಂ.ಗಳಲ್ಲಿ ಮಹಿಳಾ ಮೀಸಲಾತಿ

ಅಭಿವೃದ್ಧಿಯಲ್ಲಿ ಜನರ ಸಹಭಾಗಿತ್ವವನ್ನು ಮತ್ತು ಲಿಂಗ ಸಮಾನತೆಯನ್ನು ಸಾಧಿಸಿಕೊಳ್ಳುವ ಉದ್ದೇಶದಿಂದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ. ೩೩ ಮೀಸಲಾತಿ ನೀಡುವ ನಿಯಮ ಜಾರಿಗೆ ಬಂದಿತು. ಆದರೆ ಇಂತಹ ಕ್ರಾಂತಿಕಾರಕ ಬದಲಾವಣೆಗೆ ಸಮಾಜವು ಇಂದಿಗೂ ಸಿದ್ಧವಿಲ್ಲ. ಕೇವಲ ಮೀಸಲಾತಿಯಿದೆ ಎಂಬ ಕಾರಣಕ್ಕೆ ಮಹಿಳೆಯರನ್ನು ಚುನಾವಣೆಗೆ ನಿಲ್ಲಿಸುವುದು ನಡೆಯುತ್ತಿದೆ. ಈ ಬಗ್ಗೆ ಯಾವ ರಾಜಕೀಯ ಪಕ್ಷಗಳು ತನ್ನ ಕಾರ್ಯಕರ್ತರಿಗೆ ತರಬೇತಿ ನೀಡುತ್ತಿಲ್ಲ. ಸಮಾಜವು ಸಿದ್ಧವಾಗುವವರೆವಿಗೂ ಕಾಯುತ್ತಾ ಕೂರಬೇಕೆ ಎಂಬ ಪ್ರಶ್ನೆಯು ಮುಂದೆ ಬಂದು ನಿಲ್ಲುತ್ತದೆ.

ಸಮಾಜದಲ್ಲಿ ಬದಲಾವಣೆಯಾಗುವವರೆವಿಗೂ ಕಾಯುವುದು ಸರಿಯಲ್ಲ. ಈ ಕ್ರಮದ ಮೂಲಕ ಬದಲಾವಣೆಯ ವೇಗವನ್ನು ತೀವ್ರಗೊಳಿಸಬಹುದಾಗಿದೆ. ಆದರೆ ಮಹಿಳೆಯರಿಗೆ ಮೀಸಲಾತಿ ನೀಡಿದ್ದರಿಂದ ಏನಾಗಿದೆ? ಮಹಿಳೆಯರಲ್ಲಿ ಲಿಂಗ ಸಮಾನತೆ ಬಗ್ಗೆ ಅನೇಕ ಅನುಮಾನಗಳಿವೆ. ಅವರಲ್ಲಿ ಲಿಂಗ ಅಸಮಾನತೆಯ ಸಂಗತಿಗಳು ಅಂತರ್ಗತಗೊಂಡುಬಿಟ್ಟಿವೆ. ಚುನಾಯಿತರಾದ ಮಹಿಳೆಯರ ಹೆಸರಿನಲ್ಲಿ ಅವರ ಗಂಡ\ತಮ್ಮ\ಅಣ್ಣ\ಮಗ ಮುಂತಾದವರು ಅಧಿಕಾರ ಚಲಾಯಿಸುತ್ತಿರುವುದು ಕಂಡು ಬರುತ್ತದೆ.

ಒಂದು ಗ್ರಾಮದಲ್ಲಿ ವಾರ್ಡ ಸಭೆ ಮಾಡುತ್ತಿದ್ದೆವು. ಅಲ್ಲಿ ಪ್ರತಿ ವಾರ್ಡನಲ್ಲಿ ಅಲ್ಲಿನ ಚುನಾಯಿತ ಪ್ರತಿನಿಧಿಯನ್ನು ಅದರ ಮುಂದಾಳನ್ನಾಗಿ ಮಾಡಬೇಕಾಗಿತ್ತು. ಈ ಸಂದರ್ಭದಲ್ಲಿ ಆ ಸಭೆಗೆ ಬಂದಿದ್ದ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು(ಅವರೂ ಒಬ್ಬ ಮಹಿಳೆ) ವಾರ್ಡನ ಸದಸ್ಯೆಯನ್ನು ಬಿಟ್ಟು ಬೇರೆ ಯಾರೋ ಪುರುಷರನ್ನು ಅದರ ಸಭೆಗೆ ನೇಮಕ ಮಾಡಿಬಿಟ್ಟರು. ಇದರರ್ಥ ಸ್ಪಷ್ಟವಾಗಿ ಮಹಿಳೆಯರಲ್ಲೂ ಕೂಡ ಲಿಂಗ ತಾರತಮ್ಯ ರಕ್ತಗತವಾಗಿರುವುದನ್ನು ಮತ್ತು ಅವರೇ ಪುರುಷರನ್ನು ನೇಮಿಸುವಂತೆ ಒತ್ತಾಯಿಸುತ್ತಿರುವುದನ್ನು ತಿಳಿದುಕೊಳ್ಳಬಹುದು. ಏಕೆಂದರೆ ಮಹಿಳೆಯರೂ ಸಹ ಈ ಸಮಾಜದ ಉತ್ಪನ್ನವೇ ಆಗಿರುತ್ತಾರೆ. ಈ ಸಮಾಜದಲ್ಲಿ ನಡೆಯುವ ಸಾಮಾಜೀಕರಣಕ್ಕೆ ಎಲ್ಲರೂ ಒಳಗಾಗಿರುತ್ತಾರೆ.

ಲಿಂಗ ತಾರತಮ್ಯವೆನ್ನುವುದು-ಪುರುಷಶಾಯಿತ್ವವೆನ್ನುವುದು ಮಹಿಳೆಯರಲ್ಲೂ ಅಂತರ್ಗತವಾಗಿರಬಹುದು.ಕೇವಲ ಪಂ.ರಾ.ಸಂ.ಗಳಲ್ಲಿ ಮೀಸಲಾತಿ ನೀಡಿಬಿಟ್ಟರೆ ಎಲ್ಲವೂ ನೆರವೇರಿಬಿಡುವುದಿಲ್ಲ. ಅತ್ಯಂತ ಪ್ರಜ್ಞಾಪೂರ್ವಕವಾಗಿ ಲಿಂಗ ಸಮಾನತೆಯನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಸತತ ಪ್ರಯತ್ನ ನಡೆಯಬೇಕು. ಮಹಿಳೆಯರಲ್ಲಿ ಅಂತರ್ಗತಗೊಂಡಿರುವ ಪುರುಷಶಾಹಿಯನ್ನು ಮೊದಲು ತೊಲಗಿಸಲು ಪ್ರಯತ್ನಿಸಬೇಕು. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಲಿಂಗ ತಾರತಮ್ಯದ ಭಾವನೆ ಎಷ್ಟು ಭದ್ರವಾಗಿದೆಯೆಂದರೆ ಅಲ್ಲಿ ಆಕೆಯನ್ನು ಕುಟುಂಬಕ್ಕೆ ಸಂವಾದಿಯಾಗಿ, ಗೃಹಿಣಿಯಾಗಿ ಮಾತ್ರ ನೋಡಿಕೊಳ್ಳಲಾಗುತ್ತಿದೆ. ಅದಕ್ಕೆ ಅಪವಾದಗಳು ಇಲ್ಲದಿಲ್ಲ. ಆದರೆ ಸ್ಥಿತಿಯು ಆಶಾದಾಯಕವಾಗಿಲ್ಲ. ಒಂದು ಹಳ್ಳಿಯಲ್ಲಿ ಕ್ಷೇತ್ರ ಕಾರ್ಯ ಮಾಡುವಾಗ ಸಂಭವಿಸಿದ ಸಂಗತಿಯನ್ನು ಇಲ್ಲಿ ತಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ.

ಪಂಚಾಯತಿ ಕಚೇರಿಯಲ್ಲಿ ಕುಳಿತುಕೊಂಡು ನಾವೆಲ್ಲ ಚರ್ಚೆ ಮಾಡುತ್ತಿರುವಾಗ ಅಲ್ಲಿಗೆ ಪೋಲೀಸು ಅಧಿಕಾರಿಯೊಬ್ಬರ ಆಗಮನವಾಯಿತು. ಅಲ್ಲಿ ಪಂಚಾಯತಿ ಸದಸ್ಯರೊಂದಿಗೆ ಅವರು ಮಾತನಾಡುತ್ತಿದ್ದರು. ಅಲ್ಲಿ ಚರ್ಚೆ ನಡೆಯುತ್ತಾ ಇದ್ದಂತೆ 'ಅವಳು ಪೋಲೀಸು ಠಾಣೆಗೆ ಬಂದು ದೂರು ಕೊಟ್ಟಿದ್ದಾಳೆಂದರೆ ಅವಳ ಎಂತಹ ಹೆಣ್ಣು ಎಂಬುದನ್ನು ನೀವೆ ತಿಳಿದುಕೊಳ್ಳಿ ಸ್ವಾಮಿ' ಎಂಬ ಜನಪ್ರತಿನಿಧಿಯೊಬ್ಬರ ಕಟ್ಟಳೆಯೋಪಾದಿ ಆಡಿದ ಮಾತು ಜೋರಾಗಿ ಕೇಳಿಬಂತು. ಅಂದರೆ ನಮ್ಮ ಹೆಣ್ಣು ಮಕ್ಕಳು ಪೋಲೀಸು ಠಾಣೆಯ ಮೆಟ್ಟಿಲೇರಬಾರದೆಂದಾಯಿತು. ಹಾಗಾದರೆ ಪೋಲೀಸು ಠಾಣೆ ಇರುವುದಾದರೂ ಯಾತಕ್ಕೆ? ಕಾನೂನುಗಳ ಉಲ್ಲಂಘನೆ ಬಗ್ಗೆ ದೂರು ನೀಡಲು ಜನರು ಪೋಲೀಸು ಠಾಣೆಗೆ ತಾನೆ ಹೋಗಬೇಕು? ಸಾರ್ವಜನಿಕವೆನ್ನಬಹುದಾದ ಕೆಲಸಗಳೆಲ್ಲ ಪುರುಷರಿಗೆ ಮೀಸಲೆಂಬ ನಂಬಿಕೆ ಇಲ್ಲಿ ಕೆಲಸ ಮಾಡುತ್ತಿರುವಂತೆ ಕಾಣುತ್ತದೆ. ಮಹಿಳೆಯರ ಕಾರ್ಯಕ್ಷೇತ್ರವೇನಿದ್ದರೂ ಮನೆಗೆ-ಕುಟುಂಬಕ್ಕೆ ಮೀಸಲೆಂಬಂತಾಯಿತು.

ಪಂಚಾಯತಿ ಕಚೇರಿಯಲ್ಲಿ ಕುಳಿತಿಕೊಂಡು ನಾವೆಲ್ಲ ಚರ್ಚೆ ಮಾಡುತ್ತಿರುವಾಗ ಅಲ್ಲಿಗೆ ಪೋಲೀಸು ಅಧಿಕಾರಿಯೊಬ್ಬರ ಆಗಮನವಾಯಿತು. ಅಲ್ಲಿ ಪಂಚಾಯತಿ ಸದಸ್ಯರೊಂದಿಗೆ ಅವರು ಮಾತನಾಡುತ್ತಿದ್ದರು. ಅಲ್ಲಿ ಚರ್ಚೆ ನಡೆಯುತ್ತಾ ಇದ್ದಂತೆ'ಅವಳು ಪೋಲೀಸು ಠಾಣೆಗೆ ಬಂದು ದೂರು ಕೊಟ್ಟಿದ್ದಾಳೆಂದರೆ ಅವಳ ಎಂತಹ ಹೆಣ್ಣು ಎಂಬುದನ್ನು ನೀವೆ ತಿಳಿದುಕೊಳ್ಳಿ ಸ್ವಾಮಿ' ಎಂಬ ಜನಪ್ರತಿನಿಧಿಯೊಬ್ಬರ ಕಟ್ಟಳೆಯೋಪಾದಿ ಆಡಿದ ಮಾತು ಜೋರಾಗಿ ಕೇಳಿಬಂತು. ಅಂದರೆ ನಮ್ಮ ಹೆಣ್ಣು ಮಕ್ಕಳು ಯಾವುದೇ ಸಂದರ್ಭದಲ್ಲೂ ಪೋಲೀಸು ಠಾಣೆಯ ಮೆಟ್ಟಲೇರಬಾರದೆಂದಾಯಿತು.

ಹಾಗಾದರೆ ಪೋಲೀಸು ಠಾಣೆ ಇರುವುದಾದರೂ ಯಾತಕ್ಕೆ?ಕಾನೂನುಗಳ ಉಲ್ಲಂಘನೆ ಬಗ್ಗೆ ದೂರು ನೀಡಲು ಜನರು ಪೋಲೀಸು ಠಾಣೆಗೆ ತಾನೆ ಹೋಗಬೇಕು? ಸಾರ್ವಜನಿಕವೆನ್ನಬಹುದಾದ ಕೆಲಸಗಳೆಲ್ಲ ಪುರುಷರಿಗೆ ಮೀಸಲೆಂಬ ನಂಬಿಕೆ ಇಲ್ಲಿ ಕೆಲಸ ಮಾಡುತ್ತಿರುವಂತೆ ಕಾಣುತ್ತದೆ. ಮಹಿಳೆಯರ ಕಾರ್ಯಕ್ಷೇತ್ರವೇನಿದ್ದರೂ ಮನೆಗೆ-ಕುಟುಂಬಕ್ಕೆ ಮೀಸಲೆಂಬಂತಾಯಿತು. ಈ ಬಗೆಯ ಅವಕಾಶಗಳನ್ನು ಕುರಿತ ಸಾರ್ವಜನಿಕ-ಖಾಸಗಿ ಎಂಬ ವರ್ಗೀಕರಣ ಇನ್ನು ಗಟ್ಟಿಯಾಗಿ ನೆಲೆಯೂರಿರುವುದನ್ನು ಇಲ್ಲಿ ನಾವು ನೋಡಬಹುದಾಗಿದೆ. ನಮ್ಮ ಸಮಾಜವು ಮಹಿಳೆಯರು ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವುದನ್ನು ಒಪ್ಪಿಕೊಂಡಂತೆ ಕಾಣುವುದಿಲ್ಲ. ಲಿಂಗ ಸಂಬಂಧಿ ಶ್ರಮ ವಿಭಜನೆಯು ಸಮಾಜದಲ್ಲಿ ಆಚರಣೆಯಲ್ಲಿದೆ.

ಬಹಳ ತಮಾಷೆಯ ಸಂಗತಿಯೆಂದರೆ ನಮ್ಮ ರಾಜ್ಯದಲ್ಲಿ ತಳಮಟ್ಟದ ಜನಪ್ರತಿನಿಧಿ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿಡಲಾಗಿದೆ. ಆದರೆ ಉನ್ನತ ಹಂತದಲ್ಲಿ, ಅಂದರೆ ಶಾಸನ ಸಭೆಗಳಲ್ಲಿ ಇಂತಹ ಮೀಸಲಾತಿಯಿಲ್ಲ. ಈ ಕಾರಣಕ್ಕೆ ಪ್ರಸ್ತುತ ವಿಧಾನಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಕೇವಲ ಎರಡು. ಅದರಲ್ಲಿ ಒಬ್ಬರು ಬೆಂಗಳೂರಿನವರಾದರೆ ಮತ್ತೊಬ್ಬರು ದಕ್ಷಿಣ ಕನ್ನಡ ಜಿಲ್ಲೆಯವರು. ಯಾವ ರಾಜಕೀಯ ಪಕ್ಷಗಳಿಗೂ ಇದರ ಪರಿವೆಯೆ ಇಲ್ಲ. ಏನೂ ನಡದೇಯಿಲ್ಲವೆನ್ನುವಂತೆ ಅವು ವರ್ತಿಸುತ್ತಿವೆ

ವಿಧಾನಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಅವರ ಜನಸಂಖ್ಯೆಗನುಣುಗುಣವಾಗಿಲ್ಲದಿದ್ದರೂ ಕಣ್ಣಿಗೆ ಕಾಣುವಷ್ಟಾದರೂ ಇಲ್ಲದಿರುವುದು ನಮ್ಮ ನಾಯಕರಿಗೆ ಮತ್ತು ರಾಜಕೀಯ ಪಕ್ಷಗಳಿಗೆ ಆತಂಕದ ಸಂಗತಿಯೇನಾಗಿಲ್ಲ. ಲಿಂಗ ಸಮಾನತೆ ಬಗ್ಗೆ ಪ್ರಸ್ತುತ ಸರ್ಕಾರದ ಬದ್ಧತೆ-ಆಸಕ್ತಿ ಹೇಗಿದೆಯೆಂಬುದು ಇದರಿಂದ ತಿಳಿದುಬರುತ್ತದೆ. ಭಾಗ್ಯ ಲಕ್ಷ್ಮಿ ಯೋಜನೆಯ ಮೌಲ್ಯವನ್ನು ಹೆಚ್ಚಿಸಲು ಸರ್ಕಾರವು ತೋರುತ್ತಿರುವ ಆಸಕ್ತಿಯನ್ನು ರಾಜ್ಯ ಮಹಿಳಾ ಆಯೋಗಕ್ಕೆ ಮುಖ್ಯಸ್ಥರನ್ನು ನೇಮಿಸುವುದರ ಬಗ್ಗೆ ಅದು ತೋರಿಸುತ್ತಿಲ್ಲ.

ಭಾಗ-೪

ವಿಕೇಂದ್ರೀಕರಣವೋ ಅಥವಾ ಖಾಸಗೀಕರಣವೋ?

ಪ್ರಸ್ತುತ ಪ್ರಬಂಧದ ಚರ್ಚೆಯ ಚೌಕಟ್ಟಿಗೆ ಇದು ಅಪ್ರಸ್ತುತವೆನ್ನಿಸಿದರೂ ದೇವಾಲಯವೊಂದರ ಖಾಸಗೀಕರಣ ಕುರಿತಂತೆ ಕೆಲವು ಮಾತುಗಳನ್ನು ಹೇಳುವುದು ಉಚಿತವೆಂದು ಭಾವಿಸಿದ್ದೇನೆ.ಅದನ್ನು ತಮ್ಮ ಜೊತೆ ಹಂಚಿಕೊಳ್ಳಲೇಬೇಕಾಗಿದೆ. ವಿಕೇಂದ್ರೀಕರಣಕ್ಕೆ ತಿಲಾಂಜಲಿಯಿಡುತ್ತಿರುವ ಸರ್ಕಾರವು ಅಭಿವೃದ್ಧಿಗೆ ಯಾವುದೇ ರೀತಿಯಲ್ಲೂ ಸಂಬಂಧ ಪಡದ ದೇವಾಲಯಗಳ ಖಾಸಗೀಕರಣದ ದಂಧೆಗೆ ಕೈಹಾಕಿದೆ. ಕುತೂಹಲದ ಸಂಗತಿಯೆಂದರೆ ದೇವಾಲಯಗಳು ಸಾರ್ವಜನಿಕ ಆಸ್ತಿ. ಅವು ಯಾರೊಬ್ಬರ ಯಾವುದೇ ಒಂದು ಸಂಸ್ಥೆಯ ಖಾಸಗಿ ಆಸ್ತಿಯಾಗುವುದು ಸಾಧ್ಯವಿಲ್ಲ. ಅವು ಜನರಿಗೆ ಜವಾಬುದಾರಿಯಾಗಿರಬೇಕಾಗುತ್ತದೆ. ಅದರ ಹಣಕಾಸು ವ್ಯವಹಾರವು ಪಾರದರ್ಶಕವಾಗಿರಬೇಕು. ಅದು ಸಾರ್ವಜನಿಕರ ಸಹಭಾಗಿತ್ವದಲ್ಲಿ ನಡೆಯಬೇಕು.

ಉತ್ತರ ಕನ್ನಡ ಜಿಲ್ಲೆಯ ದೇವಾಲಯವೊಂದನ್ನು ಖಾಸಗಿ ಮಠಕ್ಕೆ ವಹಿಸಿಕೊಡುವುದರ ಮೂಲಕ ಸರ್ಕಾರವು ಜೇನುಗೂಡಿಗೆ ಕೈಹಾಕಿದಂತಾಗಿದೆ. ಪ್ರಸ್ತುತ ಸರ್ಕಾರವು ಅಭಿವೃದ್ಧಿಯನ್ನು ತನ್ನ ಪ್ರಥಮ ಆದ್ಯತೆಯೆಂದು ಹೇಳಿಕೊಳ್ಳುತ್ತಲೆ ತನ್ನ ಮೂಲ ಮಂತ್ರವಾದ ಧರ್ಮವನ್ನು ರಾಜಕೀಯದಲ್ಲಿ ಬೆರೆಸುವ ಕಾರ್ಯವನ್ನು ಲಂಗು ಲಗಾಮಿಲ್ಲದೆ ರಾಜಾರೋಷವಾಗಿ ನಡೆಸಿಕೊಂಡು ಹೋಗುತ್ತಿರುವಂತೆ ಕಾಣುತ್ತದೆ. ಸಾರ್ವಜನಿಕರ ಆಸ್ತಿಯನ್ನು ಮತ್ತು ಸಾರ್ವಜನಿಕರಿಗೆ ಜವಾಬುದಾರಿಯಾಗಬೇಕಾಗಿದ್ದ ದೇವಾಲಯಗಳನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಿಕೊಡುವುದರ ಮೂಲಕ ಅದು ತನ್ನ ಮೂಲ ನೆಲೆ ಯಾವುದು, ಬಣ್ಣ ಯಾವುದು ಎಂಬುದನ್ನು ಮತ್ತು ತನ್ನ ಬದ್ಧತೆ ಯಾವುದಕ್ಕೆ ಮತ್ತು ಯಾರಿಗೆ ಎಂಬುದನ್ನು ಜಗಜಾಹೀರು ಪಡಿಸಿದೆ.

ಹೀಗೆ ಖಾಸಗಿಯವರಿಗೆ ದೇವಾಲಯಗಳನ್ನು ನೀಡಿದರೆ ಅವು ಯಾರಿಗೆ ಜವಾಬುದಾರಿಯಾಗಿರುತ್ತವೆ? ಅದರ ಆಡಳಿತ ಮಂಡಳಿಗೆ ಸಾರ್ವಜನಿಕ ರೂಪವಿರುತ್ತದೆಯೆ? ಸರ್ಕಾರವು ದೇವಾಲಯವನ್ನು ವಹಿಸಿಕೊಟ್ಟ ತಕ್ಷಣ ಸಂಬಂಧಿಸಿದ ಖಾಸಗಿ ಮಠವು ಮಾಡಿದ ಮೊದಲ ಕೆಲಸವೆಂದರೆ ಅಲ್ಲಿನ ಹುಂಡಿಗಳನ್ನು ಯಾವುದೆ ಸಾರ್ವಜನಿಕರ ಸಹಭಾಗಿತ್ವವಿಲ್ಲದೆ ಸಂಕೋಚವಿಲ್ಲದೆ ದೋಚಿಕೊಂಡಿದ್ದಾಗಿದೆ. ಆರಂಭದಲ್ಲೇ ಹೀಗಾದರೆ ಮುಂದೆ ಅದು ತನಗೆ ತಾನು ಮತ್ತು ತನ್ನ ಕೋಮಿಗೆ ಜವಾಬುದಾರಿಯಾಗಿರುತ್ತದೆಯಲ್ಲದೆ ಜನರಿಗೆ, ಸಾರ್ವಜನಿಕರಿಗೆ ಅಥವಾ ಸರ್ಕಾರಕ್ಕೆ ಜವಾಬುದಾರಿಯಾಗಿರಲು ಸಾಧ್ಯವಿಲ್ಲ. ವಿಕೇಂದ್ರೀಕರಣಕ್ಕೆ ಶಕ್ತಿ ತುಂಬುವುದನ್ನು ಬಿಟ್ಟು ಈ ಸರ್ಕಾರವು ಇಲ್ಲದ ಸಲ್ಲದ ಕೆಲಸಗಳಿಗೆ ಕೈಹಾಕಿ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿದೆ.

ಸಾರ್ವಜನಿಕರ ಹಕ್ಕನ್ನು ಸರ್ಕಾರವು ಅಪಮೌಲ್ಯಗೊಳಿಸಿದೆ. ಸಾರ್ವಜನಿಕರಿಗೆ ಸಂಬಂಧಿಸಿದ ದೇವಸ್ಥಾನವನ್ನು 'ಹಂಗಿ'ನ ಸಂಗತಿಯನ್ನಾಗಿ ಮಾಡಲಾಗಿದೆ. ಜನರ ಹಕ್ಕುಗಳನ್ನು ದೇವಾಲಯವೊಂದರ – ಕೋಮುವೊಂದರ ಸುಪರ್ದಿಗೆ ವಹಿಸಿಕೊಟ್ಟಿರುವುದು, ಅದನ್ನು ಹಂಗನ್ನಾಗಿ ಪರಿವರ್ತಿಸಿರುವುದು ಪ್ರಜಾಪ್ರಭುತ್ವದ ದೃಷ್ಟಿಯಿಂದ ಅಪೇಕ್ಷಣೀಯ ಸಂಗತಿಯೇನಲ್ಲ. ಹಕ್ಕನ್ನು ಹಂಗನ್ನಾಗಿ ಪರಿವರ್ತಿಸಿದ ಕೀರ್ತಿ ಪ್ರಸ್ತುತ ಸರ್ಕಾರಕ್ಕೆ ಸಲ್ಲಬೇಕು. ದೇವಸ್ಥಾನವು ಸಾರ್ವಜನಿಕರ ಸುಪರ್ದಿನಲ್ಲಿ ಉಳಿದುಕೊಂಡಿದ್ದರೆ ಅದರ ಆಡಳಿತವನ್ನು, ಅಲ್ಲಿನ ಸೇವೆಯನ್ನು ಜನರು ತಮ್ಮ ಹಕ್ಕನ್ನಾಗಿ ಒತ್ತಾಯಿಸಬಹುದಾಗಿತ್ತು. ದೇವಸ್ಥಾನದ ಖಾಸಗೀಕರಣದಿಂದಾಗಿ ಜನರು ತಮ್ಮ ಹಕ್ಕನ್ನು ಕಳೆದುಕೊಂಡಂತಾಗಿದೆ. ವಿಕೇಂದ್ರೀಕರಣವನ್ನು ಸರಳವಾಗಿ 'ಜನರಿಗೆ ಒದಗಿಸುವ ಅಧಿಕಾರ'ವೆಂದು ನಿರ್ವಚಿಸಬಹುದು.

ಅಭಿವೃದ್ಧಿಯ ಇಂತಹ ವಿಚಾರ ಪ್ರಣಾಳಿಕೆಯನ್ನು ಬಿಟ್ಟು ಸರ್ಕಾರವು 'ಮಠ'ಕ್ಕೆ ಅಧಿಕಾರವನ್ನು ಒದಗಿಸುವುದರ ಮೂಲಕ 'ಖಾಸಗಿ ಮಠ'ವೊಂದಕ್ಕೆ, 'ಜಾತಿಯೊಂದರ ಸ್ವಾಮಿ'ಗೆ ಅಧಿಕಾರವೆಂಬ ಅಭಿವೃದ್ಧಿ ಪ್ರಣಾಳಿಕೆಯನ್ನು ನಮ್ಮ ಮೇಲೆ ಹೇರುತ್ತಿದೆ. ವಿಕೇಂದ್ರೀಕರಣ ತತ್ವಕ್ಕೆ ತೀರ ವಿರುದ್ಧವಾದ ವಿಶಿಷ್ಟವಾದ ಖಾಸಗೀಕರಣಕ್ಕೆ ಕೈಹಾಕಿರುವ ಸರ್ಕಾರವು ಪ್ರಜಾಪ್ರಭುತ್ವಕ್ಕೆ ದ್ರೋಹ ಬಗೆದಿದೆ.

ಸಾರ್ವಜನಿಕರ ಆಸ್ತಿಯನ್ನು ರಾಜಾರೋಷವಾಗಿ ಖಾಸಗಿ ಮಠವೊಂದಕ್ಕೆ ಯಾವುದೇ ಹಿಂಜರಿಕೆಯಿಲ್ಲದೆ ವಹಿಸಿಕೊಡಲು ಮುಂದಾಗಿರುವ ಸರ್ಕಾರಕ್ಕೆ ಒರಿಸ್ಸಾದಲ್ಲಿನ ಅಲ್ಪಸಂಖ್ಯಾತರ ಮೇಲಿನ ಹಲ್ಲೆಯನ್ನು ಖಂಡಿಸಲು ಕ್ರೈಸ್ತ ಸಮುದಾಯದವರು ತಮ್ಮ ಆಡಳಿತದಲ್ಲಿನ ಶಾಲೆಗಳನ್ನು ಒಂದು ದಿನ ಬಂದು ಮಾಡಿ ಪ್ರತಿಭಟನೆ ನಡೆಸಿದ್ದನ್ನು ವಿರೋಧಿಸಿ ವಿವರಣೆ ಕೇಳುವ ಅಧಿಕಾರವೆಲ್ಲಿದೆ? ಪ್ರತಿಭಟನೆಗೂ ರಜೆಗೂ ವ್ಯತ್ಯಾಸವೆ ಗೊತ್ತಿಲ್ಲದ ನಮ್ಮ ಶಿಕ್ಷಣ ಮಂತ್ರಿಗಳು ಅವುಗಳ ವಿರುದ್ಧ ಹರಿಹಾಯ್ದಿರುವುದು ನಕ್ಕು ಸುಮ್ಮನಾಗುವುದಕ್ಕೆ ಮಾತ್ರ ಅರ್ಹವಾಗಿದೆ. ಅಂತಹ ಕ್ರಮವನ್ನು ಸಮರ್ಥಿಸಲೆಂದೆ ಸರ್ಕಾರದ ಸಾಮಂತರು ಪತ್ರಿಕಾ ಹೇಳಿಕೆ ನೀಡುತ್ತಿದ್ದಾರೆ.

ಒರಿಸ್ಸಾದಲ್ಲಿನ ಹಿಂಸಾಚಾರವನ್ನು ಅಪ್ರತ್ಯಕ್ಷವಾಗಿ ಸಮರ್ಥಿಸಿಕೊಳ್ಳುವ ರೀತಿಯಲ್ಲಿ ಮಾತನಾಡುತ್ತಿರುವ ನಮ್ಮ ನಿವೃತ್ತ ನ್ಯಾಯಾಧೀಶರೊಬ್ಬರು ಮತಾಂತರವು ಸಂವಿಧಾನಾತ್ಮಕವಾಗಿ ಅಪರಾಧವೆನ್ನುವುದನ್ನು ಹೇಳಲು ತೋರುವ ಉತ್ಸಾಹವನ್ನು ಜನರು ಹಿಂದೂ ಧರ್ಮದಿಂದ ಯಾಕೆ ಬೇರೆ ಮತಗಳಿಗೆ ಪರಿವರ್ತನೆಯಾಗುತ್ತಿದ್ದಾರೆ ಎಂಬುದರ ಮೂಲದಲ್ಲಿನ ಕಾರಣದ ಬಗ್ಗೆ ಮಾತ್ರ ಮಾತನಾಡಲು ತೋರುವುದಿಲ್ಲ. ಪರಿಣಾಮವನ್ನು ಮಾತ್ರ ಕುರಿತಂತೆ ಚರ್ಚೆ ಮಾಡಬಯಸುವ ನಮ್ಮ ರಾಜ್ಯಸಭಾ ಸದಸ್ಯರೂ ಆಗಿರುವ ಇವರು, ಅದರ ಹಿಂದಿನ ಕಾರಣವನ್ನು, ತಮ್ಮ ಮನೆಯಂಗಳದಲ್ಲಿನ ಅಮಾನವೀಯ ನಂಬಿಕೆ–ಆಚರಣೆಗಳನ್ನು, ನಮ್ಮ ಜನರನ್ನೇ ಮೈಲಿ ದೂರವಿಟ್ಟಿರುವ ನಮ್ಮವರ ವರ್ತನೆಯನ್ನು ಕುರಿತಂತೆ ಆತ್ಮಾವಲೋಕನ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿಲ್ಲ.

ಜನರಿಗೆ ಅಧಿಕಾರವೆನ್ನುವುದು ವಿಕೇಂದ್ರೀಕರಣದ ತತ್ವವಾದರೆ ಮಠಗಳಿಗೆ ಅಧಿಕಾರವೆನ್ನುವುದು ಪ್ರಸ್ತುತ ಸರ್ಕಾರದ ತತ್ವವಿದ್ದಂತೆ ಕಾಣುತ್ತದೆ. ಈ ಕ್ರಮವನ್ನು ಸಮರ್ಥಿಸುತ್ತಾ ಮುಖ್ಯಮಂತ್ರಿಗಳು 'ಇನ್ನು ಆರು ತಿಂಗಳು ಕಾದು ನೋಡಿ.ದೇವಾಲಯವು ಹೇಗೆ ಸುಧಾರಿಸುತ್ತದೆ' ಎಂದು ಸವಾಲು ಹಾಕಿದ್ದಾರೆ.ಈ ವಾದವನ್ನು ಬಹಳ ಎಳೆದಾಡಿದರೆ ಅದು ಎಲ್ಲಿಗೆ ಹೋಗುತ್ತದೆ ಎಂಬುದು ಮಾನ್ಯರಿಗೆ ತಿಳಿದಿದೆಯೆಂದು ನಾನು ಭಾವಿಸುತ್ತೇನೆ. ಸರ್ಕಾರವೆಂಬ ಸಂಸ್ಥೆಗೂ ಈ ವಾದವನ್ನೆ ಅನ್ವಯಿಸಿದರೆ ಆಗ ಏನಾಗುತ್ತದೆ? ಇಲ್ಲಿನ ಪ್ರಶ್ನೆ ದೇವಾಲಯವನ್ನು ಎಷ್ಟು ಶುಚಿಯಾಗಿಟ್ಟು ಕೊಳ್ಳಲಾಗುತ್ತದೆ,ಅಲ್ಲಿನ ವಾತಾವರಣವನ್ನು ಎಷ್ಟು ನಿರ್ಮಲವಾಗಿಟ್ಟುಕೊಳ್ಳಲಾಗುತ್ತದೆಯೆಂಬುದಲ್ಲ. ಇಲ್ಲಿ ಉತ್ತರದಾಯಿತ್ವದ ಪ್ರಶ್ನೆಯಿದೆ. ಜನರ ಹಕ್ಕುಗಳ ಪ್ರಶ್ನೆಯಿದೆ. ಇಲ್ಲಿ ಜನತಂತ್ರದ ಪ್ರಶ್ನೆಯಿದೆ. ಒಂದು ಮಠದ, ಒಬ್ಬ ಸ್ವಾಮಿಯ ಹಂಗಿನಲ್ಲಿ ಜನರು ಬದುಕಬೇಕೆ? ನಾವು ಪ್ರಜಾಪ್ರಭುತ್ವದಲ್ಲಿದ್ದೇವೆ ಎಂಬುದನ್ನು ಮುಖ್ಯಮಂತ್ರಿಗಳು ನೆನಪಿನಲ್ಲಿಟ್ಟುಕೊಳ್ಳಬೇಕು.

ಮಾತು ಮಾತಿಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳನ್ನು ದೂರುವ ನಮ್ಮ ಮುಖ್ಯಮಂತ್ರಿಗಳು ತಾವು ತಮ್ಮ ಅಭಿವೃದ್ಧಿ ಪ್ರಣಾಳಿಕೆಗೆ ಸಂಬಂಧಿಸಿದಂತೆ ಇಂತಹ ಮಾತುಗಳನ್ನಾಡುವುದರ

ಮೂಲಕ ಜನರಿಗೆ ಏನು ಸಂದೇಶ ತಲುಪಿಸುತ್ತಿದ್ದಾರೆಂಬುದರ ಬಗ್ಗೆ ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಅಭಿವೃದ್ಧಿಯೆಂಬುದನ್ನು ಬಡವರ, ವಂಚಿತರ, ಮಹಿಳೆಯರ, ಪರಿಶಿಷ್ಟರ ಪದತಲದಿಂದ ಪರಿಭಾವಿಸಿಕೊಳ್ಳುವ ಅಗತ್ಯವಿದೆ.

ಏಕೆಂದರೆ ಬೆವರು, ಕಣ್ಣೀರು ಮತ್ತು ರಕ್ತ ಬಸಿದು ದುಡಿಮೆ ಮಾಡಿ ಉತ್ಪಾದನೆ ನಡೆಸುವವರು ಅವರೇ ತಾನೆ! ಅದನ್ನು ಮಠಗಳ ನೆಲೆಯಿಂದ, ಕ್ರೈಸ್ತ ಶಾಲೆಗಳ ಮೇಲಿನ ಅಸೂಯೆಯ ನೆಲೆಯಿಂದ, ವಿಕೇಂದ್ರೀಕರಣವನ್ನು ನಿರ್ವೀಯಗೊಳಿಸುವ ನೆಲೆಯಿಂದ, ಅಧಿಕಾರಿಗಳನ್ನು ಕೇವಲ ದೂರುವ ನೆಲೆಯಿಂದ ಪರಿಭಾವಿಸಿಕೊಂಡರೆ ಸಾಧ್ಯವಾಗುವುದಿಲ್ಲ. ವಿಕೇಂದ್ರೀಕರಣ, ಸಾಮಾಜಿಕೀಕರಣ, ಸಾರ್ವಜನಕೀಕರಣವೆನ್ನುವ ಸಂಗತಿಗಳಿಗೆ ಪ್ರತಿಯಾಗಿ ಪ್ರಸ್ತುತ ಸರ್ಕಾರವು 'ಮಠೀಕರಣ'ಕ್ಕೆ ತನ್ನನ್ನು ತಾನು ಕೊಟ್ಟುಕೊಟ್ಟಂತೆ ಕಂಡು ಬರುತ್ತದೆ. ಇದರಿಂದ ಅಭಿವೃದ್ಧಿ ಸಾಧ್ಯವಿಲ್ಲವೆಂಬುದನ್ನು ಸರ್ಕಾರವು ಎಷ್ಟು ಬೇಗ ತಿಳಿದುಕೊಳ್ಳುತ್ತದೊ ಅಷ್ಟು ಸರ್ಕಾರಕ್ಕೂ ಒಳ್ಳೆಯದು ಮತ್ತು ಜನರಿಗೂ ಒಳ್ಳೆಯದು. ಮಠದ ಖಾಸಗೀಕರಣವನ್ನು ಶುದ್ಧ ಖಾಸಗೀಕರಣವೆಂದು ಕರೆಯಲು ಸಾಧ್ಯವಿಲ್ಲವಾಗಿದೆ.

ಅಂದಮೇಲೆ ಪ್ರಸ್ತುತ ಸರ್ಕಾರಕ್ಕೆ ಶುದ್ಧ ಖಾಸಗೀಕರಣವೂ ಬೇಡವಾಗಿರುವಂತೆ ಕಾಣುತ್ತದೆ. ಶುದ್ಧ ಖಾಸಗೀಕರಣವೆಂದರೆ ಅದು ಕೇವಲ ಕೈಗಾರಿಕೆಗಳಿಗೆ, ಉದ್ದಿಮೆಗಳಿಗೆ, ಕಾರ್ಪೊರೇಟ್ ಸಂಸ್ಥೆಗಳಿಗೆ ಸಂಬಂಧಿಸಿದುದಾಗಿದೆ. ಅಭಿವೃದ್ಧಿಯ ಆಂದೋಲನವೆಂದರೆ ಮಠಗಳ ಖಾಸಗೀಕರಣವಲ್ಲ. ನಮ್ಮಲ್ಲಿ ಅಭಿವೃದ್ಧಿಗಾಗಿ ತಹತಹಿಸುತ್ತಿರುವ ಸಮಾಜದ ಅಂಚಿನಲ್ಲಿ ಬದುಕು ನೂಕುತ್ತಿರುವ ವಂಚಿತರಿದ್ದಾರೆ. ಸರಿ ಸುಮಾರು ೪೦ಲಕ್ಷಕ್ಕೂ ಅಧಿಕ ಮಹಿಳಾ ದಿನಗೂಲಿ ದುಡಿಮೆಗಾರರು ರಾಜ್ಯದಲ್ಲಿದ್ದಾರೆ. ಇವರಿಗೆ ಅಭಿವೃದ್ಧಿಯು ಅರ್ಥಪೂರ್ಣವಾಗಬೇಕು. ಅದು ಅವರಿಗೆ ಅಭಿಮುಖವಾಗಬೇಕು. ಅದು ಮಠಕ್ಕೆ ಅಭಿಮುಖಿಯಾಗಿರಬಾರದು.

ಮಠಗಳು ಸರ್ಕಾರದ ಬೆಂಬಲವಿಲ್ಲದೆಯೂ ನಡೆಯಬಲ್ಲವು. ಆದರೆ ಜನರಿಗೆ ಸರ್ಕಾರದ ನೆರವಿನ ಅಗತ್ಯವಿದೆ. ಅದಕ್ಕೆ ಸರ್ಕಾರವು ಮಠಗಳ ಸಂಗವನ್ನು ಬೇಗ ಬಿಡುವುದು ಒಳ್ಳೆಯದು. ಜನರ ಪದತಲದಿಂದ, ಅಂದರೆ ಬೆವರು, ಕಣ್ಣೀರು ಮತ್ತು ರಕ್ತ ಹರಿಸಿ ಬದುಕು ಮಾಡುತ್ತಿರುವವರ ನೆಲೆಯಿಂದ ಅದು ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳಬೇಕಾಗಿದೆ. ಅವರ ಬದುಕು ಸರ್ಕಾರಕ್ಕೆ ಆದ್ಯತೆಯ ಸಂಗತಿಯಾಗಬೇಕು.

(ಲೇಖಕರನ್ನು trckuh@yahoo.com ನಲ್ಲಿ ಸಂಪರ್ಕಿಸಬಹುದು)

□

ದ ಸ ರಾ - ಶಿಷ್ಟ ಶಕ್ತಿಯ ವಿಜಯೋತ್ಸವದ ಸಂಕೇತವಿದು. ನಾಡಿನಾದ್ಯಂತ ಅಶ್ವಯುಜದ ಮೊದಲ ತೇದಿಯಿಂದ ಹತ್ತು ದಿನ ಕಾಲ ಸಂತಸ ಸಂಭ್ರಮಗಳಿಂದ ಆಚರಿಸುತ್ತಿರುವ ಈ ಹಬ್ಬವು ಸಹಜ ಶೈಲಿಯ ಬದುಕಿಗೆ ಸ್ಫೂರ್ತಿ.

ವೈವಿಧ್ಯಮಯ ಸಾಂಸ್ಕೃತಿಕ ಚಟುವಟಿಕೆಗಳಿಗೆ, ಚಿತ್ತಾಕರ್ಷಕ ಕ್ರೀಡೆಗಳಿಗೆ, ರೋಮಾಂಚಕ ಕಸರತ್ತು ಕಲೆಗಳಿಗೆ ಅತ್ಯುತ್ಸಾಹದ ಜೀವಕಳೆ ತರುವ ಮೈಸೂರು ದಸರಾ ಉತ್ಸವ ವಿಶ್ವವಿಖ್ಯಾತ.

ಪ್ರಪಂಚದ ನಾನಾ ಭಾಗಗಳಿಂದ ಜನರನ್ನು ಸೂಜಿಗಲ್ಲಿನಂತೆ ತನ್ನೆಡೆಗೆ ಸೆಳೆಯುವ ದಸರಾ ಉತ್ಸವವು ನಾಡಜನತೆಗೆ ಸುಖ ಸಮೃದ್ಧಿ ತರಲಿ ಎಂದು ಪ್ರಾರ್ಥಿಸೋಣ.

ನಾಡ ಹಬ್ಬ ದಸರಾ



"ದಸರಾ ಹಬ್ಬದ ಈ ಶುಭ ಸಂದರ್ಭದಲ್ಲಿ ನಾಡಿನ ಜನತೆಗೆ ನಾನು ಹಾರ್ದಿಕ ಶುಭಾಶಯ ಕೋರುತ್ತೇನೆ. ದುಷ್ಟ ಶಕ್ತಿಗಳ ವಿರುದ್ಧ ಶಿಷ್ಟ ಶಕ್ತಿಗಳ ವಿಜಯವನ್ನು ದಸರಾ ಹಬ್ಬ ಸಂಕೇತಿಸುತ್ತದೆ.

ಈ ಸಡಗರದ ಕ್ಷಣಗಳಲ್ಲಿ ನಾನು ಕರ್ನಾಟಕವನ್ನು ಸಂಪದ್ಭರಿತಗೊಳಿಸುವ ನನ್ನ ವಾಗ್ದಾನವನ್ನು ಪುನರುಚ್ಚರಿಸುತ್ತೇನೆ. ಈ ದಿಸೆಯಲ್ಲಿ ನಾವು ಸರಿಯಾದ ಮಾರ್ಗದಲ್ಲಿ ಸಾಗುತ್ತಿದ್ದೇವೆ ಮತ್ತು ನಮ್ಮ ಸಂಕಲ್ಪವನ್ನು ಬಲಗೊಳಿಸಲು ನಿಮ್ಮ ಆಶೀರ್ವಾದವನ್ನು ಕೋರುತ್ತಿದ್ದೇನೆ.

ಮಗದೊಮ್ಮೆ ನಿಮಗೆಲ್ಲರಿಗೂ ಸಂತಸ ಹಾಗೂ ಸಮೃದ್ಧಿಯ ನಾಡ ಹಬ್ಬದ ಶುಭಾಶಯಗಳೊಂದಿಗೆ"

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಬನ್ನಿ ದಸರಾ
ಆಚರಣೆಯಲ್ಲಿ
ಪಾಲ್ಗೊಳ್ಳಿರಿ
30-09-08 ರಿಂದ
09-10-08
ವರೆಗೆ



ಕರ್ನಾಟಕ ವಾರ್ತೆ

ಅಣ್ಣ ತಮ್ಮಂದಿರು



ತಮ್ಮ ತಿರುಗಿ ಮನೆಗೆ ಬಂದಿದ್ದ. ಬೆಳಗಿನ ಸ್ನಾನಕ್ಕೆ ಓಡಾಡುತ್ತಿದ್ದ.
ಮೊರದಗಲ ನಗೆಯಲ್ಲಿ ಸಂತಸ ಉಕ್ಕಿ ಹರಿದಾಡುತ್ತಿದ್ದಳು ಅಕ್ಕ.
ಮೊರ ಹಿಡಿದು ನಿಂತ ಅತ್ತಿಗೆ, ಅಕ್ಕಿ ಸೋಸುವ ಮುಗಮ್ಮ ಮುಖ.
ಅಣ್ಣ-ತಮ್ಮ ಎದುರು ಬದುರು ಕಂಡರೂ ಇತ್ತು ಮೌನ ಗೋಡೆ.
ತಿಳಿ ಆನಂದ ಬಣ್ಣದ ಚೌಕಳಿ ಮಿರುಗಿನ ಹೊಸ ಬಟ್ಟೆಯಲ್ಲಿ ಅಣ್ಣ
ಮಿಂಚುತ್ತಿದ್ದರೂ ಯಾವ ಹಬ್ಬಕ್ಕು ಹೊಸ ಬಟ್ಟೆ ತೊಟ್ಟಿದ್ದು ಕಂಡಿಲ್ಲ.
ಅಂದು ಯಾವುದೊ ಹಬ್ಬ, ಏನೋ ಸಂಭ್ರಮ ತಮ್ಮನಿಗೆ ತಿಳಿದಿಲ್ಲ.
ಇವನ್ನು ಕಾಣುತ್ತಿದ್ದ ಅವನಿಗೇನೊ ಅಸಮಾಧಾನ, ಎದೆಯಲ್ಲಿ ಬೆಂಕಿ.
ಸರಿ ಬೆಳಗಿನ ಕಾರ್ಯ ದಡಬಡನೆ ಮುಗಿಸಿ ಕೂಡಲೆ ಹೋದ ಅಂಗಡಿಗೆ
ಅಲ್ಲಿ ಇದ್ದರು ಹಿರಿಯಣ್ಣ ಕಿರಿಯಣ್ಣ ಒಂದೇ ಡ್ರೆಸ್ಸಿನಲ್ಲಿ ಕುಳಿತು ನಿಂತು.
ಹಿರಿಯಣ್ಣ ಮೌನ ಮುರಿಯಲಿಲ್ಲ. ಕಿರಿಯಣ್ಣನ ಆಗ್ರಹ ತಮ್ಮನಿಗೆ-
ಹೊಲಿದಿರುವ ಹೊಸ ಬಟ್ಟೆ ಹಾಕಿಕೊಳ್ಳಲೊಪ್ಪಿಸುವ ಇಕ್ಕಟ್ಟಿನ ಮಾತು.
'ಬೇಡ, ಬೇಕಾದಷ್ಟಿವೆ ನನಗೆ ಹಳೆಯವು ಹಿರಿದವು ಅದೇ ಉಡುವೆ.'
ಕಿರಿಯಣ್ಣ ಏಸು ಬಲವಂತ ಮಾಡಿದರೂ ಮಣಿಯಲಿಲ್ಲ ತಮ್ಮ ಒಳಗೆ.
ಹಿರಿಯಣ್ಣನಿಗೆ ಬಾಗದ ತಮ್ಮನ ಮೇಲೆ ಉದ್ರಿ ಸಿಟ್ಟು, ಅಬ್ಬರದ ಮಾತು.
ಉತ್ತರಿಸದ ತಮ್ಮ ಒಳಕುಳಿತು ಹೊಸ ಬಟ್ಟೆ ಎತ್ತಿಟ್ಟು ಮೌನ ಹೊಕ್ಕ.
ಎದುರು ಅಂಗಡಿಗೆ ಹೋದ ಅಣ್ಣನಿಗೆ ಸಮಾಧಾನ ಹೇಳಿದರು ಶೆಟ್ಟರು.
'ಜಗಳ ಪರಿಹರಿಸಲು ನಾ ಬರಬೇಕು' ಎಂದದ್ದಕ್ಕೆ ಛಟೀರನೆ ಬಿತ್ತು ಕೆನ್ನೆಗೆ-
'ಇಷ್ಟುದಿವಸ ನಾನು ನೋಡದೆ ನೀನು ನೋಡ್ಡಾ? ಈಗೇನಾಗಿದೆ ಅವನ್ಗೆ?'
ಏನಾಗುತ್ತಿದೆ? ಅಚ್ಚರಿಪಟ್ಟ ಅಕ್ಕ ಪಕ್ಕದವರು ಅಂಗಡಿಯವರು ದಿಗ್ಭ್ರಾಂತ.
ಮಾಯವಾಗಿದ್ದ ದಿಢೀರನೆ ಅಲ್ಲಿ ಹಿರಿಯಣ್ಣ ಮನೆಯಲ್ಲಿದ್ದ. ಹೌದಾ?

ತಮ್ಮ ಹೊರಬಂದ, ಅಲ್ಲಿ ಕಿರಿಯಣ್ಣ ಇರಲಿಲ್ಲ. ಶೆಟ್ಟರು ಬಂದಿದ್ದರು,
ನಡೆದ ವಿಷಯ ವಿವರಿಸಿ ತಮ್ಮನಿಗೆ, 'ಆದರೂ ನಾನು ಸುಮ್ಮನಾಗಿಬಿಟ್ಟೆ
ಕಾಲು ನೋಡಿದರೆ ಈ ಮನುಷ್ಯ ಮುದುಕ! ಇಲ್ಲದ ಗ್ರಹಚಾರ ನನಗ್ಯಾಕೆ?
ಆ ಹಳೆ ಚೆಕ್ಕಿನ ಮಾತಿಗೆ ಇಷ್ಟು ರಂಪವೆ?' ಮಾತು ಜೋಡಿಸಿದರು.
ಕಷ್ಟದ ಬದುಕು, ಅನಾರೋಗ್ಯ, ಅಣ್ಣನ ಆಟಾಟೋಪ-ತಮ್ಮನ ಮಾತು.
ಆಗ್ಗೆ ಅಣ್ಣನ ಮಗ ಪುಟ್ಟ ಬಂದಿದ್ದ ಅಂಗಡಿಗೆ, ಅಳುತ್ತಿದ್ದ, ಹೇಳಿದ್ದ
ಎತ್ತಿಕೊಳ್ಳುತ್ತ ದೊಡ್ಡ ನೀಲಿ ಬಟ್ಟೆ ತುಂಡು- 'ಅಣ್ಣ ಹೋದ.' ಧಸಕ್ಕೆಂದಿತು
ತಮ್ಮನ ಜೀವ. ಕತ್ತಲು ಕತ್ತಲು. ಹೌದಾ ಹೌದಾ!? ಅಯೋಮಯ!



❍ ಶ್ರೀಧರ ಪಿಸ್ಸೆ

ಹಸಿರು ಬೂಸಾ ನಮಗೆ ಬೇಡ

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

೧೯೬೦ರ ದಶಕದಲ್ಲಿ ದೇಶದ ವಾಯುವ್ಯ ಭಾಗದಲ್ಲಿ ಹಸಿರು ಕ್ರಾಂತಿ ಆರಂಭವಾಗಿ, ಭಾರತ ವಿಶ್ವದ ಬಹುದೊಡ್ಡ ಜೈವಿಕ ಆಹಾರ ಉತ್ಪಾದನಾ ರಾಷ್ಟ್ರವಾಗಿತ್ತು. ಆಹಾರದ ತೀವ್ರ ಅಭಾವದಿಂದಾಗಿ ಅಮೆರಿಕಾದ ಪ್ರಸಿದ್ಧ ಕೃಷಿ ವಿಜ್ಞಾನಿ ನಾರ್ಮನ್ ಬೋರ್ಲಾಘ್ ಅವರು ಆವಿಷ್ಕರಿಸಿದ ಅಧಿಕ ಇಳುವರಿಯ ಗೋಧಿ ಬೀಜಗಳನ್ನು ಭಾರತ ಬಳಸಬೇಕಾಯಿತು. ಇದರಿಂದಾಗಿ ಸಾವಿರಾರು ಜನರ ಜೀವ ಉಳಿದಿದ್ದು ಕೂಡ ಸತ್ಯ. ೧೯೫೦ರ ದಶಕದಲ್ಲಿ ಕ್ಷಾಮ ವಿಕೋಪದಿಂದ ಜನಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿ ಆಹಾರದ ಕೊರತೆಯಿಂದ ಬೋರ್ಲಾಘ್ ಬೀಜಗಳು ಭಾರತಕ್ಕೆ ಕಾಲಿಡಲೇಬೇಕಾಯಿತು. ಅಧಿಕ ಇಳುವರಿಯ ಈ ಗೋಧಿಯನ್ನು ಬೆಳೆಯಲು ರಾಸಾಯನಿಕ ಗೊಬ್ಬರ, ಕೀಟನಾಶಕಗಳು ಮತ್ತು ಹೆಚ್ಚು ನೀರು ಬಳಕೆಯಾಗಿಯೂ, ಜೈವಿಕ ಅಥವಾ ದೇಸಿ ಆಹಾರದಷ್ಟು ಅತ್ಯುತ್ತಮ ರುಚಿಯನ್ನು ಹೊಂದಿರುವುದಿಲ್ಲ.

ಅನುವಾದ :
ಸತ್ಯಪ್ರಕಾಶ್ ಎಂ.ಆರ್

ಜೈವಿಕ ಆಹಾರ ಅತಿವೇಗವಾಗಿ ಆಧುನಿಕ ಜೀವನಶೈಲಿಯ ಭಾಗವಾಗುತ್ತಿದೆ. ೨೦೦೭ರ ನವೆಂಬರ್ ೨೯ರಿಂದ ಡಿಸೆಂಬರ್ ೨ರ ವರೆಗೆ ನವದೆಹಲಿಯಲ್ಲಿ ನಡೆದ ಭಾರತೀಯ ಜೈವಿಕ ವ್ಯಾಪಾರ ಮೇಳ ಸುಮಾರು ೪೦,೦೦೦ ಜನರನ್ನು ಆಕರ್ಷಿಸಿತ್ತು. ಜೈವಿಕ ಆಹಾರ ರುಚಿಕರವಾಗಿದ್ದು, ಆರೋಗ್ಯಕ್ಕೂ ಒಳ್ಳೆಯದು. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸದೆ ಬೆಳೆದ ಆಹಾರ ಧಾನ್ಯಗಳು ಆರೋಗ್ಯಕರವಾಗಿರಲೇಬೇಕು. ಕೃತಕವಾದ ನೀರಾವರಿ ವ್ಯವಸ್ಥೆಯ ಗೋಜಿಲ್ಲದೆ ವಾತಾವರಣದಲ್ಲಿನ ತೇವಾಂಶ ಮತ್ತು ಮಳೆಯಿಂದಲೇ ಜೈವಿಕ ಕೃಷಿ ನಡೆಯುತ್ತದೆ.

೧೯೬೦ರ ದಶಕದಲ್ಲಿ ದೇಶದ ವಾಯುವ್ಯ ಭಾಗದಲ್ಲಿ ಹಸಿರು ಕ್ರಾಂತಿ ಆರಂಭವಾಗಿ, ದಶಕದ ಬಳಿಕ ಉಳಿದೆಲ್ಲೆಡೆ ಹಬ್ಬುವ ಸಂದರ್ಭದಲ್ಲಿ ಭಾರತ ವಿಶ್ವದ ಬಹುದೊಡ್ಡ ಜೈವಿಕ ಆಹಾರ ಉತ್ಪಾದನಾ ರಾಷ್ಟ್ರವಾಗಿತ್ತು. ಆದರೆ, ಆಹಾರದ ತೀವ್ರ ಅಭಾವದಿಂದಾಗಿ ಅಮೆರಿಕಾದ ಪ್ರಸಿದ್ಧ ಕೃಷಿ ವಿಜ್ಞಾನಿ ನಾರ್ಮನ್ ಬೋರ್ಲಾಘ್ ಅವರು ಆವಿಷ್ಕರಿಸಿದ ಅಧಿಕ ಇಳುವರಿಯ ಗೋಧಿ ಬೀಜಗಳನ್ನು ಭಾರತ ಬಳಸಬೇಕಾಯಿತು. ಇದರಿಂದಾಗಿ ಸಾವಿರಾರು ಜನರ ಜೀವ ಉಳಿದಿದ್ದು ಕೂಡ ಸತ್ಯ. ೧೯೫೦ರ ದಶಕದಲ್ಲಿ ಕ್ಷಾಮ ವಿಕೋಪಕ್ಕೆ ತಿರುಗಿದ್ದಷ್ಟೇ ಅಲ್ಲದೆ, ಜನಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿ ಆಹಾರದ ಉತ್ಪಾದನೆಯಾಗದಿದ್ದುದರಿಂದ ಬೋರ್ಲಾಘ್ ಬೀಜಗಳು ಭಾರತಕ್ಕೆ ಕಾಲಿಡಲೇಬೇಕಾಯಿತು.

ಅಧಿಕ ಇಳುವರಿಯ ಈ ಗೋಧಿಯನ್ನು ಬೆಳೆಯಲು ರಾಸಾಯನಿಕ ಗೊಬ್ಬರ, ಕೀಟನಾಶಕಗಳು ಮತ್ತು ಹೆಚ್ಚು ನೀರು ಬಳಕೆಯಾಗುವುದಲ್ಲದೆ, ಜೈವಿಕ ಅಥವಾ ದೇಸಿ ಆಹಾರದಷ್ಟು ಅತ್ಯುತ್ತಮ ರುಚಿಯನ್ನು ಹೊಂದಿರುವುದಿಲ್ಲ.

ವೈಜ್ಞಾನಿಕ ಕೃಷಿ ಕಾಲಿಡುವವರೆಗೆ, ಭಾರತ ಸೇರಿದಂತೆ ಎಲ್ಲ ಕೈಗಾರಿಕೀಕರಣ- ಪೂರ್ವ ಸಮಾಜಗಳು ಜೈವಿಕ ಆಹಾರವನ್ನು ಅವಲಂಬಿಸಿತ್ತು. ಆದರೆ ಕೈಗಾರಿಕೀಕರಣಗೊಂಡ ನಂತರ ಜೈವಿಕ ಆಹಾರ ಮೂಲೆಗುಂಪಾಯಿತು. ಜಗತ್ತು ಜೈವಿಕ ಆಹಾರಪದ್ಧತಿಯನ್ನು ಅಳವಡಿಸಿಕೊಂಡರೆ, ೨೫% ಜನರಿಗೆ ರುಚಿಕರವಾದ, ಆರೋಗ್ಯಕರವಾದ ಆಹಾರವನ್ನು ಒದಗಿಸಲು ಸುಮಾರು ೭೫% ಜನರು ಆಹಾರ ವಂಚಿತರಾಗಬೇಕಾಗುತ್ತದೆ.

ಹೀಗಾದಾಗ ಕೈಗಾರಿಕೀಕರಣ- ಪೂರ್ವ ಸಂದರ್ಭದಂತೆ ಈಗಲೂ ಜನಸಂಖ್ಯೆ ಮತ್ತು ಆಹಾರದ ಲಭ್ಯತೆಯ ನಡುವೆ ತೀವ್ರ ಅಂತರ ಉಂಟಾಗಬಹುದು.

ಊಳಿಗಮಾನ್ಯ ಪದ್ಧತಿ ಅಸ್ತಿತ್ವದಲ್ಲಿರುವವರೆಗೆ ಅಂದರೆ ೧೮ನೆಯ ಶತಮಾನದವರೆಗೆ ಜೈವಿಕ ಆಹಾರವನ್ನು ಆಧರಿಸಿದ ಅರ್ಥವ್ಯವಸ್ಥೆ ಯುರೋಪಿನಲ್ಲಿತ್ತು. ಭಾರತದಲ್ಲಿ ಕೂಡ ಹಸಿರು ಕ್ರಾಂತಿಯಾಗುವವರೆಗೂ ಜೈವಿಕ ಆಹಾರವನ್ನು ಆಧರಿಸಿದ ಅರ್ಥವ್ಯವಸ್ಥೆ ಇತ್ತು. ಆದರೆ ಈ ವ್ಯವಸ್ಥೆ ಯಶಸ್ವಿಯಾಗಿತ್ತೇ? ಆಗ ಜನ ಯಾವ ರೀತಿಯ ಆಹಾರವನ್ನು ಸೇವಿಸುತ್ತಿದ್ದರು?

ಭಾರತದಲ್ಲಿ ಜೈವಿಕ ಆಹಾರ ಪದ್ಧತಿ ಅಸ್ತಿತ್ವದಲ್ಲಿದ್ದಾಗ ಎರಡು ರೀತಿಯ ಆಹಾರ ಧಾನ್ಯಗಳನ್ನು ಜನರು ಸೇವಿಸುತ್ತಿದ್ದರು- ಗೋಧಿ, ಅಕ್ಕಿ, ಧಾನ್ಯಗಳು, ತರಕಾರಿ ಇತ್ಯಾದಿಗಳನ್ನು ಕೆಲವೇ ಮಂದಿ ಸೇವಿಸುತ್ತಿದ್ದರೆ, ಇನ್ನುಳಿದ ಬಹುತೇಕ ಮಂದಿ ಪರ್ಲ್ ಮಿಲೆಟ್ಸ್ (ನುಚ್ಚಿನಂತಹ ಸಣ್ಣಕಾಳುಗಳು) ಸೇವಿಸುತ್ತಿದ್ದರು. ಭೂಮಾಲೀಕರು ಸಾಮಾನ್ಯವಾಗಿ ಗೋಧಿ ಮತ್ತು ಅಕ್ಕಿಯನ್ನು ಸೇವಿಸುತ್ತಿದ್ದರೆ, ಭೂರಹಿತ ಕೃಷಿ ಕಾರ್ಮಿಕರು- ಬಹುತೇಕ ದಲಿತರು- ಇಂತಹ ಸಣ್ಣಕಾಳುಗಳನ್ನು ತಿನ್ನಬೇಕಾಗಿತ್ತು.

ಭೂಮಿಯ ಒಡೆತನವೇ ಇಲ್ಲದ ಮೇಲೆ ದಲಿತರಿಗೆ ಸಣ್ಣಕಾಳುಗಳು ಸಿಗುತ್ತಿದ್ದುದಾದರೂ ಹೇಗೆ? ಜೈವಿಕ ಆಹಾರ ಮತ್ತು ಸಣ್ಣ ಕಾಳುಗಳ ನಡುವೆ ಇರುವ ಸಂಬಂಧವಾದರೂ ಏನು?

ವಿಶ್ವದಾದ್ಯಂತ ಕೃಷಿ ವಿಜ್ಞಾನಿಗಳು ಸಣ್ಣಕಾಳುಗಳನ್ನು ಹಸಿರು ಸಗಣಿ ಅಥವಾ ಹಸಿರು ಬೂಸಾ (ಗ್ರೀನ್ ಮ್ಯಾನ್ಯೂರ್) ಎಂದು ಪರಿಗಣಿಸುತ್ತಾರೆ. ವರ್ಷಕ್ಕೆ ಐದು ತಿಂಗಳಿನ ಒಂದು ಜೈವಿಕ ಬೆಳೆಯನ್ನು ಮಾತ್ರ ತೆಗೆಯಲು ಸಾಧ್ಯ. ಅಂದರೆ ವರ್ಷದಲ್ಲಿ ಏಳು ತಿಂಗಳು ಭೂಮಿ ಮಳೆ, ಬೆಳಕಿಗೆ ತೆರೆದುಕೊಂಡಿರುತ್ತದೆ. ಹೀಗಾಗಿ, ಗಾಳಿ-ಮಳೆಗೆ ಸಿಲುಕಿ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ.

ಮಣ್ಣಿನ ಫಲವತ್ತತೆ ಕಾಪಾಡಲು ಹಾಗೂ ಜಮೀನಿನಲ್ಲಿ ಕಳೆಯನ್ನು ತಡೆಗಟ್ಟಲು ಈ ಹಸಿರು ಬೂಸಾ ಬೆಳೆಯಲಾಗುತ್ತದೆ. ಆದರೆ ಬೆಳೆದ ಬೂಸಾ ಅಥವಾ ಸಣ್ಣಕಾಳುಗಳನ್ನೇನು ಮಾಡುವುದು? ಯುರೋಪ್ ಮತ್ತು ಉತ್ತರ ಅಮೆರಿಕಾದಲ್ಲಿ ಇದನ್ನು ಕೋಳಿಫಾರ್ಮ್‌ಗಳು ಮತ್ತು ಹಂದಿ ಸಾಕಾಣಿಕೆ ಕೇಂದ್ರಗಳಲ್ಲಿ ಆಹಾರವಾಗಿ ಬಳಸಲಾಗುತ್ತದೆ.

ಭಾರತದಲ್ಲಿ ಈ ಆಹಾರವನ್ನು ಹೇಗೆ ಬಳಸಲಾಗುತ್ತಿತ್ತು? ಉದಾಹರಣೆಗೆ ನನ್ನ ಹಳ್ಳಿಗೇ ಬನ್ನಿ. ಇಲ್ಲಿಯ ಹಿರಿಯರು ಸಣ್ಣಕಾಳುಗಳ ಸಣ್ಣ ಕಥೆ ಹೇಳುತ್ತಾರೆ. ಇಲ್ಲಿನ ಕೃಷಿ ಕಾರ್ಮಿಕರಿಗೆ ಕೂಲಿಯಾಗಿ ಸಣ್ಣಕಾಳುಗಳನ್ನು ನೀಡಲಾಗುತ್ತಿತ್ತು. ಇದು ಪೌಷ್ಟಿಕವಾದ ಆಹಾರವೇ ಆಗಿದ್ದರೂ ಇದಕ್ಕೆ ಜಾತಿ ಸಂಬಂಧ ಇದೆ- ಈ ಸಣ್ಣಕಾಳುಗಳನ್ನು ಬಳಸುತ್ತಿದ್ದವರು ಬಹುತೇಕ ದಲಿತರು ಮತ್ತು ಹಿಂದುಳಿದ ವರ್ಗಗಳೇ ಆಗಿದ್ದವು. ಯುರೋಪ್ ಮತ್ತು ಉತ್ತರ ಅಮೆರಿಕಾದಲ್ಲಿ ಸಣ್ಣಕಾಳುಗಳಿಗೆ ವರ್ಗ ಸಂಬಂಧವಿದ್ದರೆ, ಭಾರತದಲ್ಲಿ ಜಾತಿ ಸಂಬಂಧ ಇದೆ.

ಇದನ್ನು ವೈಜ್ಞಾನಿಕವಾಗಿ ಹೇಳುವುದಾದರೆ, ಜೈವಿಕ ಆಹಾರ ಆರೋಗ್ಯಕ್ಕೆ ಒಳ್ಳೆಯದಾದರೂ, ಇಳುವರಿ ಕಡಿಮೆ. ಹೀಗಾಗಿ, ನಾವು ಕೈಗಾರಿಕಾ ಪೂರ್ವ ವ್ಯವಸ್ಥೆಗೆ ಹಿಂದಿರುಗುವುದಾದರೆ, ಅಮೆರಿಕ ಮತ್ತು ಯುರೋಪ್ ಊಳಿಗಮಾನ್ಯ ವ್ಯವಸ್ಥೆಯನ್ನು ಮತ್ತು ಭಾರತ ಜಾತಿ ಸರ್ವಾಧಿಕಾರದ ವ್ಯವಸ್ಥೆಯನ್ನು ಮತ್ತೆ ಅಳವಡಿಸಿಕೊಳ್ಳಬೇಕಾಗುತ್ತದೆ. ಹೀಗಾದಾಗ ಕೆಲವೇ ಮಂದಿ ಪೌಷ್ಟಿಕವಾದ, ರುಚಿಕರವಾದ ಆಹಾರ ಸೇವಿಸಿದರೆ, ಉಳಿದ ಬಹುತೇಕ ಮಂದಿ ಹಂದಿ-ಕೋಳಿಗಳ ಆಹಾರ ತಿನ್ನಬೇಕಾಗುತ್ತದೆ.

ಇಷ್ಟಾಗಿಯೂ ಈ ಜೈವಿಕ ಆಹಾರವನ್ನು ಅಪೇಕ್ಷಿಸುತ್ತಿರುವವರು ಯಾರು? ಎಡಪಂಥ ಮತ್ತು ಸಂಘಪರಿವಾರದ ತತ್ವಸಿದ್ಧಾಂತಗಳಲ್ಲಿ ಬೇರುಬಿಟ್ಟಿರುವ ಪರಿಸರವಾದಿಗಳಿಗೆ ಬೇಕಿದೆ ಈ ಜೈವಿಕ ಆಹಾರ. ಕೆಲವರ ಆರೋಗ್ಯ ಮತ್ತು ರುಚಿಗಾಗಿ, ದಲಿತರೇಕೆ ಈ ಬೂಸಾ ತಿನ್ನಬೇಕು? ಈ ಹಸಿರು ಬೂಸಾ ನಮಗೆ ಬೇಡ.

ತಳಿ ವೈವಿಧ್ಯತೆ ಮತ್ತು ಜಾತಿ ಸಂಬಂಧ

ಬಹಳಷ್ಟು ಮಂದಿ ಪ್ರಗತಿಶೀಲ, ಜನಪರ, ಬುದ್ಧಿಜೀವಿ ಭಾರತೀಯರು ತಳಿ ವೈವಿಧ್ಯತೆಯ ಕುಸಿತಕ್ಕೆ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಒಂದು ಅಂದಾಜಿನ ಪ್ರಕಾರ ಹಿಂದೆ ಭಾರತೀಯ ಕೃಷಿಕರು ಸುಮಾರು ೩೦,೦೦೦ ಬಗೆಯ ಭತ್ತ ಬೆಳೆಯುತ್ತಿದ್ದರು. ಆದರೆ ಈಗ ಇವುಗಳಲ್ಲಿ ೭೫%ರಷ್ಟು ತಳಿಗಳು ಹೇಳಹೆಸರಿಲ್ಲವಾಗಿವೆ. ಮುಂಬರುವ ದಿನಗಳಲ್ಲಿ ಕೇವಲ ಒಂದು ಡಜನ್‌ನಷ್ಟು ಭತ್ತದ ತಳಿಗಳು ಮಾತ್ರ ಉಳಿಯಬಹುದೆಂಬ ಭೀತಿ ಇದೆ.

ಮನುಷ್ಯ ಮತ್ತು ಪ್ರಕೃತಿಯ ಹೊಂದಾಣಿಕೆಯಿಂದಾಗಿ ಮಣ್ಣಿನ ಲಕ್ಷಣ, ಹವಾಮಾನ ಮತ್ತು ಅವಶ್ಯಕತೆಗಳಿಗನುಗುಣವಾಗಿ ಕೆಲವು ಕೃಷಿ ತಳಿಗಳು ವಿಕಸನಗೊಳ್ಳುತ್ತಾ ಬಂದಿವೆ. ಇವುಗಳು ಮನುಷ್ಯ ಮತ್ತು ಪ್ರಕೃತಿಗೆ ಸೂಕ್ತವಾದ ಜೀವವೈವಿಧ್ಯತೆಯನ್ನು ಕಾಪಾಡಿಕೊಂಡು ಬರುವಲ್ಲಿ ನೆರವಾಗಿವೆ. ಆದರೆ, ವಿಜ್ಞಾನದ ಆಗಮನಾನಂತರ ಬಹಳಷ್ಟು ಮೂಲಭೂತ ಬದಲಾವಣೆಗಳಾಗಿವೆ. ಹೀಗಾಗಿ ಮನುಷ್ಯ ಸ್ವಹಿತಾಸಕ್ತಿಯಿಂದ ಪ್ರಕೃತಿಗೆ ವ್ಯತಿರಿಕ್ತವಾದ ಅನೇಕ ಕೃಷಿ ತಳಿಗಳನ್ನು ಅಳವಡಿಸಿಕೊಂಡ.

ವೈಜ್ಞಾನಿಕ ಕೃಷಿ ಹೆಚ್ಚು ಇಳುವರಿಗೆ ಮಾತ್ರ ಒತ್ತು ನೀಡುವುದು. ಹೀಗಾಗಿ ಹೆಚ್ಚು ಇಳುವರಿ ನೀಡುವ ಕೃಷಿ ತಳಿಗಳು, ಸಾಂಪ್ರದಾಯಿಕ ತಳಿಗಳಿಗೆ ಕೊಕ್ ನೀಡಿದವು. ವಿಶ್ವದಾದ್ಯಂತ ಪ್ರಸ್ತುತ ಕೃಷಿ ತಳಿ ವೈವಿಧ್ಯತೆಯ ಬಗ್ಗೆ ಗಮನಹರಿಸಲಾಗುತ್ತಿದೆ. ಭಾರತದಲ್ಲಿ ಹಲವು ನೆಲೆಗಟ್ಟಿನಲ್ಲಿ ಈ ವಿಚಾರ ಚರ್ಚೆಗೊಳಗಾಗುತ್ತಿದೆ.

ಆದರೆ, ಭಾರತದಲ್ಲಿ ತಳಿ ವೈವಿಧ್ಯತೆಯೆಂದರೆ ತಳಿ ಶ್ರೇಣೀಕರಣ ಎಂಬುದು ಆಶ್ಚರ್ಯವಾದರೂ ಸತ್ಯ. ತಳಿ ಶ್ರೇಣೀಕರಣ ಆಂತರಿಕವಾಗಿ ಜಾತಿವ್ಯವಸ್ಥೆಗೆ ಹೊಂದಿಕೊಂಡಿದೆ. ನಿಮಗೆ ಆಶ್ಚರ್ಯವಾಗಬಹುದು, ಕೆಲವು ತಳಿಗಳನ್ನು ಮೇಲ್ಜಾತಿಗಳು ಬೆಳೆದರೆ, ಕೆಲವನ್ನು ಕೆಳಜಾತಿಗಳು ಬೆಳೆಯುತ್ತಿದ್ದವು. ಇನ್ನೂ ಕೆಲವು ತಳಿಗಳನ್ನು ಅಸ್ಪೃಶ್ಯರು ಬೆಳೆಯುತ್ತಿದ್ದರು.

ಕಣ್ಮರೆಯಾಗುತ್ತಿರುವ ಬಹಳಷ್ಟು ತಳಿಗಳು ಕೆಳಜಾತಿಗಳು ಮತ್ತು ಅಸ್ಪೃಶ್ಯರು ಅಂದರೆ ದಲಿತರಿಗೆ ಸಂಬಂಧಿಸಿದ್ದಾಗಿವೆ. ಕಣ್ಮರೆಯಾಗುತ್ತಿರುವ ಬಹಳಷ್ಟು ಸಣ್ಣ ಕಾಳುಗಳನ್ನು ಕೂಡ ದಲಿತರು ಬೆಳೆಯುತ್ತಿದ್ದರು.

ಇನ್ನು ೩೦,೦೦೦ ಭತ್ತದ ತಳಿಗಳ ವಿಷಯಕ್ಕೆ ಬರುವುದಾದರೆ, ಸಾವನ್ ಎಂಬ ಒಂದು ಭತ್ತದ ತಳಿಯೊಂದಿತ್ತು. ಗುಂಡಗಿನ ಆಕೃತಿ, ಬಿಳಿಯ ಬಣ್ಣದ ಅಕ್ಕಿ ಒದಗಿಸುತ್ತಿದ್ದ ಭತ್ತವನ್ನು ಗಂಗಾ ನದಿಯ ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿತ್ತು. ಬಹುತೇಕ ದಲಿತರೇ ಸೇವಿಸುತ್ತಿದ್ದ ಸಾವನ್ ತಳಿಯ ಅಕ್ಕಿಯನ್ನು ತುಚ್ಛವಾಗಿ ಕಾಣಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಮೇಲ್ಜಾತಿಯ ಜನ ಕೂಡ ಈ ಅಕ್ಕಿಯನ್ನು ಗುಟ್ಟಾಗಿ ಸೇವಿಸುತ್ತಿದ್ದುದುಂಟು. ಸಾವನ್ ತಳಿಯ ಅಕ್ಕಿಯನ್ನು ಎಷ್ಟು ತುಚ್ಛವಾಗಿ ಕಾಣಲಾಗುತ್ತಿದ್ದೆಂದರೆ, ದಲಿತರು ಕೂಡ ಮನೆಗೆ ಬಂದ ಅತಿಥಿಗಳಿಗೆ ಸಾವನ್ ಅಕ್ಕಿಯಿಂದ ಮಾಡಿದ ಅಡುಗೆಯನ್ನು ಬಡಿಸುತ್ತಿರಲಿಲ್ಲ.

ಇನ್ನು ೧೯೬೭ರಲ್ಲಿ ಸರ್ಕಾರದಿಂದ ನಿಷೇಧಕ್ಕೊಳಗಾದ 'ಕೇಸರಿ' ಎಂಬ ತಳಿ ಕೂಡ ಬಡವರ ಜನಪ್ರಿಯ ಆಹಾರಧಾನ್ಯವಾಗಿತ್ತು. ಇದನ್ನು ಬೆಳೆಯಲು ನೈಸರ್ಗಿಕ ಅಥವಾ ರಾಸಾಯನಿಕ ಗೊಬ್ಬರದ ಅವಶ್ಯಕತೆಯಿಲ್ಲ. ಕಳೆ ಮತ್ತು ಕ್ರಿಮಿನಾಶಕಗಳಿಂದ ಆಂತರಿಕವಾಗಿ ರಕ್ಷಣೆಯನ್ನು ಇದು ಹೊಂದಿದೆ. ಇತರ ಧಾನ್ಯಗಳು ಒಂದು ಕೆ.ಜಿ.ಗೆ ಸುಮಾರು ೫೦ ರೂ.ಗೆ ಮಾರಾಟವಾಗುತ್ತಿದ್ದರೆ, 'ಕೇಸರಿ' ೧೫ ರೂ.ಗೆ ಸಿಗುತ್ತದೆ. 'ಕೇಸರಿ' ಕೂಡ ದಲಿತರು ಮತ್ತು ಕೆಳಜಾತಿಗಳ ಆಹಾರಧಾನ್ಯವೇ ಆಗಿತ್ತು. ಅಧಿಕ ಪೌಷ್ಠಿಕ ಅಂಶವನ್ನು ಹೊಂದಿದ್ದ 'ಕೇಸರಿ'ಯ ಉತ್ಪಾದನೆ ಮತ್ತು ಮಾರಾಟವನ್ನು ಆರೋಗ್ಯಕ್ಕೆ ಹಾನಿಕರವೆಂಬ ಕಾರಣದಿಂದ ಸರ್ಕಾರ ನಿಷೇಧಿಸಿದೆ. 'ಕೇಸರಿ' ಈಗ ಬಹುತೇಕ ಕಣ್ಮರೆಯಾಗಿದೆ.

ಬಡವರು ಮತ್ತು ದಲಿತರ ಜೊತೆಗೆ ಗುರುತಿಸಲಾಗುತ್ತಿದ್ದ ನೂರಾರು ತಳಿಗಳು ಸಾವಿರಾರು ವರ್ಷಗಳ ಹಿಂದೆ ವಿಕಸನಗೊಂಡಿವೆ. ಈ ತಳಿಗಳೆಲ್ಲ ನಿಧಾನವಾಗಿ ಕಣ್ಮರೆಯಾಗುತ್ತಿವೆ. ಸಾಮಾನ್ಯವಾಗಿ ಶ್ರೀಮಂತರ ಆಹಾರವಾಗಿರುವ ಗೋಧಿ/ ಅಕ್ಕಿಯ ವಿಭಾಗದಲ್ಲಿಯೇ ನೋಡುವುದಾದರೆ, ಸಣ್ಣ, ತೆಳುವಾದ, ಉದ್ದನೆಯ, ದಪ್ಪನೆಯ ಬಹಳಷ್ಟು ತಳಿಗಳಿವೆ. ಎಲ್ಲ ತಳಿಗಳಿಗೂ ತನ್ನದೇ ಆದ ಜಾತಿ/ ಆದಾಯದ ಸಂಬಂಧವಿದೆ.

೧೯೬೭ರಲ್ಲಿ ಸರ್ಕಾರದಿಂದ ನಿಷೇಧಕ್ಕೊಳಗಾದ 'ಕೇಸರಿ' ಎಂಬ ತಳಿ ಕೂಡ ಬಡವರ ಜನಪ್ರಿಯ ಆಹಾರಧಾನ್ಯವಾಗಿತ್ತು. ಇದನ್ನು ಬೆಳೆಯಲು ನೈಸರ್ಗಿಕ ಅಥವಾ ರಾಸಾಯನಿಕ ಗೊಬ್ಬರದ ಅವಶ್ಯಕತೆಯಿಲ್ಲ. ಕಳೆ ಮತ್ತು ಕ್ರಿಮಿನಾಶಕಗಳಿಂದ ಆಂತರಿಕವಾಗಿ ರಕ್ಷಣೆಯನ್ನು ಇದು ಹೊಂದಿದೆ. ಇತರ ಧಾನ್ಯಗಳು ಒಂದು ಕೆ.ಜಿ.ಗೆ ಸುಮಾರು ೫೦ ರೂ.ಗೆ ಮಾರಾಟವಾಗುತ್ತಿದ್ದರೆ, 'ಕೇಸರಿ' ೧೫ ರೂ.ಗೆ ಸಿಗುತ್ತದೆ. 'ಕೇಸರಿ' ಕೂಡ ದಲಿತರು ಮತ್ತು ಕೆಳಜಾತಿಗಳ ಆಹಾರಧಾನ್ಯವೇ ಆಗಿತ್ತು. ಅಧಿಕ ಪೌಷ್ಠಿಕ ಅಂಶವನ್ನು ಹೊಂದಿದ್ದ 'ಕೇಸರಿ'ಯ ಉತ್ಪಾದನೆ ಮತ್ತು ಮಾರಾಟವನ್ನು ಆರೋಗ್ಯಕ್ಕೆ ಹಾನಿಕರವೆಂಬ ಕಾರಣದಿಂದ ಸರ್ಕಾರ ನಿಷೇಧಿಸಿದೆ. 'ಕೇಸರಿ' ಈಗ ಬಹುತೇಕ ಕಣ್ಮರೆಯಾಗಿದೆ. ಬಡವರು ಮತ್ತು ದಲಿತರ ಜೊತೆಗೆ ಗುರುತಿಸಲಾಗುತ್ತಿದ್ದ ನೂರಾರು ತಳಿಗಳು ಸಾವಿರಾರು ವರ್ಷಗಳ ಹಿಂದೆ ವಿಕಸನಗೊಂಡಿವೆ.

ದಿನೇ ದಿನೇ ತಳಿಗಳ ಸಂಖ್ಯೆ ಕುಸಿಯುತ್ತಿರುವುದರಿಂದ, ಉಳಿದ ತಳಿಗಳನ್ನು ಜಾತಿ, ಆದಾಯ, ಸಮುದಾಯದ ಗೊಡವೆಯಿಲ್ಲದೆ ಎಲ್ಲರೂ ಸೇವಿಸಲೇಬೇಕಾಗಿದೆ. ಹೀಗಾಗಿ ತಳಿ ಸಂಬಂಧಿತ ಶ್ರೇಣೀಕರಣ ವ್ಯವಸ್ಥೆ ಕೂಡ ನಾಶವಾಗುತ್ತಿದೆ.

ಆದರೆ, ಇಲ್ಲೂ ಕೂಡ ಸಮಸ್ಯೆಯಿದೆ. ನಾನು ಹಳ್ಳಿಗಳಿಗೆ ಭೇಟಿ ನೀಡಿ ರೈತರನ್ನು ಮಾತನಾಡಿಸಿದಾಗ, ಸಾಂಪ್ರದಾಯಿಕವಾಗಿ ಶ್ರೀಮಂತರಾದ ಮೇಲ್ಜಾತಿಯ ಹಿರಿಯರು, ಕಣ್ಮರೆಯಾಗುತ್ತಿರುವ ತಳಿಗಳ ಬಗ್ಗೆ ತೀರ ಅಪ್ಯಾಯಮಾನವಾಗಿ ಪ್ರತಿಕ್ರಿಯಿಸಿದ್ದಾರೆ. ನೆನಪಿರಲಿ, ಇವರ್‍ಯಾರೂ ಈ ತಳಿಗಳನ್ನು ಒಮ್ಮೆಯೂ ಸೇವಿಸಿದವರಲ್ಲ. ಆದರೆ, ದಲಿತರಿಗೆ ಇದರಿಂದ ಅಂತಹ ಆತಂಕವೇನೂ ಉಂಟಾಗಿಲ್ಲ. ನಿಜ ಹೇಳಬೇಕೆಂದರೆ, ಒಂದು ಕಾಲದಲ್ಲಿ ಕೇವಲ ಮೇಲ್ಜಾತಿಗಳಿಗೆ ಮಾತ್ರ ಮೀಸಲಾಗಿದ್ದ ಅಕ್ಕಿ/ ಗೋಧಿಯನ್ನು ಈಗ ಎಲ್ಲರೂ ಸೇವಿಸಬೇಕಾಗಿರುವ ಅಂಶ ದಲಿತರಿಗೆ ಇನ್ನೂ ಸಂತಸ ತಂದಿದೆ.

ಆದರೆ ಇಲ್ಲಿ ನಮ್ಮೆದುರು ಒಂದು ದೊಡ್ಡ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಒಂದೆಡೆ, ವಿಜ್ಞಾನದ ಹಿಡಿತದಲ್ಲಿರುವ ತಳಿ ವ್ಯವಸ್ಥೆ, ಜಾತಿ ಸಂಬಂಧಿತ ತಳಿ ಶ್ರೇಣೀಕರಣವನ್ನು ಹೊಡೆದುಹಾಕುತ್ತಿದ್ದರೆ, ಇನ್ನೊಂದೆಡೆ ಪ್ರಗತಿಶೀಲ, ಜನಪರ, ಬುದ್ಧಿಜೀವಿ ಭಾರತೀಯರು ಈ ಪ್ರಕ್ರಿಯೆಯನ್ನು ವಿರೋಧಿಸುತ್ತಿದ್ದಾರೆ. ಈ ಪ್ರಗತಿಶೀಲರು ಹಳೆಯ ಜಾತಿ ಸಂಬಂಧಿತ ತಳಿಗಳ ಬಗ್ಗೆ ಮೇಲ್ಜಾತಿ ಶೋಷಕರಂತೆಯೇ ರೊಮ್ಯಾಂಟಿಕ್ ನೆಲೆಗಟ್ಟಿನಲ್ಲಿ ಮಾತನಾಡುತ್ತಾರೆ. ದಲಿತರ ಸಂಭ್ರಮಕ್ಕೆ ಕಾರಣವಾದ ಎಲ್ಲವನ್ನೂ ಈ ಪ್ರಗತಿಶೀಲರು ತಿರಸ್ಕರಿಸುತ್ತಾರೆ.

ಪ್ರಸ್ತುತ ಸಂದರ್ಭದಲ್ಲಿ ಭಾರತ ಆಂತರಿಕ ಸಂಘರ್ಷದಲ್ಲಿ ನಿರತವಾಗಿರುವುದು ನಿಜ. ಆಧುನಿಕತೆ ಮತ್ತು ಸಾಂಪ್ರದಾಯಿಕತೆಯ ನಡುವಿನ ಕಲಹಕ್ಕೆ ಇನ್ನೂ ಹೆಚ್ಚಿನ ವಿವರಣೆ ಬೇಕಾಗುತ್ತದೆ. ಆದರೆ, ಇದು ಜಾತಿ ಮತ್ತು ವಿಜ್ಞಾನದ ಸಂಘರ್ಷವೇ? ಅಥವಾ ಜಾತಿ ಮತ್ತು ಬಂಡವಾಳಶಾಹಿತ್ವದ ಸಂಘರ್ಷವೇ? ಅಥವಾ ಆಡಂಸ್ಮಿತ್ ಮತ್ತು ಮನು ನಡುವಿನ ಸಂಘರ್ಷವೇ? ಬಂಡವಾಳಶಾಹಿತ್ವ ಮತ್ತು ವಿಜ್ಞಾನ, ಒಂದರ ಹೊರತು ಇನ್ನೊಂದಿಲ್ಲ. ಎರಡು ಕೂಡ ಜೊತೆಜೊತೆಗೇ ವಿಕಸನಗೊಳ್ಳುವುದು. ಹೀಗಾಗಿ ಈ ಪ್ರಶ್ನೆಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಮಾಯಾವತಿ ಹುಟ್ಟಿನಿಂದ ದಲಿತ ವರ್ಗಕ್ಕೆ ಸೇರಿದವರು. ಅದು ಅವರ ಅಸ್ಮಿತೆ. 'ಸರ್ವಜನ'ರ ನಾಯಕಿಯೆಂದು ಮಾಯಾವತಿ ಹೇಳಿಕೊಂಡರೂ ಸಮಾಜ ಆಕೆಯನ್ನು 'ದಲಿತ ನಾಯಕಿ'ಯೆಂದೇ ಗುರುತಿಸುವುದು. ಸಮಾಜದ ಗ್ರಹಿಕೆಯನ್ನು ಮಾಯಾವತಿ ಬದಲಾಯಿಸಲಾಗುವುದಿಲ್ಲ. ಇನ್ನು ಅಮೆರಿಕೆಯ ಬರಾಕ್ ಒಬಾಮಾ ಹುಟ್ಟಿನಿಂದ 'ಸರ್ವಜನ' ವ್ಯಕ್ತಿ. ಒಬಾಮಾ ಅವರ ತಂದೆ, ಬರಾಕ್ ಹುಸೇನ್ ಒಬಾಮಾ ಕಪ್ಪು ಜನಾಂಗಕ್ಕೆ ಸೇರಿದ

ಯಶಸ್ವಿ ಸೂತ್ರಕ್ಕೆ ಮತ್ತೆ ಮರಳಲಿ ಮಾಯಾವತಿ

ವನಾಗಿದ್ದರೂ, ತಾಯಿ ಆನ್ ಡನ್ಹಾಮ್ ಬಿಳಿಯ ಜನಾಂಗಕ್ಕೆ ಸೇರಿದವರಾಗಿದ್ದರು. ಆದರೆ, ಅಮೆರಿಕೆಯ ಗ್ರಹಿಕೆಯ ಪ್ರಕಾರ ಆತ ಕಪ್ಪು ಜನಾಂಗಕ್ಕೆ ಸೇರಿದವರೇ.

ಒಬಾಮಾ ಮತ್ತು ಮಾಯಾವತಿ ಬಹಳಷ್ಟು ವಿಚಾರಗಳಲ್ಲಿ ಸಾಮ್ಯತೆ ಹೊಂದಿದ್ದಾರೆ. ಮಾಯಾವತಿ ೧೯೫೬ರಲ್ಲಿ ಜನಿಸಿದರೆ, ಒಬಾಮಾ ೧೯೬೧ರಲ್ಲಿ ಜನಿಸಿದ್ದಾರೆ– ವಯಸ್ಸಿನಲ್ಲಿ ಕೇವಲ ಹತ್ತು ವರ್ಷಗಳ ವ್ಯತ್ಯಾಸ. ಎರಡು ವಿಭಿನ್ನ ಭೌಗೋಳಿಕ ಪ್ರದೇಶಗಳಲ್ಲಿದ್ದರೂ, ಇಬ್ಬರೂ ಒಂದೇ ವಯೋವರ್ಗಕ್ಕೆ ಸೇರಿದವರಾಗಿದ್ದಾರೆ. ತಂತಮ್ಮ ದೇಶಗಳ ಅತ್ಯುನ್ನತ ಹುದ್ದೆಗಳ ಆಕಾಂಕ್ಷಿಗಳಾಗಿರುವ ಇಬ್ಬರೂ ಅದ್ಭುತ ಮಾತುಗಾರಿಕೆ ಮತ್ತು ವರ್ಚಸ್ಸನ್ನು ಹೊಂದಿರುವಂತಹವರು.

ಅಮೆರಿಕೆ ಅಧ್ಯಕ್ಷಗಿರಿಯೆಡೆಗೆ ಒಬಾಮಾರವರ ಪಯಣ ಔಪಚಾರಿಕ ಮಾತ್ರವಾಗಿತ್ತು. ಈಗ ಅಧ್ಯಕ್ಷ ಸ್ಥಾನಕ್ಕೆ ಒಬಾಮಾ, ಜಾನ್ ಮ್ಯಾಕ್‌ಕೇನ್ ಅವರೊಂದಿಗೆ ಸ್ಪರ್ಧೆಯಲ್ಲಿದ್ದಾರೆ. ಪ್ರಬಲರಾದ ಮೂರನೆಯ ಅಭ್ಯರ್ಥಿ ಕಣದಲ್ಲಿಲ್ಲ. ಆದರೆ, ಭಾರತದ ಪ್ರಧಾನ ಮಂತ್ರಿಯ ಹುದ್ದೆಯೆಡೆಗೆ ಮಾಯಾವತಿಯವರ ಪಯಣ ಅಷ್ಟೇನೂ ಸುಲಭದ್ದಲ್ಲ. ಪ್ರಧಾನ ಮಂತ್ರಿಯ ಹುದ್ದೆಗೆ ಇನ್ನೂ ಸ್ಪರ್ಧೆಯೇ ಏರ್ಪಟ್ಟಿಲ್ಲ. ಆದರೂ ಪ್ರಧಾನಿ ಹುದ್ದೆಗೆ ನೂರಾರು ಮಂದಿ ಆಕಾಂಕ್ಷಿಗಳು; ಕೊನೆಯ ಕ್ಷಣದಲ್ಲೂ ಕೂಡ ಆಕಾಂಕ್ಷಿಗಳು ಹುಟ್ಟಿಕೊಳ್ಳಬಹುದು!

ಇಲ್ಲಿ ಇನ್ನೊಂದು ವ್ಯತ್ಯಾಸವಿದೆ. ಅಮೆರಿಕ ಮತ್ತು ಭಾರತ ಒಂದೇ ಅಲ್ಲ. ಅಮೆರಿಕ ಬಂಡವಾಳಶಾಹಿ ವ್ಯವಸ್ಥೆಯನ್ನು ಹೊಂದಿರುವ ದೇಶ. ಆದರೆ, ಭಾರತ, ೫೦% ಜಮೀನ್ದಾರಿ ವ್ಯವಸ್ಥೆ, ೨೫ % ಸಮಾಜವಾದ ಮತ್ತು ೨೫% ಬಂಡವಾಳಶಾಹಿ ವ್ಯವಸ್ಥೆಯನ್ನು ಹೊಂದಿರುವ ದೇಶ. ಅಮೆರಿಕ ಮೂಲತಃ ಕ್ರೈಸ್ತ ಧರ್ಮವನ್ನು ಅನುಸರಿಸುವ ದೇಶ. ಭಾರತ ಮೂಲತಃ ಹಿಂದೂ ದೇಶ. ಆದರೆ, ಎರಡೂ ದೇಶಗಳಲ್ಲಿ ಗಮನಿಸಲೇಬೇಕಾದಂತಹ ಸಮಾನ ಅಂಶಗಳಿವೆ. ಅಮೆರಿಕಾ ವರ್ಣ ವ್ಯವಸ್ಥೆಯಿಂದ ಇಬ್ಭಾಗವಾಗಿದ್ದರೆ, ಭಾರತ ಜಾತಿ ವ್ಯವಸ್ಥೆಯಿಂದ ವಿಭಾಗೀಕರಣಗೊಂಡಿದೆ. ಭಾರತದ ದಲಿತರು ಮತ್ತು ಅಮೆರಿಕಾದ ಕಪ್ಪು ಜನಾಂಗದವರು ಒಂದೇ ರೀತಿಯಲ್ಲಿ ಶೋಷಣೆಗೊಳಗಾಗಿದ್ದಾರೆ. ಸಮುದಾಯದಿಂದ ಹೊರಗುಳಿದ ಅನುಭವ ಇಬ್ಬರಿಗೂ ಇದೆ. ಆದರೂ, ಒಬಾಮಾ ಅಮೆರಿಕಾದ ಅಧ್ಯಕ್ಷಪಟ್ಟಕ್ಕೆ ಬರಬಹುದೆಂದು ಖಚಿತವಾಗಿ ಹೇಳಬಹುದಾದರೂ, ಮಾಯಾವತಿ ಪ್ರಧಾನಿ ಹುದ್ದೆಯನ್ನೇರುವುದು ಕೇವಲ ಒಂದು ಸಾಧ್ಯತೆ ಮಾತ್ರ.

ಇವತ್ತು ವರ್ಣ, ಸಮುದಾಯ, ಲಿಂಗಬೇಧವಿಲ್ಲದೆ, ಅಮೆರಿಕಾದ ಜನರು ಒಬಾಮಾ ಅವರನ್ನು ಒಪ್ಪಿಕೊಂಡಿದ್ದಾರೆ. ಕಳೆದ ವರ್ಷ ಉತ್ತರಪ್ರದೇಶದಲ್ಲಿ ಮಾಯಾವತಿ ಇದೇ ರೀತಿಯ ಸಾಧನೆಯನ್ನು ಮಾಡಿದ್ದರು. ಐತಿಹಾಸಿಕವಾಗಿ ವಿರುದ್ಧವಾಗಿರುವ ದಲಿತರು ಮತ್ತು ಬ್ರಾಹ್ಮಣರನ್ನು ತಮ್ಮ ನಾಯಕತ್ವದಲ್ಲಿ ಒಂದುಗೂಡಿಸಿದ್ದು ಇತಿಹಾಸದ ಬಹುದೊಡ್ಡ ಸಾಮಾಜಿಕ ಒಗ್ಗೂಡುವಿಕೆ(ಸೋಷಿಯಲ್ ಎಂಜಿನಿಯರಿಂಗ್)ಯ ಪ್ರಕ್ರಿಯೆಯೇ ಸರಿ. ಈಗ, ಒಬಾಮಾ ಸಾಧಿಸಲು ಹೊರಟಿರುವುದನ್ನು ಮಾಯಾವತಿ ೨೦೦೭ರ ಮೇ ತಿಂಗಳಲ್ಲಿ ಈಗಾಗಲೇ ಸಾಧಿಸಿದ್ದಾರೆ.

ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ೨೦೦೭ರ ಮಾಯಾವತಿ ಮತ್ತು ೨೦೦೮ರ ಒಬಾಮಾ ಸಮಾನರಾಗಿ ಕಾಣುತ್ತಾರೆ. ಇಂದಿನ ಒಬಾಮಾ ಮತ್ತು ನಿನ್ನೆಯ ಮಾಯಾವತಿಯವರ ಸಾರ್ವಜನಿಕ ಇಮೇಜ್ ಕೂಡ ಸಮಾನವಾಗಿಯೇ ಇದೆ. ಅಮೆರಿಕೆಯಲ್ಲಿ ಒಬಾಮಾ ಯಾರನ್ನು ಪ್ರತಿನಿಧಿಸುತ್ತಿದ್ದಾರೆಂದು ಯಾವುದೇ ವರ್ಣ ಅಥವಾ ಸಾಮಾಜಿಕ ಗುಂಪುಗಳಿಗೆ ಗೊತ್ತಿಲ್ಲ. ಕಪ್ಪು ಜನಾಂಗದವರ ಜನಪ್ರಿಯ ಇಮೇಜ್‌ನ ಪ್ರಕಾರ ಒಬಾಮಾ ಓರ್ವ ಕಪ್ಪು ಜನಾಂಗದವ. ಒಬಾಮಾ ಅವರ ಗೆಲುವು ಒಟ್ಟಾರೆ ಸಮುದಾಯದ ಆತ್ಮಗೌರವವನ್ನು ಹೆಚ್ಚಿಸುವುದಂತೂ ನಿಜ. ಇನ್ನು ಬಿಳಿಯರು, ಒಬಾಮಾ ಅದ್ಭುತ ಪ್ರತಿಭೆಯ ಅಮೆರಿಕಾದ ನಾಯಕ ಎಂದು ಗುರುತಿಸುತ್ತಾರೆ. ಕಪ್ಪು ಜನಾಂಗಕ್ಕೆ ಸೇರಿದ ಒಬಾಮಾ ಸಮಾಜದಲ್ಲಿ ಶಾಂತಿ ಮೂಡಿಸುವುದರ ಜೊತೆಗೆ ಅಮೆರಿಕನ್ನರ ಕನಸುಗಳಿಗೆ ಹೊಸರೂಪ ಕೊಡಬಲ್ಲರೆಂಬುದು ಬಿಳಿಯರ ನಂಬಿಕೆ. ಈ ನಂಬಿಕೆಯನ್ನು ಪುಷ್ಟೀಕರಿಸುವಂತೆ ಒಬಾಮಾ, ಹಿಂಸೆ, ಡ್ರಗ್ಸ್ ಮತ್ತಿತರ ವಿಚಾರಗಳಲ್ಲಿ ಕಪ್ಪು ಜನಾಂಗದ ಆಂತರಿಕ ಸುಧಾರಣೆಯ ಬಗ್ಗೆ ಮಾತನಾಡುತ್ತಿದ್ದಾರೆ.

ಇನ್ನು ಮಾಯಾವತಿ ವಿಚಾರಕ್ಕೆ ಬರುವುದಾದರೆ, ದಲಿತ– ಬ್ರಾಹ್ಮಣ ಸೂತ್ರವನ್ನು ಪ್ರಯೋಗಿಸಿದಾಗ, ರಾಜ್ಯದ ಕಾನೂನು ಸುವ್ಯವಸ್ಥೆಗೆ ಪೂರಕವಾದ, ಸರ್ವರಿಗೂ ಆಪ್ತವಾದ ಕಾರ್ಯಸೂಚಿಯನ್ನು ಅವರು ಜಾರಿಗೆ ತಂದರು. ಆಕೆ ಯಾವ ಸಮುದಾಯವನ್ನು ಪ್ರತಿನಿಧಿಸುತ್ತಿದ್ದರೆಂದು ಯಾರಿಗೂ ಗೊತ್ತಿರಲಿಲ್ಲ. ಒಬಾಮಾ ಅವರಂತೆ ಮಾಯಾವತಿ ಕೂಡ ತಮ್ಮ 'ದಲಿತತ್ವ'ವನ್ನು ಮೀರಿ ಬಹುಜನರ ನಾಯಕಿಯಾದರು. ದಲಿತ ರಕ್ಷಣೆಯ ಕಾಯ್ದೆಯನ್ನು ಮನಸೋಇಚ್ಛೆ ಬಳಕೆ ಮಾಡದಂತೆ ದಲಿತರಿಗೆ ಆಕೆ ಕೂಡ ಎಚ್ಚರಿಕೆ ನೀಡಿದ್ದರು. ಒಬಾಮಾ ಅವರ ಅದ್ಭುತ ಪ್ರತಿಭೆಯ ಜೊತೆಗೆ, ಮುಖ್ಯವಾಗಿ ಸಂಕುಚಿತವಲ್ಲದ ಕಾರ್ಯಸೂಚಿಯೇ ಇಂತಹ ಅಭೂತಪೂರ್ವ ಯಶಸ್ಸಿಗೆ ಕಾರಣ. ಅದೇ ರೀತಿ ಸರ್ವಜನರಿಗೆ ಆಪ್ತವಾದ ಕಾರ್ಯಸೂಚಿ ಮಾಯಾವತಿಯವರ ಯಶಸ್ಸಿಗೆ ಕಾರಣ.

ಆದರೆ, ಜುಲೈ ೨೨ರ ನಾಟಕೀಯ ಬೆಳವಣಿಗೆಗಳ ನಂತರ ಪರಿಸ್ಥಿತಿ ಬದಲಾಗಿದೆ. ಮಾಯಾವತಿ ಈಗ ಪಕ್ಷಪಾತಿ ಎಂಬ ಧೋರಣೆ ಕೆಲವು ಪ್ರಭಾವಿ ವಲಯ ಗಳಲ್ಲಿ ಮೂಡುತ್ತಿದೆ. ಮಾಯಾವತಿ ಅಮೆರಿಕಾ– ವಿರೋಧಿ ಗುಂಪಿನ ಕಡೆಗೆ ಹೊರಳುತ್ತಿದ್ದಾರೆ. ಅಮೆರಿಕಾ–ವಿರೋಧಿ ವಾದಕ್ಕೆ ತನ್ನದೇ ಆದ ತಾರ್ಕಿಕ ನೆಲೆಗಟ್ಟಿದೆ. ಒಂದು ವೇಳೆ ಅಮೆರಿಕಾ– ವಿರೋಧಿಗಳು, ಅಮೆರಿಕಾದೊಂದಿಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಬೇಕೆಂದರೆ, ಅವರು ಇರಾನ್ ಪರವಾಗಿ ಹೋರಾಡಲೇಬೇಕು. ಅಂದರೆ ಚೀನಾ ಅಥವಾ ರಷ್ಯಾದೊಂದಿಗಿರಬೇಕು.

ಅಮೆರಿಕಾ– ವಿರೋಧಿವಾದ ಪಕ್ಷದ ಸೈದ್ಧಾಂತಿಕ ನಂಬಿಕೆಯೂ ಆಗುವುದರಿಂದ, ಈ ಸಂಬಂಧ ತನ್ನ ಕಾರ್ಯಸೂಚಿಯನ್ನು ಜಾರಿಗೆ ತರಲೇಬೇಕಾಗುತ್ತದೆ. ಆದರೆ, ಇರಾನ್ ರಕ್ಷಣೆಗೆ ನಿಲ್ಲುವುದು, ಅಮೆರಿಕನ್ನರ ವಿರುದ್ಧ ಯುದ್ಧ ಮಾಡುವುದು ಅಥವಾ ಅಮೆರಿಕನ್ನರಿಂದ ವಿಶ್ವದ ಮುಸ್ಲಿಮರನ್ನು 'ರಕ್ಷಿಸುವುದು' ಸಾಮಾನ್ಯ ಭಾರತೀಯರು ಗಂಭೀರವಾಗಿ ಪರಿಗಣಿಸುವ ವಿಚಾರವೇ? ಆದರೆ, ಕೇಂದ್ರದ ಯುಪಿಎ ಸರ್ಕಾರದ ಪತನಕ್ಕೆ ಯತ್ನಿಸಿದವರ ಜೊತೆಗೆ ಮಾಯಾವತಿ ಕೂಡ ಸೇರಿದ್ದರು.

ಕಾಂಗ್ರೆಸ್ ಪಕ್ಷವನ್ನು ಧೂಳೀಪಟ ಮಾಡುವುದು ಮಾಯಾವತಿ ಅವರ ಕಾರ್ಯಸೂಚಿಯೆಂದು ಕೆಲವರು ವಾದಿಸಬಹುದು. ಕಾಂಗ್ರೆಸ್ ಪಕ್ಷ ದಲಿತರ ಹಕ್ಕುಗಳಿಗೆ ಅಭ್ಯಾಸಬಲದಿಂದ ಅಪಚಾರವೆಸಗುತ್ತಾ ಬಂದಿರುವುದರಿಂದ ಈ ವಾದವನ್ನು ಒಪ್ಪಿಕೊಳ್ಳಬಹುದು. ಆದರೆ, ಕಾಂಗ್ರೆಸ್ ವಿರುದ್ಧ ತಂತ್ರ ರೂಪಿಸಲು ಅಮೆರಿಕಾ– ವಿರೋಧಿ ವಿಚಾರವನ್ನು ಬಿಟ್ಟು ಇತರ ವಿಚಾರಗಳು ಅಥವಾ ವೇದಿಕೆಗಳನ್ನು ಬಳಸಿಕೊಳ್ಳಬಹುದಿತ್ತು.

೨೦೦೭ರ ಸ್ಥಿತಿಗೆ ಮರಳಲು ಮಾಯಾವತಿಯವರಿಗೆ ಇನ್ನೂ ಕಾಲಾವಕಾಶವಿದೆ. ಪ್ರಧಾನಮಂತ್ರಿ ಹುದ್ದೆ ಒತ್ತಟ್ಟಿಗಿರಲಿ, ಉತ್ತರಪ್ರದೇಶ ರಾಜ್ಯದ 'ಸರ್ವ ಸಮಾಜ' ಮಾಯಾವತಿ ಅವರ ಬಗ್ಗೆ ಮರುಚಿಂತನೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು. ಹೀಗಾಗಿ, ಒಬಾಮಾ ಅವರ ಮಾದರಿಯನ್ನು ಮಾಯಾವತಿ ಈಗಲೂ ಅನುಸರಿಸಬಹುದು. ಒಬಾಮಾ ಬಳಸುತ್ತಿರುವುದು ಕೂಡ

ಒಬಾಮಾ ಮತ್ತು ಮಾಯಾವತಿ ಬಹಳಷ್ಟು ವಿಚಾರಗಳಲ್ಲಿ ಸಾಮ್ಯತೆ ಹೊಂದಿದ್ದಾರೆ. ಎರಡು ವಿಭಿನ್ನ ಭೌಗೋಳಿಕ ಪ್ರದೇಶಗಳಲ್ಲಿದ್ದರೂ, ಇಬ್ಬರೂ ಒಂದೇ ವಯೋವರ್ಗಕ್ಕೆ ಸೇರಿದವರಾಗಿದ್ದಾರೆ. ತಂತಮ್ಮ ದೇಶಗಳ ಅತ್ಯುನ್ನತ ಹುದ್ದೆಗಳ ಆಕಾಂಕ್ಷಿಗಳಾಗಿರುವ ಇಬ್ಬರೂ ಅದ್ಭುತ ಮಾತುಗಾರಿಕೆ ಮತ್ತು ವರ್ಚಸ್ಸನ್ನು ಹೊಂದಿರುವಂತಹವರು. ಅಮೆರಿಕೆ ಅಧ್ಯಕ್ಷಗಿರಿಯೆಡೆಗೆ ಒಬಾಮಾರವರ ಪಯಣ ಔಪಚಾರಿಕ ಮಾತ್ರವಾಗಿತ್ತು. ಈಗ ಅಧ್ಯಕ್ಷ ಸ್ಥಾನಕ್ಕೆ ಒಬಾಮಾ, ಜಾನ್ ಮ್ಯಾಕ್‌ಕೇನ್ ಅವರೊಂದಿಗೆ ಸ್ಪರ್ಧೆಯಲ್ಲಿದ್ದಾರೆ. ಪ್ರಬಲರಾದ ಮೂರನೆಯ ಅಭ್ಯರ್ಥಿ ಕಣದಲ್ಲಿಲ್ಲ. ಆದರೆ, ಭಾರತದ ಪ್ರಧಾನಮಂತ್ರಿಯ ಹುದ್ದೆಯೆಡೆಗೆ ಮಾಯಾವತಿಯವರ ಪಯಣ ಅಷ್ಟೇನೂ ಸುಲಭದ್ದಲ್ಲ.

೨೦೦೭ರಲ್ಲಿ ಮಾಯಾವತಿ ಅನುಸರಿಸಿದ ರೀತಿಯ ಮಾದರಿಯನ್ನೇ ಎಂಬುದು ಪರಿಸ್ಥಿತಿಯ ವ್ಯಂಗ್ಯ!

ಜಾತಿ" ಭಾರತದ ಬಹುದೊಡ್ಡ ಸಮಸ್ಯೆ ಎಂದು ಕಾರ್ಲ್ ಮಾರ್ಕ್ಸ್ ಒಂದೂವರೆ ಶತಮಾನದ ಹಿಂದೆ ಗುರುತಿಸಿದ್ದರು. ಅಮೆರಿಕಾದ ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್ ಪತ್ರಿಕೆ- ಜೂನ್ ೨೫, ೧೮೫೩-ಯಲ್ಲಿ ಬರೆಯುತ್ತಾ, "ಈ ಸಣ್ಣ ಸಮುದಾಯಗಳು (ಹಳ್ಳಿಗಳು) ಜಾತಿ ಮತ್ತು ಜೀತಪದ್ಧತಿಯಿಂದ ಕಲುಷಿತಗೊಂಡಿರುವುದನ್ನು ನಾವು ಮರೆಯುವಂತಿಲ್ಲ. ಎಲ್ಲ ರೀತಿಯ ಒತ್ತಡಗಳಿಂದ ಮುಕ್ತನನ್ನಾಗಿ ಮಾಡುವ ಬದಲು, ಈ ಪದ್ಧತಿ ಬಾಹ್ಯ ಒತ್ತಡಗಳಿಗೆ ಮನುಷ್ಯನನ್ನು ಗುರಿ ಮಾಡುತ್ತವೆ" ಎಂದು ಮಾರ್ಕ್ಸ್ ದಾಖಲಿಸಿದ್ದಾರೆ.

ಭಾರತೀಯ ಮಾರ್ಕ್ಸಿಸ್ಟರು ಮಾರ್ಕ್ಸ್ ಹೇಳಿದ್ದನ್ನೆಲ್ಲಾ ಒಪ್ಪಿಕೊಳ್ಳುತ್ತಾರೆ. ಆದರೆ ಜಾತಿ ಕುರಿತ ಮಾರ್ಕ್ಸ್‌ನ ವಿಚಾರಗಳನ್ನು ಮಾತ್ರ ತಿರಸ್ಕರಿಸುತ್ತಾರೆ. ಇಂತಹ ಮಾರ್ಕ್ಸಿಸ್ಟರು ಜಾತಿವ್ಯವಸ್ಥೆಯ ಬಲಿಪಶುಗಳಲ್ಲದೆ ಇರುವುದರಿಂದ, ಅವರ ಅಜ್ಞಾನವನ್ನು ನಾವು ಮನ್ನಿಸಬಹುದು. ಮೇಲ್ಜಾತಿಗಳು ಆಯೋಜಿಸಿದ ಸಾರ್ವಜನಿಕ ಔತಣಕೂಟಗಳಲ್ಲಿ ಪ್ರತ್ಯೇಕವಾಗಿ ಕೂತು ಊಟ ಮಾಡುವುದರ ತಾರತಮ್ಯ ಮತ್ತು ಅವಮಾನವನ್ನು ಇವರ್‍ಯಾರೂ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಭಾರತೀಯ ಮಾರ್ಕ್ಸಿಸ್ಟರಿಗೆ ಜಾತಿವ್ಯವಸ್ಥೆಯ ಬಗ್ಗೆ ಯಾವುದೇ ತಕರಾರುಗಳು ಇಲ್ಲದಿರುವುದು ತಾರ್ಕಿಕವಾಗಿ ಸರಿಯಾದ ವಿಚಾರವೇ.

ಜಾತಿ ಆಧಾರಿತ ಸಮಾಜದಲ್ಲಿ ದಲಿತರು ಎದುರಿಸಬೇಕಾದ ಅವಮಾನಗಳ ಬಗ್ಗೆ ವಿವರಣೆ ನೀಡಿದಾಗ ಹಾಸ್ಯ ಮಾಡಿ ನಕ್ಕರೂ ಕೂಡ ಈ ಭಾರತೀಯ ಮಾರ್ಕ್ಸಿಸ್ಟರನ್ನು ಕ್ಷಮಿಸಬಹುದು. ಮೂಲತಃ ಸಾಮಾಜಿಕ ಸಮಸ್ಯೆಯಾಗಿದ್ದ ಜಾತಿವ್ಯವಸ್ಥೆ ಈಗ ಸಾಂಸ್ಕೃತಿಕ ಸಮಸ್ಯೆಯಾಗಿದೆ. ಇದು ಸಿದ್ಧಾಂತಗಳ ಮೇಲೆ ಬೀರುವ ಪ್ರಭಾವಕ್ಕಿಂತ ನಮ್ಮ ಆತ್ಮಸಾಕ್ಷಿಯ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ಸಿದ್ಧಾಂತ ಆತ್ಮಸಾಕ್ಷಿಯ ಮೇಲೆ ಪರಿಣಾಮ ಬೀರಬಹುದು. ಆದರೆ ಸಂಸ್ಕೃತಿ, ಚಿಂತನೆಯ ಅಂತರಾಳದೊಳಗೆ ತಲ್ಲಣವನ್ನುಂಟುಮಾಡುತ್ತದೆ.

ನಾಯಿ ಮಾಂಸವನ್ನು ವಿವರಣಾತ್ಮಕ ನಿದರ್ಶನವಾಗಿ ನಾವಿಲ್ಲಿ ನೋಡೋಣ. ಬಹುತೇಕ ಎಲ್ಲ ಸಮಾಜಗಳಲ್ಲಿಯೂ ನಾಯಿ ಮಾಂಸ ಸೇವನೆ ಅಸಹ್ಯಕರವಾದ ವಿಚಾರ. ಉದಾಹರಣೆಗೆ ಕಬಾಬ್ ಸವಿಯುತ್ತಿರುವ ಓರ್ವ ವ್ಯಕ್ತಿಗೆ ನೀವು ಈ ಖಾದ್ಯ ನಾಯಿ ಮಾಂಸದಿಂದ ತಯಾರಿಸಿದ್ದೆಂದು ತಿಳಿಸಿದರೆ ಆತ ಅಲ್ಲೇ ವಾಂತಿ ಮಾಡಬಹುದು. ನಾಯಿ ಮಾಂಸದ ವಿಚಾರ ಮೆದುಳಿನ ಮೇಲೆ ತ್ವರಿತವಾಗಿ ಪರಿಣಾಮ ಬೀರುತ್ತದೆ. ಆದರೆ ಸಿದ್ಧಾಂತ ಸುಲಭವಾಗಿ ಮತ್ತು ಸಹಜವಾಗಿ ಮೆದುಳಿನ ಮೇಲೆ ಪರಿಣಾಮ ಬೀರುವುದಿಲ್ಲ.

ನಾಯಿ ಮಾಂಸ ಮತ್ತು ಮೇಕೆ ಮಾಂಸದ ವಿಚಾರ ಎರಡು ಸಂಸ್ಕೃತಿಯ ನಡುವಿನ ಸಮಸ್ಯೆ ಕೂಡ ಆಗಿರುವುದರಿಂದ ಮೆದುಳು ತಕ್ಷಣ

"ಎಡಪರಿವಾರ"ಕ್ಕೆ ಹೊಡೆತ ಬಿದ್ದ ಪರಿಣಾಮವಾಗಿ ಕಮ್ಯೂನಿಸ್ಟ್ ನಾಯಕರು ಜಾತಿಯ ಬಗ್ಗೆ ಮರುಚಿಂತನೆ ನಡೆಸುವಂತಹ ವಾತಾವರಣ ನಿರ್ಮಾಣವಾಗಿದೆ. ಇದು ನಿಜಕ್ಕೂ ಸಿಹಿ ಸುದ್ದಿ. ಈಗ, ಸಿಪಿಐ (ಎಂ) ಪಕ್ಷದ ಮನಃಪರಿವರ್ತನೆಯಾಗಿದೆ. ಕಳೆದ ಆಗಸ್ಟ್ ೧೬ರಂದು ಪಕ್ಷ ಕೇರಳ ರಾಜ್ಯದಲ್ಲಿ "ಪರಿಶಿಷ್ಟ ಜಾತಿ, ಪಂಗಡಗಳ ರ್‍ಯಾಲಿ"ಯನ್ನು ಆಯೋಜಿಸಿತ್ತು. ಸಿಪಿಐ (ಎಂ) "ಜಾತಿವ್ಯವಸ್ಥೆ ಕೇರಳ ರಾಜ್ಯದಲ್ಲಿ ಪ್ರಬಲವಾಗಿ ಜೀವಂತವಾಗಿದೆ" ಎಂದು ಹೇಳುವ ಮೂಲಕ "ವರ್ಗಗಳಿಗೆ ಸೇರಿದ ಕಾರ್ಯಕರ್ತರಿಗೆ" ಅಚ್ಚರಿ ಮೂಡಿಸಿದ್ದೇ ಅಲ್ಲದೆ, "ಜಾತಿಯ ನಿರ್ಮೂಲನೆ ಇನ್ನೂ ಈಡೇರದ ಜವಾಬ್ದಾರಿ" ಎಂದು ಕೂಡ ಹೇಳಿಕೆ ನೀಡಿದೆ. ಪಕ್ಷ, ಕೇರಳದಲ್ಲಿ ದಲಿತರ ಪರವಾಗಿ ಹೋರಾಡುವ ಸಂಕಲ್ಪ ಮಾಡಿದೆ. ಇದು ನಿಜಕ್ಕೂ ಪ್ರಶಂಸನಾರ್ಹ ವಿಚಾರ.

ಕಾರ್ಯಪ್ರವೃತ್ತವಾಗುತ್ತದೆ. ಆದರೆ ಸೈದ್ಧಾಂತಿಕ ಬಿಕ್ಕಟ್ಟುಗಳು ಆತ್ಮಸಾಕ್ಷಿಯ ಪರಿಧಿಯಲ್ಲಿಯೇ ಗಿರಕಿ ಹೊಡೆಯುತ್ತಿರುತ್ತದೆ. ಸಂಸ್ಕೃತಿಯಿಂದ ಪ್ರೇರಿತವಾದ ಪರಂಪರೆ ಮೆದುಳಿನಲ್ಲಿ ಕೆಲಸ ಮಾಡುತ್ತಲೇ ಇರುತ್ತದೆ. ಇದು ಆತ್ಮಸಾಕ್ಷಿಗೆ ಗೊತ್ತಾಗುವುದೇ ಇಲ್ಲ.

ದೇಶದ ಕಮ್ಯೂನಿಸ್ಟ್ ನಾಯಕರು ಜಾತಿವ್ಯವಸ್ಥೆಯ ಅವಮಾನದ ಪರಂಪರೆಯನ್ನು ಬಳುವಳಿಯಾಗಿ ಪಡೆದು ಬಂದಿಲ್ಲದ ಕಾರಣ, ಕಮ್ಯೂನಿಸ್ಟ್ ಚಳವಳಿ ಜಾತಿವ್ಯವಸ್ಥೆಯ ವಿರುದ್ಧ ಚಕಾರವೆತ್ತಲಿಲ್ಲ. ನಿಜ ಹೇಳಬೇಕೆಂದರೆ, ಬಹುತೇಕ ಕಮ್ಯೂನಿಸ್ಟ್ ನಾಯಕರು "ಜಾತಿ ವ್ಯವಸ್ಥೆಯಲ್ಲಿ ಅನುಕೂಲಕರ ಶ್ರೇಣಿಯಲ್ಲಿದ್ದವರೇ." ಅದೇ ರೀತಿ ಸಂಘಪರಿವಾರ ಕೂಡ ಜಾತಿವ್ಯವಸ್ಥೆಯನ್ನು ವಿರೋಧಿಸುವುದಿಲ್ಲ. ಯಾಕೆಂದರೆ ಕಮ್ಯೂನಿಸ್ಟ್ ನಾಯಕರಂತೆ ಸಂಘಪರಿವಾರದ ನಾಯಕರೂ ಕೂಡ ಮೇಲ್ಜಾತಿಗಳನ್ನು ಪ್ರತಿನಿಧಿಸುವವರೇ ಆಗಿದ್ದಾರೆ.

ಜಾತಿವ್ಯವಸ್ಥೆಯ ಬಗ್ಗೆ ಯಾವುದೇ ತಕರಾರಿಲ್ಲದ ಇದೇ "ಎಡಪರಿವಾರ" ಬ್ರಿಟಿಷ್ ಆಡಳಿತದ ವಿರುದ್ಧ ಪ್ರತಿಭಟನೆ ನಡೆಸಿತ್ತು. ಇದೂ ಕೂಡ ಸಂಸ್ಕೃತಿಯ ಬಳುವಳಿಯೇ. ಮೂಲತಃ "ನಾಯಕತ್ವ" ವಹಿಸಿದ್ದ ಜಾತಿಗಳಿಗೆ ಸೇರಿದ ಕಮ್ಯೂನಿಸ್ಟ್ ನಾಯಕರು ಬ್ರಿಟಿಷ್ ಆಡಳಿತಾವಧಿಯಲ್ಲಿ ಸಾಮಾನ್ಯ ಪ್ರಜೆಗಳಾಗಿ ಉಳಿಯಬೇಕಾಯಿತು. ಈ ಹೊಸ ಬೆಳವಣಿಗೆಯನ್ನು ಮೆದುಳು ಶೀಘ್ರವಾಗಿ ಗಮನಿಸಿ, ದಾಖಲಿಸಿಕೊಂಡಿತು.

ಬ್ರಿಟಿಷ್ ಆಡಳಿತ ವಿರುದ್ಧ ಕೂಗಾಡುವ ಸಂಘಪರಿವಾರದಲ್ಲಿ ಕೂಡ ಇದೇ ರೀತಿಯ ರೋಗ ಲಕ್ಷಣಗಳನ್ನು ಕಾಣಬಹುದು. ಆದರೆ ಇಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಮುಸ್ಲಿಂ ರಾಜರು ತಮ್ಮ ಧಾರ್ಮಿಕ ಪರಂಪರೆಯನ್ನು ಹೊತ್ತು ಬಂದ ಸಲುವಾಗಿ ಸಂಘಪರಿವಾರ ಮುಸ್ಲಿಮರ ಆಡಳಿವನ್ನೂ ಕೂಡ ವಿರೋಧಿಸುತ್ತಾರೆ. ಆದರೆ ಜಾತಿಯ ಪ್ರಶ್ನೆ ಬಂದಾಗ ಮಾತ್ರ ಎಡರಂಗ ಮತ್ತು ಸಂಘಪರಿವಾರವನ್ನು ಒಂದೇ ಜಾತಿಪ್ರತಿಪಾದಕ ಸೇನೆಯ ಎರಡು ತುಕಡಿಗಳು ಎನ್ನಬಹುದು.

ಆದರೆ ಪರಿಸ್ಥಿತಿ ಬದಲಾಗಬಹುದು. ಮೇಲ್ಜಾತಿಗಳ ಸಾಂಸ್ಕೃತಿಕ ಪರಂಪರೆಗೆ ಹಿಂದೆಂದೂ ಕಾಣದಂತಹ ಹೊಡೆತಗಳು ಬೀಳಬಹುದು. ಅಣು ಒಪ್ಪಂದದ ವಿಚಾರದಲ್ಲಿ "ಎಡಪರಿವಾರ" ಸಾರ್ವಜನಿಕರ ಮನಸ್ಸಿನಿಂದ ಸಂಪೂರ್ಣವಾಗಿ ದೂರವಾಯಿತು. ಹಿಂದೂಗಳ ಜನಸಂಖ್ಯೆ ೫೦%ಗಿಂತ ಕಡಿಮೆಯಾದಾಗ ಸಂಘಪರಿವಾರಕ್ಕೂ ಕೂಡ ಹೊಡೆತ ಬೀಳುತ್ತದೆ.

"ಎಡಪರಿವಾರ"ಕ್ಕೆ ಹೊಡೆತ ಬಿದ್ದ ಪರಿಣಾಮವಾಗಿ ಕಮ್ಯೂನಿಸ್ಟ್ ನಾಯಕರು ಜಾತಿಯ ಬಗ್ಗೆ ಮರುಚಿಂತನೆ ನಡೆಸುವಂತಹ ವಾತಾವರಣ ನಿರ್ಮಾಣವಾಗಿದೆ. ಇದು ನಿಜಕ್ಕೂ ಸಿಹಿ ಸುದ್ದಿ. ಈಗ, ಸಿಪಿಐ (ಎಂ) ಪಕ್ಷದ ಮನಃಪರಿವರ್ತನೆಯಾಗಿದೆ. ಕಳೆದ ಆಗಸ್ಟ್ ೧೬ರಂದು ಪಕ್ಷ ಕೇರಳ ರಾಜ್ಯದಲ್ಲಿ "ಪರಿಶಿಷ್ಟ ಜಾತಿ, ಪಂಗಡಗಳ ರ್‍ಯಾಲಿ"ಯನ್ನು ಆಯೋಜಿಸಿತ್ತು. ಸಿಪಿಐ (ಎಂ) "ಜಾತಿವ್ಯವಸ್ಥೆ ಕೇರಳ ರಾಜ್ಯದಲ್ಲಿ ಪ್ರಬಲವಾಗಿ ಜೀವಂತವಾಗಿದೆ" ಎಂದು ಹೇಳುವ ಮೂಲಕ "ವರ್ಗಗಳಿಗೆ ಸೇರಿದ ಕಾರ್ಯಕರ್ತರಿಗೆ" ಅಚ್ಚರಿ ಮೂಡಿಸಿದ್ದೇ ಅಲ್ಲದೆ, "ಜಾತಿಯ ನಿರ್ಮೂಲನೆ ಇನ್ನೂ ಈಡೇರದ ಜವಾಬ್ದಾರಿ" ಎಂದು ಕೂಡ ಹೇಳಿಕೆ ನೀಡಿದೆ. ಪಕ್ಷ, ಕೇರಳದಲ್ಲಿ ದಲಿತರ ಪರವಾಗಿ ಹೋರಾಡುವ ಸಂಕಲ್ಪ ಮಾಡಿದೆ. ಇದು ನಿಜಕ್ಕೂ ಪ್ರಶಂಸನಾರ್ಹ ವಿಚಾರ.

ಆದರೆ, ಇಲ್ಲಿ ಕೂಡ ಸಾಂಸ್ಕೃತಿಕ ಪರಂಪರೆಗೆ ಸಂಬಂಧಿಸಿದ ಸಮಸ್ಯೆಯಿದೆ. ಔದ್ಯೋಗಿಕ ಶ್ರೇಣೀಕರಣದ ವಿರುದ್ಧ ಹೋರಾಡದೆ ಜಾತಿವ್ಯವಸ್ಥೆಯ ವಿರುದ್ಧ ಸಮರ ಸಾರಿದರೆ ಪ್ರಯೋಜನವಿಲ್ಲ. ಸಿಪಿಐ (ಎಂ) ನಾಯಕರಿಗೆ ದಲಿತರೆಂದರೆ ಕೂಲಿ ಹೆಚ್ಚಳಕ್ಕಾಗಿ ಅಲವತ್ತುಕೊಳ್ಳುವ, ರೇಷನ್ ಕಾರ್ಡ್‌ಗಾಗಿ ಅಂಗಲಾಚುವ ಚಿತ್ರಣಗಳೇ ಮೂಡುತ್ತವೆ. ದಲಿತರನ್ನು ಕೂಡ ಉದ್ಯಮಿಗಳಾಗಿ, ಸಂಬಳ ನೀಡುವ ಧಣಿಗಳಾಗಿ ಪರಿಗಣಿಸಲು ಸಿಪಿಐ (ಎಂ)ಗೆ ಸಾಧ್ಯವೇ? □

ಬದಲಾಗುತ್ತಿರುವ ನಿಲುವು

ದನಗಾಹಿಯೋ ಭಿಕ್ಷುವೋ ಯಶಸ್ಸಿಗೆ ಹನ್ನೊಂದು ಸೂತ್ರಗಳು!?

‘ಸಹೋದರರೇ, ಯಾರು ತನ್ನದೇ ಆದ ನಿರ್ಧಿಷ್ಠ ರೂಪವನ್ನು ಹೊಂದಿರುವ ಈ ಶರೀರವನ್ನು ನಾನು, ನನ್ನ ಮತ್ತು ನನ್ನದೆಂದೇ ತಿಳಿಯುತ್ತಾನೋ ಅಂತವನು ಮೂರ್ಖ ಮತ್ತು ಅಹಂಕಾರಿಯಾಗಿರುತ್ತಾನೆ. ಅದಕ್ಕೆ ಬದಲಾಗಿ ಯಾರು ಸತ್ಯವನ್ನು ಯಥಾರ್ಥವಾಗಿ ಅರಿತು ಈ ದೇಹವು ಭೂಮಿ, ಗಾಳಿ, ಉಷ್ಣ ಮತ್ತು ನೀರಿನಿಂದ ಪೋಷಿಸಲ್ಪಟ್ಟಿದೆ ಮತ್ತು ಸ್ಮೃತಿ, ಕಾರ್ಯ, ಕಾರಣ ಹಾಗೂ ಸಂಬಂಧಗಳಿಗಾಗಿ ಹುಟ್ಟಿಬಂದಿದೆ ಎಂಬ ಮಹಾ ಮೂಲ ತತ್ವಗಳನ್ನು ಅರಿತಿರುತ್ತಾನೋ ಆತನೇ ಆಕಾರವನ್ನು ಅರಿತವನು.’

ಸಿ.ಎಚ್. ರಾಜಶೇಖರ್

ಸದಾ ಮನುಷ್ಯನ ಉನ್ನತಿಯನ್ನು ಬಯಸುವುದೇ ಬುದ್ಧನ ಅಂತಿಮ ಆಶ್ರಯವಾಗಿತ್ತು. ಹಾಗಾಗಿ ಅಲಸ್ಯ ಮತ್ತು ಸೋಮಾರಿತನ ಕೂಡದು, ಬದಲಿಗೆ ವ್ಯಕ್ತಿಯೇ ಮನುಷ್ಯನಿಗೆ ಭೂಷಣ. ಕರ್ಮದಿಂದ ಯಾರೂ ವಿಮುಖರಾಗಲು. ಸಾಧ್ಯವಿಲ್ಲ ಎನ್ನುತ್ತಿದ್ದ. ಹಾಗೆಯೇ ವೃತ್ತಿಯಲ್ಲಿ ಮೇಲು ಮತ್ತು ಕೀಳೆಂಬ ಭಾವನೆಯನ್ನೂ ಸಂಪೂರ್ಣವಾಗಿ ತಿರಸ್ಕರಿಸಿದ್ದ. ದನಕಾಯುವವನು, ಪುರೋಹಿತ ಇಲ್ಲವೇ ಭಿಕ್ಷುವಿನಲ್ಲಿ ಆತ ಬೇಧ ಎಣಿಸುತ್ತಿರಲಿಲ್ಲ. ದನಕಾಯುವವನು ವೃತ್ತಿಯಲ್ಲಿ ಕೀಳು ಪುರೋಹಿತ ಅಥವಾ ಭಿಕ್ಷುವಿನ ವೃತ್ತಿ ಮೇಲು ಇಲ್ಲವೇ ಸರ್ವಶ್ರೇಷ್ಠ ಎಂದು ಎಂದಿಗೂ ಮಾನ್ಯಮಾಡಿರಲಿಲ್ಲ. ಮೂಲತಃ ಆ ಇಬ್ಬರೂ ಮನುಷ್ಯರು ಅಲ್ಲಿನ ವ್ಯತ್ಯಾಸವೆಂದರೆ ಅವರುಗಳು ಅನುಸರಿಸುತ್ತಿದ್ದ ವೃತ್ತಿಗಳು ಮಾತ್ರ ಬದಲು.

ಹಾಗಿರುವಾಗ ಇಲ್ಲಿ ಬೇಧ ಎಣಿಸುವುದು ಎಷ್ಟು ಸರಿ. ಹೀಗೆ ಮಾಡಿದ್ದೇ ಆದರೆ ಮನುಷ್ಯ ಮನುಷ್ಯನಲ್ಲಿ ಕಂದರ ಉಂಟಾಗುತ್ತದೆ. ಅದು ಸಮಾಜದಲ್ಲಿ ಅಸಮಾನತೆಗೆ ಎಡೆ ಮಾಡಿಕೊಡುತ್ತದೆ. ಮುಂದೆ ಅದು ಮೇಲರಿಮೆ ಮತ್ತು ಕೀಳರಿಮೆಗೆ ನಾಂದಿ ಹಾಕುತ್ತದೆ. ಇದರಿಂದಾಗಿ ಪ್ರತಿ ಮನುಷ್ಯನಲ್ಲಿ ವ್ಯಕ್ತಿಗತವಾಗಿ ಅಡಗಿದ್ದ ಸೃಜನಶೀಲತೆ ಮಂಕಾಗುತ್ತದೆ. ಅವಕಾಶಗಳಿಂದ ವಂಚಿತನಾದ ವ್ಯಕ್ತಿಯು ಕೀಳರಿಮೆಗೆ ತುತ್ತಾಗುತ್ತಾನೆ. ಆತನ ಸ್ವಾವಲಂಬನೆ ಮತ್ತು ಸ್ವಾಭಿಮಾನಕ್ಕೆ ಧಕ್ಕೆ ತರುತ್ತದೆ. ಆದ್ದರಿಂದ ಇದು ಮನುಷ್ಯ ಮನುಷ್ಯನಿಗೆ ಎಸಗುವ ದ್ರೋಹವೇ ಸರಿ ಎಂದು ಮನಗಂಡ ಬುದ್ಧನು ಮೊದಲಬಾರಿಗೆ ವೃತ್ತಿಯಲ್ಲಿ ಸಮಾನತೆಯನ್ನು ಮಾನ್ಯ ಮಾಡಿದ.

ಅದೇ ರೀತಿ ವೃತ್ತಿ ಯಾವುದೇ ಇರಬಹುದು. ಅದಕ್ಕೆ ಅದರದೇ ಆದ ಒಂದು ನೆಲೆ ಮತ್ತು ಸೆಲೆ ಇರುತ್ತದೆ. ಅದನ್ನು ಚೆನ್ನಾಗಿ ಅರಿತು, ಕಾಪಾಡಿಕೊಂಡು ವೃದ್ಧಿಯನ್ನು ಸಾಧಿಸಬೇಕು. ಅದೇ ತನ್ನ ಜೀವನದ ಗುರಿಸಾಧನೆ ಎಂದು ಸಂಕಲ್ಪ ಮಾಡಬೇಕು. ತನ್ನೆಲ್ಲ ಶಕ್ತಿ ಸಾಮರ್ಥ್ಯವನ್ನು ಆ ನಿಟ್ಟಿನೆಡೆಗೆ ಹರಿಸಬೇಕು. ಆಗಲೇ ಯಶಸ್ಸು ಎನ್ನುವ ಬುದ್ಧ ಆ ಬಗ್ಗೆ ಹನ್ನೊಂದು ಸೂತ್ರಗಳನ್ನು ಪ್ರಕಟಿಸುತ್ತಾನೆ. ಯಾರು ಈ ಸೂತ್ರವನ್ನು ಅರಿತು ಆಚರಿಸುತ್ತಾರೋ ಅವರು ನಿಶ್ಚಯವಾಗಿ ತನ್ನ ಜೀವನದ ಗುರಿ ಸಾಧನೆಯ ಉತ್ತುಂಗ ಹಂತ ತಲುಪುತ್ತಾನೆಂದು ಹೇಳುತ್ತಾನೆ. ಆ ಹನ್ನೊಂದು ಸೂತ್ರಗಳನ್ನು ವಿವರಿಸುವ ಈ ಕಥೆ ಹೀಗಿದೆ:

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಶ್ರಾವಸ್ಥಿಯ ಅನಾಥ ಪಿಂಡಕನ ಜೇತವನದಲ್ಲಿ ತನ್ನ ಭಿಕ್ಷುಗಳೊಂದಿಗೆ ತಂಗಿದ್ದರು. ಒಂದು ದಿನ ಮುಂಜಾನೆ ಧ್ಯಾನದಿಂದ ಮೇಲೆದ್ದ ಬುದ್ಧರು ತನ್ನ ಶಿಷ್ಯರಿಗೆ ವೃತ್ತಿಯ ಹಿರಿಮೆಯನ್ನು ತಿಳಿಯ ಹೇಳುವ ಸಲುವಾಗಿ

‘ಸಹೋದರರೇ, ಇಲ್ಲಿ ಬನ್ನಿ, ನನ್ನೆದುರು ಕುಳಿತುಕೊಳ್ಳಿ, ನಾನು ಹೇಳುವ ಧರ್ಮವನ್ನು ಅರಿತು ಆಚರಿಸಿ ಗುರಿ ಸಾಧನೆಯನ್ನು ಪಡೆಯಿರಿ. ಭಿಕ್ಷುಗಳೇ, ವೃತ್ತಿಯಲ್ಲಿ ಎಂದಿಗೂ ಬೇಧ ಎಣಿಸಬೇಡಿ. ನೀವುಗಳು ಮೇಲೆಂದಾಗಲಿ, ದನಕಾಯುವವನು ಕೀಳೆಂದಾಗಲಿ ತಿಳಿಯಬೇಡಿ. ನಿಮ್ಮಿಬ್ಬರಲ್ಲಿಯೂ ಯಾವುದೇ ಬೇಧವಿಲ್ಲ. ಮೂಲತಃ ನೀವಿಬ್ಬರೂ ಮನುಷ್ಯರು. ನಿಮಗೆ ಗುರಿ ಇರುವಂತೆ ಅವನಿಗೂ ಇದೆ. ಅದನ್ನು ವೃದ್ಧಿ ಪಡಿಸಿಕೊಂಡು ಮುಂದೆ ಸಾಗಬೇಕಾದರೆ ಈ ಹನ್ನೊಂದು ಸೂತ್ರಗಳನ್ನು ಅನುಸರಿಸಿರಿ.’



'ಸಹೋದರರೇ, ನಿಮ್ಮೆದುರು ಸದಾ ಎರಡು ಪ್ರಶ್ನೆಗಳು ಕಾಡುತ್ತಲೇ ಇರುತ್ತವೆ. ಒಂದು 'ಭವ್ಯವಾದದ್ದು' ಮತ್ತೊಂದು 'ಭವ್ಯವಲ್ಲದು' ಇದೇ ಒಳಿತು ಮತ್ತು ಕೆಡುಕು. ನಿಮ್ಮಗಳ ಆಯ್ಕೆಯು ಸದಾ ಒಳಿತಿನ ಕಡೆಗಿರಲಿ. ಅದೇ ಮಂಗಳ ಅದೇ ಕುಶಲ. ಅದನ್ನು ತಲುಪಬೇಕಾದರೆ ಈ ಹನ್ನೊಂದು ಸೂತ್ರಗಳನ್ನು ಚಾಚೂ ತಪ್ಪದೆ ಅನುಸರಿಸಿ. ಅವುಗಳೆಂದರೆ: ಆಕಾರ, ಲಕ್ಷಣ, ಕೀಟಗಳ ಬಾಧೆಯಿಂದ ನಿವಾರಣೆ ಮತ್ತು ಗಾಯಗಳನ್ನು ಗುಣಪಡಿಸಿಕೊಳ್ಳುವ ಕಲೆಯನ್ನು ಅರಿತಿರಬೇಕು. ಅವನು ಹೊಗೆ ಹಾಯಿಸುವುದನ್ನು, ನೀರಿನಲ್ಲಿ ಹಾದು ಹೋಗುವ ಜ್ಞಾನವನ್ನು, ಎಲ್ಲಿ ಕುಡಿಯುವ ನೀರು ದೊರೆಯುತ್ತದೆ ಎಂಬ ಪರಿ ಜ್ಞಾನವನ್ನು, ಅಲ್ಲಿಗೆ ತಲುಪುವ ಸರಿ ದಾರಿಯನ್ನು ಅರಿತವನಾಗಿರಬೇಕು. ಆತ ಹುಲ್ಲುಗಾವಲನ್ನು ಗುರುತಿಸಿದವನಾಗಿರಬೇಕು. ಎಲ್ಲ ಹಾಲನ್ನು ದುರಾಸೆಯಿಂದ ಕರೆದುಕೊಳ್ಳದವನಾಗಿರಬೇಕು. ಹಸುಗಳ ಮಂದೆಯ ತಂದೆಯಂತಿರುವ 'ಬಸವನಿಗೆ' ಹೆಚ್ಚಿನ ಪೋಷಕ ಪದಾರ್ಥವನ್ನು ನೀಡುವುದನ್ನು ಮರೆಯಬಾರದು ಅಥವಾ ಸಂಘದ ಹಿರಿಯ ಶ್ರಮಣರಿಗೆ ತಂದೆಯಂತೆ ಗೌರವಿಸಿ ಹೆಚ್ಚಿನ ಗೌರವ, ದಾನ ಮತ್ತು ಸೇವೆಯನ್ನು ಮಾಡುವುದನ್ನು ಮರೆಯಬಾರದು.'

'ಗುರುದೇವಾ, ಆಕಾರವನ್ನು ಅರಿಯುವುದು ಎಂದರೆ ಏನು?'

'ಸಹೋದರರೇ, ಯಾರು ತನ್ನದೇ ಆದ ನಿರ್ಧಿಷ್ಟ ರೂಪವನ್ನು ಹೊಂದಿರುವ ಈ ಶರೀರವನ್ನು ನಾನು, ನನ್ನ ಮತ್ತು ನನ್ನದೆಂದೇ ತಿಳಿಯುತ್ತಾನೋ ಅಂತವನು ಮೂರ್ಖ ಮತ್ತು ಅಹಂಕಾರಿಯಾಗಿರುತ್ತಾನೆ. ಅದಕ್ಕೆ ಬದಲಾಗಿ ಯಾರು ಸತ್ಯವನ್ನು ಯಥಾರ್ಥವಾಗಿ ಅರಿತು ಈ ದೇಹವು ಭೂಮಿ, ಗಾಳಿ, ಉಷ್ಣ ಮತ್ತು ನೀರಿನಿಂದ ಪೋಷಿಸಲ್ಪಟ್ಟಿದೆ ಮತ್ತು ಸ್ಮೃತಿ, ಕಾರ್ಯ, ಕಾರಣ ಹಾಗೂ ಸಂಬಂಧಗಳಿಗಾಗಿ ಹುಟ್ಟಿಬಂದಿದೆ ಎಂಬ ಮಹಾ ಮೂಲತತ್ವಗಳನ್ನು ಅರಿತಿರುತ್ತಾನೋ ಆತನೇ ಆಕಾರವನ್ನು ಅರಿತವನು.'

'ಗುರುದೇವಾ, ಲಕ್ಷಣಗಳನ್ನು ಅರಿತವನು ಎಂದರೆ ಏನು?'

'ಸಹೋದರರೇ, ಯಾರು ತನ್ನ ಅಕುಶಲ ಕಾರ್ಯ ಲಕ್ಷಣಗಳಿಂದ ತಾನು ಮೂರ್ಖನಾಗುತ್ತೇನೆ ಮತ್ತು ಕುಶಲ ಕಾರ್ಯ ಲಕ್ಷಣಗಳಿಂದ ತಾನು ಪಂಡಿತನಾಗುತ್ತೇನೆ ಎಂಬುದನ್ನು ಸರಿಯಾಗಿ ಅರಿಯುತ್ತಾನೋ ಅವನು'

'ಗುರುದೇವಾ, ಕೀಟಗಳ ಬಾಧೆಯ ನಿವಾರಣೆಗಳನ್ನು ಅರಿತವನು ಎಂದರೆ ಏನು?'

'ಸಹೋದರರೇ, ಯಾರು ತನ್ನಲ್ಲಿ ಹುಟ್ಟಿರುವ ಕಾಮದಾಸೆ, ಹಗೆತನ, ಹುಟ್ಟಿನಿಂದಾಗುವ ತೊಂದರೆ ಹಾಗೂ ಮತ್ತೆ ಮತ್ತೆ ಹುಟ್ಟಿಬರುವ ಅಕುಶಲ ಧರ್ಮದ ವಿಷಯಗಳನ್ನು ಅರಿಯುತ್ತಾನೋ, ಅದರಲ್ಲಿ ಆನಂದಿಸುವುದು ಕೇಡೆಂದು ಬಗೆಯುತ್ತಾನೋ, ಅವುಗಳನ್ನು ಅಂತ್ಯಗೊಳಿಸುತ್ತಾನೋ ಅಂಥವನು ಕೀಟಗಳ ಮೊಟ್ಟೆ (ಮೂಲ)ಗಳನ್ನು ನೀಗಿಸಿಕೊಳ್ಳುವ ಜ್ಞಾನಿಯಾಗುತ್ತಾನೆ.'

ಗುರುದೇವಾ, ಗಾಯಗಳನ್ನು ವಾಸಿ ಪಡಿಸಿಕೊಳ್ಳುವವನು ಎಂದರೆ ಏನು?'

'ಸಹೋದರರೇ, ಯಾರು ತನ್ನ ಆರು ಇಂದ್ರಿಯಗಳಾದ: ಕಣ್ಣು, ಕಿವಿ, ಮೂಗು, ನಾಲಿಗೆ, ಸ್ಪರ್ಶ ಮತ್ತು ಮನಸ್ಸನ್ನು ಅರಿಯುತ್ತಾನೋ ಅವನು. ಆಯಾ ಅವಯವಗಳಿಂದಾಗಿ ಕಾಣುವ ಆಕಾರ, ರೂಪ, ಸಂಕೇತ, ಅನುಭವ ಹಾಗೂ ಅದರ ವಿವರ ವಿಶೇಷಗಳಿಂದ ಆಕರ್ಷಿತನಾಗುವದಿಲ್ಲ. ಬದಲಿಗೆ ಅರಿಯುತ್ತಾನೆ. ಆ ಇಂದ್ರಿಯಗಳ ಮೇಲೆ ಹತೋಟಿ ಸಾಧಿಸಿದವನಾಗುತ್ತಾನೆ. ಯಾವುದೇ ದುರಾಸೆ ಮತ್ತು ಖಿನ್ನತೆಗೆ ತುತ್ತಾಗಿ ಅಕುಶಲ ಪಾಪ ಕಾರ್ಯಗಳನ್ನು ಮಾಡುವುದಿಲ್ಲ. ತನ್ನನ್ನು ತಾನು ಹತೋಟಿಯಲ್ಲಿ ಇಟ್ಟುಕೊಳ್ಳುತ್ತಾನೆ. ಹೀಗೆ ತನ್ನ ದೇಹ ಮತ್ತು ಮನಸ್ಸಿನ ಗಾಯಗಳನ್ನು ನಿವಾರಿಸಿಕೊಳ್ಳುತ್ತಾನೆ.'

'ಗುರುದೇವಾ, ಹೊಗೆ ಹಾಯಿಸುವುದು ಎಂದರೆ ಏನು?'

'ಸಹೋದರರೇ, ಯಾರು ಒಳಿತು ಮತ್ತು ಕೆಡುಕಿನ ಅಂತರವನ್ನು ಅರಿಯುತ್ತಾನೋ ಅವನು. ಅಂಥವನು ಜ್ಞಾನವನ್ನು ಹಾಗೂ ಧರ್ಮವನ್ನು ಗುರು(ನಾಯಕ)ವಿನ ಮೂಲಕ ಕೇಳಿ, ವಿವರವಾಗಿ ತಿಳಿದು, ಅರಿತು ಆಚರಿಸುವವನೆ ಆಗಿದ್ದಾನೆ. ಈ ರೀತಿ ಕಲಿತ ಧರ್ಮ ಅಥವಾ ತನ್ನ ವೃತ್ತಿಯನ್ನು ಯಾರು ಇತರರಿಗೆ ವಿವರವಾಗಿ ತಿಳಿಸುತ್ತಾನೋ, ಕಲಿಸುತ್ತಾನೋ, ಆ ಮೂಲಕ ಅವರುಗಳ ಉನ್ನತಿ ಮತ್ತು ಅಭಿವೃದ್ಧಿಗೆ ಕಾರಣನಾಗುತ್ತಾನೋ ಅವನು.'

'ಗುರುದೇವಾ, ನೀರಿನಲ್ಲಿ ಹಾದು ಹೋಗುವ ಜಾಗಗಳನ್ನು ಅರಿತವನು ಎಂದರೆ ಏನು?'

'ಸಹೋದರರೇ, ಇಲ್ಲಿ ಯಾರು ತನ್ನ ನಾಯಕನಿಂದ, ಹಿರಿಯನಿಂದ ಅಥವಾ ಗುರುಗಳಿಂದ ತನ್ನ ವೃತ್ತಿಯ ನಾನಾ ಮಗ್ಗುಲುಗಳನ್ನು ಸಕಲವೂ ಕೇಳಿ ಅರಿತಿರುತ್ತಾನೋ ಅವನು. ಆ ವೃತ್ತಿ ಪರಂಪರೆ, ಧರ್ಮ ಮತ್ತು ವಿನಯವನ್ನು ಮನನ ಮಾಡಿಕೊಂಡಿರುತ್ತಾರೋ ಅವರು. ತನಗೆ ಸಂಶಯ ಬಂದುದ್ದನ್ನು, ತಾನೀನ್ನು ತಿಳಿಯದ ಜ್ಞಾನವನ್ನು ಕಾಲ ಕಾಲಕ್ಕೆ ಯಾರು ತನ್ನ ಗುರುವನ್ನು ಸಂಧಿಸಿ ಕೇಳಿ ನಿವಾರಿಸಿಕೊಳ್ಳುತ್ತಾರೋ ಕಲಿಯುತ್ತಾ ಮುಂದೆ ಸಾಗುತ್ತಾರೋ ಅವರು. ಯಾವ ಕುತೂಹಲಿಯೂ ಇದು ಹೇಗೆ? ಅದರ ಅರ್ಥವೇನು? ಇದು ಸರಿಯೇ? ಇದು ತಪ್ಪೇ? ಎಂದು ವೃತ್ತಿ ಮತ್ತು ಧರ್ಮದಲ್ಲಿನ ಸಂದಿಗ್ಧ ವಿಷಯಗಳನ್ನು ಕೇಳಿ ತನ್ನ ಸಂಶಯಗಳನ್ನು ನಿವಾರಿಸಿಕೊಳ್ಳುತ್ತಾನೋ ಅವನು.'

'ಗುರುದೇವಾ, ಕುಡಿಯುವ ನೀರಿನ ಜಾಗಗಳನ್ನು ಅರಿತವನು ಎಂದರೆ ಏನು?'

'ಸಹೋದರರೇ, ಯಾರು ತನ್ನ ವೃತ್ತಿಯ ಬಗ್ಗೆ ಹಿರಿಯರನ್ನು ಅಥವಾ ತಥಾಗತರಿಂದ ಶಿಕ್ಷಣ ಪಡೆಯುತ್ತಾರೋ ಅವರು. ಆ ಮೂಲಕ ಆ ವೃತ್ತಿಗೆ ಸಂಬಂಧಿಸಿದ ಧರ್ಮ, ವಿನಯ, ಅರ್ಥ ಮತ್ತು ನಾನಾ ವಿಷಯಗಳಿಗೆ ಸಂಬಂಧಿಸಿದ ಅನುಭವಗಳನ್ನು ಯಾರು ತನ್ನದಾಗಿಸಿಕೊಳ್ಳುತ್ತಾನೋ ಅವನು. ಈ ಮಾರ್ಗಗಳಿಂದಾಗಿ ಯಾರು ತೃಪ್ತಿ ಮತ್ತು ಆನಂದಗಳನ್ನು ಹೊಂದುತ್ತಾರೋ ಅವರು.'

'ಗುರುದೇವಾ, ಕುಡಿಯುವ ನೀರಿನ ದಾರಿಗಳನ್ನು ಅರಿತವನು ಎಂದರೆ ಏನು?'

'ಸಹೋದರರೇ, ಯಾರು ನಿತ್ಯ ಸತ್ಯಗಳಾದ ಅಷ್ಟಾಂಗದ ಮಾರ್ಗಗಳನ್ನು ಸರಿಯಾಗಿ ತಿಳಿದವನೋ, ಮನನ ಮಾಡಿಕೊಂಡವನೋ, ಆಚರಿಸುತ್ತಾ ಇತರರಿಗೆ ಮಾರ್ಗದರ್ಶಿಯಾಗುತ್ತಾನೋ ಅವನು.'

'ಗುರುದೇವಾ, ಹುಲ್ಲುಗಾವಲುಗಳನ್ನು ಅರಿತವನು ಎಂದರೆ ಏನು?'

'ಸಹೋದರರೇ, ಯಾರು ನಾಲ್ಕು ಎಚ್ಚರ ಸ್ಥಿತಿಗಳನ್ನು ಅಂದರೆ: ದೇಹ, ಮನಸ್ಸು, ಸ್ಪರ್ಶ ಮತ್ತು ವೇದನೆಗಳಿಂದ ಉಂಟಾಗುವ ದುಃಖ ಹಾಗೂ ದುರಂತಗಳನ್ನು ಅರಿತು ದುಃಖಗಳನ್ನು ನೀಗಿಸಿಕೊಳ್ಳುತ್ತಾರೋ(ನಾಲ್ಕು ಸತಿಪಟ್ಠಾನ) ಅವರು.'

'ಗುರುದೇವಾ, ಎಲ್ಲ ಹಾಲನ್ನು ಕರೆದುಕೊಳ್ಳದವನು ಎಂದರೆ ಏನು?'

'ಸಹೋದರರೇ, ಯಾವ ಒಡೆಯ, ಗೃಹಸ್ಥ ಇಲ್ಲವೆ ದಾನಿಯು ಯಾರನ್ನಾದರೂ ಗುರುತಿಸಿ ಕರೆದು ಉದ್ಯೋಗ, ಊಟ ಮತ್ತು ಆಶ್ರಯವನ್ನು ನೀಡುತ್ತಾನೋ ಅವರಲ್ಲಿ ತನ್ನ ಅವಶ್ಯಕತೆಗೆ ತಕ್ಕಂತೆ ಯಾರು ಪಡೆಯುತ್ತಾರೋ ಅವರು. ಅಥವಾ ಭಿಕ್ಷುಗಳಿಗೆ ಗೃಹಸ್ಥರು ಶ್ರದ್ಧೆಯಿಂದ ನೀಡುವ ಕಾಷಾಯವಸ್ತ್ರ, ಭಿಕ್ಷೆ, ತಂಗುದಾಣ ಮತ್ತು ರೋಗಕ್ಕಾಗಿ ಔಷದೋಪಚಾರಗಳನ್ನು ನೀಡಲು ಆಮಂತ್ರಿಸಿದಾಗ ಯಾರು ಅವುಗಳನ್ನು ಸ್ವೀಕರಿಸುವಾಗ ಪರಿಮಿತಿಯನ್ನು ಹೊಂದಿದವನಾಗಿರುತ್ತಾನೋ ಅವನು. ಯಾರು ಕಂಡದನ್ನೆಲ್ಲ ದುರಾಸೆಯಿಂದ ದೋಚುವುದಿಲ್ಲವೋ, ತನ್ನಂತೆ ಇತರರು ಎಂದು ಬಗೆಯುತ್ತಾನೋ ಅವನು. ಯಾರು ಸಮಷ್ಠಿ ಭಾವನೆಯನ್ನು ಹೊಂದಿರುತ್ತಾನೋ ಅವನು.'

'ಗುರುದೇವಾ, ಸಂಘದ ಹಿರಿಯರಿಗೆ ಗೌರವ ತೋರುವುದು ಎಂದರೆ ಏನು?'

'ಸಹೋದರರೇ, ಯಾವ ದನಗಾಹಿಯು ತನ್ನ ಮಂದೆಯಲ್ಲಿನ ರಾಸುಗಳಲ್ಲಿ ವಯಸ್ಸಾದ ಮತ್ತು ಮಂದೆಯ ಅಭಿವೃದ್ಧಿಗೆ ಕಾರಣವಾದ ಬಸವಣ್ಣ(ಹೋರಿ)ಗೆ ಹೆಚ್ಚಿಗೆ ಆಹಾರ ಪದಾರ್ಥವನ್ನು ಕೊಟ್ಟು ಅದರ ಯೋಗಕ್ಷೇಮವನ್ನು ನಿಗಾವಹಿಸಿ ನೋಡಿಕೊಳ್ಳುತ್ತಾನೋ ಅವನು.'

'ಸಹೋದರರೇ, ಹಾಗೆಯೇ ಭಿಕ್ಷು ಸಂಘದಲ್ಲಿ ಯಾವ ಹಿರಿಯ, ಜ್ಞಾನಿ ಹಾಗೂ ಬಹುಕಾಲ ಕಿರಿಯ ಶ್ರಮಣರಿಗೆ ತಂದೆಯಂತಿರುತ್ತಾನೋ ಅವನಿಗೆ ಅಂತರಂಗದಲ್ಲಾಗಲಿ, ಬಹಿರಂಗದಲ್ಲಾಗಲಿ ದ್ರೋಹ ಬಗೆಯದವನು. ಅವನಿಗೆ ಗೌರವಿಸುವವನು. ಅವನ ಸೇವೆ ಮಾಡುವವನು. ಅವನ ದೈಹಿಕ ಕೆಲಸ ಕಾರ್ಯಗಳಲ್ಲಿ ಮೈತ್ರಿಯಿಂದ ವ್ಯವಹರಿಸುವವನು. ಮಾತು ಮತ್ತು ಮನಸ್ಸಿನ ಮೂಲಕ ನಡೆಯುವ ಭಾವನೆಗಳಲ್ಲಿ ಮೈತ್ರಿಯೇ ಪ್ರಧಾನವಾಗಿ ಹೊಂದಿದವನು ಇಂತಹ ಹಿರಿಯ ಜೀವಿಗಳನ್ನು ಯಾರು ತನ್ನ ತಂದೆ ತಾಯಿಗಳಂತೆ ಕಾಪಾಡುತ್ತಾರೋ ಅವರು.'

'ಸಹೋದರರೇ, ಯಾವುದೇ ವೃತ್ತಿಯಲ್ಲಿರುವ ಯಾರೇ ಆಗಲಿ ಈ ಬಗೆಯ ಹನ್ನೊಂದು ಮಹಾ ಮೂಲತತ್ವಗಳಿಂದ ಕೂಡಿರುವ ಈ ಸೂತ್ರವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದೇ ಆದರೆ ತನ್ನ ವೃತ್ತಿಯಲ್ಲಿ ಅಭಿವೃದ್ಧಿ ಮತ್ತು ಪರಿಪೂರ್ಣತೆಯನ್ನು ಪಡೆಯಬಹುದು. ತನ್ನ ಮತ್ತು ಇತರರ ಒಳಿತಿಗೆ ನಾಂದಿ ಯಾಗಬಹುದು. ಇದರಿಂದ ಮಾತ್ರ ಬಹುಜನರ ಹಿತ ಹಾಗೂ ಬಹುಜನರ ಸುಖವನ್ನು ಸಾಧಿಸಬಹುದು. ಇದೇ ಯಶಸ್ಸಿನ ಗುಟ್ಟು!' ಎಂದ ಬುದ್ಧ. ಆಗ ಭಿಕ್ಷುಗಳು ತನ್ನ ಗುರುವಿಗೆ ತಲೆಬಾಗಿ:

'ಹೌದು ಗುರುದೇವಾ, ನೀನು ಯಶಸ್ಸಿನ ಹರಿಕಾರನೇ ಹೌದು.....!!!' ಎಂದು ವಂದಿಸಿದರು.

(ಪಾಳಿಮೂಲ: ಮಹಾಗೋಪಾಲಕ ಸುತ್ತ)

□

'SAMVADA' Kannada Monthly, Oct. 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕೇಂದ್ರ ಸಾಹಿತ್ಯ ಅಕಾದೆಮಿ,
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು:
* ಆ ದೀರ್ಘ ಮೌನ (ಇಂಗ್ಲೀಷ್ ಮೂಲ: ಶಶಿ ದೇಶಪಾಂಡೆ, ಅನು : ವಿಜಯ ಕರ್ಣೇಕಲ್) 120.00
* ಆರು ಅಡಿ ಭೂಮಿ (ಉರ್ದೂ ಮೂಲ: ಅಬ್ದುಸ್ಸಮದ್; ಅನು: ಪಂಚಾಕ್ಷರಿ ಹಿರೇಮಠ) 150.00
* ಅರ್ಧನಾರೀಶ್ವರ (ಹಿಂದಿ ಮೂಲ: ವಿಷ್ಣು ಪ್ರಭಾಕರ್; ಅನು: ಎಸ್.ಎಮ್. ರಾಮಚಂದ್ರಸ್ವಾಮಿ) 250.00
* ನೀಲಿಚಂದಿರ (ಹಿಂದಿ ಮೂಲ: ಶಿವಪ್ರಸಾದ ಸಿಂಹ; ಅನು: ಪಿ. ಶಶಿಕಲಾ) 350.00
* ಚಿಟ್ಟಾಲಹು (ಪಂಜಾಬೀ ಮೂಲ: ನಾನಕ್ ಸಿಂಗ್; ಅನು: ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) 85.00
* ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) 100.00
* ಶಾಂಬ (ಬಂಗಾಳಿ ಮೂಲ: ಸಮರೇಶ ಬಸು, ಅನು: ಜಿ. ಕುಮಾರಪ್ಪ) 100.00
* ಹಗ್ಗ-3 ಭಾಗಗಳು (ಮಲಯಾಳ ಮೂಲ: ತಕಳಿ ಶಿವಶಂಕರ ಪಿಳ್ಳೆ 325.00
ಅನು: ಕೆ.ಕೆ. ನಾಯರ್, ಅಶೋಕ್ ಕುಮಾರ್) 250.00,250.00
* ಸುಂದರಿಯರು ಮತ್ತು ಸುಂದರರು (ಮಲಯಾಳ ಮೂಲ: ಊರುಬ್, ಅನು: ಮೋಹನ್ ಕುಂಕಾರ್) 250.00
* ನೆಲವೆದ್ದು ಬಡಿಯಿತು (ಮರಾಠಿ ಕಾದಂಬರಿ ಮೂಲ: ವಿಶ್ವಾಸ ಪಾಟೀಲ ಕನ್ನಡಕ್ಕೆ ಅನುವಾದ: ಚಂದ್ರಕಾಂತ ಪೋಕಳೆ)-350
* ಒಂದು ಗಿಡ ಮತ್ತು ಎರಡು ಹಕ್ಕಿಗಳು: (ಮೂಲ: ಆತ್ಮಕಥನ ಕನ್ನಡಕ್ಕೆ: ಕುಮದಿನಿ ಅಶೋಕ ಬೈರಣ್ಣವರ)-225.00
* ಕೇತು ವಿಶ್ವನಾಥ ರೆಡ್ಡಿ ಕತೆಗಳು (ತೆಲುಗು ಮೂಲ: ಕೇತು ವಿಶ್ವನಾಥ ರೆಡ್ಡಿ, ಅನು: ಮೀರಾಸಾಬಿಹಳ್ಳಿ ಶಿವಣ್ಣ) 120.00

ಕಥಾ ಸಂಕಲನ:
* ಸ್ವರ್ಣಕಮಲಗಳು (ತೆಲುಗು ಮೂಲ: ಇಲ್ಲಿಂದಲ ಸರಸ್ವತೀದೇವಿ; ಅನು-ಪಿ. ವೇಣು-ಗೋಪಾಲ್) 300.00
* ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು-ಅಶೋಕ್ ಕುಮಾರ್) 300.00
* ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೊಮನಾಥ್) 125.00
* ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) 100.00
* ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ.ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ) 150.00
* ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು: ಸ್ನೇಹಲತಾ ರೋಹಿಡೇಕರ್) 160.00

ಕಾವ್ಯ:
* ಕನ್ನಡ ಸಾನೆಟ್ ಸಂಗ್ರಹ (ಸಂ.ಹೆಚ್.ಎಸ್. ವೆಂಕಟೇಶಮೂರ್ತಿ) 85.00
* ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ: ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ ಹೆಮ್ಮಿಗೆ) 90.00
* ಸಂಬಂಧ (ಇಂಗ್ಲಿಷ್: ಮೂಲ ಜಯಂತ ಮಹಾಪಾತ್ರ; ಅನು: ಪಿ ಲಕ್ಷ್ಮೀನಾರಾಯಣಭಟ್) 50.00
* ತಮಿಳು ಕವಿತೆಗಳು (ಸಂಪಾದಕರು: ಚಂದ್ರಶೇಖರ ಕಂಬಾರ ಮತ್ತು ಓ. ಎಲ್ ನಾಗಭೂಷಣಸ್ವಾಮಿ) 40.00
* ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ; ಅನು: ಅರ್ಕಸಾಲಿ ವೃಷಭೇಂದ್ರಾಚಾರ್) 200.00
* ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) 125.00

ಇತರ
* ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) 600.00
* ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು: ವಿ. ಗೋಪಾಲಕೃಷ್ಣ) 200.00
* ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) 200.00
* ತೆಲುಗು-ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) 150.00
* ಟೀಕಾ ಸ್ವಯಂವರ: ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) 180.00
* ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ 75.00

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ. 25.00)
* ವ. ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
* ಜಿ.ಪಿ. ರಾಜರತ್ನಂ * ತೀನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ *ಅನುಪಮಾ ನಿರಂಜನ-ವಿಜಯಾ ದಬ್ಬೆ
* ಅ.ನ. ಕೃಷ್ಣರಾವ್ (40.00) * ಕನುಪರ್ತಿ ವರಲಕ್ಷ್ಮಮ್ಮ - ಪೋಲಾಪ್ರಗಡ ರಾಜ್ಯಲಕ್ಷ್ಮಿ (40.00) * ಅಕ್ಕಮಹಾದೇವಿ (40.00) * ಆರ್ ಕಲ್ಯಾಣಮ್ಮ (40.00) * ಬಸವರಾಜ ಕಟ್ಟೀಮನಿ (40.00) * ಆಲೂರು ವೆಂಕಟರಾವ್ (40.00) * ಮಧುರಚೆನ್ನ-ಗುರುಲಿಂಗ ಕಾಪಸೆ (40.00)